ಕರ್ನಾಟಕ ಸರ್ಕಾರ

ನಾಡೋಜ

# ಡಾ. ಎಸ್.ಕೆ. ಕರೀಂಖಾನ್

• ಡಾ. ಪ್ರಕಾಶ ಬೊಮ್ಮಣ್ಣ ನಾಯಕ



ಕನ್ನಡ ಪುಸ್ತಕ ಪ್ರಾಧಿಕಾರ

# ನಾಡೋಜ ಡಾ. ಎಸ್.ಕೆ. ಕರೀಂಖಾನ್

ಡಾ. ಪ್ರಕಾಶ ಬಿ. ನಾಯಕ

ಕರ್ನಾಟಕ ಸರ್ಕಾರ

**ಕನ್ನಡ ಪುಸ್ತಕ ಪ್ರಾಧಿಕಾರ**

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – 560 002

ದೂರವಾಣಿ: 2248 4516

**Nadoja Dr. S. K. Karimkhan -** by Dr. Prakash B. Nayak, *Published by:* **Ashok N. Chalawadi** Administrative officer Kannada Pustaka Pradhikara, Kannada Bhavana, J.C. Road, Bengalooru - 560 002

© ಈ ಆವೃತ್ತಿಯ ಗ್ರಂಥ ಸ್ವಾಮ್ಯ : ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

| | | |
|---|---|---|
| ಪ್ರಥಮ ಮುದ್ರಣ | : | ೨೦೧೦ |
| ಪುಟಗಳು | : | x + ೧೬೫ = ೧೭೫ |
| ಪ್ರತಿಗಳು | : | ೧೦೦೦ |
| ಬೆಲೆ | : | ರೂ ೭೫/- |

| | | |
|---|---|---|
| First Print | : | 2010 |
| Pages | : | X + 165 =175 |
| Copies | : | 1000 |
| Price | : | Rs. 75/- |
| ISBN | : | 81-7713-297-0 |

ಛಾಯಾಚಿತ್ರಗಳು : ಸಿರಿಗಂಧ ಶ್ರೀನಿವಾಸಮೂರ್ತಿ

ಕರಡು ತಿದ್ದಿದವರು : ಲೇಖಕರು

ಪ್ರಕಾಶಕರು :

ಅಶೋಕ ಎನ್. ಚಲವಾದಿ

ಆಡಳಿತಾಧಿಕಾರಿಗಳು

ಕನ್ನಡ ಪುಸ್ತಕ ಪ್ರಾಧಿಕಾರ,

ಕನ್ನಡ ಭವನ, ಜೆ.ಸಿ. ರಸ್ತೆ

ಬೆಂಗಳೂರು – 560 002

ಮುದ್ರಕರು : ಭಾಗ್ಯಂ ಬೈಂಡಿಂಗ್ ವರ್ಕ್ಸ್
ನಂ. 25/1, 1ನೇ ಮುಖ್ಯರಸ್ತೆ, 1ನೇ ಅಡ್ಡರಸ್ತೆ
ನ್ಯೂ ಟಿಂಬರ್ ಯಾರ್ಡ್ ಲೇಔಟ್
ಮೈಸೂರು ರಸ್ತೆ, ಬೆಂಗಳೂರು – 560 026
ದೂರವಾಣಿ : 26758280, ಫ್ಯಾಕ್ಸ್ : 26759088

# ಅಧ್ಯಕ್ಷರ ಮಾತು

ಕನ್ನಡ ಪುಸ್ತಕ ಪ್ರಾಧಿಕಾರ ಅಪರೂಪದ ಪುಸ್ತಕಗಳನ್ನು ಪ್ರಕಟಿಸುವುದರ ಜೊತೆಗೆ ಅನೇಕ ವ್ಯಕ್ತಿ ಚಿತ್ರಗಳು, ಜೀವನಚರಿತ್ರೆಗಳನ್ನು ಪ್ರಕಟಿಸುತ್ತಾ ಬಂದಿದೆ. ಇಂತಹ ಕೃತಿಗಳನ್ನು ಅಭ್ಯಾಸ ಮಾಡುವುದರಿಂದ ಹಿರಿಯ ಚೇತನಗಳ ಬಗ್ಗೆ ಗೌರವಭಾವ ಮೂಡುವುದಲ್ಲದೆ, ಕಿರಿಯರು ಬದುಕು ರೂಪಿಸಿಕೊಳ್ಳಲು ಮಾರ್ಗದರ್ಶಕವಾಗುತ್ತದೆ. ಇಂದಿಗೂ ಯಾವುದೇ ಭಾಷೆಯ ಸಾಹಿತ್ಯದಲ್ಲಿ ಆತ್ಮಚರಿತ್ರೆ, ಜೀವನ ಚರಿತ್ರೆಗೆ ತಮ್ಮದೇ ಆದ ಮಹತ್ವದ ಸ್ಥಾನವಿದೆ. ಈ ನಿಟ್ಟಿನಲ್ಲಿ ಪ್ರಾಧಿಕಾರ ನಾಡೋಜ ಎಸ್.ಕೆ. ಕರೀಂಖಾನ್ ಪುಸ್ತಕವನ್ನು ಹೊರತರುತ್ತಿದೆ.

ಕರೀಂಖಾನ್‌ರವರನ್ನು ಕುರಿತು ಒಂದು ಮಾತಿನಲ್ಲಿ ಹೇಳಲು ಸಾಧ್ಯವಿಲ್ಲ. ಅಫ್ಘನ್ ಯೋಧ ತಂದೆ. ಅರಬ್ ದೇಶದ ತಾಯಿ, ಮನೆಮಾತು ಉರ್ದು. ಈ ಹಿನ್ನೆಲೆಯಿಂದ ಬಂದ ಕರೀಂಖಾನ್ ಹದಿನಾರಾಣೆ ಕನ್ನಡಿಗರು ಎಂಬುದು ಸತ್ಯ. ಕನ್ನಡ ಜಾನಪದ ಸಾಹಿತ್ಯದ ಬಗ್ಗೆ ದಾಖಲಿಸುವ ಸಂದರ್ಭದಲ್ಲಿ ಕರೀಂಖಾನ್‌ರ ಹೆಸರನ್ನು ಬಿಡುವಂತೆಯೇ ಇಲ್ಲ. ಸಾಂಪ್ರದಾಯಿಕ ಶಿಕ್ಷಣವನ್ನು ಪೂರ್ಣವಾಗಿ ಪಡೆಯದ ಇವರು ಕನ್ನಡ ಹಾಗೂ ಸಂಸ್ಕೃತ ಭಾಷೆಗಳಲ್ಲಿ ಅಪಾರ ಪಾಂಡಿತ್ಯ ಹೊಂದಿದ್ದು ಆಶ್ಚರ್ಯವನ್ನು ಹುಟ್ಟಿಸುತ್ತದೆ. ಸ್ವಾತಂತ್ರ್ಯ ಹೋರಾಟಗಾರರಾಗಿ, ಜಾನಪದ ಸಂಗ್ರಹಕಾರರಾಗಿ, ರಾಜಕೀಯ ವ್ಯಕ್ತಿಯಾಗಿ, ಕರ್ನಾಟಕದ ಏಕೀಕರಣಕ್ಕೆ ದುಡಿದ ಮಹನೀಯರಾಗಿ, ಸಿನಿಮಾ ಲೇಖಕರಾಗಿ, ಅಕಾಡೆಮಿ ಅಧ್ಯಕ್ಷರಾಗಿ, ಸಾಹಿತಿಯಾಗಿ ಇವರ ಕೊಡುಗೆ ಬಹುಮುಖವಾದದ್ದು. ಈ ಎಲ್ಲಾ ರಂಗದಲ್ಲಿ ದುಡಿದು ಎಲ್ಲಾ ರಂಗದವರಿಂದ ಮೋಸ ಹೋದ ಇವರಿಗೆ ಯಾರ ಮೇಲೂ ಕಹಿ ಭಾವನೆ ಇರಲಿಲ್ಲ ಎಂಬುದರಲ್ಲಿ ಅವರ ಹಿರಿಮೆ ಕಾಣುತ್ತದೆ. ಸ್ವಲ್ಪ ಪ್ರಲೋಭನೆಗೆ ಒಳಪಟ್ಟರೂ ಐಶಾರಾಮಿ ಜೀವನ ನಡೆಸಬಹುದಾಗಿದ್ದ ಅವರು ಎಲ್ಲರಿಂದ ಮೋಸ ಹೋದರೇ ವಿನಃ ಯಾರಿಗೂ ಮೋಸ ಮಾಡಲಿಲ್ಲ. ಗಾಂಧೀಜಿಯವರ ಪಕ್ಕಾ ಅನುಯಾಯಿಯಾಗಿದ್ದ ಅವರು ಕಡೆಯತನಕ ಬಡತನವನ್ನಪ್ಪಿಕೊಂಡು ಸರಳಜೀವನ ಸಾಗಿಸಿದವರು. ಜಾನಪದ ಅಕಾಡೆಮಿಯ ಅಧ್ಯಕ್ಷ ಸ್ಥಾನಕ್ಕೆ ಬಲವಂತವಾಗಿ ಒಪ್ಪಿಸಲು ಹೋದ ಅಧಿಕಾರಿಗೆ ಅವರು ಹೇಳಿದ ಮಾತು 'ಒಂದು ಸಣ್ಣ ಹಣಕಾಸಿನ ಅವ್ಯವಹಾರದ ಆರೋಪ ಬರದೇ ಇರುವ ಹಾಗೆ ನೋಡಿಕೊಳ್ಳುವಿರಿ ಎಂಬ ಭರವಸೆ ನೀಡಿದರೆ' ಒಪ್ಪುವುದಾಗಿ ತಿಳಿಸುತ್ತಾರೆ. ವಿದೇಶಿ ಮೂಲದ ತಂದೆತಾಯಿಗಳಿಗೆ ಜನಿಸಿದ ಕರೀಂಖಾನ್ 'ನಾನು ಶುದ್ಧ ಭಾರತೀಯ, ಭಾರತದ

ಪ್ರತಿಯೊಬ್ಬರೂ ನನ್ನ ಸಹೋದರ ಅವನು ಯಾವ ಜನಾಂಗದವನೇ ಇರಲಿ ಅವನು ನನ್ನ ಸಹೋದರ' ಎನ್ನುವಲ್ಲಿ ಅವರ ದೇಶಪ್ರೇಮ ವ್ಯಕ್ತವಾಗುತ್ತದೆ. ಇಂತಹ ಮಹಾನುಭಾವರ ಬಗ್ಗೆ ಪುಸ್ತಕವನ್ನು ರಚಿಸಿಕೊಟ್ಟ ಲೇಖಕ ಡಾ. ಪ್ರಕಾಶ ಬೊಮ್ಮಣ್ಣ ನಾಯಕ ಅವರಿಗೆ ಕೃತಜ್ಞತೆಗಳು.

ಈ ಕೃತಿಯನ್ನು ಹೊರತರುವಲ್ಲಿ ಪ್ರಾರಂಭದಿಂದ ವಿಶೇಷ ಆಶಕ್ತಿ ವಹಿಸಿದ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಅಶೋಕ ಎನ್. ಚಲವಾದಿ, ನನ್ನ ಆಪ್ತ ಕಾರ್ಯದರ್ಶಿ ಶ್ರೀ ಕೆ. ಮುಕುಂದನ್, ಪ್ರಾಧಿಕಾರದ ಎಲ್ಲಾ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರಿಗೂ ಹಾಗೂ ಸುಂದರವಾಗಿ ಮುಖಪುಟ ರಚಿಸಿಕೊಟ್ಟ ಶ್ರೀ ಎಂ.ವಿ. ರಾಥೋಡ್‌ರವರಿಗೆ ಅಭಾರಿಯಾಗಿದ್ದೇನೆ. ಕನ್ನಡಿಗರು ಈ ಪುಸ್ತಕವನ್ನು ತುಂಬು ಹೃದಯದಿಂದ ಸ್ವಾಗತಿಸುತ್ತಾರೆಂದು ಆಶಿಸುತ್ತೇನೆ.

(ಡಾ: ಸಿದ್ಧಲಿಂಗಯ್ಯ)
ಅಧ್ಯಕ್ಷರು

# ಎರಡು ಮಾತು

ನಾಡೋಜ ಎಸ್.ಕೆ. ಕರೀಂಖಾನ್ ಇಂದು ಸುಮಧುರ ನೆನಪು ಅಷ್ಟೆ. ಕಷ್ಟ–ಕಾರ್ಪಣ್ಯಗಳನ್ನು ನೀಡುತ್ತಲೇ ಸದಾ ಹಸನ್ಮುಖಿಯಾಗಿ ಬಾಳಿದ ಕರೀಂಖಾನರು ಇಡೀ ಇಪ್ಪತ್ತನೇ ಶತಮಾನವನ್ನು ಪೂರ್ತಿ ಕಂಡವರು. ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದ ದೇಶವೊಂದು ತನ್ನ ಕಣ್ಮುಂದೆಯೇ ಸ್ವಾತಂತ್ರ್ಯ ಪಡೆದು, ಸ್ವಾತಂತ್ರ್ಯದ ಸುವರ್ಣ ಮಹೋತ್ಸವ ಆಚರಿಸಿದ್ದನ್ನು ಕರೀಂಖಾನರು ಕಂಡರಾದರೂ ಗಾಂಧೀಜಿ ಕಂಡ 'ರಾಮರಾಜ್ಯ' ಆಗಲಿಲ್ಲ ಎಂಬ ಕೊರಗನ್ನು ಕಡೇವರೆಗೂ ಇಟ್ಟುಕೊಂಡಿದ್ದರು. ಒಂದು ರೀತಿಯಲ್ಲಿ ಇಡೀ ಒಂದು ಶತಮಾನದ ಇತಿಹಾಸದ ಪ್ರತೀಕದಂತಿದ್ದ ಕರೀಂಖಾನರು ಸ್ವಾತಂತ್ರ್ಯಾನಂತರದ ಸ್ವಾರ್ಥ, ದ್ವೇಷ, ಕೋಮು ಹಿಂಸೆ, ವರದಕ್ಷಿಣೆ ಪಿಡುಗು–ಮುಂತಾದ ವಿಷಯಗಳನ್ನು ಕಂಡು ನೊಂದು ಹೋಗಿದ್ದರು. ಕರೀಂಖಾನರಂಥ ನಿಜವಾದ ದೇಶ ಪ್ರೇಮಿಯೊಬ್ಬನ ಜೀವನ ಚರಿತ್ರೆ ಬರೆಯುವುದು ಸುಲಭವಲ್ಲ. ಯಾಕೆಂದರೆ ಭಾರತದ ಒಂದು ಒಟ್ಟಾರೆ ಚಿತ್ರಣ ಹೇಗೆ 'ಚದುರಿದ ಚಿತ್ರಗಳಂತೆ' ಕಾಣುತ್ತಿದೆಯೋ ಹಾಗೆಯೇ ಕರೀಂಖಾನರ ಜೀವನ ಗಾಥೆಯೂ ಒಂದು ಚದುರಿದ ಚಿತ್ರಣವೇ. ಅಲ್ಲಿ ನೋವು, ನಲಿವು, ಕನಸು, ಹತಾಷೆ ಎಲ್ಲವೂ ತುಂಬಿಕೊಂಡಿವೆ. ತನ್ನ ಪೂರ್ವ ಚರಿತ್ರೆಯ ಅರಿವೇ ಇಲ್ಲದ ಸಮಾಜದ ವ್ಯವಸ್ಥೆ ಹೇಗೆ ಗಾಂಧೀಜಿಯಂಥ ಮಹಾತ್ಮನ ಕನಸುಗಳನ್ನು ನಿರ್ಲಕ್ಷಿಸಿತೋ ಹಾಗೇ ಕರೀಂಖಾನರೂ ಕೂಡ ವ್ಯವಸ್ಥೆಯಿಂದ ನಿರ್ಲಕ್ಷಿಸಲ್ಪಟ್ಟರು. ರಾಜಕಾರಣ ಅವರನ್ನು ಮರೆಯಿತು, ಚಿತ್ರರಂಗ ಶೋಷಿಸಿತು, ಆದರೆ ಕೊನೆಗೂ ಜಾನಪದ ರಂಗ ತುಂಬ ತಡವಾಗಿ ಅವರನ್ನು ಕೈ ಹಿಡಿಯಿತು. ಆದರೆ ಅವರ ಅಭಿಮಾನಿಗಳು, ಒಡನಾಡಿಗಳು, ಕನ್ನಡ ಜನತೆ ಅವರಿಗೆ ತಮ್ಮ ಪ್ರೀತ್ಯಾರ್ಥಗಳನ್ನು ತೋರಿದರು. ಇಂಥ ಒಬ್ಬ ಮಹಾನ್ ವ್ಯಕ್ತಿಯ ಬದುಕಿನ ಚದುರಿ ಹೋದ ಚಿತ್ರಗಳನ್ನು ಮಿತ್ರ ಡಾ. ಪ್ರಕಾಶ್ ಬಿ ನಾಯಕ ಒಂದೆಡೆ ಸಂಕಲಿಸುವ ಕೆಲಸವನ್ನು ಮಾಡಿದ್ದಾರೆ. ಇದು ಅತ್ಯಂತ ಶ್ರಮದಾಯಕ ಕೆಲಸ. ಯಾಕೆಂದರೆ ಕರೀಂಖಾನರು ತಮ್ಮ ಯಾವ ಸಾಧನೆ, ದಾಖಲೆಗಳನ್ನು ಸಂಗ್ರಹಿಸಿ ಇಟ್ಟುಕೊಂಡವರಲ್ಲ. ಅವರೊಬ್ಬ ಎಲ್ಲವನ್ನೂ ತ್ಯಜಿಸಿ ಬಾಳಿದ ನಗು ಮುಖದ ಅಶಾಂತ ಸಂತ. ಅಂಥ ವ್ಯಕ್ತಿಯ ಬದುಕಿನ ವಿವರಗಳನ್ನು ಕೇಳಿ, ತಿಳಿದು ಗ್ರಹಿಸಿ ಒತ್ತಟ್ಟಿಗೆ ತಂದಿರುವುದು ನಿಜಕ್ಕೂ ಶ್ಲಾಘನೀಯ ಕೆಲಸ. ಪ್ರಕಾಶ್ ನಾಯಕರ ಈ ಶ್ರಮದ ಬರವಣಿಗೆಗೆ ನನ್ನ ಅಭಿನಂದನೆಗಳು ಸಲ್ಲುತ್ತವೆ.

**ಹಿ.ಚಿ. ಬೋರಲಿಂಗಯ್ಯ**

**ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು**
**ಕುವೆಂಪು ಅಧ್ಯಯನ ಕೇಂದ್ರ**
**ಕನ್ನಡ ವಿಶ್ವವಿದ್ಯಾಲಯ**
**ಹಿರೆಕೊಡುಗೆ ಅಂಚೆ, ಕುಪ್ಪಳ್ಳಿ**
**ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ**

# ಲೇಖಕರ ಮಾತು

ನಾಡೋಜ ಡಾ. ಎಸ್. ಕೆ. ಕರೀಂಖಾನ್‌ರು ಕನ್ನಡ ನಾಡು ನುಡಿಯ ಶ್ರೇಯಸ್ಸಿಗಾಗಿ ದುಡಿದ ಹಿರಿಯ ಚೇತನ. ಒಬ್ಬ ವ್ಯಕ್ತಿ ತನ್ನ ಜೀವಿತಾವಧಿಯಲ್ಲಿ ಒಳ್ಳೆಯ ಸಾಹಿತಿ ಅಥವಾ ಜನಪದ ಸಂಗ್ರಹಕಾರ ಅಥವಾ ಒಳ್ಳೆಯ ಸಮಾಜ ಸುಧಾರಕ ಅಥವಾ ದಕ್ಷ ಆಡಳಿತಗಾರ ಅಥವಾ ಒಬ್ಬ ಒಳ್ಳೆಯ ಮಾನವನಾಗಿರುವುದು ಸಾಧ್ಯ. ಆದರೆ ಈ ಎಲ್ಲ ಪ್ರತಿಭೆಗಳು ಒಟ್ಟಿಗೆ ಒಬ್ಬನೇ ವ್ಯಕ್ತಿಯಲ್ಲಿ ಕಾಣಬರುವುದು ಅಪರೂಪ. ಅಂತಹ ಅಪರೂಪದ ವ್ಯಕ್ತಿಗಳ ಪ್ರಾತಃಸ್ಮರಣೀಯರ ಸಾಲಿನಲ್ಲಿ ನಿಲ್ಲುವವರೇ ಕರೀಂಖಾನರು.

ಭಾರತದ ಸ್ವಾತಂತ್ರ್ಯ ಚಳುವಳಿಗಾರರಾಗಿ, ಜನಪದ ಸಾಹಿತ್ಯದಲ್ಲೂ ತೊಡಗಿಸಿಕೊಂಡಿದ್ದು, ನೆಲಕಚ್ಚಿ ಹೋಗಿದ್ದ ಈ ನಾಡಿನ ಸಾಂಸ್ಕೃತಿಕ ಬದುಕಿಗೆ ಮತ್ತೆ ಸಂವೇದನೆಯ ಅನುಭವ ಪ್ರಾಪ್ತವಾಯಿತು. ಈ ಅನುಭವವನ್ನು ಸದಾ ಜಾಗೃತವಾಗಿಟ್ಟು ರಕ್ಷಿಸಲು, ಸುಪುಷ್ಟವಾಗಿ ಬೆಳೆಸಲು, ಹಲವು ಯೋಜನೆಗಳನ್ನು ಫಲಪ್ರದವಾಗುವಂತೆ ಮಾಡಲು ತಮ್ಮ ಬದುಕನ್ನೆಲ್ಲ ತೇಯ್ದು, ದೇಶಕ್ಕಾಗಿ, ಕನ್ನಡಕ್ಕಾಗಿ, ಕನ್ನಡಿಗರಿಗಾಗಿ ಜೀವನಪೂರ್ತಿ ಹೋರಾಡಿ, 'ಕರ್ನಾಟಕದ ಗಾಂಧೀ' ಎಂದು ಜನಮನ್ನಣೆ ಪಡೆದುಕೊಂಡವರು ಇವರು.

ಈ ಕೃತಿ ಕರೀಂಖಾನರನ್ನು ಕುರಿತೇ ಆಗಿರುವುದರಿಂದ ಇಲ್ಲಿ ನಾನು ಏನೂ ವಿವರವಾಗಿ ಹೇಳಬೇಕಿಲ್ಲ. ಆದರೆ 'ನಾಡೋಜ ಡಾ. ಎಸ್. ಕೆ. ಕರೀಂಖಾನ್' ಎಂಬ ಪುಸ್ತಕ ಪ್ರಕಟವಾಗಲು ನನಗೆ ಹಲವು ರೀತಿಯಿಂದ ಸಹಾಯ, ಸಹಕಾರಗಳನ್ನು ನೀಡಿ ನೆರವಾದ ಮಹನೀಯರನ್ನು, ಸ್ನೇಹಿತರನ್ನು, ಹಿತೈಷಿಗಳನ್ನು ನೆನೆಯುವುದು ನನ್ನ ಕರ್ತವ್ಯವಾಗಿದೆ.

ಓದಬೇಕು, ಬರೆಯಬೇಕು ಎಂಬ ನನ್ನ ಅಭಿಲಾಷೆಗೆ ಪ್ರೋತ್ಸಾಹಿಸಿದವರು ನನ್ನ ಗುರುಗಳಾದ ಖ್ಯಾತ ಸಾಹಿತಿ ಡಾ. ಶ್ರೀಪಾದ ಶೆಟ್ಟಿಯವರು. ಚರಿತ್ರೆಯ ನಿರ್ಮಾಪಕರೊಬ್ಬರಾದ ಕರೀಂಖಾನರ ಜೀವನ ವಿಷಯ ಪುಸ್ತಕದ ರೂಪದಲ್ಲಿ ಹೊರಬರಲು ಇವರೇ ಕಾರಣರು.

೧೯೮೬ ರಲ್ಲಿ ನಾನು ಕರ್ನಾಟಕ ವಿಶ್ವವಿದ್ಯಾಲಯದ ಎಂ.ಎ. ವಿದ್ಯಾರ್ಥಿಯಾಗಿದ್ದಾಗ ಕರೀಂಖಾನರವರ ಹೆಸರು ಕೇಳಿದ್ದೆ, ಆದರೆ ಅವರನ್ನು ಭೆಟ್ಟಿಯಾಗುವ ಸಂದರ್ಭ ಬಂದದ್ದು ಹತ್ತು ವರ್ಷಗಳ ನಂತರ. ಬೆಂಗಳೂರಿನ ಹಲಸೂರಿನಲ್ಲಿ ಅವರ ಕಿರಿಯ ಸಹೋದರ ಗಫಾರಖಾನರವರ ಮನೆಯಲ್ಲಿ ಇದ್ದ ಡಾ. ಕರೀಂಖಾನರಂಥ ಮಹಾನ್ ವ್ಯಕ್ತಿತ್ವದ ಒಡನಾಟ ನನ್ನ ಜೀವನದಲ್ಲಿ ಸದಾ ಬೆಳಗುವ ದೀಪಸ್ತಂಭ. ಅವರ ನಡೆ, ನುಡಿ, ಆದರ್ಶ ನನ್ನನ್ನೂ ಬೆಳೆಸಿವೆ.

ಆಗಾಗಲೇ ಅವರಿಗೆ ತುಂಬಾ ವಯಸ್ಸಾಗಿತ್ತು. ಆದರೂ ಅವರ ಧ್ವನಿ, ಸೂಕ್ಷ್ಮ ವಿಚಾರಗಳು ನನ್ನನ್ನು ಬೆರಗುಗೊಳಿಸಿದವು. ಅವರೊಡನೆ ನಡೆಸಿದ ಸಂದರ್ಶನವನ್ನು ಪಟ್ಟಿ ಮಾಡಿಕೊಂಡೆ. ಈ ವಿಚಾರದಲ್ಲಿ ಅವರ ಕಿರಿಯ ಸಹೋದರ ಗಫಾರಖಾನ ಹಾಗೂ ಅವರ ಕುಟುಂಬದವರು ಕರೀಂಖಾನರ ಬಗ್ಗೆ ಇರುವ ಅನೇಕ ವಿಚಾರಗಳನ್ನು ತಿಳಿಸಿ, ನನ್ನನ್ನು ತಮ್ಮ ಮನೆಯ ಸದಸ್ಯನಂತೆ ಉಪಚರಿಸಿದರು. ಅವರಿಗೆ ನನ್ನ ಪ್ರಣಾಮಗಳು.

ಕರೀಂಖಾನರನ್ನು ಬಲ್ಲ ವ್ಯಕ್ತಿಗಳನ್ನು ಕಂಡು, ಮಾತನಾಡಿಸಿ, ಸಂದರ್ಶಿಸಿ, ಪತ್ರಗಳನ್ನು ಸಂಗ್ರಹಿಸಿ ಪುಸ್ತಕದಲ್ಲಿ ಸಮಗ್ರತೆ ತರಲು ಸಾಧ್ಯವಿದ್ದಷ್ಟು ಪ್ರಯತ್ನಿಸಿದ್ದೇನೆ. ಆದರೂ ಸಹ ಅವರ ಜೀವನದ ಬಗ್ಗೆ ಎಲ್ಲವನ್ನೂ ಹೇಳಿದ್ದೇನೆ ಎಂದು ನಾನು ಭಾವಿಸಿಲ್ಲ. ವಿಷಯ ಸಂಗ್ರಹಿಸುವಲ್ಲಿ ನನ್ನ ಗ್ರಹಿಕೆಯ ಪರಿಮಿತಿ ಮತ್ತು ಅರಿತುಕೊಂಡಿದನ್ನು ಅಭಿವ್ಯಕ್ತಿಗೊಳಿಸುವಲ್ಲಿ ಭಾಷೆಗಿರುವ ಪರಿಮಿತಿ ಇವೆಲ್ಲವುಗಳ ಅನಿವಾರ್ಯವಾದ ಪರಿಧಿಯೊಳಗೆ ಇವರ ಜೀವನ

ಚಿತ್ರಣ ರೂಪಿತವಾಗಿರುವುದು ಸ್ವಾಭಾವಿಕ. ಕರೀಂಖಾನರ ಪುಸ್ತಕ ಪ್ರಕಟಣೆಗೊಳ್ಳುವಲ್ಲಿ ಅವರ ಗೆಳೆಯರ ಬಳಗದವರು ಇನ್ನು ಹಲವು ವ್ಯಕ್ತಿಗಳು ಅನೇಕ ವಿಧದಿಂದ ನೆರವು ನೀಡಿದ್ದಾರೆ. ಅವರೆಲ್ಲರನ್ನು ಹೆಸರಿಸುವುದು ಅಸಾಧ್ಯ. ಅವರಿಗೆ ನನ್ನ ವಂದನೆ.

ಕರೀಂಖಾನರ ವಿಚಾರದಲ್ಲಿ ಮಾಹಿತಿ ಒದಗಿಸಿದ ಕೆಲವರನ್ನು ನೆನೆಯದೇ ಇರಲಾರೆ. ಅವರೆಂದರೆ ಡಾ. ಹಿ. ಚಿ. ಬೋರಲಿಂಗಯ್ಯ, ಡಾ. ಕಾಳೇಗೌಡ ನಾಗವಾರ, ದಿ. ಶ್ರೀ ನಿಟ್ಟೂರುಶ್ರೀನಿವಾಸರಾಯ, ಡಾ. ರಾಮಚಂದ್ರೇಗೌಡ, ಡಾ. ಸೋಮಶೇಖರ ಇಮ್ರಾಪುರ, ಶ್ರೀ ವಿರೇಂದ್ರ ಹೆಗ್ಗಡೆ. ಡಾ. ಎನ್.ಆರ್. ನಾಯಕ, ಜಾನಪದ ಅಕಾಡೆಮಿಯ ಶ್ರೀ ಶಿವಲಿಂಗಯ್ಯ, ಶ್ರೀ ಪ್ರಕಾಶ, ಶ್ರೀಮತಿ ನಾಗರತ್ನ, ಶ್ರೀಮತಿ ಸುಕ್ರಿ ಬೊಮ್ಮು ಗೌಡ ಹಾಗೂ ತನ್ವಿರ ಅಹಮದ ಇವರಿಗೆಲ್ಲ ನಾನು ಕೃತಜ್ಞನಾಗಿದ್ದೇನೆ. ಒಟ್ಟಾರೆ ನನ್ನ ಅಭಿಮಾನದ ಕಾಣಿಕೆಯಾಗಿ ಈ ಕೃತಿಯನ್ನು ರಚಿಸಿದ್ದೇನೆ.

ಈ ಗ್ರಂಥಕ್ಕೆ ಮುನ್ನುಡಿ ಬರೆದು ಹಾರೈಸಿದ ನಾಡಿನ ಹೆಸರಾಂತ ದಲಿತ ಕವಿಗಳು, ಪ್ರಬುದ್ಧ ಸಾಹಿತಿಗಳು, ಚಿಂತಕರು, ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರು ಆದ ಡಾ. ಸಿದ್ದಲಿಂಗಯ್ಯ ಅವರಿಗೆ ನನ್ನ ಪ್ರಣಾಮಗಳು. ಈ ಕೃತಿ ಪ್ರಕಟಗೊಳ್ಳುವಲ್ಲಿ ಉತ್ತೇಜನ ನೀಡಿ ಸಹಕರಿಸಿದ ಶ್ರೀ ಅಶೋಕ ಎನ್. ಚಲವಾದಿ ಆಡಳಿತಾಧಿಕಾರಿಗಳು. ಕನ್ನಡ ಪುಸ್ತಕ ಪ್ರಾಧಿಕಾರ ಇವರಿಗೆ ನಾನು ಕೃತಜ್ಞನಾಗಿದ್ದೇನೆ.

ಕೃತಿಗೆ ಎರಡು ಮಾತು ಬರೆದು ಪ್ರೋತ್ಸಾಹಿಸಿದ ಡಾ. ಹಿ.ಚಿ. ಬೋರಲಿಂಗಯ್ಯ ಅವರಿಗೆ ನನ್ನ ಪ್ರಣಾಮಗಳು ಸಲ್ಲುತ್ತವೆ.

ಈ ಕೃತಿಯ ರಚನೆಗೆ ಸೂಕ್ತ ಮಾಗದರ್ಶನ ನೀಡಿದ ಹಾಗೂ ಹಲವಾರು ವರ್ಷಗಳು ಕರೀಂಖಾನರ ಒಡನಾಡಿಯಾಗಿದ್ದು, ಪ್ರೋತ್ಸಾಹಿಸಿದ ಹಾಗೂ ಜನಪದ ಕ್ಷೇತ್ರದಲ್ಲಿ ಸುಮಾರು ಮೂವತ್ತು ವರ್ಷಗಳ ಕಾಲ ಸುಧೀರ್ಘ ಸೇವೆ ಸಲ್ಲಿಸಿ, ಅಪಾರ ಅನುಭವವನ್ನು ಪಡೆದ ನಾಡಿನ ಪ್ರಸಿದ್ಧ ಛಾಯಾಚಿತ್ರಕಾರರು ಹಾಗೂ ಕಿರುತೆರೆಯ ಹಾಗೂ ಸಾಕ್ಷ್ಯಚಿತ್ರ ನಿರ್ದೇಶಕರಾದ ಶ್ರೀಸಿರಿಗಂಧ ಶ್ರೀನಿವಾಸಮೂರ್ತಿ ಅವರಿಗೆ ನನ್ನ ಹೃದಯಾಂತರಳಾದ ಕೃತಜ್ಞತೆಗಳು ಸಲ್ಲುತ್ತವೆ.

ಮನಪೂರ್ವಕವಾಗಿ ಪ್ರೋತ್ಸಾಹಿಸಿದ ಶ್ರೀ ಪಿ. ಎಸ್. ರಾಣೆ, ಮಾಜಿ ಸಚಿವರು, ಕರ್ನಾಟಕ ಸರ್ಕಾರ, ಇವರಿಗೆ ನನ್ನ ವಂದನೆಗಳು. ಮಲ್ಲಿಕಾರ್ಜುನ ಕಾಲೇಜಿನ ಪ್ರಾಚಾರ್ಯರು ಹಾಗು ಸಿಬ್ಬಂದಿ ವರ್ಗಕ್ಕೆ, ಶ್ರೀ ಎಸ್.ಎಸ್. ನಡೋಣಿಯವರಿಗೆ, ಸಹೋದರ ಪ್ರಭಾಕರ ಮತ್ತು ಅವನ ಕುಟುಂಬಕ್ಕೆ ನನ್ನ ಕೃತಜ್ಞತೆ ಸಲ್ಲುತ್ತದೆ. ನನ್ನ ತಂದೆ ತಾಯಿಯವರ ಆಶೀರ್ವಾದಕ್ಕೆ ನಮಸ್ಕಾರಗಳು, ನನ್ನಾಕೆ ಸದಾ ನನಗೆ ಬೆಂಬಲ ನೀಡಿದ್ದಾಳೆ. ನನ್ನ ಮಕ್ಕಳು, ಸಹೋದರ – ಸಹೋದರಿಯರನ್ನು, ನನ್ನ ವಿದ್ಯಾರ್ಥಿಗಳನ್ನು ನೆನೆಯುವೆ.

ಈ ಕೃತಿಯ ರಚನೆ ಕಾಲದಲ್ಲಿ ಅಂಕಿ ಅಂಶಗಳ ಖಚಿತತೆಗಾಗಿ ಕೆಲವು ಗ್ರಂಥಗಳನ್ನು, ಪತ್ರಿಕೆಗಳನ್ನು ಬಳಸಿಕೊಂಡಿದ್ದೇನೆ. ಆ ಗ್ರಂಥಗಳ, ಲೇಖನಗಳ ಲೇಖಕರಿಗೆ ನಾನು ಅಬಾರಿಯಾಗಿದ್ದೇನೆ. ಅಲ್ಲದೇ ಭಾಗ್ಯಂ ಬೈಂಡಿಂಗ್ ವರ್ಕ್ಸ್ ಮುದ್ರಣಾಲಯದ ಮುದ್ರಕರಿಗೆ ನನ್ನ ಹೃತ್ಪೂರ್ವಕ ಧನ್ಯವಾದಗಳು.

ಡಾ. ಪ್ರಕಾಶ ನಾಯಕ
ಲೇಖಕರು

'ಸುಪ್ರಭಾತ'
ಕಾರವಾರ ಕ್ರಿಶ್ಚನ್ ಎಸೆಂಬ್ಲಿ ಎದುರುಗಡೆ,
ರಾಘವೇಂದ್ರ ನಗರ,
ನಂದನಗದ್ದಾ, ಕಾರವಾರ.

# ಪರಿವಿಡಿ


| | |
|---|---|
| ಎಸ್.ಕೆ. ಕರೀಂಖಾನ್ ಅವರ ಜೀವನ ಮತ್ತು ವ್ಯಕ್ತಿತ್ವ | ೧–೪೭ |
| ಸಾಧಕ ಕರೀಂಖಾನ್ | ೪೮–೧೨೩ |
| ಬರಹಗಾರ ಕರೀಂಖಾನ್ | ೧೨೪–೧೪೮ |
| ೧. ಕರೀಂಖಾನರ ಬದುಕಿನ ಮಹತ್ವದ ಘಟನೆಗಳು | ೧೪೯–೧೫೧ |
| ೨. ಕರೀಂಖಾನರ ಸಾಹಿತ್ಯ ಸೂಚಿ | ೧೫೨ |
| ೩. ಭಾವಚಿತ್ರಗಳು | ೧೫೩–೧೬೦ |
| ೪. ಕರೀಂಖಾನರ ಹಸ್ತಾಕ್ಷರ ಮತ್ತು ಇತರ ದಾಖಲೆಗಳು | ೧೬೧–೧೬೫ |

# ಎಸ್. ಕೆ. ಕರೀಂಖಾನ್ ಅವರ ಜೀವನ ಮತ್ತು ವ್ಯಕ್ತಿತ್ವ

## (ಸಕಲೇಶಪುರದ ಖಾನ್ ಸಾಹೇಬ್ ಕರೀಂಖಾನ್)

ಕನ್ನಡಿಗರ ಪಾಲಿಗೆ ಬೆಳಕಿನ ಕಿರಣವಾಗಿ ಮೂಡಿಬಂದವರು ಡಾ. ಎಸ್.ಕೆ. ಕರೀಂಖಾನರು. ಮಹಮದೀಯ ವಂಶಸ್ಥರಾದ ಇವರು ಕರ್ನಾಟಕದ ಸುಪುತ್ರರಾಗಿ ಜನಿಸಿ, ಕಳೆದ ಹಲವಾರು ದಶಕಗಳಿಂದ ಕನ್ನಡನಾಡು ನುಡಿಯ ಶ್ರೇಯಸ್ಸಿಗಾಗಿ ನಿಸ್ವಾರ್ಥ ಹಾಗೂ ಸಮರ್ಪಣಾ ಭಾವದಿಂದ ದುಡಿದು ನಾಲ್ಕು ಕೋಟಿ ಕನ್ನಡಿಗರು ಮನಸಾರೆ ಮೆಚ್ಚುವಂಥ ಸಾಧನೆಯನ್ನು ಮಾಡಿದವರು. ಕಲೆ, ಸಾಹಿತ್ಯ, ರಾಜಕೀಯ, ಜಾನಪದ ಸಂಗ್ರಹ, ಸ್ವಾತಂತ್ರ್ಯ ಚಳುವಳಿ, ಭಾಷೆ, ಶಿಕ್ಷಣ, ರಂಗಭೂಮಿ, ಪತ್ರಿಕೋದ್ಯಮ. ಚಲನಚಿತ್ರರಂಗ ಮತ್ತು ಸಮಾಜಸೇವೆ ಹೀಗೆ ವಿವಿಧ ಕ್ಷೇತ್ರಗಳಲ್ಲಿ ನಿಷ್ಕಾಮ ಸೇವೆ ಸಲ್ಲಿಸಿದ ಕರೀಂಖಾನರ ಬದುಕು ಮಹತ್ವಪೂರ್ಣವಾದದ್ದು. ರಾಷ್ಟ್ರ ನೇತಾರ ಪೂಜ್ಯ ಮಹಾತ್ಮಾ ಗಾಂಧಿಯವರ ಪ್ರಭಾವಕ್ಕೆ ಒಳಗಾಗಿ ಜಾತಿ, ಮತ, ಪಂಥಗಳನ್ನು ಧಿಕ್ಕರಿಸಿ, ಮಾನವೀಯತೆಯನ್ನು ಮೈಗೂಡಿಸಿಕೊಂಡು, ಕಳಂಕರಹಿತ ಜೀವನವನ್ನು ನಡೆಸಿದ್ದು ಅನುಕರಣೀಯ. ಬದುಕಿನ ಎಲ್ಲ ರಂಗಗಳಲ್ಲಿ ಅನ್ಯ ಭಾಷೆ, ಸಂಸ್ಕೃತಿಗಳು ಅಟ್ಟಹಾಸ ವಿಸ್ತರಿಸಿಕೊಂಡು ದೈತ್ಯಾಕಾರವಾಗಿ ಬೆಳೆಯುವಾಗ, ಪ್ರಜ್ಞಾವಂತ ಕನ್ನಡಿಗರು ಕಂಗೆಟ್ಟು ಚಡಪಡಿಸುವ ವಾತಾವರಣ ನಿರ್ಮಾಣವಾಗಿರುವ ಕಾಲದಲ್ಲಿ, ಕನ್ನಡಿಗರ ಪಾಲಿಗೆ ಬೆಳಕಾಗಿ ಉದಯಿಸಿದವರು ಡಾ. ಕರೀಂಖಾನರು.

ಐತಿಹಾಸಿಕವಾಗಿ ನೋಡುವಾಗ ಸಾಂಸ್ಕೃತಿಕವಾದ ಸಾಕಷ್ಟು ದುಷ್ಪರಿಣಾಮಗಳನ್ನೇ ಬಳುವಳಿಯಾಗಿ ಪಡೆದಿದ್ದ ೧೯ನೇ ಶತಮಾನವು, ತನ್ನ ಆದಿಭಾಗದಲ್ಲಿ ಇಂತಹ ಹರಿಕಾರನೊಬ್ಬನನ್ನು ಪಡೆಯಿತು. ಅವರೇ ಎಸ್.ಕೆ. ಕರೀಂಖಾನರು. ಕಳೆದ ಶತಮಾನಗಳಲ್ಲಿ ಸಾಂಸ್ಕೃತಿಕ ವಿಕೃತಿಗೆ ಕಾರಣವಾಗಿದ್ದ ಪರಿಸ್ಥಿತಿಯ ವಿರುದ್ಧ, ಜೀವಿತದ ಕೊನೆಯವರೆಗೂ ಸೆಣಸುತ್ತ, ಆಧುನಿಕ ಕರ್ನಾಟಕದ ಸಾಂಸ್ಕೃತಿಕ ಇತಿಹಾಸವನ್ನು ಬರೆದ ಈ ಕರೀಂಖಾನರ ಪ್ರಚಂಡ ಹೋರಾಟದ ಹಿಂದೆ, ಸಾಕಷ್ಟು ಪ್ರೇರಣೆ, ಪ್ರಚೋದನೆಗಳಿರುವುದನ್ನು ಅಲ್ಲಗಳೆಯುವಂತಿಲ್ಲ. ಮಹದಾಶ್ಚರ್ಯದ ಸಂಗತಿ ಎಂದರೆ, ಈವತ್ತಿಗೂ ಹಲವು ನ್ಯಾಯ ಸಮ್ಮತವಾದ ಹೋರಾಟಗಳ ನೆಲೆವೀಡಾಗಿರುವ ಸಕಲೇಶಪುರವು, ಆವತ್ತೂ ಕರೀಂಖಾನರಿಗೆ ಜನ್ಮ ಕೊಟ್ಟು, ಸಾರ್ಥಕ ಹೋರಾಟದ ಚೈತನ್ಯ ತುಂಬಿದ ನೆಲದಾಯಿ. ಈ ಹಿನ್ನೆಲೆಗಾಗಿ ಅಂದಿನ ಸಕಲೇಶಪುರದ ಪರಿಸರವನ್ನು ಪರಿಚಯಿಸಿಕೊಳ್ಳುವುದು ಇಲ್ಲಿ ಹೆಚ್ಚು ಪ್ರಸ್ತುತವೆನಿಸುತ್ತದೆ.

**ಮನೆತನದ ಇತಿಹಾಸ :**

ಎಸ್.ಕೆ. ಕರೀಂಖಾನರವರ ಮನೆತನದ ಮೂಲ ಪುರುಷರು ಮುಸ್ಲಿಂ ಜನಾಂಗದ ಸುನ್ನಿ ಪಂಗಡಕ್ಕೆ ಸೇರಿದ ಪಠಾಣರು. ಇವರು ಮೂಲತಃ ಅಪಘಾನಿಸ್ಥಾನದ ಕಾಬೂಲಿನವರು. ಏಷ್ಯಾ ಖಂಡವು ಹಲವಾರು ರಾಷ್ಟ್ರಗಳ ಸಮೂಹ. ಅಪಘಾನಿಸ್ಥಾನವು ಏಷ್ಯಾ ಖಂಡದಲ್ಲಿಯ ಒಂದು ದೇಶ. ಅಪಘಾನಿಸ್ಥಾನದ ರಾಜಧಾನಿಯು ಕಾಬೂಲ್. ಅದರ ವಿಸ್ತೀರ್ಣ ೨೫೦೦೧೮ ಚದರ ಮೈಲು. ಅಪಘಾನಿಸ್ಥಾನದ ಇತಿಹಾಸವನ್ನು ನೋಡಿದಾಗ ಸಂಘರ್ಷವಾದ ವಾತಾವರಣದಿಂದ ಕೂಡಿಕೊಂಡಿತ್ತು. ಅಲ್ಲಿ ಅನೇಕ ಬುಡಕಟ್ಟು ಜನಾಂಗಗಳು ವಾಸವಾಗಿದ್ದವು. ಬಸ್ ಸಂಚಾರವಾಗಲೀ, ರೈಲ್ವೆ ಸಂಚಾರವಾಗಲಿ ಇರಲಿಲ್ಲ. ಬಹುತೇಕ ಜನರು ಕಾಲುನಡಿಗೆ, ಕುದುರೆಗಾಡಿಗಳ ಮೂಲಕ ತಮ್ಮ ಸರಕು ಸರಂಜಾಮುಗಳನ್ನು ಸಾಗಾಟ ಮಾಡಿಕೊಳ್ಳುತ್ತಿದ್ದರು. ೧೯೨೧ಕ್ಕಿಂತ ಪೂರ್ವದಲ್ಲಿ ಇದು ದಾಸ್ಯಕ್ಕೊಳಗಾಗಿತ್ತು. ೧೯೨೧ ರಲ್ಲಿ ಇದು ಸ್ವಾತಂತ್ರ್ಯವನ್ನು ಪಡೆಯಿತು.

ಕಾಬೂಲ್ ನದಿಯ ಬಲದಂಡೆಯ ಮೇಲಿರುವ ಕಾಬೂಲ್, ಸಮುದ್ರ ಮಟ್ಟದಿಂದ ೬೦೦೦ ಅಡಿ ಎತ್ತರದಲ್ಲಿದೆ. ಇಲ್ಲಿಯ ಬಹುತೇಕ ಜನ ಪರ್ಷಿಯನ್ ಭಾಷೆಯನ್ನಾಡುವವರು. ಇಲ್ಲಿ ಬಹಳಷ್ಟು ಅಲೆಮಾರಿ ಜನರಿದ್ದು, ಶೇ. ೯೯ ಜನ ಇಸ್ಲಾಂ ಮತೀಯರು. ಇವರ ಮನೆತನದ ಮೂಲ ಸ್ಥಳವಾದ ಕಾಬೂಲ ನಗರ ರಾಜಧಾನಿಯಾಗಿದ್ದು , ವಾಣಿಜ್ಯ ಕೇಂದ್ರವೂ ಆಗಿತ್ತು.

ಅಫ್ಘಾನಿಸ್ಥಾನದಲ್ಲಿ ವೃತ್ತಿಯಲ್ಲಿ ಯೋಧರಾಗಿದ್ದ ಕರೀಂಖಾನರ ತಂದೆ, ಅಬ್ದುಲ್ ರೆಹಮಾನರವರ ವಂಶಸ್ಥರು. ಪುಷ್ತ ಭಾಷೆಯನ್ನಾಡುತ್ತಿದ್ದರು. ಇವರ ಮನೆಯ ಹಿರಿಯರು ಯುನಾನಿ ಔಷಧವನ್ನು ಕೊಡುತ್ತಿದ್ದರು. ಜೊತೆಗೆ ಚಿಲ್ಲರೆ ವ್ಯಾಪಾರಿಗಳಾಗಿ, ಮೆಣಸು, ಸಾಂಬಾರು ಪದಾರ್ಥಗಳನ್ನು ಮಾರಾಟ ಮಾಡುತ್ತಿದ್ದರು. ಅಲ್ಪಸ್ವಲ್ಪ ಮಟ್ಟಿಗೆ ಬಟ್ಟೆ ವ್ಯಾಪಾರಸ್ಥರಾಗಿದ್ದರು. ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡ ಇವರ ಪೂರ್ವಜರು ದೇಶಾಭಿಮಾನವನ್ನು ಮೈಗೂಡಿಸಿಕೊಂಡಿದ್ದರು.

ಕರೀಂಖಾನರವರ ತಂದೆಯವರು ಮೂರನೇ ಅಫ್ಘಾನ ಯುದ್ಧದಲ್ಲಿ ಹೋರಾಡಿದವರು. ಮೂರನೇ ಅಫ್ಘಾನ್ ಯುದ್ಧದಲ್ಲಿ ಬ್ರಿಟಿಷರು ಅಫ್ಘಾನವನ್ನು ಜಯಿಸಿ, ತಮ್ಮ ೨೦ ಸಾವಿರ ಸೈನಿಕರನ್ನು ಅಲ್ಲಿ ಇಟ್ಟಿದ್ದರು. ದೋಸ್ತ ಮಹಮ್ಮದ ಎಂಬಾತ ಈ ಸೈನ್ಯದ ವಿರುದ್ಧ, ಬ್ರಿಟಿಷರ ದಬ್ಬಾಳಿಕೆಯ ವಿರುದ್ಧ ಕ್ರಾಂತಿ ಕಹಳೆಯನ್ನು ಊದಿದ. ಎಲ್ಲೆಲ್ಲೂ ಸ್ವಾತಂತ್ರ್ಯದ ಕೂಗು ಕೇಳಿ ಬಂದಿದ್ದರಿಂದ ಆ ಕೆಚ್ಚೆದೆಯ ಕಿಚ್ಚು ದೇಶಪ್ರೇಮವನ್ನು ಹೆಚ್ಚಿಸಿತು. ಆ ಸಂದರ್ಭದಲ್ಲಿ ದೋಸ್ತ ಮಹಮ್ಮದರ ಪರವಾಗಿ ಹೋರಾಡುವಾಗ ಅಬ್ದುಲ್ ರೆಹಮಾನ್ ಖಾನರಿಗೆ ೧೬ ವರ್ಷ. ವೀರ ಯೋಧ ರೆಹಮಾನಖಾನ್ ಆ ಘನಘೋರ ಯುದ್ಧದಲ್ಲಿ ಪ್ರಾಣದ ಹಂಗು ತೊರೆದು ಹೋರಾಡಿದರು. ಆ ಕಾಳಗದಲ್ಲಿ ಬ್ರಿಟೀಷ ಕೋವಿಯ ಮೂರು ಗುಂಡುಗಳು ಇವರ ಶರೀರವನ್ನು ಸೇರಿದರೂ, ದೇಶಮಾತೆಗೆ ಸ್ವಾತಂತ್ರ್ಯ ಕೊಡಿಸುವಲ್ಲಿ

ಸಫಲರಾದರು. ದೇಹಕ್ಕೆ ತಗುಲಿದ ಮೂರು ಗುಂಡುಗಳ ಗುರುತು ಅವರು ಕಾಲವಾಗುವವರೆಗೂ ಉಳಿದುಕೊಂಡಿತ್ತು. ಅಫ್ಘಾನ್ ಯುದ್ಧದ ನಂತರ ಕೆಲವು ವರ್ಷಗಳಲ್ಲಿ ಅಣ್ಣ ತಮ್ಮಂದಿರ ಮಧ್ಯೆ ಮನೆತನದ ಕಲಹದಿಂದಾಗಿ ಸ್ವಾತಂತ್ರ್ಯ ಪ್ರೇಮಿಯಾದ ಯುವಕ ಮನೆಯಲ್ಲಿ ಉಳಿಯಲಾಗದೇ ಶಾಂತಿ, ಸಹಬಾಳ್ವೆ, ಪ್ರೀತಿ, ವಾತ್ಸಲ್ಯ, ಭ್ರಾತೃತ್ವ, ಅಧ್ಯಾತ್ಮಿಕತೆಗಳಿಗೆ ಪ್ರಸಿದ್ಧರಾದ ಅನೇಕ ಪುಣ್ಯ ಪುರುಷರಿಗೆ ಜನ್ಮದಾತೆಯಾದ ಭಾರತಾಂಬೆಯ ಕಡೆಗೆ ರೆಹಮಾನಖಾನರ ಮನಸ್ಸು ಕೇಂದ್ರೀಕೃತವಾಗಿ, ಜಾತ್ಯತೀತವಾಗಿ ಕೈ ಬೀಸಿ ಕರೆಯುವ ಭಾರತಕ್ಕೆ ವಲಸೆ ಬಂದರು. ಅಗೋಚರ ಶಕ್ತಿಯ ನಿರ್ದೇಶನದಂತೆ ಭಾರತಮಾತೆಗೆ ಅಫ್ಘಾನ ವಂಶಸ್ಥ ರೆಹಮಾನಖಾನರ ಮಗ ಕರೀಂಖಾನರ ಸೇವೆಯ ಭಾಗ್ಯಬೇಕಾಗಿತ್ತು ಎನ್ನುವುದು ಸ್ವಾತಂತ್ರ್ಯ ಸಮಯದಲ್ಲಿ ಅವರು ವಹಿಸಿದ ಗುರುತರವಾದ ಸೇವೆಯಿಂದ ವೇದ್ಯವಾಗುತ್ತದೆ.

ಬರಿಗೈ ಬಂಟರಾದ ಅಬ್ದುಲ್ ರೆಹಮಾನ್‌ಖಾನ್ ಭಾರತ ದೇಶದ ಹಲವಾರು ಪ್ರದೇಶಗಳಲ್ಲಿ ಸಂಚರಿಸುತ್ತ ಅಲೆಮಾರಿಯಾಗಿ ಏಕಾಂಗಿಯಾಗಿ, ಚಿಕ್ಕಪುಟ್ಟ ಕೆಲಸಗಳನ್ನು ಮಾಡಿ, ಹೊಟ್ಟೆ ಹೊರೆಯುತ್ತ ಎಲ್ಲಿಯೂ ಶಾಶ್ವತವಾಗಿ ನೆಲೆ ನಿಲ್ಲದೇ ಕರ್ನಾಟಕದ ಕಾಫಿ ಮತ್ತು ಮೆಣಸು ಬೆಳೆಗೆ ಹೆಸರುವಾಸಿಯಾದ ಹಾಸನಜಿಲ್ಲೆಯ, ನಿಸರ್ಗ ರಮಣೀಯವಾದ ಹೇಮಾವತಿ ನದಿಯ ದಡದ ಮೇಲಿರುವ ಸಕಲೇಶಪುರದಲ್ಲಿ ನೆಲೆನಿಂತರು. ರೆಹಮಾನಖಾನ್‌ರು ಜೈನಬಿಯನ್ನು ತಮ್ಮ ಬಾಳಸಂಗಾತಿಯನ್ನಾಗಿ ಮಾಡಿಕೊಂಡರು. ಕರೀಂಖಾನರ ತಾಯಿ ಜೈನಬಿಯವರು, ಅರಬ್ಬೀ ಮೂಲದವರಾದ ಸೈಯದ್ ಹೈದರವರ ಮಗಳು. ಇವರ ತಂದೆ ಕೊಡಗು ಜಿಲ್ಲೆಯ ಕುಶಾಲನಗರದವರು. ಇವರು ಪೈಗಂಬರ ವಂಶಕ್ಕೆ ಸೇರಿದ ಸುನ್ನಿ ಪಂಥದವರಾಗಿದ್ದರು. ಇವರದು ಸಂಪ್ರದಾಯಸ್ಥ ಮನೆತನವಾಗಿತ್ತು. ರೆಹಮಾನಖಾನ್‌ರವರಿಗೆ ಜೈನಬಿಯನ್ನು ಮದುವೆ ಮಾಡುವ ಪ್ರಸ್ತಾಪ ಬಂದಾಗ ಗೊತ್ತುಗುರಿಯಿಲ್ಲದ ರೆಹಮಾನರವರಿಗೆ ಸೈಯದ್ ಹೈದರ್ ತಮ್ಮ ಮಗಳನ್ನು ಕೊಡಲು ನಿರಾಕರಿಸಿದರು. ಈ ವಿಷಯ ಮುಸ್ಲಿಂ ಧಾರ್ಮಿಕ ಮುಖಂಡರಲ್ಲಿ ಚರ್ಚಿತವಾಯಿತು. ಧಾರ್ಮಿಕ ಮುಖಂಡರ ನೇತೃತ್ವದಲ್ಲಿ ಮದುವೆ ಒಪ್ಪಂದ ನಡೆದು ವಿವಾಹವೇರ್ಪಟ್ಟಿತು. ದಾಂಪತ್ಯ ಸುಖ ಕಂಡ ದಂಪತಿಗಳು ಒಂದು ಹೆಣ್ಣು ಹಾಗೂ ಏಳು ಗಂಡು ಮಕ್ಕಳಿಗೆ ಜನ್ಮ ಕೊಟ್ಟರು.

ಹಾಸನ ಜಿಲ್ಲೆಯು ಒಂದಲ್ಲ ಒಂದು ವಿಷಯದಿಂದ ದೇಶದ ಗಮನ ಸೆಳೆಯುತ್ತಲೇ ಇದೆ. ಈ ಜಿಲ್ಲೆಯ ಒಡಲಲ್ಲಿರುವ ಸಕಲೇಶಪುರ ಜಾನಪದ ಜಂಗಮ ಡಾ. ಎಸ್. ಕೆ. ಕರೀಂಖಾನರಿಗೆ ಜನ್ಮಕೊಟ್ಟ ತಾಲೂಕು. ಸಕಲೇಶಪುರವನ್ನು ಹತ್ತೊಂಭತ್ತನೆಯ ಶತಮಾನದಲ್ಲಿ ಇಲ್ಲಿಗೆ ಬಂದ ಯುರೋಪಿಯನ್ನರು 'ಸಕ್ಲಾಸ್‌ಪುರ' ಎಂದು ಕರೆದರು. ನಿತ್ಯಹರಿದ್ವರ್ಣದಿಂದ ಭೂಷಿತವಾದ ಸಕಲೇಶಪುರದ ಸೌಂದರ್ಯ, ಜಾನಪದ ಹಿರಿಮೆಯಿಂದ ಕೂಡಿದ ಗ್ರಾಮೀಣ ಪರಿಸರ, ಚಾರಿತ್ರಿಕ ಸಂಸ್ಕೃತಿಯ ದಾಖಲೆಗಳುಳ್ಳ ಇತಿಹಾಸ, ನಿಸರ್ಗದತ್ತ ಉಪಮಾತೀತ ತಾಣಗಳು ಹಾಗೂ ಪ್ರೇಕ್ಷಣೀಯ ಸ್ಥಳಗಳಿಗೇನೂ ಕೊರತೆಯಿಲ್ಲ. ಹೆಜ್ಜೆಯಿಟ್ಟಲ್ಲಿ ಗೆಜ್ಜೆ ಕಟ್ಟಿ

ನಾಟ್ಯ ಮಾಡುವ ಸ್ಥಳಗಳು ಇಲ್ಲಿವೆ. ಫಲವತ್ತಾದ ಭೂಮಿಯಲ್ಲಿ ವಿವಿಧ ಜಾತಿಯ ಪ್ರಾಣಿಗಳು, ಬೆಲೆಬಾಳುವ ಬೆಳೆಗಳು, ಇಲ್ಲಿನ ಮುಖ್ಯ ವೈಶಿಷ್ಟ್ಯ. ಏಲಕ್ಕಿ, ಕಾಫಿ, ಕಾಳು ಮೆಣಸುಗಳು ರಫ್ತಾಗುತ್ತವೆ. ಸಕಲೇಶಪುರವನ್ನು ಟಿಪ್ಪು ಸುಲ್ತಾನ ಮಂಜರಾಬಾದ್ ಎಂದು ಕರೆದು ತಾನೂ ಅಲ್ಲಿ ರಾಜ್ಯಭಾರವನ್ನು ಮಾಡಿದ ಕುರುಹನ್ನು ತೋರಿಸಿದ್ದಾನೆ.

ಹೀಗೆ ಸರ್ವ ವಿಧದಲ್ಲೂ ಮನವನ್ನಾಕರ್ಷಿಸುವ ಶಾಣವಾದ ಸಕಲೇಶಪುರದಲ್ಲಿ ನೆಲೆ ನಿಂತ ರೆಹಮಾನ್ ಖಾನ್ ಜೈನಬಿ ದಂಪತಿಗಳ ಹಿರಿಯ ಮಗ ಖಾದರಖಾನ್, ಖಲಂದರಖಾನ್ ಎರಡನೆಯವನು, ಅಹಮ್ಮದಖಾನ್ ಮೂರನೆಯವನಾಗಿ, ರೆಹೀಂಖಾನ್ ನಾಲ್ಕನೆಯವನಾಗಿ, ಕರೀಂಖಾನ್ ಐದನೆಯವರು, ಜಬ್ಬಾರಖಾನ್ ಆರನೆಯವನಾಗಿ, ಗಫಾರಖಾನ್ ಏಳನೆಯವನಾಗಿ ಮತ್ತು ಹನೀಫಾಖಾನ್ ಎಂಬ ಸಹೋದರಿ ಎಂಟನೆಯವಳಾಗಿ ಹುಟ್ಟಿದರು.

**ಕರೀಂಖಾನರ ಜನನ ಮತ್ತು ಬಾಲ್ಯ :**

ಎಸ್. ಕೆ. ಕರೀಂಖಾನರವರು ತಾಯಿ ಜೈನಬಿ ಮತ್ತು ತಂದೆ ಅಬ್ದುಲ್ ರೆಹಮಾನಖಾನ್‌ರವರ ಐದನೆಯ ಮಗುವಾಗಿ ಕರೀಂಖಾನರು ಹಾಸನ ಜಿಲ್ಲೆಯ ಸಕಲೇಶಪುರದಲ್ಲಿ ೧೯೦೫ ರಲ್ಲಿ ಜನಿಸಿದರು. ದುಂಡು ಮುಖದ ಕೆಂಬಣ್ಣದ ಪುಟ್ಟ ಬಾಲಕ ಬಾಲ್ಯದಿನಗಳಲ್ಲಿ ಎಲ್ಲರನ್ನು ಆಕರ್ಷಿಸುತ್ತ, ತನ್ನ ಸಹೋದರ, ಸಹೋದರಿಯರೊಡನೆ ಆಟವಾಡುತ್ತ ಬೆಳೆಯತೊಡಗಿದ. ಪ್ರಕೃತಿಯ ಕರೆಯ ಮೇರೆಗೆ ಜನಿಸಿದ ಬಾಲಕನೇನೋ ಎನ್ನುವಂತೆ, ಬಾಲ್ಯದಲ್ಲಿಯೇ ಭೂದೇವಿಯ ಚೆಲುವಿನ ರೂಪಕ್ಕೆ ವಿಸ್ಮಿತನಾಗಿ ಪ್ರಕೃತಿಯ ಮಡಿಲಲ್ಲಿ ಆನಂದಪಡುತ್ತಿದ್ದ. ಬಾಲಕ ಕರೀಂಖಾನರನ್ನು ಅಣ್ಣಂದಿರು 'ಕರೀಂ ಭಾಯಿ' ಎಂದು ಕರೆಯುತ್ತಿದ್ದರು.

ಕವಿ ಮನಸ್ಸಿನ ಸೂಕ್ಷ್ಮದರ್ಶಿಯಾದ ಬಾಲಕ ಕರೀಂನ ಬಾಲ್ಯ, ಮಸುಕು ಮಸುಕಾದ ತೆರೆ ಸರಿದು ನೆನಪು ನಿಚ್ಚಳವಾಗ ತೊಡಗಿತು. ಕರೀಂಖಾನರು ತಮ್ಮ ಎಂಟುವರೆ ವರ್ಷಕ್ಕೆ ತಮ್ಮ ತಂದೆಯನ್ನು ಕಳೆದುಕೊಂಡರು. ತಂದೆಯೊಂದಿಗಿನ ಒಡನಾಟದ ಸುಂದರ ಕ್ಷಣಗಳನ್ನು ಸವಿಯುವ ವಯಸ್ಸಿನಲ್ಲಿಯೇ ಪಿತೃವಿಯೋಗದ ಮಹತ್ತರವಾದ ಆಘಾತ ಬಾಲಕ ಕರೀಂಖಾನರ ಮೇಲೆ ಆಗಿತ್ತು. ತಂದೆಯ ನೆನಪನ್ನು ಮಾಡಿಕೊಂಡು ಆತನ ಬಗ್ಗೆ ಹೇಳುತ್ತಿದ್ದಾಗ ಕರೀಂಖಾನರು ಗದ್ಗದಿತರಾಗುತ್ತಿದ್ದರು.

ತಂದೆಯ ಅಗಲಿಕೆಯ ನೋವು ಮಕ್ಕಳನ್ನು ತೀವ್ರವಾಗಿ ಕಾಡದಂತೆ ಹಿರಿಯಣ್ಣ ಮತ್ತು ತಾಯಿ ಜೈನಬಿಯವರು ವಿಶೇಷ ಕಾಳಜಿ ವಹಿಸಿದರು. ಖಾದರಖಾನರವರ ಭ್ರಾತೃತ್ವ ಹಾಗೂ ತಾಯಿಯ ಮಾತೃ ವಾತ್ಸಲ್ಯದಿಂದ ತಂದೆಯ ವಿಯೋಗವನ್ನು ಮರೆಯಲು ಸಹಾಯಕಾರಿಯಾದವು. ಮಾತೃ ವಾತ್ಸಲ್ಯ ಕರೀಂಖಾನರ ಚೈತನ್ಯ ಶಕ್ತಿಯನ್ನು ಇಮ್ಮಡಿಸಿತು. ಕರೀಂರು ತಂದೆಯನ್ನು ಬಹುವಾಗಿ ಪ್ರೀತಿಸುತ್ತಿದ್ದರು. ಇವರು ಬರೆದ 'ಬಲಿದಾನಿಹುಸೇನ' ಎನ್ನುವ ಚಾರಿತ್ರಿಕ ಕಾದಂಬರಿಯನ್ನು ತಮ್ಮ

ತಂದೆಗೆ ಅರ್ಪಣೆ ಮಾಡುತ್ತ "ತನ್ನ ದೇಶವು ಅನ್ಯಾ ಕ್ರಾಂತವಾಗಿದ್ದ ಕಾಲದಲ್ಲಿ, ಕೇವಲ ೧೬ನೇ ವಯಸ್ಸಿನಲ್ಲಿಯೇ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿ ಹೋರಾಡಿ ತಮ್ಮ ದೇಶದ ಅಸ್ತಿತ್ವವನ್ನು, ಸ್ವಾತಂತ್ರ್ಯವನ್ನು ಕಾಯ್ದುಕೊಂಡ ನನ್ನ ಪೂಜ್ಯತಂದೆ ಅಫ್ಘಾನ್ ಯೋಧ ದಿವಂಗತ ಅಬ್ದುಲ್ ರೆಹಮಾನಖಾನರವರ ಪವಿತ್ರ ಸ್ಮೃತಿಗಾಗಿ" ಎಂದು ತಿಳಿಸಿದ್ದಾರೆ.

"ಬೆಳೆವ ಸಿರಿ ಮೊಳಕೆಯಲ್ಲಿ ಕಾಣು' ಎಂಬ ಗಾದೆಯ ಮಾತು ರೂಢಿಯಲ್ಲಿದೆ. ಹಾಗೆಯೇ ಬೆಳೆಯುತ್ತಿರುವ ಮಕ್ಕಳ ಭವಿಷ್ಯದ ಬಗೆಯನ್ನು ಅವರ ಬಾಲ್ಯದಲ್ಲಿಯೇ ಕಾಣಬಹುದು. ಬಾಲ್ಯ ಮಾನವನ ಬದುಕಿನ ಮಹತ್ವದ ಘಟ್ಟಗಳಲ್ಲಿ ಒಂದು. ಬಾಲ್ಯದಲ್ಲಿ ವ್ಯಕ್ತಿ ಹಂಬಲಿಸಿದ್ದನ್ನು, ಬಯಸಿದ್ದನ್ನು ತನ್ನ ಯೌವ್ವನದಲ್ಲಿ ಸಾಧಿಸುತ್ತಾನೆ. ಆದರೆ ಹುಡುಗ ಕರೀಂಖಾನರ ಸಂಗಾತಿ ಬಡತನವಾಗಿತ್ತು. ಆ ನಂಟು ಎಂದಿಗೂ ಅವರನ್ನು ಬಿಟ್ಟಿಲ್ಲ. ಅವರು ಅಂದುಕೊಂಡು ಗ್ರಹಿಸಿಕೊಂಡಿದ್ದು ನಿರೀಕ್ಷಿತಮಟ್ಟದ ಫಲವನ್ನು ಕೊಟ್ಟಿಲ್ಲ. ನೀವು ಮಾಡಿದ ಕೆಲಸದ ಬಗ್ಗೆ ನಿಮಗೆ ತೃಪ್ತಿ ಉಂಟೇ ? ಎಂದಾಗ "ನನಗೆ ನಾನು ಮಾಡಿದ ಅಲ್ಪ ಕೆಲಸದಲ್ಲಿ ತೃಪ್ತಿ ತಂದಿಲ್ಲ" ಎನ್ನುತ್ತಾರೆ.

ಬಾಲ್ಯದ ಗುಣಗಳು, ಹವ್ಯಾಸ, ಆಸಕ್ತಿಗಳು ಮುಂದಿನ ಬಾಳಿನಲ್ಲಿ ಬೆಳೆದು ಹೆಮ್ಮರವಾಗುತ್ತವೆ. "ಹಣ್ಣಿನ ಗುಣವನ್ನು ಹೀಚಿನಲ್ಲಿಯೇ ನೋಡು" ಎಂಬ ಮಾತನ್ನು ಸಾಬೀತು ಪಡಿಸುತ್ತವೆ. "ಮೆನ್ ಕೆನ್ನಾಟ್ ಲಿವ್ ಬೈ ಬ್ರೆಡ್ ಅಲೋನ್" ಎಂಬ ಸ್ಪೆಂಡರ್ ನ ಮಾತಿನಂತೆ ಮನುಷ್ಯ ಊಟಕ್ಕಾಗಿ ಮಾತ್ರ ಬದುಕಬಾರದು ಸಮಾಜದ ಅನೇಕ ಕೆಲಸಗಳಿಗಾಗಿ ಬದುಕ ಬೇಕಾಗುತ್ತದೆ ಎಂಬಂತೆ ಕರೀಂಖಾನರ ಬದುಕು ಲೋಕ ಕಲ್ಯಾಣಕ್ಕಾಗಿ ವಿಸ್ತಾರವಾಗುತ್ತ ಹೋಯಿತು.

ಸಕಲೇಶಪುರದಲ್ಲಿ ಇವರದು ಅವಿಭಕ್ತ ಕುಟುಂಬ. ಮನೆಯಲ್ಲಿ ಪ್ರತಿಯೊಬ್ಬರು ಕನ್ನಡ ಮತ್ತು ಉರ್ದು ಭಾಷೆಯನ್ನಾಡುತ್ತಿದ್ದರು. ಮುಸ್ಲಿಂ ಧರ್ಮೀಯ ಯುವಕ ಕರೀಂಖಾನರ ಮನೆಯ ಸುತ್ತಲೂ ಹಿಂದೂ ಮನೆಗಳಿದ್ದವು. ಕರೀಂಖಾನ್ ಮಗುವಾಗಿ ಬೆಳೆಯತೊಡಗಿದ್ದು ಹಿಂದೂ ಬಾಲಕರ ಸಹವಾಸದಲ್ಲಿ, ಸುಬ್ಬಾಭಟ್ಟ, ನಾಗರಾಜ ಮತ್ತು ಎಸ್. ಕೆ. ರಾಜಶೇಖರ ಇವರ ಸಹವಾಸವು ಇವರನ್ನು ಜಾತ್ಯತೀತವಾಗಿ ಬೆಳೆಯಲು ಪ್ರೇರೇಪಿಸಿದವು. ಬ್ರಾಹ್ಮಣ ಗುರುಗಳಿಂದ ವಿದ್ಯಾಸಿಂಚನವಾಯಿತು. ಇವರಿಗೆ ಆಚಂಗಿ ನಾರಾಯಣ ಶಾಸ್ತ್ರಿಗಳು ಗುರುಗಳಾದರು. "ಇವರ ಪ್ರಭಾವದಿಂದ ರಾಮಾಯಣ, ಮಹಾಭಾರತ, ಭಗವದ್ಗೀತಾ, ಪುರಾಣ ಪುಣ್ಯ ಕಥೆಗಳು ನನ್ನ ಮನಸ್ಸನ್ನು ಸೆರೆ ಹಿಡಿದು ಬಿಟ್ಟವು" ಎಂದು ನೆನಪಿಸಿಕೊಳ್ಳುತ್ತಾರೆ. ಇವರು ತಮ್ಮ 'ನೀವಾರ' ಉರ್ದು ನೀಳ್ಗತೆಗಳನ್ನು ಕನ್ನಡಕ್ಕೆ ಅನುವಾದ ಮಾಡಿ, "ವೇದವೇದಿಗಳು, ತತ್ವಶಾಸ್ತ್ರ ಕೋವಿದರು, ಕವಿ ಪುಂಗವರೂ, ಅದ್ಭುತ ವಿದ್ಯಾತಜ್ಞರು, ಸಮತಾವಾದಿಗಳು ಆಗಿದ್ದು ನನ್ನನ್ನು ಸಾಹಿತ್ಯ ಸೇವೆಗಾಗಿ ಪ್ರೇರೇಪಿಸಿದ ದಿವಂಗತ ಪೂಜ್ಯ ಆಚಂಗಿ ನಾರಾಯಣ ಶಾಸ್ತ್ರಿಗಳಿಗೆ ಈ ಕೃತಿಯನ್ನು ಅರ್ಪಿಸುತ್ತಿದ್ದೇನೆ" ಎಂದರು. ಆಚಂಗಿಯವರು ಕರೀಂಖಾನರನ್ನು ಖಾಸಾ ಶಿಷ್ಯರನ್ನಾಗಿ ಮಾಡಿಕೊಂಡು ದೀಕ್ಷೆ ನೀಡಿದರು.

ಮುಗ್ಧ ಕರೀಂನ ಅಂತರಾಳದಲ್ಲಿ ಜಾನಪದ ಜಂಗಮ, ಸ್ವಾತಂತ್ರ್ಯ ಹೋರಾಟಗಾರ, ನಾಟಕಕಾರ, ಕವಿ, ಲೇಖಕ, ನಟ, ಚಿತ್ರಸಾಹಿತಿ, ಜನನಾಯಕ, ಸಮಾಜಸೇವಕನಾಗಿ ರೂಪುಗೊಳ್ಳುತ್ತಿದ್ದುದರ ಕುರುಹು ಅವರ ಬಾಲ್ಯದಲ್ಲಿ ಗೋಚರಿಸುತ್ತಿದ್ದವು. ಕರೀಂಖಾನರು ಅಂತರಂಗ ಬಹಿರಂಗಗಳಲ್ಲಿ ನಿಷ್ಕಲ್ಮಶ ಮನಸ್ಸುಳ್ಳವರು. ಅಸೂಯೆ, ಈರ್ಷೆ, ಸಣ್ಣತನ, ಹಗೆತನಗಳು ಅವರ ಜೀವನದಲ್ಲಿ ಎಂದೂ ಇಣುಕಿ ನೋಡಲಿಲ್ಲ. ಕರೀಂಖಾನರ ಸತ್ಯಶೀಲ ಸಚ್ಚಾರಿತ್ರ್ಯದ ವ್ಯಕ್ತಿತ್ವದಲ್ಲಿ ಘಟಿಸಿದ ಹಲವು ಘಟನೆಗಳಿಂದ ಅವರೊಬ್ಬ ಅಸಾಮಾನ್ಯ ವ್ಯಕ್ತಿ ಎಂಬುವುದು ಪ್ರಕಟಗೊಂಡಿವೆ.

ಬಾಲ್ಯದಲ್ಲಿ ಕರೀಂಖಾನರವರು ಶಾಲೆಯಲ್ಲಿ ಓದುತ್ತಿರುವಾಗ ಪೆನ್ಸಿಲ್‌ನ ತುದಿಯನ್ನು ತುಂಬಾ ಚೆನ್ನಾಗಿ ಚೂಪು ಮಾಡಿ, ಸಾಸಿವೆ ಕಾಳಿನಷ್ಟು ದಪ್ಪದಲ್ಲಿ ಮುದ್ದಾದ ಮುತ್ತಿನಂತಹ ಕನ್ನಡ ಪದಗಳನ್ನು ಬರೆಯುತ್ತಿದ್ದರು. ಪೆನ್ಸಿಲಿನ ಚೂಪನ್ನು ಕಂಡ ಕೆಲ ಗೆಳೆಯರು ನಿಬ್ಬೆರಗಾಗಿ ತಾವೂ ಇವರಿಂದ ಪೆನ್ಸಿಲ್ ಚೂಪು ಮಾಡಿಸಿಕೊಂಡು ಸಂತಸ ಪಡುತ್ತಿದ್ದರು. ಕರೀಂಖಾನರಂತೆ ಮಾಡಲು ಹೋಗಿ ಅಪಹಾಸ್ಯಕ್ಕೀಡಾಗುತ್ತಿದ್ದರು.

ಬಾಲಕ ಕರೀಂಖಾನ ಉತ್ತಮ ಈಜು ಪಟುವಾಗಿದ್ದರು. ಕೈ ಬೀಸಿ ಕರೆಯುವ ಹೇಮಾವತಿ ನದಿಯ ಪ್ರವಾಹದ ವಿರುದ್ಧ ದಿಕ್ಕಿಗೆ ಈಜಿ ತಮ್ಮ ಕೌಶಲ್ಯವನ್ನು ಪ್ರದರ್ಶಿಸುತ್ತಿದ್ದರು. ಹೊಳೆಯ ವಿರುದ್ಧ ದಿಕ್ಕಿಗೆ ಈಜುವ ಅವರ ಏಕಾಗ್ರತೆ ಬಹಳ ಮುಖ್ಯವಾದದ್ದು. ಇವೆಲ್ಲವುಗಳ ಒಡನಾಟದಿಂದಾಗಿ ಹಿಡಿದುದನ್ನು ಸಾಧಿಸುವ ಛಲವಂತರಾಗಿ ಮಾರ್ಪಟ್ಟರು. ಕರೀಂಖಾನರು ತಮ್ಮ ೮೩ನೇ ವಯಸ್ಸಿನಲ್ಲೂ ಈಜಿ ಆಶ್ಚರ್ಯಪಡಿಸಿದ್ದನ್ನು ಡಾ॥ ಹಿ. ಚಿ. ಬೋರಲಿಂಗಯ್ಯ ಪ್ರಾಧ್ಯಾಪಕರು, ಕನ್ನಡ ವಿಶ್ವವಿದ್ಯಾಲಯ, ಹಂಪಿ ಇವರು ನೆನಪಿಸಿಕೊಳ್ಳುತ್ತಾರೆ. "ಬಾಲಕ ಕರೀಂಖಾನ ಒಳ್ಳೆಯ ಫುಟ್‌ಬಾಲ ಆಟಗಾರನಾಗಿ, ಗರಡಿಯಲ್ಲಿ ಪಳಗಿದ್ದ ಕಟ್ಟಾಳಾಗಿ, ಕಬಡ್ಡಿ ಮತ್ತು ಚಿನ್ನಿದಾಂಡು ಆಟಗಳಲ್ಲಿ ತನ್ನ ಅಪ್ರತಿಮ ಕೌಶಲ್ಯವನ್ನು ತೋರಿಸುತ್ತಿದ್ದ." ಫುಟ್‌ಬಾಲ್ ಆಟ ಆಡುವಾಗ ಆಯತಪ್ಪಿ ಬಿದ್ದು ಕಾಲು ಉಳುಕಿಸಿಕೊಂಡಿದ್ದೂ ಇದೆ. ಕರೀಂಖಾನರು 'ರೈಜಿಂಗ್ ಸ್ಟಾರ್' ಎಂಬ ಫುಟ್‌ಬಾಲ್ ತಂಡಕಟ್ಟಿ, ರಾಷ್ಟ್ರೀಯ ಮಟ್ಟದ ಆಟದಲ್ಲಿ ಸ್ಪರ್ಧೆ ನಡೆಸಿದ್ದು ಇದೆ. ಈ ಪುಟ್ಟಬಾಲಕ ಶಾಲೆಯಲ್ಲಿ ಓದುತ್ತಿರುವಾಗ ಗೋಲಿ ಆಡುವದರಲ್ಲಿ ಎಲ್ಲರನ್ನೂ ಮೀರಿಸುತ್ತಿದ್ದರು. "ಬಡತನದ ಬಾಳು ಹಾಳು", ಕರೀಂಖಾನರಿಗೂ ಬಡತನಕ್ಕೂ ಬಹಳ ನಂಟು. ಬಾಲ್ಯದಲ್ಲಿ ಒಂದೇ ಜುಬ್ಬಾ ಒಂದೇ ಪೈಜಾಮ ಧರಿಸುತ್ತಿದ್ದರು. ಒಂದೇ ಜೊತೆ ಬಟ್ಟೆಯನ್ನು ತೊಟ್ಟುಕೊಳ್ಳಬೇಕಾಗಿತ್ತು. ಇದಕ್ಕೆಲ್ಲಾ ಮನೆಯ ಬಡತನವೇ ಕಾರಣವಾಗಿತ್ತು. ಖಾನ ತಮ್ಮೂರಿನ ಹೇಮಾವತಿ ನದಿಯಲ್ಲಿ ಪ್ರವಾಹಕ್ಕೆ ಎದುರಾಗಿ ಒಂದೂವರೆ ಫರ್ಲಾಂಗ್‌ಕ್ಕೂ ಮಿಕ್ಕಿ ಈಜಾದ ಮೇಲೂ ಉಟ್ಟ ಬಟ್ಟೆಯನ್ನು ತೊಳೆದುಕೊಳ್ಳುವಾಗ ತುಂಬಾ ಮುತುವರ್ಜಿ ವಹಿಸುತ್ತಿದ್ದರು. ಬಟ್ಟೆಗೆ ಚೆನ್ನಾಗಿ ಸಾಬೂನು ಹಾಕಿ

ನೀರಿನಲ್ಲಿಅದ್ದಿ ತೆಗೆಯುತ್ತಿದ್ದರು. ಅದನ್ನು ಹಿಂಡುತ್ತಿರಲಿಲ್ಲ. ಹಿಂಡಿದ್ದರೆ ಬಟ್ಟೆ ಹರೀದಿತೆಂಬ ಭೀತಿ ಇದು ಅವರ ಪಟ್ಟ ಸಂಕಟದ ವಿಷಯ.

**ಶಿಕ್ಷಣ :**

ಅಬ್ದುಲ್ ರೆಹಮಾನಖಾನ್ ಮತ್ತು ಅವರ ಪತ್ನಿ ಜೈನಬಿಯವರು ತಮ್ಮ ಮಕ್ಕಳೂ ಕೂಡಾ ಉಚ್ಚ ಶಿಕ್ಷಣವನ್ನು ಪಡೆದು ಒಳ್ಳೆಯ ಹುದ್ದೆಯನ್ನು ಅಲಂಕರಿಸಿ, ನಾಡಿಗೆ, ದೇಶಕ್ಕೆ ಹೆಸರು ತರಬೇಕೆಂದು ಇಚ್ಛಿಸಿದವರು. ಆದ್ದರಿಂದ ತಮ್ಮ ಎಲ್ಲ ಮಕ್ಕಳನ್ನು ಸಕಲೇಶಪುರದ ಪ್ರೈಮರಿ ಉರ್ದು ಶಾಲೆಗೆ ಸೇರಿಸಿದರು. ಕರೀಂಖಾನರ ಅಣ್ಣಂದಿರು ಉರ್ದುಶಿಕ್ಷಣ ಪಡೆಯುತ್ತಿರುವಾಗ ಅಭ್ಯಾಸದ ಕಾರಣವಾಗಿ ಉರ್ದು ಶಿಕ್ಷಕರು ಮಕ್ಕಳನ್ನು ಹೊಡೆಯುತ್ತಿದ್ದರು. ಕಾರಣ ತಿಳಿದ ರೆಹಮಾನಖಾನ್ ತನ್ನ ಎಲ್ಲ ಮಕ್ಕಳನ್ನು 'ಕನ್ನಡ ಮೈನ್ ಮಿಡ್ಲಸ್ಕೂಲಿಗೆ' ಸೇರಿಸಿದರು. ಹೀಗೆ ಕರೀಂಖಾನರ ತಂದೆ ತಾಯಿಯವರು ಮಕ್ಕಳ ಶಿಕ್ಷಣದ ಬಗ್ಗೆ ತುಂಬ ಮುತುವರ್ಜಿ ವಹಿಸಿದ್ದರು. ಬಾಲಕ ಕರೀಂಖಾನ ಶಾಲಾ ದಿನಗಳಲ್ಲಿ ಶಿಕ್ಷಕರ ಪ್ರೀತಿಗೆ ಪಾತ್ರನಾದ. ಮುಂದೆ ಕನ್ನಡ, ಇಂಗ್ಲೀಷ್, ಸಂಸ್ಕೃತ, ಸಂಗೀತ, ಜ್ಯೋತಿಷ್ಯಗಳಲ್ಲಿ ಪ್ರಚಂಡ ಪಾಂಡಿತ್ಯ ಹೊಂದಿದ ಗುರು ಆಚಂಗಿಯ ಹೆಚ್.ವಿ.ನಾರಾಯಣಶಾಸ್ತ್ರಿಗಳ ಮಾರ್ಗದರ್ಶನ ಹಾಗೂ ಆಶೀರ್ವಾದಗಳು ಅವರಿಗೆ ಅನುಗ್ರಹಗಳಾದವು. ಜ್ಞಾನ ಭಂಡಾರವನ್ನು ಪಡೆಯಲು ಏನೊಂದು ಕೊರತೆ ಇಲ್ಲವೆಂದು ತಿಳಿದ ಗುರು, ಕರೀಂಖಾನರನ್ನು ತಮ್ಮ ಖಾಸಾ ಶಿಷ್ಯರಾಗಿ ಮಾಡಿಕೊಂಡರು. "ಗುರುವಿನಂತೆ ಶಿಷ್ಯ' ಎಂಬ ನಾಣ್ಣುಡಿಯಂತೆ ಗುರು ಆಚಂಗಿಯವರ ಶಿಷ್ಯನಾದ ಕರೀಂಖಾನರು ಗುರುವಿನ ಸಕಲ ವಿದ್ಯಾಪಾಂಡಿತ್ಯವನ್ನು ಪಡೆಯಲು ಉತ್ಸುಕರಾದರು. ಕನ್ನಡ ಸಾಹಿತ್ಯದಲ್ಲಿ ಮೇರು ಪರ್ವತದಂತಿರುವ ಶಿಶುನಾಳ ಶರೀಫರ ಗುಣಗಳಲ್ಲಿ ಗುರುಗೋವಿಂದಭಟ್ಟರು ಏನೋ ವಿಶೇಷತೆಯನ್ನು ಕಂಡು ಶಿಷ್ಯನನ್ನಾಗಿ ಮಾಡಿಕೊಂಡರೋ ಹಾಗೆ ಗುರು ನಾರಾಯಣ ಶಾಸ್ತ್ರಿಗಳು ಕರೀಂಖಾನರ ಬಾಲ ಪ್ರತಿಭೆಯನ್ನು ಕಂಡು ತಮ್ಮ ವಿದ್ವತ್‌ಮಯವಾದ ಸಂಸ್ಕೃತ ಭೂಯಿಷ್ಠವಾದ ಕನ್ನಡ ಭಾಷಾ ಜ್ಞಾನವನ್ನು ಕರೀಂಖಾನರಿಗೆ ಧಾರೆಯೆರೆದರು. ಪಂಡಿತರಿಗಿರಬೇಕಾದ ಸಾಹಿತ್ಯಜ್ಞಾನ, ಭಾಷಾ ಪ್ರೌಢಿಮೆ, ವಿದ್ವತ್ತು, ಬಾಲಕ ಕರೀಂಖಾನರಲ್ಲಿ ಎದ್ದು ಕಾಣುವುದನ್ನು ಕಂಡುಕೊಂಡರು. ಡಾ. ಕಾಳೇಗೌಡ, ನಾಗವಾರ ಹೇಳುವಂತೆ "ಕರೀಂಖಾನರ ಶೈಕ್ಷಣಿಕ ಹಾಗೂ ವ್ಯಕ್ತಿತ್ವದ ಬೆಳವಣಿಗೆಯಲ್ಲಿ ಗುರು ಆಚಂಗಿ ನಾರಾಯಣ ಶಾಸ್ತ್ರಿಗಳು ಬೀರಿದ ಪ್ರಭಾವ ಅಪಾರ. ನಾರಾಯಣ ಶಾಸ್ತ್ರಿಗಳು ಕೇವಲ ಶಿಕ್ಷಕರಾಗಿರಲಿಲ್ಲ, ವೇದವೇದಿಗಳೂ, ತತ್ತ್ವಶಾಸ್ತ್ರಕೋವಿದರೂ, ಕವಿ ಪುಂಗವರೂ, ಅದ್ಭುತ ವಿದ್ಯಾವಂತರೂ, ಸಮತಾವಾದಿಗಳೂ ಆಗಿದ್ದರು. ಇಂಥ ಸುಗುಣಶೀಲ ಚಾರಿತ್ರ್ಯವಂತ ಗುರುಗಳ ಮಾರ್ಗದರ್ಶನದ ಪ್ರಭಾವ ಕರೀಂಖಾನರನ್ನು ಸಾಹಿತ್ಯ ಸೇವೆಗೆ ಪ್ರೇರೇಪಿಸಿತು. ನಾರಾಯಣ ಶಾಸ್ತ್ರಿಗಳಿಗೆ ಸಂಗೀತ, ವೈದ್ಯ, ಜ್ಯೋತಿಷ್ಯ, ಶಾಸ್ತ್ರಗಳಲ್ಲಿಯೂ ಸಾಕಷ್ಟು ಪಾಂಡಿತ್ಯವಿತ್ತು, ಇಂತಹ ಗುರುಗಳ ಮೆಚ್ಚಿನ ಶಿಷ್ಯನಾಗಿ

ಬೆಳೆದ ಕರೀಂಖಾನರು ಕನ್ನಡ ಮತ್ತು ಸಂಸ್ಕೃತ ಭಾಷೆಗಳೆರಡರಲ್ಲೂ ಅಪೂರ್ವ ಪಾಂಡಿತ್ಯ ಗಳಿಸುವಂತಾಯಿತು" ಎನ್ನುವ ಮಾತನ್ನು ಪುಷ್ಟಿಗೊಳಿಸಲು, ಕರೀಂಖಾನರೇ ತಮ್ಮ 'ಕನ್ನಡ ಜನಪದ ಗೀತೆಗಳು' ಸಂಗ್ರಹದಲ್ಲಿ ಹೇಳುವಂತೆ "ಕಬ್ಬು ಹುಟ್ಟುವುದಣ್ಣ ಕರಿಯ ಭೂಮಿ ಇದ್ದಲ್ಲಿ । ಉಬ್ಬಿ ಹರಿಯುವುದಣ್ಣ ಗಂಗೆ ನೀರಿದ್ದಲ್ಲಿ। ಕದನ ಹುಟ್ಟುವುದಣ್ಣ ಠಾಟಕ ಇದ್ದಲ್ಲಿ ನ್ಯಾಯ ಹರಿಯುವುದಣ್ಣ ಗುರು ಹಿರಿಯರಿದ್ದಲ್ಲಿ । ವಿದ್ಯಕ್ಕೆ ಮೊದಲಾದ ಬುದ್ಧಿವಂತರೂ ಕೂಡಿ ತಿದ್ದಿ ಹೇಳಲುಬೇಕು ಶರಣೋ॥" ಎಂಬ ಜಾನಪದ ಗೀತೆಗಳಲ್ಲಿಯ ಆದರ್ಶ, ಹಿರಿಯರ ಮಾರ್ಗದರ್ಶನ, ಮಾನವನ ಮೇಲೆ ಪ್ರಯೋಜನವಾಗಬಲ್ಲವು ಎಂಬುದಕ್ಕೆ ಕರೀಂಖಾನರೇ ಸಾಕ್ಷಿ.

ಹಿಂದೂಗಳಿಗೆ ಪವಿತ್ರವೆನಿಸಿದ ಸಂಸ್ಕೃತ ಮತ್ತು ಕನ್ನಡ ಗ್ರಂಥಗಳಾದ ಭಾಗವತ, ಶಿವಪುರಾಣ, ರಾಮಾಯಣ, ಮಹಾಭಾರತ ಅನೇಕ ಧರ್ಮಗ್ರಂಥಗಳನ್ನು ಭಗವದ್ಗೀತಾ, ವೇದಗಳು, ಉಪನಿಷತ್ತು, ಸ್ಮೃತಿಗ್ರಂಥಗಳನ್ನು, ಅಧ್ಯಯನ ಮಾಡುವುದರ ಜೊತೆಗೆ ಲಕ್ಷ್ಮೀಶ, ಷಡಕ್ಷರಿ, ಕುಮಾರವ್ಯಾಸ, ಬಾಣಭಟ್ಟ, ವಚನಕಾರರು ಮುಂತಾದ ಕವಿಗಳ ಕೃತಿಗಳ ತಿರುಳನ್ನು ಕರಗತ ಮಾಡಿಕೊಳ್ಳಲು ನಾರಾಯಣ ಶಾಸ್ತ್ರಿಗಳು ಕಾರಣರಾದರು. ಮುಸ್ಲೀಂ ಹುಡುಗ ಕರೀಂಖಾನರ ಮಾತೃ ಭಾಷೆ ಉರ್ದು ಆದರೂ ಕನ್ನಡದಲ್ಲಿ ಒಲವು ಮೂಡಲು ನಾರಾಯಣ ಶಾಸ್ತ್ರಿಗಳು ಪ್ರೇರೇಪಿಸಿದರು. ಸಕಲೇಶಪುರದಲ್ಲಿ ಬಾಲಕ ತಿರುಗಾಡುವಾಗ ಯಾರೋ ಗಟಾರದಲ್ಲಿ ಎಸೆದ ರಾಮಾಯಣ ಪುಸ್ತಕ ಕೆಸರಲ್ಲಿ ಪೂರ್ತಿ ರಾಡಿಯಾಗಿತ್ತು. ಅದನ್ನು ಕಂಡ ಕರೀಂಖಾನ್ ಜೋಪಾನವಾಗಿ ಅದನ್ನು ಎತ್ತಿಕೊಂಡು ಸ್ವಚ್ಛಗೊಳಿಸಿ, ಪ್ರತಿನಿತ್ಯ ಆ ಗ್ರಂಥವನ್ನು ಓದಿ, ತನ್ನ ಭಾಷಾ ಪ್ರೌಢಿಮೆಯನ್ನು ಹೆಚ್ಚಿಸಿಕೊಂಡನು. ಪ್ರೌಢ ಶಿಕ್ಷಣ ಪಡೆಯಲು ಬಾಲಕ ಕರೀಂಖಾನ ತಮ್ಮದೇ ಜಿಲ್ಲಾ ಪ್ರದೇಶವಾದ ಹಾಸನಕ್ಕೆ ಹೋದರು. ಆಗ ಪ್ರೌಢ ಶಾಲೆ ಇಡೀ ಜಿಲ್ಲೆಗೆ ಹಾಸನ ಮತ್ತು ಹೊಳೇನರಸಿಪುರದಲ್ಲಿ ಮಾತ್ರ ಇತ್ತು. ಇವರು ಹಾಸನ ಪ್ರೌಢಶಾಲೆಯಲ್ಲಿ ತಮ್ಮ ಹೆಸರನ್ನು ನೋಂದಾಯಿಸಿದರು. "ಇಸ್ಲಾಂ ವಿದ್ಯಾರ್ಥಿಗಳಿಗಾಗಿಯೇ ಇದ್ದಂತಹ ವಿದ್ಯಾರ್ಥಿ ನಿಲಯದಲ್ಲಿದ್ದುಕೊಂಡು ಕನ್ನಡ ಮಾಧ್ಯಮ ಶಾಲೆಯಲ್ಲಿ ನನ್ನ ವಿದ್ಯಾಭ್ಯಾಸ ಮುಂದುವರೆಸಿದೆ" ಎನ್ನುವಲ್ಲಿ ವಿದ್ಯಾರ್ಥಿನಿಲಯದಲ್ಲಿ ತನ್ನ ವಿದ್ಯಾಭ್ಯಾಸ ಮುಂದುವರೆಸಿದ ಬಗೆಯನ್ನು ತಿಳಿಸುತ್ತಾರೆ.

"ಒಮ್ಮೆ ತರಗತಿಯಲ್ಲಿ ಶಿಕ್ಷಕರು "ಎಲೊಕ್ವೆಂಟ್ ಸ್ಪೀಕರ್" ಎಂಬ ಪದಕ್ಕೆ ಸಮನಾರ್ಥಪದ ಏನು ? ಎಂದು ಕೇಳಿದಾಗ ವಿದ್ಯಾರ್ಥಿಗಳು ತಬ್ಬಿಬ್ಬಾದರೆ, ಖಾನರು "ವಾಗ್ಮಿ" ಎಂದು "ಕಂಡೀಷನ್" ಎಂದರೆ "ಸ್ಥಿತಿ" ಎಂದು ಅರ್ಥ ಹೇಳಿ ಶಿಕ್ಷಕರು ತಲೆತೂಗುವಂತೆ ಮಾಡಿದರು." ಪ್ರಾಥಮಿಕ ಶಾಲೆಯಲ್ಲಿ ಹಾಗೂ ಪ್ರೌಢ ಶಾಲೆಯಲ್ಲಿಯೂ ಕೂಡ ಕರೀಂಖಾನ ಚೈತನ್ಯದ ಚಿಲುಮೆ, ಕೇವಲ ಪಠ್ಯದಲ್ಲಿ ಮಾತ್ರ ತನ್ನ ವಿದ್ವತ್ತನ್ನು ಹೊಂದಿರದೇ, ಪಠ್ಯೇತರ ಚಟುವಟಿಕೆಗಳಲ್ಲೂ ಕೂಡ ಶಿಕ್ಷಕರ ಪ್ರೀತಿಗೆ ಪಾತ್ರನಾಗಿದ್ದ, ಮಧುರ ಕಂಠಸಿರಿಯ ಕರೀಂಖಾನ್ ಪ್ರೌಢಶಾಲೆಯಲ್ಲಿ ಓದುತ್ತಿದ್ದಾಗ ಜಾನಪದ ಗೀತೆಗಳನ್ನು ಹಾಡುವಲ್ಲಿ ಅತಿಯಾದ ಕಳಕಳಿಯನ್ನು ತೋರುತ್ತಿದ್ದ.

ಒಮ್ಮೆ ಪ್ರೌಢಶಾಲೆಯಲ್ಲಿ ಜೋಗುಳದ ಹಾಡನ್ನು ಬಾಲಕ ಕರೀಂಖಾನ ಹಾಡಿದಾಗ, ಅಲ್ಲಿ ಮುಖ್ಯೋಪಾಧ್ಯಾಯರಿಗೆ ಹೆಚ್ಚು ಪ್ರಿಯವಾಯಿತು. ಅವರು ಬಾಲಕ ಕರೀಂಖಾನರನ್ನು ಕರೆದು ಮನೆಯಲ್ಲಿ ಕಾಫಿ ಕೊಟ್ಟು ಉತ್ತೇಜನ ನೀಡಿದರು. ಗುರುವಿನ ಪ್ರೋತ್ಸಾಹ ಕರೀಂಖಾನರ ಅಂತರಾತ್ಮದ ಮೇಲೆ ಅಮೃತ ಸಿಂಚನವಾಯಿತು. ಗರುಡ ಶಿಶುವಿಗೆ ಗರಿಬಲಿತ ಮೇಲೆ ಸಣ್ಣ ಪುಟ್ಟ ಪ್ರದೇಶಗಳ ಮೇಲೆ ಸಂಚಾರ ತೃಪ್ತಿ ನೀಡುತ್ತದೆಯೇ ? ಆಕಾಶ ವಿಸ್ತೀರ್ಣಕ್ಕಾಗಿ ಹಾತೊರೆದು ಗಗನ ಪರ್ಯಟನವನ್ನು ಕೈಗೊಳ್ಳುತ್ತದೆಯಲ್ಲವೇ ? ಕಿರು ಮೀನಿಗೆ ಕೆರೆ, ಕೊಳ, ಹೊಳೆ ಸಾಕು. ತಿಮಿಂಗಲದ ಜಲಕ್ರೀಡೆಗೆ ಮಹಾಸಾಗರದ ಹರಹೇ ಬೇಕು. ಹಾಗೆಯೇ ಗುರುಗಳು ಶಿಷ್ಯನಿಗೆ ಗಗನ ದಾಟಲು ಗರುಡನ ವಜ್ರಶಕ್ತಿಯ ಜ್ಞಾನವನ್ನು ಧಾರೆ ಎರೆದರು.

"ಶಾಲಾ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಒಮ್ಮೆ "ಶ್ರೀ ಕೃಷ್ಣ ಲೀಲಾ" ನಾಟಕ ಪ್ರದರ್ಶನಗೊಂಡಿತು. ಈ ನಾಟಕದಲ್ಲಿ ಬಾಲಕನಾದ ನಾನು "ಅಕ್ರೂರ"ನ ಪಾತ್ರ ನಿರ್ವಹಿಸಿ ಜನಮನ್ನಣೆಯನ್ನು ಪಡೆದೆ" ಎಂದು ಸ್ಮರಿಸಿಕೊಳ್ಳುವರು. ಈ ನಾಟಕದ ಅಭಿನಯವೇ ಮುಂದೆ "ಶ್ರೀ ಕೃಷ್ಣ ಲೀಲಾ" ಎಂಬ ನಾಟಕ ಬರೆಯಲು, ಹಾಗೂ ಪ್ರಕಟವಾಗಲು ಪ್ರೇರಣೆ ನೀಡಿರಬೇಕು. ಭಾರತೀಯತೆಯನ್ನು ಮೈಗೂಡಿಸಿಕೊಂಡ ಕರೀಂಖಾನರ ಬಗ್ಗೆ ಹೇಳಬೇಕೆಂದರೆ –ತಂದೆಯಂತೆಯೇ ಮಗನೂ ಸಹ ಅಪ್ರತಿಮ ಹೋರಾಟಗಾರ ಆದರೆ ರಣರಂಗದಲ್ಲಲ್ಲ, ಸಾಂಸ್ಕೃತಿಕ ರಂಗದಲ್ಲಿ.

ಹೈಸ್ಕೂಲ್ ತಲುಪುವ ವೇಳೆಗೆ ಕರೀಂಖಾನರು ಜಾನಪದ ಸಾಹಿತ್ಯದತ್ತ ಆಕರ್ಷಿತರಾದರು. ಅವರಿಗೆ ಜಾನಪದ ಸಾಹಿತ್ಯದಲ್ಲಿ ಆಸಕ್ತಿ ಮೂಡುವಂತೆ ಮನಸ್ಸು ಪಕ್ವಗೊಂಡಿತು. ಜಾನಪದ ಸಾಹಿತ್ಯ ಸಂಪತ್ತು ಹೊಯ್ಸಳರ ರಾಜಧಾನಿಯಾದ ಹಾಸನ ಜಿಲ್ಲೆಯಲ್ಲಿ ಹೇರಳ. ಅರಕಲಗೋಡು, ಚೆನ್ನರಾಯ ಪಟ್ಟಣ, ಕೋಣನೂರು ಇವು ಜಾನಪದ ಸಾಹಿತ್ಯದ ಭಂಡಾರದಂತಿದ್ದವು. ಶ್ರವಣಬೆಳಗೊಳ ಹಿತ್ತಾಳೆ ಪಾತ್ರೆಗಳಿಗೆ ಪ್ರಸಿದ್ಧಿ ಹೊಂದಿತ್ತು. ಅಲ್ಲಿನ ವ್ಯಾಪಾರಿಗಳು ಪಾತ್ರೆಗಳನ್ನು ಗಾಡಿಯಲ್ಲಿ ಹೇರಿಕೊಂಡು ಮಲೆನಾಡಿಗೆ ಮಾರಲು ಬರುತ್ತಿದ್ದರು. ಕರೀಂಖಾನರ ಮನೆಯ ಮುಂದಿನ ಮೈದಾನದಲ್ಲಿ ಗಾಡಿಗಳು ನಿಂತುಕೊಳ್ಳುತ್ತಿದ್ದವು. ಆ ಪಾತ್ರೆ ವ್ಯಾಪಾರಿಗಳು ಅಲ್ಲೇ ಅಡಿಗೆ ಮಾಡಿಕೊಂಡು ಊಟ ಆದ ನಂತರ ರಾತ್ರಿ ನಿದ್ದೆ ಬರುವವರೆಗೆ ಜಾನಪದ ಗೀತೆಯನ್ನು ಸುಶ್ರಾವ್ಯವಾಗಿ ಹಾಡಿ, ಕೋಲಾಟ ಆಡುತ್ತ ಕುಣಿಯುತ್ತಿದ್ದರು. ಬಾಲಕ ಕರೀಂಖಾನರು ಅದನ್ನು ಅತೀ ಹತ್ತಿರದಿಂದ ಕಂಡಿದ್ದರಿಂದ ಅದು ಹೆಚ್ಚಾಗಿ ಅವರನ್ನು ಆಕರ್ಷಿಸಿತು. ದೀಪಾವಳಿಯ ವೇಳೆಯಲ್ಲಿ ಹಳ್ಳಿಯವರು ಪ್ರಾಸಾನುಪ್ರಾಸ ಬೆರೆತ ಜಾನಪದ ಗೀತೆಗಳನ್ನು ಹಾಡುತ್ತಿದ್ದರು. ಹಳ್ಳಿಯ ಹೆಂಗಸರು ಅದರಲ್ಲೂ ಹರಿಜನ ಮಹಿಳೆಯರಲ್ಲಿ ಈ ಸಾಹಿತ್ಯ ಭಂಡಾರ ಹೆಚ್ಚಿಗೆ ಅಡಕವಾಗಿತ್ತು. ಇದರಿಂದ ಕರೀಂಖಾನರು ಜಾನಪದ ಗೀತೆಯ ನಾದ ಸೌಂದರ್ಯಕ್ಕೆ, ಭಾವ ಸೌಂದರ್ಯಕ್ಕೆ ಮಾರು ಹೋದರು, ಸ್ಫೂರ್ತಿ ಪಡೆದುಕೊಂಡರು. ಮುಂದೆ ಜಾನಪದ ಕ್ಷೇತ್ರದಲ್ಲಿ ಆಸಕ್ತಿ ಬೆಳೆಸಿಕೊಂಡರು.

ಸಕಲೇಶಪುರ ತಾಲೂಕಿನ ಅಂದಿನ ಪರಿಸರವು ಕರೀಂಖಾನ್‌ರವರ ವ್ಯಕ್ತಿತ್ವ ರೂಪಿಸುವಲ್ಲಿ ಸಹಾಯಕಾರಿಯಾಯಿತು. ಆಗ ಅಲ್ಲಿ ವಿದ್ಯಾರ್ಥಿಯ ಯೋಗ್ಯತೆಯನ್ನು ಮೆಚ್ಚಿಕೊಂಡು ಪ್ರೋತ್ಸಾಹ ಕೊಡುವ ಉದಾರ ದೃಷ್ಟಿಯ ಅಧ್ಯಾಪಕರಿದ್ದರು. ಅಂದಿನ ವಿದ್ಯಾಭ್ಯಾಸ ಕ್ರಮದಲ್ಲಿ ಒಂದು ಬಗೆಯ ಬಿಗಿ ಶಿಸ್ತು ರೂಢವಾಗಿದ್ದವು. ಹಿರಿಯ ಧ್ಯೇಯದಿಂದ ಪ್ರೇರಿತರಾದ ಅಧ್ಯಾಪಕರು ವಿದ್ಯಾರ್ಥಿಗಳಿಗೆ ಒಳ್ಳೆಯ ಮಾದರಿಗಳನ್ನು ಒದಗಿಸುತ್ತಿದ್ದರು. ಬಾಳಿನ ಬಗೆಗೆ ಆಗ ಗೌರವಪರ ಗಂಭೀರ ದೃಷ್ಟಿ ಕಂಡು ಬರುತ್ತಿತ್ತು. ಸಾರ್ವಜನಿಕ ಸೇವೆಯ ಮನೋಭಾವದಿಂದ ಕೂಡಿದ ಅನೇಕ ಗಣ್ಯ ವ್ಯಕ್ತಿಗಳು ಅಲ್ಲಿದ್ದರು. ಅವರೆಲ್ಲ ತಮ್ಮ ಮಾತೃಭಾಷೆಯ ಬಗೆಗೆ ಬಹಳ ಅಭಿಮಾನ ಇಟ್ಟುಕೊಂಡಿದ್ದರು. ಇಂತಹ ಆರೋಗ್ಯಪೂರ್ಣವಾದ ವಾತಾವರಣ ಕರೀಂಖಾನರ ಮನೋಬುದ್ಧಿಗಳನ್ನು ಅಷ್ಟೇ ಆರೋಗ್ಯ ಪೂರ್ಣವಾಗಿ ಹದಗೊಳಿಸಿತು. ಕರೀಂಖಾನರು ಗುರುಗಳಾದ ನಾರಾಯಣ ಶಾಸ್ತ್ರಿಯವರ ಅಂತಿಮ ಸಂಸ್ಕಾರದ ಸಂದರ್ಭದಲ್ಲಿ ಅವರ ಶವದ ಬಳಿ ನಿಂತು ದುಃಖದಿಂದ ಅವರ ಮೃತ ಶರೀರಕ್ಕೆ ಈ ರೀತಿ ಕೇಳಿದರು. "ನೀವು ನನ್ನೆಲ್ಲ ಅಜ್ಞಾನವನ್ನು ನಿಮ್ಮ ಜೊತೆ ಒಯ್ಯುವಿರಾ ? ಎಂದು ಮರುಗಿದೆ. ಗುರುವಿನ ಅಗಲುವಿಕೆಯಿಂದ ನನ್ನಲ್ಲಿ ಒಂದು ಅಗೋಚರ ಶಕ್ತಿ ಸಂಚರಿಸಿದಂತಾಯಿತು. ಬರೆಯುವ ಮೌಲ್ಯವೇ ಬದಲಾಗಿ, ಅದುವೇ ಗುರುವಿನ ಅನುಗ್ರಹ ಎಂಬಂತೆ ಭಾಸವಾಯಿತು, ಇದನ್ನು ಯಾರೂ ನಂಬಲಿಕ್ಕಿಲ್ಲ, ಆದರೆ, ಪ್ರತಿಯೊಬ್ಬ ವ್ಯಕ್ತಿಗೂ ತನ್ನದೇ ಆದ ನಂಬಿಕೆ ಇದೆ" ಎಂದರು.

ಜಾನಪದ ಗೀತೆಗಳ ನಾದ ಸೌಂದರ್ಯಕ್ಕೆ ಭಾವ ಸೌಂದರ್ಯಕ್ಕೆ ಮಾರು ಹೋದ ಕರೀಂಖಾನರ ಅಭಿಪ್ರಾಯದಲ್ಲಿ ಶಾಸ್ತ್ರೀಯ ಸಂಗೀತದ ಬಹುತೇಕ ಕೃತಿಗಳೆಲ್ಲವೂ ಭಗವಂತನ ಒಲುಮೆಯನ್ನು ಬೇಡುವಂತಹವು. ಅಲ್ಲಿನ ರಾಗಗಳಲ್ಲಿ ದೀನಭಾವವೇ ಪ್ರಧಾನ. "ರಾಧಾಕೃಷ್ಣ" ಪ್ರೇಮವನ್ನು ಕುರಿತಂಥ ಶೃಂಗಾರದ ಕೃತಿಗಳಲ್ಲಿಯೂ ದೈನ್ಯಭಾವವೇ ಅಡಗಿದೆ. ಆದರೆ ಜಾನಪದ ಸಾಹಿತ್ಯದಲ್ಲಿ ಉತ್ಸಾಹ ಮತ್ತು ಸ್ಫೂರ್ತಿ ಲವಲವಿಕೆಗಳಿವೆ" ಎಂಬುದು ಕರೀಂಖಾನರ ಅಭಿಪ್ರಾಯ.

ಮುಂದೆ ಕರೀಂಖಾನರು ಕಾಂಗ್ರೆಸ್ ಚಳುವಳಿಯತ್ತ ಗಮನಹರಿಸಿದರು. ಇವರು ಹೈಸ್ಕೂಲ್ ಮೊದಲನೇ ತರಗತಿ ಓದುತ್ತಿದ್ದಾಗ ಸ್ವಾತಂತ್ರ್ಯ ಸಂಗ್ರಾಮದ ಬಿಸಿ ಗಾಳಿ ತಟ್ಟುತ್ತಿತ್ತು. ತಾನೂ ಕೂಡ ಸ್ವಾತಂತ್ರ್ಯ ಹೋರಾಟಗಾರರಾದ ಮಹಾತ್ಮಾ ಗಾಂಧಿ, ನೆಹರು, ವಲ್ಲಭಬಾಯಿ ಪಟೇಲ ಮತ್ತು ಸುಭಾಷಚಂದ್ರ ಬೋಸರಂತೆ ಸ್ವಾತಂತ್ರ್ಯ ಹೋರಾಟಗಾರನಾಗಿ, ಭಾರತಾಂಬೆಯನ್ನು ಬ್ರಿಟಿಷರ ಕಪಿಮುಷ್ಟಿಯಿಂದ ಬಿಡುಗಡೆಗೊಳಿಸಬೇಕೆಂದು ಹೊಂಗನಸು ಕಾಣುತ್ತಿದ್ದರು. ಬಾಲ್ಯದಲ್ಲಾದ ಗಾಂಧೀಜಿ ಪ್ರಭಾವವೇ ಅವರನ್ನು ಗಾಂಧೀ ವಾದಿಯನ್ನಾಗಿ ಮಾಡಿತು. ಹೈಸ್ಕೂಲ್ ಮೊದಲನೇ ತರಗತಿಯಲ್ಲಿ ಓದುತ್ತಿದ್ದಾಗ ಅಲ್ಲಿಯ ಅಧ್ಯಾಪಕರು 'ದಿ ಹಿಂದೂ' ಪತ್ರಿಕೆ ತಂದು ಅದರಲ್ಲಿ ಅಂದಿಗೆ ನಡೆಯುವ ಘಟನೆಗಳನ್ನೆಲ್ಲ ಓದಿ ಹೇಳೋರು. ಆಗ ಗಾಂಧೀಜಿಯವರ ವ್ಯಕ್ತಿತ್ವ ಆಕರ್ಷಕವಾಗಿ ಕಂಡಿತು. ನಾನು ಇವರನ್ನು ಯಾಕೆ

ಹಿಂಬಾಲಿಸಬಾರದು ಅನ್ನೋ ಮನಸ್ಸಾಯ್ತು. ಅದು ಬೆಳಿತಾನೂ ಬಂತು. ಪರಿಸರಾನೂ ಅದಕ್ಕೆ ಅನುಕೂಲವಾಗಿತ್ತು. ಇಷ್ಟಮಿತ್ರರೂ ಕೂಡ ಅದಕ್ಕೆ ಸಹಾಯಕರಾದರು. ನಾನು ರಾಷ್ಟ್ರ ಧ್ವಜ ಹಿಡ್ಕೊಂಡು, ಪ್ರಭಾತ ಫೇರಿ ನಡೆಸ್ತಾ ಇದ್ದೆ, ಸ್ವಾತಂತ್ರ್ಯ ಗೀತೆಗಳನ್ನು ಹಾಡುತ್ತ ಹೋಗ್ತಾ ಇದ್ದೆ, ಇದರ ಬಗ್ಗೆ ಒಂದು ವರದಿಯನ್ನು ಅಕ್ಟೋಬರನಲ್ಲಿ "ತಾಯ್ನಾಡು" ಪತ್ರಿಕೆ ಪ್ರಕಟಿಸಿದೆ. ಹೀಗೆ ಪ್ರಭಾತ ಫೇರಿಗಳಲ್ಲಿ ಭಾಗವಹಿಸ್ತಾನೇ ಇದ್ದೆ. ಆ ಆಕಾಂಕ್ಷೆಯು ಬೆಳೀತಾನೇ ಬಂತು. ಪರಿಣಾಮ ಸ್ವಾತಂತ್ರ್ಯ ಬರುವವರೆಗೂ ಎಲ್ಲರೂ ತ್ಯಾಗಿಗಳಾಗಿಯೇ ಇದ್ದರು. ನಾನು ಐದು ಸಲ ಜೈಲಿಗೆ ಹೋಗಿದ್ದೇನೆ. ಎಂದು ಸ್ವಾತಂತ್ರ್ಯ ಚಳುವಳಿಗೆ ಧುಮುಕಿ ಇತರರನ್ನು ಪ್ರೇರೇಪಿಸಿದ್ದನ್ನು ಸ್ಮರಿಸುವರು. ಕರ್ನಾಟಕದ ಏಕೀಕರಣ, ಚುನಾವಣೆ ಮೊದಲಾದವುಗಳಿಗಾಗಿ ಕರ್ನಾಟಕದಾದ್ಯಂತ ಬಹಳಷ್ಟು ಸಲ ಕಾಲ್ನಡಿಗೆಯಲ್ಲಿ ಸಂಚಾರ ಮಾಡುತ್ತಿದ್ದರಿಂದಾಗಿ ಬೇರೆ–ಬೇರೆ ಪ್ರದೇಶಗಳ ಜಾನಪದ ಗೀತೆಗಳನ್ನು ಕೇಳುವ, ಕಲಿಯುವ, ದಾಖಲಿಸುವ ಅವಕಾಶ ಅವರಿಗೆ ಅನಾಯಾಸವಾಗಿಯೇ ಸಿಕ್ಕಿತು.

"ಕರೀಂಖಾನರು ಜನಪರರಲ್ಲಿ ಸಂಶೋಧನಾ ಶಕ್ತಿ ಹುಟ್ಟಿಸಿದರು. ಇತ್ತೀಚೆಗೆ ನಮ್ಮ ವಿಶ್ವವಿದ್ಯಾಲಯದ ಒಳಾಂಗಣದಲ್ಲಿ "ರಿಸರ್ಚ" ಎನ್ನುವುದು ಬಹಳ ಮಾರ್ಕೆಟಿಂಗ್ ರಿಸರ್ಚ ಆಗುತ್ತಿದೆ. ಪಿಎಚ್.ಡಿ. ಬರಬೇಕು, ಪ್ರಮೋಶನ್ ಬರಬೇಕು, ಪೇಪರದಲ್ಲಿ ಲೇಖಕರ ಹೆಸರು ಬರಬೇಕೆಂಬ ಬಯಕೆ. ಆದರೆ ಕರೀಂಖಾನರು ಇವು ಯಾವುದನ್ನೂ ಆಸೆ ಪಡದೇ, ಜನಪದ ಸಿಹಿ ಸೊಬಗನ್ನು ಅನೇಕರಿಗೆ ನೀಡಿದರು. ಜಾನಪದವೇ ಒಂದು ಮೂಲ ನಾಟಿ ಸೊಬಗು. ಈ ರೀತಿ ನಾಟಿ ಸೊಗಡನ್ನು, ದೇಶೀ ಸೊಗಡನ್ನು ಇಡೀ ಜಾನಪದ ಪರಂಪರೆಗೆ ಅವರು ಕೊಟ್ಟ ಕೊಡುಗೆ ಅನನ್ಯ. ಅವರೊಂದು ಜಾನಪದ ಸಂಪುಟ ಇದ್ದಂತೆ." ಎಂದು ಡಾ. ಸಿ.ಟಿ. ಕೃಷ್ಣಸ್ವಾಮಿ ಕರೀಂಖಾನರ ಬಗ್ಗೆ ಶ್ಲಾಘಿಸಿರುವುದು ಅತ್ಯಂತ ಸೂಕ್ತವಾಗಿದೆ.

ಕರೀಂಖಾನರು ಹೆಣ್ಣೊಪ್ಪಿಸುವ ಹಾಡನ್ನು ಹಾಡುವಾಗ ಸಭೆಯಲ್ಲಿದ್ದ ಎಲ್ಲ ಹೆಣ್ಣುಮಕ್ಕಳು ಅತ್ತುಬಿಡುತ್ತಿದ್ದರು. ಅವರೇ ಸಂಗ್ರಹಿಸಿದ ಕನ್ನಡ ಜಾನಪದ ಗೀತೆಗಳ ಸಂಗ್ರಹದಿಂದ ತೆಗೆದುಕೊಂಡ ಒಂದು ಜಾನಪದ ಗೀತೆಯ ಸಾಲು

"ಅತ್ತೆ ಮಾವಗಂಜಿ ಸುತ್ತೇಳು ನೆರೆಗಂಜಿ
ಮತ್ತೆ ಆಳುವ ದೊರೆಗಂಜಿ ಮಗಳೇ
ಅತ್ತೆ ಮನೆಯಾಗೇ ಬಾಳಮ್ಮ!"

ಇಂತಹ ಜಾನಪದ ಹಾಡುಗಳು ಹೃದಯವಂತರ ಹೃದಯಗಳನ್ನು ಪ್ರವೇಶಿಸದೇ ಇರಲಾರವು. ಸ್ವಾತಂತ್ರ್ಯ ಹೋರಾಟದ ಕನಸು ಕಾಣುತ್ತಿದ್ದ ಕರೀಂಖಾನರಿಗೆ ಭಾರತದ ನಾಯಕರಾದ ಗಾಂಧೀಜಿಯವರನ್ನು ನಂದಿಬೆಟ್ಟದಲ್ಲಿ ವಿಶ್ರಾಂತಿಗೆಂದು ಬಂದಾಗ ಕಾಣುವಂತಾಯಿತು. ಗಾಂಧೀಜಿಯವರ ಖಾದಿ ಪ್ರೇಮ ಕರೀಂಖಾನರಿಗೆ ಎಂದೆಂದಿಗೂ ಮರೆಯಲಾರದ ಸಂಗತಿಯಾಯಿತು. ನಂದಿಗಿರಿಧಾಮದಲ್ಲಿ ಸ್ವಾತಂತ್ರ್ಯ

ಚಳುವಳಿಯ ಕಾಲದಲ್ಲಿ ಒಂದು ತಿಂಗಳ ಕಾಲ ಚಳುವಳಿಯಲ್ಲಿ ಭಾಗವಹಿಸುವ ಸುಯೋಗ ಸಿಕ್ಕಿತು. ಆಗ ನಡೆದ ಒಂದು ಘಟನೆ ಹೀಗಿದೆ– "ಸ್ಕೌಟ್ ಮಾಸ್ತರರೊಬ್ಬರು ತಮ್ಮ ವಿದ್ಯಾರ್ಥಿಗಳ ಜೊತೆ ಗಾಂಧೀಜಿಯವರನ್ನು ಭೇಟಿಯಾಗಲು ಬಂದರು. ಇವರು ಬಂದ ವಿಚಾರವನ್ನು ತಿಳಿದ ಗಾಂಧೀಜಿಯವರು ಆ ಮಾಸ್ತರರು ಖಾದಿ ಹಾಕಿಕೊಂಡಿದ್ದಾರೆಯೇ ? ಎಂದು ಪಕ್ಕದಲ್ಲಿರುವ ಕರೀಂಖಾನ ಮತ್ತು ಗೆಳೆಯರನ್ನು ಕೇಳಿದರು. ಅವರು ಇಲ್ಲ ಎಂದು ಉತ್ತರಿಸಿದರು. ಆಗ ಗಾಂಧೀಜಿಯವರು ಮಾಸ್ತರರಿಗೆ ಖಾದಿಯ ಮೇಲೆ ಗೌರವವಿಲ್ಲದ ಮೇಲೆ ವಿದ್ಯಾರ್ಥಿಗಳಿಗೆ ಇನ್ನೇನು ತಾನೆ ದೇಶಾಭಿಮಾನ ಬೋಧಿಸುತ್ತಾರೆ ? ಎಂದು ಆ ಮಾಸ್ತರರಿಗೆ ಸಂದರ್ಶನವನ್ನೇ ನೀಡದೇ ವಾಪಸ್ಸು ಕಳಿಸಿ ಬಿಟ್ಟರು." ಗಾಂಧೀಜಿಯವರ ವ್ಯಕ್ತಿತ್ವ ಈ ರೀತಿ ನೇರವಾದದ್ದು ಎಂದು ಖಾನ ಸಾಹೇಬರು ವಿವರಿಸುತ್ತಾರೆ. ಗಾಂಧೀ ಪ್ರಭಾವದಿಂದ ಅವರು ಸ್ವಾತಂತ್ರ್ಯ ಚಳುವಳಿಗೆ ಧುಮುಕಿದರು, ದೇಶಭಕ್ತಿಯ ಸಂದೇಶ ಹರಡುತ್ತ, ಕಾಲ್ನಡಿಗೆಯಲ್ಲಿ ಊರೂರು ತಿರುಗಿದರು, ಅನೇಕ ಸಲ ಜೈಲುಶಿಕ್ಷೆಯನ್ನು ಅನುಭವಿಸಿದರು, ಈ ಅವಧಿಯಲ್ಲಿ ಉದ್ದಾಮ ಸ್ವಾತಂತ್ರ್ಯ ಹೋರಾಟಗಾರರ ಪರಿಚಯವಾಯಿತು. ಜಾನಪದ ಗೀತೆಗಳ ಗಾಯನ, ಅಪ್ರತಿಮ ವಾಗ್ಮೀಯತೆ ಹಾಗೂ ಭಾಷಣ ಶೈಲಿಗಳಿಂದ ಅವರು ಚಳುವಳಿಗಾರರನ್ನು ಮೋಡಿ ಮಾಡಿದರು. ಜೈಲಿನಲ್ಲಿ ಗಾಂಧಿ ವಿಚಾರವನ್ನು ಕುರಿತಂತೆ ಕರೀಂಖಾನರಿಂದ ಉಪನ್ಯಾಸಗಳನ್ನು ಏರ್ಪಡಿಸುತ್ತಿದ್ದರು. ಆದರೆ ಈ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡ ಕಾರಣ ಕರೀಂಖಾನರಿಗೆ ಜೀವನೋಪಾಯ ಕಠಿಣವಾಯಿತು. ಹೊಟ್ಟೆಪಾಡಿಗಾಗಿ ಜಾನಪದ ಗೀತೆಗಳ ಸಂಗ್ರಹಗಳನ್ನು ತಾವೇ ಪ್ರಕಟಿಸಿ ಮಾರಿದರು. ದೇಶದಲ್ಲಿಯ ಬ್ರಿಟಿಷ ಅಧಿಕಾರಿಗಳ ವರ್ತನೆಯನ್ನು ಜನಸಾಮಾನ್ಯರಿಗೆ ತಿಳಿಸುವುದಕ್ಕೋಸ್ಕರ, ಭಾರತಾಂಬೆಯ ಮಡಿಲ ಮಕ್ಕಳಲ್ಲಿ ಸ್ವಾತಂತ್ರ್ಯದ ಮನೋಭಾವವನ್ನು ತುಂಬಲು ಹಾಗೂ ಜಾಗೃತ ಪಡಿಸಲು ಅವರು ರಂಗಭೂಮಿಯತ್ತಲೂ ಆಕರ್ಷಿತರಾದರು. ನಾಟಕ ಕರ್ತೃವಾಗಿ ಹತ್ತಾರು ನಾಟಕಗಳನ್ನು, ಅದರಲ್ಲೂ ಕಂಪನಿ ನಾಟಕಗಳನ್ನು ರಚಿಸಿದರು. ಸಿನೆಮಾ ಹಾಡುಗಳನ್ನು ಬರೆದರು. "ಕರೀಂಖಾನರು ನನ್ನ ಬದುಕಿನಲ್ಲಿ ಕರುನಾಳು ಬೆಳಕಾದರು. ಕರೀಂಖಾನರ ಪ್ರಭಾವದಿಂದಲೇ ನಾನು ಲೇಖಕನಾಗಲು ಸಾಧ್ಯವಾಯಿತು. ಇವರು ನನಗೆ ಸಾಹಿತ್ಯದ ಪರಮಪೂಜ್ಯ ಗುರುಗಳು" ಎಂದು ಸ್ಮರಿಸುವಲ್ಲಿ ಎಚ್.ಬಿ. ರಮೇಶ ಲೇಖಕರಾಗಲು ಕರೀಂಖಾನರಿಂದ ಸ್ಫೂರ್ತಿ ಪಡೆದು ಕೊಂಡಿರುವುದು ತಿಳಿಯುತ್ತದೆ.

೧೯೪೪ರಲ್ಲಿ ಜಾನಪದ ಸಂಶೋಧಕರಾಗಿದ್ದ ಕರೀಂಖಾನರು "ಸಹೋದರ ಕಲಾ ಸಂಘ' ಎಂಬ ಒಂದು ನಾಟಕ ಸಂಘವನ್ನು ಸ್ಥಾಪಿಸಿ, "ಧರ್ಮ ರತ್ನಾಕರ", "ದೇವದಾಸಿ", "ಪುನರ್‌ಜನ್ಮ", "ಹಿತೈಷಿ", "ಬಹಾದ್ದೂರ ಗಂಡ" ಮುಂತಾದ ನಾಟಕಗಳನ್ನು ಪ್ರದರ್ಶಿಸುವುದರ ಮೂಲಕ ಮೊದಲ ಹವ್ಯಾಸಿ ಕಲಾ ಸಂಘದ ಸ್ಥಾಪಕರೆನಿಸಿದರು.

ಕರೀಂಖಾನರು ಕೆಲವು ಕಾಲ ಧಾರವಾಡದ "ಲೋಕಮಿತ್ರ' ಮತ್ತು ಉಡುಪಿಯಲ್ಲಿ ಫಣಿಯಾಡಿಯವರ "ಅಂತರಂಗ' ಎಂಬ ಪತ್ರಿಕೆಯ ಸಂಪಾದಕರಾಗಿ ಕೆಲಸ ಮಾಡಿದರು. ಆ ಸಮಯದಲ್ಲೇ ಕರೀಂಖಾನರು ಸ್ಕೌಟ್ ಮತ್ತು ಗೈಡ್ಸ್‌ನಲ್ಲಿಯೂ ಕೆಲಸ ಮಾಡಿದ್ದಾರೆ. ಇವೆಲ್ಲವೂ ತಾತ್ಕಾಲಿಕವಾಗಿತ್ತು. ನಂತರ ಇವರು 'ರಾಯಲ್ ಇಂಡಿಯನ್ ನೇವಿ' ಸಂಸ್ಥೆಯಲ್ಲಿ ಕೆಲಸಕ್ಕೆ ಸೇರಿಕೊಂಡರು. ಅಲ್ಲಿ ಹೆಚ್ಚು ಕಾಲ ಉಳಿಯದೇ ಬ್ರಿಟಿಷ ಅಧಿಕಾರಿಗಳ ಹಿಂಸಾಚಾರದ ಪ್ರವೃತ್ತಿಯಿಂದ ಸಿಡಿದೆದ್ದರು. ತಾಯಿಯ ಹಂಬಲದಂತೆ ಅವರ ಕೂಗಿಗೆ ಮಾರುಹೋಗಿ ಆ ಕೆಲಸವನ್ನು ತ್ಯಜಿಸಿ ಮನೆಗೆ ಮರಳಿದರು.

ಕರೀಂಖಾನರಿಗೆ ಕರ್ನಾಟಕದಲ್ಲಿಯೇ ವಿದ್ಯಾರ್ಜನೆಯ ಎಲ್ಲ ಪ್ರಯೋಜನಗಳು ದೊರಕಿದವು. ಆಧುನಿಕ ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಲ್ಲಿ ಕರೀಂಖಾನರಿಗೆ ಬಹುದೊಡ್ಡ ಸ್ಥಾನ ಲಭಿಸಿಬಿಟ್ಟಿತು. ವಿದ್ಯಾರ್ಜನೆಯೂ ತಾಯ್ನೆಲದಲ್ಲೇ ಆಯಿತು. ಇವರು ಕನ್ನಡಿಗರ ಪಾಲಿಗೆ "ವರ"ವಾದರು. ಏಕೆಂದರೆ ಕನ್ನಡ ಭಾಷೆ, ಸಂಸ್ಕೃತಗಳಿಂದ ಸಂತಸಗೊಂಡ ಕರೀಂಖಾನರಿಗೆ ಅನ್ಯ ಭಾಷೆಗಳ ಬಗ್ಗೆ ಅಷ್ಟೊಂದು ಒಲವು ಮೂಡದೇ ಸ್ವಕರ್ತವ್ಯದ ಅರಿವು ಸ್ಫುರಿಸಿತು. ಕರ್ನಾಟಕದ ಏಕೀಕರಣದ ಚಳವಳಿಯಲ್ಲಿ ಕರೀಂಖಾನರು ಪ್ರಮುಖ ಪಾತ್ರವಹಿಸಿದರು. ಸ್ವಾತಂತ್ರ್ಯ ಚಳುವಳಿಯ ಬೆನ್ನಲ್ಲಿ ಕನ್ನಡ ಭಾಷೆಯ ಅರಿವನ್ನು ಜನತೆಗೆ ಮಾಡಿಕೊಟ್ಟರು. ಬದುಕಿನುದ್ದಕ್ಕೂ ಹೋರಾಡುತ್ತಲೇ ಬಂದರು.

ಸಕಲೇಶಪುರ ಬಿಟ್ಟು ಬರಲು ಕಾರಣ ಕೇಳಿದಾಗ ಕರೀಂಖಾನರೇ ಹೇಳುವಂತೆ "ನಾವು ಸಕಲೇಶಪುರ ಬಿಟ್ಟಿದ್ದು ಗಫಾರ್‌ಖಾನ್‌ನಿಗೆ ೧೯ ವರ್ಷವಾಗಿದ್ದಾಗ ಅಂದರೆ ೧೯೨೦ ರಲ್ಲಿ ಸಕಲೇಶಪುರದಲ್ಲಿ ನಮ್ಮ ಮನೆ ಇತ್ತು. ಹೇಮಾವತಿ ನದಿಗೆ ಪ್ರವಾಹ ಬಂದಾಗ ಹೇಮಾವತಿ ನೀರು ಮನೆಯ ಒಳಗೆ ನುಗ್ಗಿ, ಮನೆ ಬಿದ್ದು ಹೋಯಿತು. ಆ ಮನೆ ಇದ್ದ ಜಾಗ ಬಿಟ್ಟೆವು. ಮನೆಯನ್ನು ಯಾರೋ ತೆಗೆದುಕೊಂಡರು. ಯಾರೋ ಬಡವರು ಅಲ್ಲಿ ಮನೆಯನ್ನು ಕಟ್ಟಿಕೊಂಡರು. ನಮ್ಮದು ಜಮೀನು ಎಂದರೆ ಮನೆ ಕಟ್ಟಿಕೊಂಡಷ್ಟೇ ಜಾಗ. ಅಲ್ಲಿ ನಮ್ಮ ಮನೆ ಮತ್ತು ಅದಕ್ಕೆ ಹೊಂದಿಕೊಂಡು ಒಂದು ಸಣ್ಣ ಅಂಗಡಿ ಇತ್ತು. ಆ ಅಂಗಡಿಯ ಹೆಸರು "ನ್ಯಾಶನಲ್ ಕ್ಲಾಥ್ ಸ್ಟೋರ್ಸ್', "ನಮಗೆ ಆ ಊರಲ್ಲೇ ಉಳಿಯಬೇಕೆಂಬ ಆಸೆ, ಜಮೀನು ನಮಗೆ ಎಷ್ಟು ಬೇಕಾದರೂ ಸಿಗುತ್ತಿತ್ತು. ಜಮೀನಿನಲ್ಲಿ ಆಸಕ್ತಿ ಇರಲಿಲ್ಲ, ನಾವು ಚೆನ್ನಾಗಿರಬೇಕು, ಓದ್ಕೋಬೇಕು, ಒಳ್ಳೆ ಜೀವನ ಮಾಡಬೇಕು, ಜನರಿಗೆ ಉಪಕಾರಿಯಾಗಿರಬೇಕು ಎಂದೆನಿಸುತ್ತಿತ್ತು. ಸಕಲೇಶಪುರದಲ್ಲಿ ನೆಲೆಯೂರಿ ನಿಲ್ಲಲಾರದೇ ಹಾಸನ ಜಿಲ್ಲಾ ಪ್ರದೇಶದಲ್ಲಿ ಕೆಲವು ವರ್ಷಗಳ ಕಾಲ ನೆಲೆ ನಿಂತೆವು. ಮುಂದೆ ಒಂದು ಗೂಡಿನ ಹಕ್ಕಿಗಳು ಬೇರೆ ಬೇರೆ ಕಡೆ ಆಸರೆ ಬಯಸಿ ಹೊರಟೆವು. ಸಹೋದರರಲ್ಲಿ ಕೆಲವರು ಹಾಸನ, ಮೈಸೂರಿನಲ್ಲಿ ನೆಲೆ ನಿಂತರು. ಗಫಾರಖಾನ್ ಮಾತ್ರ ಕೋರ್ಟಿನಲ್ಲಿ ಸರಕಾರಿ ಹುದ್ದೆ ಪಡೆದು ಕೆಲವು ಕಾಲ ಮಂಗಳೂರಿನಲ್ಲೂ,

ಕೊನೆಗೆ ಬೆಂಗಳೂರಿನಲ್ಲಿ ತಮ್ಮ ಸೇವೆ ಸಲ್ಲಿಸಿದರು. ನನಗೆ ಮಾತ್ರ ಸ್ವಾತಂತ್ರ್ಯ ಚಳುವಳಿಯ ಕಾವು ತಟ್ಟಿ ಗಾಂಧೀಜಿಯನ್ನು ಕಣ್ಣಾರೆ ಕಂಡು, ಅವರಲ್ಲಿ ಪ್ರಭಾವಿತನಾಗಿ, ಚಳುವಳಿಯಲ್ಲಿ ಧುಮುಕಿದೆ. ಆಮೇಲೆ ಕೆಲ ಕಾಲ ದೊಡ್ಡ ಬಳ್ಳಾಪುರದಲ್ಲಿಯೂ, ಕೆಲವು ದಿನ ಬೆಂಗಳೂರಿನ ಅಲ್ಸೂರ್ ಬಡಾವಣೆಯಲ್ಲೂ, ಕೆಲವು ದಿನ ಕೆ.ಜಿ.ಎಫ್ ನಲ್ಲೂ, ಕೆಲವು ದಿನ ಮಲ್ಲೇಶ್ವರಂನಲ್ಲೂ, ಮತ್ತೆ ಚಾಮರಾಜ ಪೇಟೆಯಲ್ಲೂ ಉಳಿದುಕೊಂಡು ಕೊನೆಗೆ ಏಕಾಂಗಿಯಾಗಿಯೇ ಬೆಂಗಳೂರಿನ ಬಸವನಗುಡಿಯ ದ್ವಾರಕಾ ವಸತಿಗೃಹದಲ್ಲಿ ಉಳಿದುಕೊಂಡೆ" ಎನ್ನುವ ಅವರ ಮಾತು ಮನೆಯವರಿಗೂ ತನ್ನಿಂದ ತೊಂದರೆಯಾಗದೇ ಇರಲಿ ಎಂಬ ಸಂಗತಿಯನ್ನು ದೃಢಪಡಿಸುತ್ತದೆ.

ದೇಶಾಭಿಮಾನಿಯಾದ ಖಾನ್ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿ ಕೆ.ಟಿ. ಭಾಷ್ಯಂ, ಟಿ. ಸುಬ್ರಹ್ಮಣ್ಯ, ಎ. ಜಿ. ರಾಮಚಂದ್ರರಾವ್, ಟಿ. ಸಿದ್ಧಲಿಂಗಯ್ಯ, ಮಾಧವರಾವ್‌ರು, ಕೆಂಗಲ್ ಹನುಮಂತಯ್ಯ, ಟಿ. ಮರಿಯಪ್ಪ, ಸಾಹುಕಾರ ಚೆನ್ನಯ್ಯ, ಮಂಜಪ್ಪ ಹರ್ಡೇಕರ ಮುಂತಾದ ಕಾಂಗ್ರೆಸ್ ಧುರೀಣರೊಡನೆ ಸ್ವಾತಂತ್ರ್ಯ ಚಳುವಳಿಯನ್ನು ನಡೆಸಿ, ಜೈಲುವಾಸ ಅನುಭವಿಸಿದರು. ಜೈಲು ಶಿಕ್ಷೆ ಅನುಭವಿಸಿದ ಕರೀಂಖಾನರು ಮರಳಿ ಮನೆಗೆ ಹೋಗಲು ಇಷ್ಟಪಡದೇ ತಮ್ಮನ್ನು ಸಂಪೂರ್ಣವಾಗಿ ಭಾರತಾಂಬೆಯ ದಾಸ್ಯವನ್ನು ಹೋಗಲಾಡಿಸಲು ತೊಡಗಿಸಿಕೊಂಡರು. ಕರೀಂಖಾನರು ಗಾಂಧೀಜಿಯವರ ತತ್ವವನ್ನು ಬಾಲ್ಯದಲ್ಲಿಯೇ ಅಳವಡಿಸಿಕೊಂಡಿದ್ದರು. ೧೯೩೨–೩೩ರಲ್ಲಿ ಸ್ವಯಂ ಸೇವಕರಾಗಿ ಗಾಂಧೀಜಿಯವರು ನಿರ್ಮಿಸಿದ ಸೇವಾದಳ ಸೇರಿದರು. ಕರೀಂಖಾನರ ಬದುಕಿನಲ್ಲಿ ಸೇವಾದಳದ ಪಾತ್ರ ಮಹತ್ವವಾದದ್ದು. 'ಸೇವಾದಳ' ಒಂದು ಜಾತ್ಯತೀತ, ಧರ್ಮಾತೀತ ಸಂಸ್ಥೆಯಾಗಿತ್ತು. ಪುರಾಣ, ಇತಿಹಾಸ, ಸಾಹಿತ್ಯ ಕುರಿತಂತೆ ನಿತ್ಯವೂ ಉಪನ್ಯಾಸ ಕಾರ್ಯಕ್ರಮಗಳನ್ನು ನಡೆಸುವುದು ಸೇವಾದಳದ ಚಟುವಟಿಕೆಯ ಒಂದು ಅಂಗವಾಗಿತ್ತು. ಇದು ಕರೀಂಖಾನರ ಬೌದ್ಧಿಕ ಬೆಳವಣಿಗೆಗೆ ಬಹಳ ಸಹಾಯವಾಯಿತು. ಸೇವಾದಳದ ಬೆಳವಣಿಗೆಯ ಬಗ್ಗೆ ಕರೀಂಖಾನರು ಕಾಳಜಿ ವಹಿಸಿದರು.

ಕರೀಂಖಾನರು ದುಡಿದ ಎಲ್ಲ ಕ್ಷೇತ್ರಗಳಲ್ಲೂ ಅವರಿಗೆ ತಕ್ಕ ಪ್ರತಿಫಲ ಸಿಗಲಿಲ್ಲ. ಅವರ ಮಾತಿನಲ್ಲಿ ಹೇಳುವುದಾದರೆ "ಎಲ್ಲರೂ ದುಡಿಸಿಕೊಂಡು ದೂರವಿಟ್ಟರು" ಆದರೂ ಇವರ ಸ್ಥಿತಿಗಳನ್ನು ಕಂಡು ಅನೇಕರು ಸ್ಪಂಧಿಸಿದ್ದೂ ಇದೆ. ಜೀವನ ಸಾಗಿಸುವುದೇ ಕಷ್ಟವಾದ ದಿನಗಳಲ್ಲಿ ಮಾಸ್ತಿ ವೆಂಕಟೇಶ ಅಯ್ಯಂಗಾರ ಅವರು ಇವರ ಕೊಠಡಿಗೆ ಬಂದು "ಕರೀಂಖಾನರೇ ಬೇಜಾರು ಮಾಡ್ಕೋಬೇಡಿ ದೇವರು ಇದ್ದಾನೆ ತೆಗೆದುಕೊಳ್ಳಿ ಈ ಹಣ ನೀವು ಉಪಯೋಗಿಸಿ" ಎಂದಾಗ ಕರೀಂಖಾನರು ವಿನಯವಾಗಿ ಅದನ್ನು ತಿರಸ್ಕರಿಸಿದರು. ಆದರೆ ಅದನ್ನು ಈಗಲೂ ಸಂತೋಷದಿಂದ ನೆನೆಯುತ್ತಾರೆ.

ಬೀಚಿ ಅವರು ಕರೀಂಖಾನರ ಗೆಳೆಯರಲ್ಲೊಬ್ಬರು. ಅವರ ಗೆಳೆಯರೊಬ್ಬರನ್ನು ಕರೀಂಖಾನರ ಕೊಠಡಿಗೆ ಕಳುಹಿಸಿ, "ಆ ಕರೀಂಖಾನರಿಗೆ ಹೇಳು, ಪ್ರತಿನಿತ್ಯ ನಮ್ಮ

ಮನೆಗೆ ಬಂದು ಊಟ, ತಿಂಡಿ ಎಲ್ಲ ಮಾಡ್ಕೊಂಡು ಹೋಗ್ಬೇಕಂತೆ, ಇಲ್ಲಾ ಅಂದ್ರೆ ಲಟ್ಟಾ ಪೈಲ್ವಾನರುಗಳನ್ನು ಕಳಿಸಿ ಎಳೆದು ತರ್ಸಿ, ಊಟ, ತಿಂಡಿ ಮಾಡಿಸ್ತಾರಂತೆ, ಅಂತಾ ಹೇಳು" ಎಂದು ಹೇಳಿದ್ದರಂತೆ ಇದು ಕರೀಂಖಾನರ ಬಗ್ಗೆ ಬೀಚಿಯವರಿಗಿದ್ದ ಅಗಾಧ ಪ್ರೀತಿಯನ್ನು ತೋರಿಸಿಕೊಡುತ್ತದೆ.

ಪ್ರಖ್ಯಾತ ಪತ್ರಕರ್ತ ಪಿ. ಲಂಕೇಶ ಅವರು, ಅವರ ಶಿಷ್ಯ ಚೆನ್ನರಾಯ ಪಟ್ಟಣದ ಬಸವರಾಜ ಅವರ ಬಳಿ ಕರೀಂಖಾನ್ ಅವರಿಗೆ ಎರಡು ಸಾವಿರ ರೂಪಾಯಿಗಳಿದ್ದ ಕವರೊಂದನ್ನು ಕಳಿಸಿ, ದಯಮಾಡಿ ಸ್ವೀಕರಿಸಬೇಕಂತೆ, ಪ್ರತಿ ತಿಂಗಳು ನಿಮಗೆ ೨ ಸಾವಿರ ರೂಪಾಯಿಗಳನ್ನು ೧ನೇ ತಾರೀಖು ಕೊಡ್ತಾರಂತೆ, ಎಂದು ಹೇಳಿ ಕಳುಹಿಸಿದಾಗ ಖಾನರು "ಅವರ ಪ್ರೀತಿಯ ಅಭಿಮಾನಕ್ಕೆ ನಾನು ಕೃತಜ್ಞ, ಆದರೆ ಈಗ ಬೇಡ ನನಗೆ ಬೇಕಾದಾಗ ನಾನೇ ಕೇಳುತ್ತೇನೆ" ಎಂದರಂತೆ. ಇದು ಲಂಕೇಶ ಹಾಗೂ ಕರೀಂಖಾನರ ಮಧ್ಯೆ ಇರುವ ಮಧುರ ಸಂಬಂಧವನ್ನು ಎತ್ತಿ ತೋರಿಸುತ್ತದೆ. ಇದಲ್ಲದೇ ಮಾಸಾಶನ ಮಂಜೂರು ಮಾಡಿದ ಮಾನ್ಯ ಮಾಜಿ ಮುಖ್ಯಮಂತ್ರಿ ಶ್ರೀ ಗುಂಡೂರಾವ್, ಅಕಾಡಮಿಯ ಅಧ್ಯಕ್ಷ ಸ್ಥಾನ ನೀಡಿ ಗೌರವಿಸಿದ ಅಂದಿನ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ, "ಜಾನಪದ ಶ್ರೀ" ಪ್ರಶಸ್ತಿ ನೀಡಿ ಗೌರವಿಸಿದ ಮಾಜಿ ಪ್ರಧಾನಿ ಶ್ರೀ ಎಚ್. ಡಿ. ದೇವೇಗೌಡ, ಚಿಕಿತ್ಸೆಯ ಕಾಲದಲ್ಲಿ ನೆರವಾದ ಮಾಜಿ ಸಚಿವರುಗಳಾದ ಮಾನ್ಯ ಶ್ರೀ ಜಿ.ಪುಟ್ಟಸ್ವಾಮಿ ಗೌಡ, ಮಾಜಿ ಮುಖ್ಯಮಂತ್ರಿ ಮಾನ್ಯ ಶ್ರೀ ಎಸ್. ಬಂಗಾರಪ್ಪ, ಅಂದಿನ ಮಂತ್ರಿ ಹೆಚ್. ವಿಶ್ವನಾಥ, ಮಾನ್ಯ ಗಣಿಗಾರಿಕೆ ಸಚಿವ ಶ್ರೀ ಎಸ್.ಡಿ.ಜಯರಾಂರವರು, ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಶ್ರೀ ವೀರೇಂದ್ರ ಹೆಗಡೆ ಮುಂತಾದವರನ್ನು ಶ್ರೀ ಕರೀಂಖಾನರು ಬಹು ಕೃತಜ್ಞತೆಯಿಂದ ನೆನೆಯುತ್ತಾರೆ.

ಕನ್ನಡ ನಾಡಿನ ಜನ ಜೀವನವನ್ನು ನೋಡುವ, ನಾಡಿ ಮಿಡಿತವನ್ನು, ಅರಿಯುವ ಅವಕಾಶಗಳು ಅವರಿಗೆ ಲಭಿಸಿದವು. ಅರಕಲಗೋಡು, ಶ್ರವಣಬೆಳಗೊಳ, ಉತ್ತರಕನ್ನಡ, ದಕ್ಷಿಣ ಕನ್ನಡ ಮುಂತಾದ ಕಡೆಗಳಲ್ಲಿ ಸಂಚರಿಸುವ ಅವಕಾಶ ಅವರಿಗೆ ಲಭಿಸಿತು. ಒಂದು ಮಾತಿನಲ್ಲಿ ಹೇಳಬೇಕೆಂದರೆ ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕದ ಪ್ರದೇಶಗಳಲ್ಲಿ ಅತ್ಯಂತ ಆಸಕ್ತಿಯಿಂದ ಸಾಹಿತ್ಯ ಸಂಶೋಧಕರಾಗಿ ಕೆಲಸ ಮಾಡಿದರು. ತಮ್ಮ ವೈಯಕ್ತಿಕ ಜೀವನಕ್ಕೆ ತೊಂದರೆ ಬರುತ್ತದೆ ಎಂದು ತಿಳಿದರೂ ಆತಂಕಗಳ ನಡುವೆಯೂ ಆಸಕ್ತಿಯುತವಾದ ಬರವಣಿಗೆಗೆ ವಿಷಯ, ವಿಚಾರಗಳ ಸಂಗ್ರಹ ನಡದೇ ಇತ್ತು. ಇವರಿಗೆ ಬೇಕಾದದ್ದು ಸರಕಾರದ ಸೇವೆ. ತನ್ಮೂಲಕ ಪ್ರಜೆಗಳ ಅಭಿವೃದ್ಧಿ, ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ್ಥಾಪನೆಗೆ ಅವರು ನಿಸ್ವಾರ್ಥ ಸೇವೆಗೈದರು. ಚೆನ್ನಾಗಿ ಭಾಷಣ ಮಾಡುವ ಕಲೆ ಇವರಿಗೆ ಸಿದ್ಧಿಸಿತು. ಇವರ ಭಾಷಣ ಕನ್ನಡ ಕಾವ್ಯಗಳ ಇಂಪು–ಪೆಂಪುಗಳನ್ನು ಒಳಗೊಂಡಿತ್ತು. ಶೃಂಗೇರಿಯಲ್ಲಿ ಸತತವಾಗಿ ೫ ಗಂಟೆ ಭಾಷಣ ಮತ್ತು ಹಾಡುಗಾರಿಕೆಗೆ "ಈತ" ಏನು ವ್ಯಾಕರಣ ಬದ್ಧವಾಗಿ ಮಾತನಾಡುತ್ತಾನೆ ? ಎಂದು ಹುಬ್ಬೇರಿಸಿದವರು

ಇದ್ದಾರೆ. ಒಮ್ಮೆ ಸಂಸ್ಕೃತ ಕಾಲೇಜಿನ ಪ್ರಾಚಾರ್ಯರು ಇವರ ಭಾಷಣವನ್ನು ಕೇಳಿ "ತೊಳೆದ ಕನ್ನಡ ಭಾಷಣ" ಎಂದು ಶ್ಲಾಘಿಸಿದರು. ಇದರಿಂದಾಗಿಯೇ ಕಾಂಗ್ರೆಸ್ ಮುಂದಾಳುಗಳೆಲ್ಲರ ಪ್ರೀತಿಗೆ ಪಾತ್ರರಾದರು. ತಮ್ಮ ವೇಳೆಯ ಬಹುಭಾಗವನ್ನು ವ್ಯಾಸಂಗಕ್ಕೂ, ಬರವಣಿಗೆಗೂ ಮೀಸಲಿಟ್ಟರು. ಮಿಕ್ಕ ಭಾಗ ಸಾರ್ವಜನಿಕ ಚಟುವಟಿಕೆಗಳಿಗೆ ಮೀಸಲಾಯಿತು. ಹಸ್ತಪ್ರತಿಯಲ್ಲಿ ಉಳಿದಿದ್ದ "ಶ್ರೀ ಕೃಷ್ಣ ಲೀಲಾ" (ನಾಟಕ, ಚಲನ ಚಿತ್ರಕಥಾನಕ)ವನ್ನು ಕರೀಂಖಾನರ ಸೇವೆಯಲ್ಲಿರುವ "ಆದರ್ಶ ಸುಗಮ ಸಂಗೀತ ಅಕಾಡೆಮಿ" ಅಧ್ಯಕ್ಷರಾದ ಕೃಷ್ಣಮೂರ್ತಿ ಕಿಕ್ಕೇರಿಯವರು ಪ್ರಕಟಿಸಿದರು. "ಕೋಮು ಸೌಹಾರ್ದದ ಕುರಿತು ಬರೆದ ನಾಟಕವೊಂದು ಪ್ರಕಟವಾಗಲೇ ಇಲ್ಲ" ಎನ್ನುವ ಕಿಕ್ಕೇರಿಯವರ ಮಾತು ಇವರ ಅದೆಷ್ಟೋ ಹಸ್ತ ಪ್ರತಿಗಳು ಮುದ್ರಣವನ್ನೇ ಕಾಣಲಿಲ್ಲ ಎಂಬುದನ್ನು ತಿಳಿಸುತ್ತದೆ.

ಭಾರತಾಂಬೆಯ ಬಿಡುಗಡೆಯ ಮಂತ್ರವನ್ನೇ ದಿಟ್ಟತನದಿಂದ ಜಪಿಸುತ್ತ, "ದೇಶ ಮತ್ತು ನಾಡಿಗೆ ತಮ್ಮನ್ನು ಅರ್ಪಿಸಿಕೊಂಡ ಕರೀಂಖಾನರವರು ತಮ್ಮ ಸ್ವಂತ ಜೀವನದ ಬಗ್ಗೆ ಚಿಂತಿಸಲಿಲ್ಲ, ಮದುವೆ, ಮಡದಿ, ಮಕ್ಕಳೆಂಬ ಮಮಕಾರದ ಸಂಸಾರದ ಕನಸು ಇವರಿಂದ ದೂರವಾಗಿಯೇ ಉಳಿಯಿತು, ಏಕೀಕರಣದ ಸಂದರ್ಭದಲ್ಲಿ ೫೦ರ ಗಡಿ ತಲುಪಿದ ಕರೀಂಖಾನರು ಬ್ರಹ್ಮಚಾರಿಯಾಗಿಯೇ ನಾಡಿಗೆ, ರಾಷ್ಟ್ರಕ್ಕೆ ತಮ್ಮನ್ನು ಅರ್ಪಿಸಿಕೊಂಡರು" ಎಂದು ನಡುಗನ್ನಡ ಪಾಕ್ಷಿಕ ಪತ್ರಿಕೆ ಹೊಗಳಿತು. ಅವರು ಪ್ರಚೋದನೆಗೊಳಗಾದರೆ ಏನನ್ನೆಲ್ಲ ಮಾಡಿಕೊಳ್ಳಬಹುದಿತ್ತು, ಏಕೀಕರಣದ ನಂತರ ಕರ್ನಾಟಕ ರಾಜಕೀಯದಿಂದ ಕರೀಂಖಾನರು ದೂರ ಸರಿಯ ತೊಡಗಿದರು. ರಾಜಕಾರಣಿಗಳಲ್ಲಿ ಬೇರು ಬಿಟ್ಟಿರೋ ಸ್ವಾರ್ಥಲಾಲಸೆ, ಸ್ವಜನ ಪಕ್ಷಪಾತಗಳು ವಿಸ್ತಾರವಾಗಿ ಹರಡತೊಡಗಿದಾಗ ಕರೀಂಖಾನರಂತಹ ದೇಶಪ್ರೇಮಿಗಳು "ಎಲೆಯ ಮರೆಯ ಕಾಯಿ" ಎಲೆಯ ಮರೆಯಲ್ಲೇ ಹಣ್ಣಾಗಬೇಕಾಯಿತು.

**ಆಹಾರ, ಉಡುಪು, ದಿನಚರಿ :**

ಎಸ್. ಕೆ. ಕರೀಂಖಾನರು ತಮ್ಮ ಬದುಕಿನದ್ದಕ್ಕೂ ನಿಯಮಿತವನ್ನು ಪಾಲಿಸಿಕೊಂಡು ಬಂದಿದ್ದಾರೆ. ಬೆಳಿಗ್ಗೆ ಬಹುಬೇಗ ಏಳುವರು. ಪ್ರಾತಃ ವಿಧಿಗಳಾದ ಮೇಲೆ ಮುಖ ತೊಳೆದು ಬೊಗಸೆ ನೀರು ಕುಡಿದು, ನಂತರ ಕ್ಷೌರ ಮಾಡಿಕೊಳ್ಳುವುದು ನಿತ್ಯದ ರೂಢಿ. ಅನಂತರ ಸ್ನಾನ, ಸ್ನಾನಕ್ಕೆ ಚಿಕ್ಕವರಿದ್ದಾಗ ಗೆಳೆಯರ ಜೊತೆ ಹೇಮಾವತಿಯಲ್ಲಿ ಈಜಾಡಿ ಆನಂದಿಸಿದ್ದೂ ಇದೆ. ಇವರು ತಣ್ಣೀರಿನ ಸ್ನಾನ ಮಾಡುತ್ತಿದ್ದರು. ಅವರೇ ಹೇಳುವಂತೆ ''ನನ್ನ ಜೀವನದಲ್ಲಿ ಬಿಸಿ ನೀರಿನ ಸ್ನಾನವನ್ನು ಕಂಡಿಲ್ಲ.'' ಎನ್ನುವ ಮಾತಲ್ಲಿ ಅವರು ಬಿಸಿ ನೀರಿನ ಸ್ನಾನ ಬಯಸಿದ್ದರು. ಆದರೆ ಅವರಿಗೆ ದೊರೆಯಲ್ಲಿಲವೆಂಬ ದುಃಖವಿದೆ. ಸ್ನಾನದ ನಂತರ ಚಹಾ, ತಿಂಡಿಯನ್ನು ಸ್ವೀಕರಿಸುತ್ತಿದ್ದರು. ಚಿಕ್ಕವರಿದ್ದಾಗ ಬಗೆ ಬಗೆಯ ತಿಂಡಿಗಳನ್ನು ಇಷ್ಟಪಡುತ್ತಿದ್ದರು. ದ್ವಾರಕಾ ಹೋಟೇಲಿನಲ್ಲಿ ಇರುವಾಗ ಯಾವ ತಿಂಡಿಯೂ ನಿಯಮಿತವಾಗಿರಲಿಲ್ಲ, ಆದರೂ, ಇಡ್ಲಿ ಸಾಂಬಾರು ಇವರಿಗೆ ಇಷ್ಟವಾದ ತಿಂಡಿಯಾಗಿತ್ತು. ಬೆಳಗಿನ ಉಪಹಾರಕ್ಕೆ ಪ್ರತಿದಿನ ಇಂತಹದ್ದೇ ತಿಂಡಿ ಇರಬೇಕೆಂಬ ನಿಯಮವಿರಲಿಲ್ಲ, ಸಿಹಿ ತಿಂಡಿ ಅವರಿಗೆ

ಇಷ್ಟ, ಬರ್ಫಿ, ಪೇಡೆ, ಮೈಸೂರುಪಾಕ್ ತಿನ್ನುತ್ತಿದ್ದರು. ಸಕಲೇಶಪುರದಲ್ಲಿರುವಾಗ ತಿಂಡಿಗಳು ನಿಯಮಿತವಾಗಿದ್ದವು. ಈ ಊರು ಬಿಟ್ಟ ಮೇಲೆ ಆಹಾರದಲ್ಲಿ ಸಮತೋಲನವಿರಲಿಲ್ಲ. ''ಹೊಟ್ಟೆ ನಾಯಿ ಕೂಗಿದಾಗ ಇನ್ನಷ್ಟು ಎಸೆದು ಸುಮ್ಮನಾಗುತ್ತೇನೆ'' ಎನ್ನುವ ಕರೀಂಖಾನರ ಮಾತಲ್ಲಿ 'ಕಲಾವಿದನಿಗೆ ಬಡತನ ಬೆನ್ನ ಹಿಂದೆ ಬಂದ ಭೂತ' ಎಂಬಂತಾಗಿದೆ. ಚಹ ತಿಂಡಿ ಆದ ಮೇಲೆ ಜಾನಪದ ಹಾಡುಗಳ ಸಂಗ್ರಹದ ಸಲುವಾಗಿ ತಿರುಗಾಡುತ್ತಿದ್ದರು. ಸ್ವಾತಂತ್ರ್ಯ ಚಳುವಳಿಯ ಬಗ್ಗೆ ಚರ್ಚಿಸುತ್ತಿದ್ದರು.

ಅಡುಗೆ ರುಚಿಯಾಗಿದೆ ಎಂದು ಕರೀಂಖಾನರು ಬೇಕಾದಷ್ಟು ಊಟ ಮಾಡುತ್ತಿರಲಿಲ್ಲ, ಅವರದು ಹಿತಮಿತ ಊಟ. ಶಾಖಾಹಾರಿ ಮತ್ತು ಮಾಂಸಾಹಾರಿ ಗಳಾಗಿದ್ದರು. ಚಿಕನ್ ಬಿರಿಯಾನಿ, ಮಟನ್ ಬಿರಿಯಾನಿ ಅತೀ ಇಷ್ಟ ಬಿರಿಯಾನಿ ಮಾಡುವಲ್ಲಿ ಚತುರರಾಗಿದ್ದರು. ಹೊಟೇಲಿನಲ್ಲಾಗಲೀ ಅಥವಾ ಯಾರದೇ ಮನೆಯಲ್ಲಾಗಲೀ ಬಿರಿಯಾನಿ ಊಟ ಹಾಕಿದ್ದರೆ ನೋಡಿದಾಕ್ಷಣ ಅದು ಒಳ್ಳೆಯದೋ, ಕೆಟ್ಟದ್ದೋ ಎಂಬುದನ್ನು ನಿರ್ಣಯಿಸಿ ಬಿಡುತ್ತಿದ್ದರು. ಈ ಊಟದಲ್ಲಿ ಅಚ್ಚುಕಟ್ಟುತನವಿತ್ತು. ಒಮ್ಮೊಮ್ಮೆ ಒಂದು ಬೊಗಸೆ ನೀರು ಕುಡಿದು ಮಲಗಿದ್ದೂ ಇದೆ.

ಕರೀಂಖಾನರು ಕೆಲವು ದಿನ ದೊಡ್ಡ ಬಳ್ಳಾಪುರದಲ್ಲಿ ಸಮಾಜ ಸೇವಕ ಆದಿ ನಾರಾಯಣ ಸ್ವಾಮಿ ಮನೆಯಲ್ಲಿ ಉಳಿದುಕೊಂಡಿದ್ದರು. ಅವರು ಇವರನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು. ಆದಿನಾರಾಯಣರ ಅಂದಿನ ಸ್ಥಿತಿ ಅಷ್ಟು ಚೆನ್ನಾಗಿರಲಿಲ್ಲ. ಆದಿನಾರಾಯಣರ ತಾಯಿ ಕರೀಂಖಾನರನ್ನು ಮನೆಯ ಮಗನಂತೆ ನೋಡಿಕೊಂಡು ರುಚಿಯಾಗಿ ಅಡಿಗೆ ಮಾಡಿ ಹಾಕುತ್ತಿದ್ದರು. ದೋಸೆಗೆ ತುಪ್ಪವನ್ನು ಬೇರೆಯವರ ಮನೆಯಿಂದ ಬೇಡಿಕೊಂಡು ಬಂದು ಕೊಡುತ್ತಿದ್ದರು. ಅದನ್ನು ಕರೀಂಖಾನರು ನೆನಪಿಸುತ್ತಾರೆ. ಮುಸ್ಲಿಂರಲ್ಲಿ ಮಾತ್ರವಲ್ಲದೇ ಎಲ್ಲಾ ಜಾತಿಯವರಲ್ಲಿಯೂ ಕರೀಂಖಾನರಿಗೆ ಆದರಗಳಿದ್ದವು.

ಇವರು ಊಟದ ನಂತರ ಬಾಳೆಹಣ್ಣು ಅಥವಾ ದ್ರಾಕ್ಷಿ ಹಣ್ಣನ್ನು ತಿನ್ನುತ್ತಿದ್ದರು. ಊಟದ ಸಮಯದಲ್ಲಿ ಬಂದವರಿಗೆ ಊಟ ಮಾಡಿಸಿಯೇ ಕಳುಹಿಸುತ್ತಿದ್ದರು. ಕರೀಂಖಾನರಿಗೆ ಸರಳವಾದ ಆಹಾರ ಇಷ್ಟವಾಗಿತ್ತು. ಹಾಲು, ಹಣ್ಣು ತರಕಾರಿ ಮೊದಲಾದ ನೈಸರ್ಗಿಕವಾದ ಆಹಾರಗಳನ್ನು ಇಷ್ಟಪಡುತ್ತಿದ್ದರು. ಇವರಿಗೆ ಮೆಣಸಿನ ಸಾರು, ಸಿಹಿ ಸಾರು, ಗೊಜ್ಜುಸಾರು ಮೊದಲಾದವು ಪ್ರಿಯ, ರಾಗಿ ಮುದ್ದೆ ಇಷ್ಟ, ಯಾವುದೇ ರೀತಿಯ ಪಾಯಸ ಅವರಿಗೆ ಇಷ್ಟವಾಗಿತ್ತು. ಉಣ್ಣುವಾಗ ತಿನ್ನುವಾಗ ಎಲ್ಲರೂ ಚೆನ್ನಾಗಿ ತಿನ್ನಬೇಕಾಗಿರುತ್ತಿತ್ತು. ಊಟದ ನಂತರ ಹತ್ತು ಹದಿನೈದು ನಿಮಿಷ ವಿಶ್ರಾಂತಿ. ಆ ನಂತರ ಮತ್ತೆ ತನ್ನ ಕಾರ್ಯದಲ್ಲಿ ಮಗ್ನರಾಗುತ್ತಿದ್ದರು. ಸಾಹಿತ್ಯಕ್ಕೆ ಸಂಬಂಧಪಟ್ಟಂತೆ, ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಂಬಂಧ ಪಟ್ಟಂತೆ ಏನಾದರೂ ವಿಷಯ ಪ್ರಸ್ತಾವನೆಗೆ ಬಂದರೆ, ರಾತ್ರಿ ಮಲಗಲು ಹನ್ನೊಂದರಿಂದ ಹನ್ನೆರಡು ಗಂಟೆ ಆಗಿದ್ದು ಇದೆ. ಮಲಗುವ ಹಾಸಿಗೆಯ ಸಮೀಪದಲ್ಲೇ ನೆನಪಾದಾಗ ಬರೆಯಲೆಂದು ಹಾಳೆ ಮತ್ತು ಚೂಪಾದ ಪೆನ್ಸಿಲ್ ಇರುತ್ತಿತ್ತು. ರಾಗಿ ಕಾಳಿನಷ್ಟು ಚಿಕ್ಕದಾಗಿ ಅಂದವಾದ ಕನ್ನಡ ಅಕ್ಷರಗಳಿಂದ ಕವಿತೆಗಳನ್ನು, ಭಕ್ತಿಗೀತೆಗಳನ್ನು ಬರೆದು ಸಂಯೋಜಿಸುತ್ತಿದ್ದರು.

ಮನ ಸೆಳೆಯುವ ಆಕೃತಿ ಗಂಭಿರವಾದ ನಿಲುವು, ಶಿಲ್ಪದಂತೆ ಅಂಗ ಪ್ರತ್ಯಂಗಗಳೆಲ್ಲ ಸ್ಪುಟವಾಗಿ, ನಾಜುಕಾಗಿ ಸಿದ್ಧವಾಗಿವೆ. ಮುಖದ ಮೇಲೆ ಒಮ್ಮೆ ನೋಡಿದರೆ ಮತ್ತೊಮ್ಮೆ ನೋಡಬಯಸುವಂತೆ

ಕಳೆ, ಹಣೆಯ ಹರವು, ಕಣ್ಣುಗಳ ಹೊಳಪು, ಮೂಗಿನ ಮಾಟ, ಅಷ್ಟು ಎತ್ತರವಲ್ಲದ ಜಟ್ಟಿಯ ಮೈಕಟ್ಟು, ದುಂಡು ಮುಖ, ಕೆಂಬಣ್ಣದ ಪೈಲ್ವಾನರಂತೆ ಕಾಣುತ್ತಿದ್ದರು.

ವ್ಯಕ್ತಿ ಧರಿಸುವ ಉಡುಪು ಆತನ ಆಸಕ್ತಿ ಹಾಗೂ ಅಭಿರುಚಿಯನ್ನು ಪ್ರತಿನಿಧಿಸುತ್ತದೆ. ಕರೀಂಖಾನರ ಉಡುಪು ಕೂಡ ಸರಳವಾಗಿತ್ತು. ಮೊದಲಿನಿಂದಲೂ ಬಿಳಿಯ ಬಣ್ಣ, ಬಿಳಿಯ ಬಟ್ಟೆಯ ಬಗ್ಗೆ ಆಸಕ್ತಿ, ಸದಾ ಚಟುವಟಿಕೆಯಿಂದಿರುವ ಇವರು ಗಾಂಧೀಜಿ ಹೆಸರು ಕೇಳಿದಾಗಿನಿಂದ ಸ್ವದೇಶಾಭಿಮಾನವೇ ಕಾರಣವಾಗಿ ವಿದೇಶಿ ಉಡುಪಿನ ಬಗ್ಗೆ ಆಸಕ್ತಿ ತಳೆಯಲೇ ಇಲ್ಲ, ಇವರು ಯಾವಾಗಲೂ ಬಿಳಿಯ ಜುಬ್ಬಾ , ಪೈಜಾಮು ಧರಿಸುತ್ತಿದ್ದರು. ಮನೆಯಲ್ಲಿ ಅಂಡರವೇರ್ ಧರಿಸುತ್ತಿದ್ದರು. ಒಮ್ಮೊಮ್ಮೆ ಬಿಳಿಯ ಬನಿಯಾನ್, ಬಿಳಿಯ ಪೈಜಾಮ ತೊಟ್ಟುಕೊಂಡಿರುತ್ತಾರೆ. ಕಾಲಲ್ಲಿ ರಬ್ಬರ್ ಷೂಗಳು, ನಡಿಗೆಯಲ್ಲಿ, ಕೈಯಾಟದಲ್ಲಿ ಆತ್ಮವಿಶ್ವಾಸ ಎದ್ದು ಕಾಣುವುದು. ಮೂಲತಃ ಸೌಮ್ಯ ವಿನಯಶೀಲ ಸ್ವಭಾವದವರು. ಹಸನ್ಮುಖತೆ, ಮೊಗದಲ್ಲಿ ಎದೆಯಾಳದ ನಗು, ಎಲ್ಲರನ್ನು ಸೂಜಿಗಲ್ಲಿನಂತೆ ಸೆಳೆವ ಆಕರ್ಷಕ ವ್ಯಕ್ತಿತ್ವ. ನಿರರ್ಗಳವಾಗಿ ಮಾತನಾಡುವವರು. ಪುಂಖಾನು ಪುಂಖವಾಗಿ ಜೀವನಾನುಭವಗಳ ರಸಧಾರೆ. ತಲೆಯ ಮೇಲೆ ಗರಿಗರಿಯಾದ ಬಿಳಿಯ ಟೊಪ್ಪಿ ಇವರು ಗಾಂಧಿ ಯುಗದ ಕೊನೆಯ ಫಕೀರನಂತೆ ಥಕ್ಕನೆ ಭಾವನೆ ಹುಟ್ಟಿಸುವ ವ್ಯಕ್ತಿ. ಇವರು ಮುಸ್ಲಿಂ ಜನಾಂಗದಲ್ಲಿ ಹುಟ್ಟಿದರೂ ಹಿಂದೂಗಳು ಧರಿಸುವ ಬಟ್ಟೆಯನ್ನೇ ಜೀವನದುದ್ದಕ್ಕೂ ತೊಟ್ಟುಕೊಂಡು ಬಂದರು. ಅದಕ್ಕೆ ತಕ್ಕುದಾದ ನಡುವಳಿಕೆ ಇತ್ತು. ಯಾವುದೇ ಸಾಧನೆಯಲ್ಲಿ ತೊಡಗಿ, ಏನೋ ಸಿದ್ಧಿಯನ್ನು ಪಡೆದುಕೊಂಡು, ಕೃತ ಕೃತ್ಯರಾದಂತೆ ನಿಲುವು, ಇವರೇ ಕರೀಂಖಾನ್.

ಎಲ್ಲಿಗಾದರೂ ಹೋಗಿ ಬರುವಾಗ ಅವರಿಗೆ ನಡೆದು ಹೋಗುವುದೇ ಅಭ್ಯಾಸ. ಸಕಲೇಶಪುರದಲ್ಲಿರುವಾಗ ಜಾನಪದ ಹಾಡು ಮತ್ತು ಜಾನಪದ ಸಂಗ್ರಹದ ಕಾರ್ಯದಲ್ಲಿ ತೊಡಗಿದಾಗ ಸುತ್ತ ಮುತ್ತ ಪ್ರದೇಶಗಳಿಗೆ ನಡೆದುಕೊಂಡೇ ಹೋಗುತ್ತಿದ್ದರು. ಜಾನಪದ ಮತ್ತು ಯಕ್ಷಗಾನ ಅಕಾಡಮಿಯ ಅಧ್ಯಕ್ಷರಾಗಿದ್ದಾಗಲೂ ಕಾರಿಗಾಗಲಿ, ರಿಕ್ಷಾಗಾಗಲೀ ಕಾಯದೇ ನಡೆದು ಹೋಗಲು ಇಷ್ಟ ಪಡುತ್ತಿದ್ದರು. ಸ್ವಲ್ಪ ಪ್ರಲೋಬನೆಗೊಳಪಟ್ಟರೂ ಐಶಾರಾಮಿ ಜೀವನ ಮಾಡಬಹುದಿತ್ತು. ಅವರು ಅವಕಾಶವಾದಿಗಳಾಗಿರಲಿಲ್ಲ. 'ದೇಶ ಸೇವೆಯೇ ಈಶ ಸೇವೆ' ಎಂದು ಭಾವಿಸಿದ್ದರು. ಅವರದು ಕಟ್ಟುನಿಟ್ಟಿನ ನಿಯಮ ಬದ್ಧ ನಡುವಳಿಕೆಯಾದುದರಿಂದ ಅದರ ಫಲವಾಗಿ ಪೂರ್ಣಾರೋಗ್ಯವನ್ನು ಅವರು ಅನುಭವಿಸಿದರು. ಅವರ ಮುಪ್ಪಿನ ಕಾಲದಲ್ಲಿಯೂ ಕೂಡ ಅವರನ್ನು ಯಾವ ವ್ಯಾಧಿಯೂ ಬಾಧಿಸಲಿಲ್ಲ, ನಿಮ್ಮ ಆರೋಗ್ಯದ ಗುಟ್ಟು ಏನು ಎಂದು ದೊಡ್ಡ ರಂಗೇಗೌಡರು ಚಂದನ ದೂರದರ್ಶನ ಸಂದರ್ಶನದಲ್ಲಿ ಕೇಳಿದ ಪ್ರಶ್ನೆಗೆ ಉತ್ತರಿಸಿದ ಕರೀಂಖಾನರು "ಚಟಗಳಿಂದ ದೂರವಿರಬೇಕು ಹಾಗಿದ್ದಲ್ಲಿ ನೂರು ವರುಷ ಬಾಳಿ ಬದುಕಬಹುದು. ಲಘು ಆಹಾರ ಸೇವನೆ ಮಾಡಬೇಕು, ವ್ಯಭಿಚಾರ ಬಿಡಬೇಕು, ವ್ಯಭಿಚಾರವು ಮನುಷ್ಯನನ್ನು ರೋಗಿಷ್ಟನನ್ನಾಗಿ ಮಾಡುತ್ತದೆ. ಆ ರೋಗ ತಗುಲಿದರೆ, ಮನುಷ್ಯನಿಗೆ ಗುಂಡು ತಗುಲಿದ ಹಾಗೆ" ಎಂದು ದೀರ್ಘಾಯುಷ್ಯದ ಗುಟ್ಟನ್ನು ಹೇಳಿದರು. "ನೀರು ಮತ್ತು ಶೌಚಾಲಯ ವ್ಯವಸ್ಥೆ ಕೂಡ ಇರದಂತೆ, ಬಹುತೇಕ ಸಂಸಾರವಿಲ್ಲದ ಬಡಪಾಯಿಗಳೇ ಬಿಡಾರ ಹೂಡಿದಂತಿರುವ ಬುಲ್ ಟೆಂಪಲ್ ರೋಡಿನ ಬಸವನ ಗುಡಿಯ ದ್ವಾರಕಾ ಹೋಟೇಲಿನಲ್ಲಿ ಕಳೆದ ೩೫ ವರ್ಷಗಳಿಂದ ಓಡಾಡಿಕೊಂಡು ಕರೀಂಖಾನರು ಬದುಕಿದರು" ಎಂದು ಪ್ರಜಾವಾಣಿ ಪತ್ರಿಕೆ ಕರೀಂಖಾನರ ಜೀವನವನ್ನು ಕಣ್ಣಾರೆ ಕಂಡು ವರದಿ ಮಾಡಿತು. ದ್ವಾರಕಾ ಹೋಟೇಲಿನಲ್ಲಿ ಅನೇಕ ಸಲ ಇಡ್ಲಿ ಸಾಂಬಾರು ತಿಂದು

ಮಲಗಿದ್ದೂ ಇದೆ. ಆದಿಲ್ಲದಿದ್ದರೆ ಅನೇಕ ವೇಳೆ ಉಪವಾಸ ಮಲಗಿದ್ದೂ ಇದೆ. ಇಂತಹ ಕನ್ನಡ ಕಣ್ಮಣಿ ಇಷ್ಟೊಂದು ವರುಷ ವ್ಯವಸ್ಥೆಯಿಲ್ಲದ ವಸತಿ ಗೃಹದಲ್ಲಿ ಇದ್ದರು ಎಂಬುದೇ ಕನ್ನಡಿಗರಿಗೆ ಅವಮಾನ.

'ಬಸವನ ಗುಡಿಯ ದ್ವಾರಕಾ ಹೊಟೇಲಿನಲ್ಲಿ ಮೆಟ್ಟಲಿಳಿದು ಬರುವಾಗ ಕಾಲು ಜಾರಿ ಬಿದ್ದು ಬಿಟ್ಟರು. ಕಾಲಿಗೆ ಪೆಟ್ಟಾಯಿತು. ಕೇಂಬ್ರಿಜ್ ನರ್ಸಿಂಗ್ ಹೋಂಗೆ ಸೇರಿಸಲಾಯಿತು. ಅಲ್ಲಿಂದ ಬೌರಿಂಗ್ ಆಸ್ಪತ್ರೆಗೆ ಒಯ್ಯಲಾಯಿತು. ಗಣೇಶೋತ್ಸವದ ನಿಮಿತ್ತ ತಿಪಟೂರಿನಲ್ಲಿ ಭಕ್ತರ ಬೇಡಿಕೆಯ ಮೇರೆಗೆ ಭಾಷಣವನ್ನು ಮಾಡುತ್ತಿರುವಾಗ ಕಾಲಿಗೊಂದು ಚಿಕ್ಕ ಹುಳ ಕಚ್ಚಿ ಗಡ್ಡೆ ಬೆಳೆಯುಂತಾಗಿ ಆಪರೇಷನ್ ಮಾಡುವಂತಾಗಲು ಪುನಃ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯನ್ನು ಸೇರುವಂತಾಯಿತು. ಗುಣ ಹೊಂದಿ ಪುನಃ ದ್ವಾರಕಾ ವಸತಿ ಗೃಹಕ್ಕೆ ಬಂದು ಬಿಟ್ಟರು. ಮತ್ತೊಮ್ಮೆ ಕಾಲು ಊದಿಕೊಂಡು ವ್ರಣ ಆಗಿ ಹೋಯಿತು. ಆ ಮಧ್ಯೆ ಗಾಯ ನಂಜಾಗಿ ರೋಗ ಉಲ್ಬಣವಾಯಿತು. ಆ ಸಮಯದಲ್ಲಿ ಅವರನ್ನು ಜವಾಬ್ದಾರಿಯಿಂದ ಆಸ್ಪತ್ರೆಗೆ ಸೇರಿಸಿದವರು ತನ್ನನ್ನು ಕರೀಂಖಾನರ ಮಾನಸ ಪುತ್ರರೆಂದು ಕರೆದುಕೊಳ್ಳುತಿತದ್ದ ಶ್ರೀಕೃಷ್ಣಮೂರ್ತಿ ಕಿಕ್ಕೇರಿಯವರು. ಆ ಸಮಯದಲ್ಲಿ ಆರೋಗ್ಯ ಮಂತ್ರಿಗಳಾಗಿ ಕೆಲಸ ನಿರ್ವಹಿಸುತ್ತಿರುವ ಪುಟ್ಟಸ್ವಾಮಿ ಗೌಡ ಕರೀಂಖಾನರನ್ನು ರಾಜ್ಯ ಸರಕಾರದ ವಿಶೇಷ ಅತಿಥಿಯಾಗಿ ಪರಿಗಣಿಸಿ ಅವರು ಅಲ್ಲಿ ಇರೋತನಕ ಎಲ್ಲ ರೀತಿಯ ಸೌಲಭ್ಯವನ್ನು ಉಚಿತವಾಗಿ ಕೊಡತಕ್ಕದ್ದು ಎಂದು ಆದೇಶ ಹೊರಡಿಸಿದರು. ಗುಣಮುಖ ಹೊಂದಿ ಇನ್ನೇನು ಓಡಾಟ ಪ್ರಾರಂಭಿಸಿದರು ಎನ್ನುವಾಗ ಆಟೋದಿಂದ ಬಿದ್ದು ಮಂಡಿ ಮುರಿದು ಹೋಯಿತು. ಆಗ ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳಾದ ಶ್ರೀ ಎಸ್. ಡಿ. ಜಯರಾಮ ಕರೀಂಖಾನರ ಆರೋಗ್ಯದ ಕಡೆ ಪೂರ್ಣ ಪ್ರಮಾಣದ ಗಮನ ಕೊಟ್ಟರು. ಆಸ್ಪತ್ರೆ ಪೂರ್ತಿ ಖರ್ಚು ಕೊಟ್ಟು ಆಸ್ಪತ್ರೆಯಿಂದ ತಮ್ಮ ಮನೆಗೆ ಕರೆದುಕೊಂಡು ಹೋಗಿ ಉಪಚರಿಸಿದರು. ಹೀಗೆ ಒಟ್ಟು ೧ ವರ್ಷ ೭ ತಿಂಗಳು ಆಸ್ಪತ್ರೆಯಲ್ಲಿರುವಂತಾಯಿತು. ಅಪಘಾತಗೊಂಡ ಕರೀಂಖಾನರಿಗೆ ಅಂದಿನ ಮಂತ್ರಿಗಳಾದ ಲೀಲಾದೇವಿ ಪ್ರಸಾದ ರಾಜ್ಯ ಸಚಿವೆ, ಕನ್ನಡ ಮತ್ತು ಸಾಂಸ್ಕೃತಿಕ ಇಲಾಖೆ, ಇವರು ಕರೀಂಖಾನರ ಔಷಧ ಉಪಚಾರಕ್ಕೆ ಧನ ಸಹಾಯ ಮಾಡಿದರು. ಅಂದಿನ ಮುಖ್ಯಮಂತ್ರಿ ಜೆ. ಎಚ್. ಪಟೇಲರವರು ಆಸ್ಪತ್ರೆ ಖರ್ಚಿಗೆಂದು ಕನ್ನಡದ ಆಸ್ತಿಯಾದ ಕರೀಂಖಾನರಿಗೆ , ೨೫,೦೦೦ ರೂ. ಚೆಕ್ಕನ್ನು ಕೊಡಿಸಿದರು. ನಿರೋಗಿಗಳಾಗಿದ್ದ ಇವರು ಅಪಘಾತದಿಂದ ಕೆಲವು ದಿನ ಆಸ್ಪತ್ರೆಯಲ್ಲಿ ಇರುವಂತಾಯಿತು. ಆರೋಗ್ಯ ಸಂಪೂರ್ಣವಾಗಿ ಹದಗೆಟ್ಟು ಹೋಗುವ ಸಂದರ್ಭದಲ್ಲಿ ಅವರ ತಮ್ಮನಾದ ಗಫಾರಖಾನರವರ ಮನೆಗೆ ಹೋಗಲು ನಿಶ್ಚಯಿಸಿದರು.

**ಆಸಕ್ತಿ ಹಾಗೂ ಅಭಿರುಚಿ :**

ಕರೀಂಖಾನರಿಗೆ ಸಮಸ್ತ ದೇಶದ ಜನರು ಶಿಸ್ತಿನಿಂದ ಬದುಕಿ ಆದರ್ಶಮಯವಾದ ಜೀವನ ಸಾಗಿಸಬೇಕೆಂಬುದಿತ್ತು. ಜಗದಲ್ಲಿಯ ಪ್ರತಿಯೊಬ್ಬರೂ ಅನ್ಯೋನ್ಯವಾಗಿ ಬಾಳಬೇಕೆಂದು ಆಶಿಸುತ್ತಿದ್ದರು. ನಿಸರ್ಗವನ್ನು ತುಂಬ ಪ್ರೀತಿಸುತ್ತಿದ್ದರು. ಗಿರಿ, ಕಾನನ, ಹೊಳೆ, ಹಳ್ಳಗಳನ್ನು ಕಂಡು ಆನಂದ ಪಡುತ್ತಿದ್ದರು. ನಿಸರ್ಗ ಸೌಂದರ್ಯದ ನೆಲವೀಡಾದ ಸಕಲೇಶಪುರದ ಬಗೆಗೆ ಇವರಿಗೆ ಅಪಾರ ಅಭಿಮಾನ. ಈಗಲೂ ಬೆಂಗಳೂರಿನ ಹಲಸೂರಿಗೆ ಅವರನ್ನು ಹುಡುಕಿಕೊಂಡು ಬರುವ ಸಕಲೇಶಪುರದ ಜನರ ಬಗ್ಗೆ ಎಲ್ಲಿಲ್ಲದ ಅಕ್ಕರೆ.

'ಆಡು ಮುಟ್ಟದ ಗಿಡವಿಲ್ಲ' ಎನ್ನುವಂತೆ ಸಾಹಿತ್ಯದ ಕ್ಷೇತ್ರದಲ್ಲಿ ಕೈಯಾಡಿಸಿದ ಕರೀಂಖಾನ ಸಂಸ್ಕೃತ ಭಾಷೆಯಲ್ಲಿ ಅದ್ಭುತ ಪ್ರವೀಣ್ಯತೆ ಹೊಂದಿದ್ದರು. ''ಅವರ ಸಂಸ್ಕೃತ ಪಾಂಡಿತ್ಯ ಉಚ್ಛ ಬ್ರಾಹ್ಮಣನ ಸಂಸ್ಕೃತ ಪಾಂಡಿತ್ಯಕ್ಕೆ ಸರಿಹೊಂದುವಂತಹದ್ದು'' ಎಂದು ಮಾಸ್ಟರ್ ಹಿರಣ್ಣಯ್ಯ ತಮ್ಮ ಸಂದರ್ಶನದಲ್ಲಿ ಹೇಳಿದರು. 'ಕರೀಂಖಾನರಿಗೆ ಒಂದೆ ಆಸೆ ಇತ್ತು. ತಾನು ನಾಲ್ಕು ಮಂದಿ ಶಿಷ್ಯರನ್ನು ತಯಾರು ಮಾಡಬೇಕು ಅವರಿಗೆ ಸಂಸ್ಕೃತ ಮತ್ತು ಕನ್ನಡ ಪಾಂಡಿತ್ಯ ಬರುವ ಹಾಗೆ ಮಾಡಬೇಕು. ತನ್ನ ನಂತರ ಅವರು ಒಳ್ಳೆಯ ಜ್ಞಾನ ಪಡೆದು ಒಳ್ಳೆಯ ಜ್ಞಾನಿಗಳಾಗಬೇಕೆಂಬುದಿತ್ತು. ಕೆಲವು ಶಿಷ್ಯರನ್ನು ಕರೆದು ತರಬೇತಿ ಕೊಡುತ್ತಿದ್ದರು. ಅವರೆಲ್ಲ ಕೆಲವು ದಿನ ಇದ್ದು ಹೊರಟು ಹೋಗುತ್ತಿದ್ದರು.'' ಎಂದು ಜಾನಪದ ಅಕಾಡಮಿಯ ಉದ್ಯೋಗಿ ಶ್ರೀಮತಿ ಎನ್. ನಾಗರತ್ನಾರವರು ಕರೀಂಖಾನರನ್ನು ಅತೀ ಹತ್ತಿರದಿಂದ ಕಂಡಿದ್ದರಿಂದ ಅವರ ಆಸಕ್ತಿ ಮತ್ತು ಅಭಿರುಚಿಯ ಕುರಿತು ಹೇಳುತ್ತಾರೆ.

ಕರೀಂಖಾನರು ಜಾನಪದ ಮತ್ತು ಯಕ್ಷಗಾನ ಅಕಾಡಮಿಯ ಅಧ್ಯಕ್ಷರಾಗಿದ್ದಾಗ ಅಕಾಡಮಿಯ ವತಿಯಿಂದ ಜಾನಪದ ಮೇಳಕ್ಕೆ ಹೋದಾಗ ಕೂಡಲ ಸಂಗಮಕ್ಕೆ ಹೋಗುವ ಸಮಯ ಒಮ್ಮೆ ಒದಗಿಬಂತು. ಅವರ ಜೊತೆ ಸದಸ್ಯರಾದ, ಕಾಳೇಗೌಡ ನಾಗವಾರ, ರಿಜಿಸ್ಟ್ರಾರ್ ಹಿ. ಚಿ. ಬೋರಲಿಂಗಯ್ಯ, ಫೋಟೋಗ್ರಾಫರ್ ಶ್ರೀನಿವಾಸಮೂರ್ತಿ, ಸದಸ್ಯರಾದ ಪ್ರೊ. ಜೀ. ಶಂ. ಪ ಹಾಗೂ ಅಕಾಡಮಿಯ ಉದ್ಯೋಗಿ ಶ್ರೀ ಶಿವಲಿಂಗಯ್ಯ, ಮುಂತಾದವರು ಜೊತೆಯಲ್ಲಿದ್ದರು. ಇವರೆಲ್ಲ ಕಾರಿಂದ ಇಳಿದು ಕೂಡಲಸಂಗಮವನ್ನು ನೋಡು ನೋಡುತ್ತಿದ್ದಂತೆ, ಕರೀಂಖಾನರು ಜುಬ್ಬಾ , ಪೈಜಾಮ ಕಳಚಿಟ್ಟು ನೀರಲ್ಲಿ ಧುಮುಕಿ ಬಿಟ್ಟರು. ೮೩. ವರ್ಷದ ಕರೀಂಖಾನರು ಒಳ್ಳೆ ಯುವಕರು ಈಜುವಂತೆ ಸಲೀಸಾಗಿ ಈಜತೊಡಗಿದರು. ಉಳಿದವರಿಗೆಲ್ಲ ಆಶ್ಚರ್ಯವೇ ಕಾದಿತ್ತು. ಹೀಗೆ ಉತ್ಸಾಹಿ ಕರೀಂಖಾನರಿಗೆ ಆ ಸಮಯದಲ್ಲಿ ವಯಸ್ಸು ಮುಖ್ಯವಾಗಿರಲಿಲ್ಲ, ಆಸಕ್ತಿ ಅಭಿರುಚಿಗಳು ಮುಖ್ಯವಾಗಿ ಕಂಡವು, ಎನ್ನುವುದನ್ನು ಕಾಣಬಹುದು. ಇವರು ಈಜಿದ ದೃಶ್ಯವನ್ನು ಶ್ರೀನಿವಾಸಮೂರ್ತಿಯವರು ಸೆರೆಹಿಡಿದ ಛಾಯಾಚಿತ್ರವನ್ನು ಈ ಗ್ರಂಥದಲ್ಲಿ ದಾಖಲಿಸಲಾಗಿದೆ. ನಾಟಕ ರಂಗದಲ್ಲಿ ಆಸಕ್ತಿ ಅಭಿರುಚಿ ಇರುವ ಕರೀಂಖಾನರು ಸುಬ್ಬಯ್ಯ ನಾಯ್ಡು ಕಂಪನಿಗೆ 'ನಿರ್ದೋಷಿ' ನಾಟಕವನ್ನು ಬರೆದುಕೊಟ್ಟು ಪ್ರಸಿದ್ಧಿ ಪಡೆದರು. ಅನೇಕ ನಾಟಕವನ್ನು ಆಡಿಸಿದರು. ಅಷ್ಟೇ ಅಲ್ಲ, ನಾಟಕ ತರಬೇತಿ ಕೊಡಲು ದೊಡ್ಡಬಳ್ಳಾಪುರದಲ್ಲಿ ವಸತಿ ಹೂಡಿದ ವಿಷಯವನ್ನು ತಿಳಿಸುತ್ತಾರೆ. ಈ ಹವ್ಯಾಸಿ ನಾಟಕದ ರಚನೆಯೇ ಮುಂದೆ ಹಲವಾರು ನಾಟಕವನ್ನು ಬರೆಯಲು ಕಾರಣವಾಯಿತು. ನಾಟಕ ರಚನೆಯ ಕಾಲಕ್ಕೆ ವೈವಿಧ್ಯಮಯ ಸಂಭಾಷಣೆಯನ್ನು ಬರೆಯುತ್ತಿರುವಾಗ ಸಿನೇಮಾ ಕ್ಷೇತ್ರದ ಕಡೆಗೂ ತಮ್ಮ ದೃಷ್ಟಿ ಹೊರಳಿಸಿದರು.

ಸಿನೆಮಾ ಕ್ಷೇತ್ರದಲ್ಲಿ ಕರೀಂಖಾನರನ್ನು ಮರೆಯುವಂತೆಯೇ ಇಲ್ಲ. 'ಸ್ವರ್ಣಗೌರಿ' 'ಬೇವು ಬೆಲ್ಲ' ಹಾಗೂ 'ರಾಜೇಶ್ವರಿ'ಯಂತಹ ಅಮೂಲ್ಯ ಚಿತ್ರವನ್ನು ಸೃಷ್ಟಿಸಿ ಸ್ವತಃ ಸಂಭಾಷಣೆಯನ್ನು ಬರೆದು ''ಬೆಸ್ಟ್ ರೈಟರ್ ಪ್ರಶಸ್ತಿಗೆ ಪಾತ್ರರಾದರು. ಶ್ರೀ ವೈ. ಕೆ. ಮುದ್ದುಕೃಷ್ಣರು ಹೇಳುವಂತೆ ''ದಕ್ಷಿಣ ಭಾರತದಲ್ಲಿ ಪ್ರವಾಸ ಮಾಡುವಾಗ ಕರೀಂಖಾನರಿಗೆ ಕಂಡದ್ದು ಅಪಾರವಾದ ಜಾನಪದ ಸಂಪತ್ತು. ಜಾನಪದ ಸಂಪತ್ತಿನಿಂದ ಅವರಿಗೆ ನಮ್ಮ ಸಾಹಿತ್ಯ ನಮ್ಮ ಭಾಷೆ, ನಮ್ಮ ದೇಶದ ಬಗ್ಗೆ

ಅಭಿಮಾನ ಹುಟ್ಟಿಕೊಂಡಿತು. ಜಾನಪದ ಹಾಡುಗಳನ್ನು ಕಲ್ಲಚ್ಚಿನಿಂದ ಮುದ್ರಿಸಿದ ಲೇಖನಗಳನ್ನು ಮನೆ ಮನೆಗೂ ಹೋಗಿ ಹಂಚಿ ಹಾಡುತ್ತಿದ್ದರು. ಆಗ ಮುದ್ರಣ ಅಷ್ಟೊಂದು ಅಭಿವೃದ್ಧಿ ಹೊಂದಿರಲಿಲ್ಲ. ಸಿನೆಮಾ ರಂಗದಲ್ಲಿ ಅದ್ಭುತ ಸೇವೆ ಮಾಡಲೂ ಕೂಡ ಜಾನಪದ ಸಾಹಿತ್ಯವೇ ಅವರಿಗೆ ಪ್ರೇರಣೆ ಕೊಟ್ಟಿತು. ಸ್ವತಃ ಕವಿ ಮನಸ್ಸಿನವರಾದ ಇವರು ಕಥೆ ಸಂಭಾಷಣೆಯನ್ನು ಚಿತ್ರಕ್ಕೆ ಬರೆಯುವಲ್ಲಿ ಆಸಕ್ತಿ ವಹಿಸಿದರು. 'ನಟವರ ಗಂಗಾಧರ' ಹಾಡು ಇಡೀ ಕರ್ನಾಟಕದಲ್ಲಿ ಚಲನಚಿತ್ರ ರಂಗ ಇರೋವರೆಗೂ ಇಂಥ ಗೀತೆಯನ್ನು ಬರೆಯೋಕೆ ಸಾಧ್ಯವೇ ಇಲ್ಲ. ನಮ್ಮ ತಂದೆ ಯಕ್ಷಗಾನ ಕಲಾವಿದರು ನಮ್ಮ ತಂದೆಯವರಿಗೆ ಬಹಳ ಬೇಕಾದ ಕರೀಂಖಾನರು ಸಕಲೇಶಪುರದಿಂದ ೧೮ ಕಿ.ಮೀ. ದೂರದಲ್ಲಿರುವ ನಮ್ಮ ಕುಗ್ರಾಮಕ್ಕೆ ಆಗಾಗ ಬಂದು, ಯಕ್ಷಗಾನ ನೋಡಲು ನಮ್ಮ ತಂದೆಯ ಜೊತೆಯಲ್ಲಿಯೇ ಹೋಗುತ್ತಿದ್ದರು.'' ಈ ಮಾತು ಕರೀಂಖಾನರಲ್ಲಿ ಅಭಿರುಚಿಯನ್ನು ಹುಟ್ಟಿಸಿದ್ದು ಕರ್ನಾಟಕದ ಸಾಂಸ್ಕೃತಿಕ ಕ್ಷೇತ್ರವಾಗಿತ್ತು ಎನ್ನುವುದು ಮನನೀಯ. ಕರೀಂಖಾನರ ವ್ಯಕ್ತಿತ್ವ ಸ್ವಾರಸ್ಯವಾದದ್ದು. ಸಾಂಸ್ಕೃತಿಕ ಗೀಳು ಅವರ ಬಾಳುವೆಯನ್ನೆಲ್ಲ ಒಳಗೊಂಡಿರುವಂಥಹ ವ್ಯಕ್ತಿತ್ವ.

ಕರ್ನಾಟಕದ ಸಾಂಸ್ಕೃತಿಕ ಬದುಕಿಗಾಗಿ ಜೀವವನ್ನು ತೇಯುದ್ಧುಕೊಳ್ಳುತ್ತಿದ್ದ ಕರೀಂಖಾನರಿಗೆ ಕರ್ನಾಟಕದ ಜಾನಪದ ಮತ್ತು ಯಕ್ಷಗಾನ ಅಕಾಡಮಿಯ ಅಧ್ಯಕ್ಷರಾಗಿ ಕೆಲಸ ಮಾಡುವ ಸುವರ್ಣಾವಕಾಶ ದೊರೆತದ್ದು ಕನ್ನಡಿಗರ ಭಾಗ್ಯವೆಂದೇ ಹೇಳಬೇಕು. ಇಲ್ಲಿಯೂ ಸಾಂಸ್ಕೃತಿಕ ನೇತಾರರಾಗಿ ತಮ್ಮ ಅಭಿರುಚಿಯನ್ನು ಸ್ಪಷ್ಟಪಡಿಸಿದರು. ಬ್ರಹ್ಮಚರ್ಯ, ಅಪರಿ-ಗ್ರಹಮತ, ಸಾಂಸ್ಕೃತಿಕ ಬದುಕು, ತಪಸ್ಸು ಎಂದ ಮಾತ್ರಕ್ಕೆ ಪ್ರಾಪಂಚಿಕ ವಿಚಾರಗಳೆಲ್ಲ ವಿರಕ್ತಿ ಎನ್ನುವ ಹಾಗಿಲ್ಲ. ಊಟ, ತಿಂಡಿ, ನಚ್ಚು, ಉಡುಗೆ, ತೊಡುಗೆ, ಶಿಸ್ತು ಚಲನಚಿತ್ರನೋಟ, ಚಲುವಿನ ತಾಣಗಳಲ್ಲಿ ವಿಹಾರ ಮೊದಲಾದವೆಲ್ಲ ಅವರಲ್ಲಿ ವಿಶೇಷ. ಬದುಕಿನ ಸ್ವಾರಸ್ಯ ತಿರಸ್ಕರಿಸಿದವರಲ್ಲ. ತಮಗೆ ರುಚಿಸುವಂತಹ ಕವಿ ಸಮ್ಮೇಳನ, ಉಪನ್ಯಾಸ, ಧರ್ಮ ಸಮ್ಮೇಳನ ಮುಂತಾದ ಕಾರ್ಯಕ್ರಮ ಎಷ್ಟೇ ದೂರವಾಗಲೀ, ಹೋಗುವರು ಸಂಗೀತ ಕಛೇರಿಗೆ ತಪ್ಪದೇ ಹಾಜರಿರುತ್ತಿದ್ದರು. ತಮ್ಮಷ್ಟಕ್ಕೆ ತಾವೇ ಹಾಡು ಹಾಡುತ್ತ ಗುಣುಗುಡುವುದು ಇತ್ತು. ಇವರಿಗೆ ಕರ್ನಾಟಕದ ಸಂಗೀತದಲ್ಲಿ ಆಸಕ್ತಿ, ಹಿಂದೂಸ್ಥಾನಿ ಸಂಗೀತವನ್ನು ಕೇಳುವರು. ಬಿಡಾರದ ಕೃಷ್ಣಪ್ಪನವರು, ಟೈಗರ್ ವರದಾಚಾರ್ಯರು, ಮುತ್ತಯ್ಯ ಭಾಗವತರು, ವಾಸುದೇವ ಚಾರ್ಯರು, ವೀಣೆ ಧನಮ್ಮಳ್ ಇವರ ಸಂಗೀತವೆಂದರೆ ಇವರಿಗೆ ಸೊಗಸು. ತಾವು ಪಂಡಿತ ರವಿಶಂಕರ, ರಾಮಾನುಜ ಅಯ್ಯಂಗಾರವರ ಸಂಗೀತ ಕೇಳಿ ಸಂತಸಗೊಂಡಿದ್ದು ಇದೆ. ತಾವೇ ರಚಿಸಿದ ಹಾಡುಗಳಿಗೆ ತಾವೇ ರಾಗ ಸಂಯೋಜನೆ ಮಾಡಿ ಕೊಟ್ಟಿದ್ದೂ ಇದೆ. ಕರೀಂಖಾನರ ಸಮಕಾಲೀನರೆಂದರೆ ಶ್ರೀ ಎನ್. ಲಕ್ಷ್ಮಣರಾವ, ಪ್ರೊ. ಎ. ಎನ್. ಮೂರ್ತಿರಾವ, ನಿಟ್ಟೂರು ಶ್ರೀನಿವಾಸ ರಾಯರು, ಶ್ರೀ ಎಸ್. ನಿಜಲಿಂಗಪ್ಪ, ಶ್ರೀ ಸುಧಾಕರ ಚತುರ್ವೇದಿ, ಡಾ. ಎಂ. ಸಿ. ಮೋದಿ, ಶ್ರೀ ಎಚ್. ಎಲ್. ನಾಗೇಗೌಡ, ಆರ್. ಕೆ. ಶ್ರೀಕಂಠನ್, ಪ್ರೊ. ಸತೀಶ ಪವನ ಇವರೆಲ್ಲ ಕರೀಂಖಾನರ ಆಪ್ತರಾಗಿದ್ದರು.

ಕರೀಂಖಾನರು ಸ್ವತಃ ಜಾನಪದ ಸಂಗ್ರಹಕಾರರಾಗಿದ್ದರು. ಅಷ್ಟೇ ಅಲ್ಲದೇ ಸಾಹಿತಿಗಳಾಗಿದ್ದರು. ಸಾಹಿತಿ ಗೆಳೆಯರ ದೊಡ್ಡ ಬಳಗವೇ ಇವರಿಗಿತ್ತು. ಕುವೆಂಪು, ವಿ. ಸೀತಾರಾಮಯ್ಯ, ಡಿ. ವಿ. ಗುಂಡಪ್ಪ ಎ. ಆರ್. ಕೃಷ್ಣಶಾಸ್ತ್ರಿ ಬೇಂದ್ರೆ, ಮಾಸ್ತಿ ವೆಂಕಟೇಶ ಅಯ್ಯಂಗಾರ, ಡಾ. ಗೋಕಾಕ

ಮುಂತಾದವರ ಮೇಲೆ ತುಂಬಾ ಗೌರವವಿತ್ತು. ಡಾ. ಶಿವರಾಮ ಕಾರಂತ, ಡಾ. ಹಾಮಾ, ನಾಯಕ, ಶಂಭಾ ಜೋಷಿ, ಎನ್. ಎಸ್. ಲಕ್ಷ್ಮೀನಾರಾಯಣಭಟ್, ಅನಕೃ, ಟಿ. ಪಿ. ಕೈಲಾಸಂ, ರಂಗನಾಥ ದಿವಾಕರ, ಕಾದ್ರಿ ಶಾಮಣ್ಣ, ಪಿ. ಲಂಕೇಶ, ಬಸವರಾಜ ಕಟ್ಟೀಮನಿ, ಜಿ. ಎಸ್. ಶಿವರುದ್ರಪ್ಪ ಚೆನ್ನವೀರ ಕಣವಿ, ಸೋಮಶೇಖರ ಇಮ್ರಾಪುರ, ಡಾ. ಆರ್. ಸಿ. ಹಿರೇಮಠ , ಚಿದಾನಂದ ಮೂರ್ತಿ, ಪಾಟೀಲ ಪುಟ್ಟಪ್ಪ, ಚಂದ್ರಶೇಖರ ಕಂಬಾರ, ಯಶವಂತ ಚಿತ್ತಾಲ್, ಮಾಸ್ಟರ್ ಹಿರಣ್ಣಯ್ಯ, ಡಾ. ದೊಡ್ಡ ರಂಗೇಗೌಡ, ಗೌರೀಶ ಕಾಯ್ಕಿಣಿ, ದಿನಕರ ದೇಸಾಯಿ, ರಂ. ಶ್ರೀ ಮುಗಳಿ, ಮುಂತಾದವರು ಕರೀಂಖಾನರ ಸಾಹಿತಿ ಮಿತ್ರರಾಗಿದ್ದರು.

ಸಕಲೇಶಪುರದ ಸರ್ವಶ್ರೀ ಶ್ರೀನಿವಾಸ ಎಂಬ ವೈಷ್ಣವ ಕವಿ ಶ್ರೀ ಶ್ರೀ ಸರಸ್ವತಿ ಸ್ವಾಮಿಗಳು, ಗೋರೂರು ರಾಮಸ್ವಾಮಿ ಅಯ್ಯಂಗಾರ, ಮತ್ತಿಘಟ್ಟ ಕೃಷ್ಣಮೂರ್ತಿ, ಸಿ. ಆರ್. ಶ್ರೀನಿವಾಸ ಅಯ್ಯಂಗಾರ, ಮಿರ್ಜಾ ಇಸ್ಮಾಯಿಲ್, ಹಾರ್ನಳ್ಳಿ ರಾಮಸ್ವಾಮಿಯವರು, ಡಾ. ಎಸ್. ಎಲ್. ಭೈರಪ್ಪ ಎಚ್. ವಿ. ರಮೇಶ, ಡಾ. ಎಚ್. ಜೆ. ಲಕ್ಕಪ್ಪಗೌಡ, ಕೊಡಗಿನ ಗೌರಮ್ಮ ಮತ್ತು ಎಚ್. ಎಸ್. ಪಾರ್ವತಿಯವರು ಮುಂತಾದ ಸಾಹಿತಿಗಳು ಕರೀಂಖಾನರ ಸಂಪರ್ಕ ಹೊಂದಿದ್ದರು ಎಂಬುದು ವಿಶೇಷ ಸಂಗತಿಯಾಗಿದೆ.

ಇವರ 'ಕನ್ನಡ ಜನಪದ ಗೀತೆಗಳು' ಎಂಬ ಹಾಡಿನ ಪುಸ್ತಕ ಎರಡು ಸಂಪುಟಗಳಾಗಿ ಹೊರಬಂತು. 'ಕನ್ನಡ ನಾಡಿನ ಸಂಸ್ಕೃತಿ ಹಾಗೂ ಸಾಹಿತ್ಯದ ಚರಿತ್ರೆಯ ಅಭ್ಯಾಸಕ್ಕೆ ಜಾನಪದ ಗೀತೆಗಳ ಕೊಡುಗೆ ಅಪಾರವಾದದ್ದು ತಲೆತಲಾಂತರದಿಂದ ಕೇವಲ ಹಳ್ಳಿಗರ ಬಾಯಲ್ಲಿ ಉಳಿದುಕೊಂಡು ಜೀವಂತವಾಗಿದ್ದ ಅಷ್ಟಿಷ್ಟು ಗೀತೆಗಳನ್ನು ಭಾರತವು ಸ್ವಾತಂತ್ರ್ಯವಾಗುವ ಮುನ್ನಾ ದಿನಗಳಿಂದಲೂ ಯಾವ ಸಂಘ ಸಂಸ್ಥೆಯ, ಸರಕಾರದ ಧನ ಸಹಾಯ ಇಲ್ಲದಿದ್ದರೂ ಕೂಡ, ಜಾನಪದ ಸಾಹಿತ್ಯದಲ್ಲಿ ಅಭಿರುಚಿ ಬೆಳೆಸಿಕೊಂಡಿದ್ದರಿಂದ ಈ ಕ್ಷೇತ್ರದಲ್ಲಿ ಆಸಕ್ತಿ ಹೊಂದಿದ್ದರು. ಜಾನಪದ ಜ್ಞಾನ ಸಂಪತ್ತಿಗೆ ಮಾರುಹೋದರು. ಹಳ್ಳಿ ಹಳ್ಳಿಗಳಲ್ಲಿ ಕಾಲ್ನಡಿಗೆಯಿಂದ ತಿರುಗಾಡಿ ಅವರೊಂದಿಗೆ ಬೆರೆತು, ಅವರ ಮನವೊಲಿಸಿ ಹಾಡಿಸಿ, ಬರೆದಿಟ್ಟುಕೊಂಡು ಇಂದು ನಮಗೆ ಈ ರೂಪದಲ್ಲಿ ಉಳಿಸಿಕೊಟ್ಟಿರುವ ಅಸದೃಶ ಸಾಹಸ ಕೀರ್ತಿ ಶ್ರೀಮಾನ್ ಕರೀಂಖಾನರಿಗೆ ಸಲ್ಲುತ್ತದೆ. ಇವರ ಅಂತಃಕರಣದ ಅಭಿಮಾನದ 'ಕನ್ನಡ ಜಾನಪದ ಗೀತೆಗಳು' ಮನೆ ಮನೆಗಳಲ್ಲೂ ಬೆಳಗುವ ಒಂದು ದಿವ್ಯವಾದ ಕರ್ನಾಟಕ ಸಾಂಸ್ಕೃತಿಕ ಜ್ಯೋತಿಯಾಗಿದೆ. ಶಾಸ್ತ್ರೀಯ ಸಂಗೀತದಲ್ಲಿ ಅಭಿರುಚಿ ಇರುವ ಕರೀಂಖಾನರು ತಾವೇ ವೀಣೆಯನ್ನು ನುಡಿಸಿದ್ದೂ ಇದೆ. ಕೋಲಾರದ ಪಾಯಪ್ಪನವರ ಹತ್ತಿರ ಹವ್ಯಾಸಕ್ಕಾಗಿ ಸಂಗೀತ ಪಾಠ ಹೇಳಿಸಿಕೊಂಡಿದ್ದರು. ಆದರೆ ಇವೆಲ್ಲವೂ ತಾತ್ಕಾಲಿಕವಾದ ಅಭ್ಯಾಸಗಳಾಗಿದ್ದವು. ಸಿನೆಮಾ ಹಾಗೂ ಜಾನಪದ ಹಾಡುಗಳನ್ನು ಹಾಡುವಾಗ, ಗೀತೆಗಳನ್ನು ಸಂಯೋಜಿಸುವಾಗ, ಬಳಕೆಯಾಗುತ್ತಿದ್ದ ಈ ವಿದ್ಯೆಯು ಆರ್ಥಿಕ ಮುಗ್ಗಟ್ಟಿನಿಂದ ಚೇತರಿಸಿಕೊಳ್ಳಲಾರದೇ ಹೋಯಿತು. ಇವರು ಯಾವಾಗಲೂ ತಮಗೆನಿಸಿದ ಹಾಡುಗಳನ್ನು ಗುನುಗುತ್ತಲೇ ಇರುತ್ತಿದ್ದರು. ನೋವನ್ನು ಮರೆತು ಆನಂದವನ್ನು ಅನುಭವಿಸುವ ಅಭಿರುಚಿ ಅದಾಗಿದ್ದಿರಬೇಕು.

ಇವರ ಲೇಖನಗಳು 'ಪ್ರಬುದ್ಧ ಕರ್ನಾಟಕ' ಹಾಗೂ 'ತಾಯ್ನಾಡು' ಎಂಬ ಪತ್ರಿಕೆಯಲ್ಲಿ ಪ್ರಕಟಗೊಳ್ಳುತ್ತಿದ್ದವು. ಪ್ರೊ. ಎ. ಆರ್. ಕೃಷ್ಣಶಾಸ್ತ್ರಿ ಇವರ ಲೇಖನಗಳನ್ನು ತುಂಬಾ

ಮೆಚ್ಚಿಕೊಂಡಿದ್ದರು. ಕರೀಂಖಾನರು ರಚಿಸಿದ ಎಷ್ಟೋ ಲೇಖನಗಳನ್ನು, ಪುಸ್ತಕಗಳನ್ನು ಸಂಗ್ರಹಿಸಿಡುವ ಕಾರ್ಯವನ್ನು ಯಾರೂ ಮಾಡಿರಲಿಲ್ಲ. ಅದಕ್ಕಾಗಿ ಇವರ ಎಲ್ಲ ಬರಹಗಳು ನಮಗೆ ಉಪಲಬ್ಧವಾಗುವುದಿಲ್ಲ. ಕೆಲವು ಲೇಖನಗಳು, ಹಸ್ತಪತ್ರಿಕೆಗಳಲ್ಲಿ ಉಳಿದುಹೋದವೇ ಹೊರತು ಅಚ್ಚುಗೊಳ್ಳಲಿಲ್ಲ.

ಒಬ್ಬ ಸಾಹಿತಿಯಾಗಿ ಕರೀಂಖಾನರು ಕವನಗಳನ್ನು ರಚನೆ ಮಾಡುವುದಕ್ಕಿಂತಲೂ ಹಾಡುಗಳ ಕಡೆಗೆ ಹೆಚ್ಚು ಗಮನಕೊಟ್ಟರು. ಇವರ ಹಾಡುಗಳು ಸಾಧ್ಯವಾದ ಮಟ್ಟಿಗೆ ಸಂಗೀತ ಮಯವಾದ ಶಬ್ದಗಳಿಂದ ಕೂಡಿರುತ್ತಿದ್ದವು. ಕರ್ಣಾನಂದ ನೀಡುತ್ತಿದ್ದವು. ಹಾಡು ಇಂಪಾಗಿರಬೇಕು ಎಂಬ ದೃಷ್ಟಿಯಿಂದ ರಚನೆ ಮಾಡಿದರು. ರಾಘವೇಂದ್ರ ಸ್ವಾಮಿಗಳ ಮೇಲೆ ಬರೆದಿರೋ ಒಂದು ಹಾಡಿನಲ್ಲಿ-

'ಭುವನ ಫಲಕದ ಮೇಲೆ ಮೂಡಿದ
ಶರದ್ ಚಂದ್ರ ತುಷಾರ ಬೃಂದಾವನ್'

ಹೀಗೆ ಭಕ್ತಾಗ್ರೇಸರರಾದ ಇವರು ತಮ್ಮ ಭಕ್ತಿ ಭಾವಗಳಿಂದ ತುಂಬಿದ ಹಾಡುಗಳನ್ನು ಭಕ್ತ ಕೋಟಿಗೆ ನೀಡಿದರು. ಈ ಹಾಡುಗಳೆಲ್ಲ ಧ್ವನಿಸುರುಳಿಯಲ್ಲಿ ಕರ್ನಾಟಕದ ಜನತೆಗೆ ಹಂಚಿ ಹೋಗಿವೆ. ಇಂತಹ ಉತ್ಕೃಷ್ಟ ಹಾಡುಗಳೆಲ್ಲ ಹೃದಯಾಂತರಾಳದಿಂದ ಹೊರ ಹೊಮ್ಮಲು ಇವರ ಆಸಕ್ತಿ , ಅಭಿರುಚಿಗಳೇ ಕಾರಣವಾದವು. ಹೀಗೆ ಇವರು ಗವಿರಂಗಾಪುರದ ಮೇಲೆ, ಶ್ರೀ ರಾಘವೇಂದ್ರರ ಮೇಲೆ, ವೆಂಕಟೇಶನ ಮೇಲೆ, ನಾರಾಯಣನ ಮೇಲೆ, ಮೂಕಾಂಬಿಕೆಯ ಮೇಲೆ ಹೀಗೆ ಹತ್ತು ಹಲವು ಭಕ್ತಿಯ ಹಾಡುಗಳನ್ನು ಬರೆದು ಸಂತೋಷಗೊಂಡರು. ಕರ್ನಾಟಕದ ಏಕೀಕರಣಕ್ಕಾಗಿ ಇವರು ಅತೀವವಾಗಿ ಹಂಬಲಿಸಿ, ನಾಡಿನ ಉದ್ದಗಲ ಪೂರ್ತಿ ಅಡ್ಡಾಡಿ ಸಾವಿರಾರು ಸಭೆಗಳಲ್ಲಿ ತಮ್ಮ ಹಾಡುಗಾರಿಕೆ ಮತ್ತು ಮಹತ್ವ ಪೂರ್ಣವಾದ ಉಪನ್ಯಾಸಗಳ ಮೂಲಕ ಕನ್ನಡಿಗರನ್ನು ಎಚ್ಚರಿಸಿದರು. ಜಾನಪದ ಗೀತೆಗಳನ್ನು ಸಂಗ್ರಹಿಸಿ, ಪ್ರಕಟಿಸಿ, ಹಾಡುತ್ತ ಸಮಯವನ್ನು ಸದುಪಯೋಗಪಡಿಸಿಕೊಳ್ಳುತ್ತಿದ್ದರು. ಅತ್ಯಂತ ಜನಪ್ರಿಯವಾಗಿದ್ದ ಇವರ ಕೃತಿಗಳನ್ನು ತಿಪಟೂರಿನ ಕಪಟಿ ಪ್ರಕಾಶಕನೊಬ್ಬ ೪೦,೦೦೦ ಪ್ರತಿಗಳನ್ನು ತಾನೇ ಮುದ್ರಿಸಿಕೊಂಡು ಖಾನರ ವಿರುದ್ಧ ಮಾರಾಟಕ್ಕೆ ಇಳಿದನು. ಈ ಪ್ರಕಾಶಕನನ್ನು ನ್ಯಾಯಾಲಯಕ್ಕೆ ಎಳೆದು ದಾವೆ ಹೂಡಲು ಹಣವಿಲ್ಲದೇ ಕೊನೆಗೆ ಹೊಟ್ಟೆಪಾಡಿಗಾಗಿ ಚಿತ್ರರಂಗಕ್ಕೆ ಕಾಲಿಟ್ಟು ಅಲ್ಲಿ ಕತೆ, ಚಿತ್ರಕತೆ, ಸಂಭಾಷಣೆ, ಹಾಡುಗಳ ರಚನೆಯಲ್ಲಿ ತೊಡಗಿದರು. ಇದಕ್ಕೂ ಮೊದಲು ನಮ್ಮ ಹಳೆಯ ರಂಗಭೂಮಿ ಸಂಬಂಧದ ಹೇರಳ ಅನುಭವವನ್ನು ಹೊಂದಿದ್ದ ಇವರು ಹಲವಾರು ನಾಟಕಗಳನ್ನು ರಚಿಸಿ ನಿರ್ದೇಶಿಸಿದರು.

## ಆಚಾರ ನಿಯಮ :

ಮುಸ್ಲಿಂವಂಶದಲ್ಲಿ ಹುಟ್ಟಿದರೂ ಸರ್ವಧರ್ಮಗಳ ಬಗ್ಗೆ ಕರೀಂಖಾನರಿಗೆ ಅಪರಿಮಿತವಾದ ನಂಬಿಕೆ. ಇವರ ಆಲೋಚನೆ, ಮಾತುಕತೆ, ಬರವಣಿಗೆ, ಉಡುಪು, ನೀತಿ,ನಿಯಮ ಎಲ್ಲದರಲ್ಲೂ ಇವರ ಮುದ್ರೆ ಕಾಣುತ್ತಿತ್ತು. ಜನಾಂಗಗಳ ಭೇದವಾಗಲಿ, ಜಾತಿ ಭೇದವಾಗಲೀ, ಅವರ ಕಣ್ಣಿಗೆ ಪರೆಯಾಗಿರಲಿಲ್ಲ. ಇವರ ದೃಷ್ಟಿ ನಿಚ್ಚಳ, ನೇರ, ಕ್ರೈಸ್ತ ಧರ್ಮದ ಬಗೆಗೆ ಮಾತು ಬಂದಾಗ 'ಏಸು ಕ್ರಿಸ್ತ ಮಹಾನುಭಾವ, ಹಿಂದೂ ಧರ್ಮದ ಬಗ್ಗೆ ಮಾತು ಬಂದರೆ ಕೃಷ್ಣ ಮಹಾನುಭಾವ, ಮುಸ್ಲಿಂ ಧರ್ಮದ ಬಗ್ಗೆ ಮಾತು ಬಂದರೆ ಪೈಗಂಬರ ಮಹಾನುಭಾವ' ಎನ್ನುತ್ತಿದ್ದರು.

ಮುಸ್ಲಿಂ ಗುರುಗಳನ್ನು, ಧರ್ಮವನ್ನು ಪ್ರೀತಿಸುವ ಕರೀಂಖಾನರು ಹಿಂದೂ ಧರ್ಮವನ್ನು, ಗುರುಗಳನ್ನು ಆರಾಧಿಸುತ್ತಾರೆ. 'ರಂಭಾಪುರಿ' 'ಕೊಡ್ಲಿ' 'ಶೃಂಗೇರಿ' ಉಡುಪಿ, ಆದಮಾರು ಸ್ವಾಮಿಗಳಿಗೆ ಕರೀಂಖಾನರು ಹಾಡಿ ಅರ್ಪಿಸಿರುವ ಸ್ವಾಗತ ಗೀತೆಗಳು ಇವರ ಭಾವೈಕ್ಯತೆ, ಸರ್ವಧರ್ಮ ಪ್ರೇಮಕ್ಕೆ ಉಜ್ವಲ ಸಂಕೇತವಾಗಿದೆ.

ಇವರು ಮಂದಿರ, ಮಸೀದಿಗೂ ಹೋಗುತ್ತಿದ್ದರು. ತೀರ್ಥಯಾತ್ರೆ ಯಾವುದು ಇಲ್ಲ. ಮನೆಯಲ್ಲಿ ಎರಡು ಹೊತ್ತು ಸಂಧ್ಯಾವಂದನೆ, ಶ್ರೀ ಸೂಕ್ತ, ಪುರುಷ ಸೂಕ್ತ, ಮೊದಲಾದವುಗಳ ಪಠಣೆಯಲ್ಲಿ ವಿಶೇಷ ಆಸಕ್ತಿ ಇತ್ತು. ನಮಾಜ ಮಾಡುವಲ್ಲಿ ಆಸಕ್ತಿ ಇತ್ತು. ಬೇರೆಯವರಿಗೆ ನೀವು ಮಾಡಿ ಎಂದು ಒತ್ತಾಯ ಮಾಡುತ್ತಿರಲಿಲ್ಲ. ನೇಮ ಏನಿದ್ದರೂ ತಮ್ಮ ಮಟ್ಟಿಗೆ, ಯಾವ ದೇವರನ್ನೂ ತಿರಸ್ಕಾರದಿಂದ ನೋಡಲಿಲ್ಲ. ಜಾತಿ ಮತಗಳ ಬಗೆಗೆ ಅವರದು ಬಹು ಸುಂದರವಾದ ದೃಷ್ಟಿ. ಯಾವುದಕ್ಕೆ ಆಗಲಿ ಪರಿಗಣಿಸಬೇಕಾದದ್ದು ಯೋಗ್ಯತೆಯನ್ನು, ಜಾತಿ ಮತವನ್ನಲ್ಲ ಎನ್ನುವುದು ಅವರ ನಿಲುವು. ಇಂಥ ಹೊತ್ತಿನಲ್ಲಿ ಅವರು ಹಲವರಿಂದ ತೀವ್ರವಾದ ವಿರೋಧವನ್ನು ಅನುಭವಿಸಬೇಕಾಗಿ ಬರುತ್ತಿತ್ತು. ಅವರು ಅದನ್ನೆಲ್ಲ ಗಮನಿಸಲಾರದಷ್ಟು ತಮ್ಮ ಕರ್ತವ್ಯದಲ್ಲಿ ಮುಳುಗಿ ಹೋಗಿದ್ದರು.

'ಕರೀಂಖಾನರ ವಿಷಯ ಬಂದಾಗ, ಕರ್ನಾಟಕದ ಜನ, ಕನ್ನಡಿಗರು, ಒಬ್ಬ ಮನುಷ್ಯ ಕೂಡ ಅವರೊಬ್ಬ ಮುಸ್ಲಿಂ ಎಂದು ಯೋಚನೆ ಮಾಡಿದ್ದೇ ಇಲ್ಲಾ' ಎಂಬ ಮಾತು ಕರೀಂಖಾನರ ಜಾತ್ಯತೀತ ನಿಲುವನ್ನು ಸ್ಪಷ್ಟಪಡಿಸುತ್ತದೆ. ''ಕರೀಂಖಾನರಂಥ ವ್ಯಕ್ತಿಗಳು ಅಪರೂಪ. ಎಲ್ಲಾ ಧರ್ಮವನ್ನು ಅತ್ಯಂತ ಗೌರವದಿಂದ ಕಾಣುತ್ತಾರೆ'' ಎಂಬ ಮಾತು ಕರೀಂಖಾನರ ಸ್ವಭಾವಕ್ಕೆ ತುಕ್ಕಾದಾಗ ಮಾತಾಗಿದೆ.

ಕರೀಂಖಾನರು ಪರಮಾತ್ಮನ ಕುರಿತು ಹೇಳುತ್ತ, ''ಪರಮಾತ್ಮನು ಕೃಪಾಮಯನು, ದಯಾಸಾಗರನು ಆತನ ಆಶಯವೇನು ? ಮಾನವ ಜನಾಂಗದವರ ಮುಖೇನ ಜಗತ್ತಿನಲ್ಲಿ ಸುಖ ಶಾಂತಿಯನ್ನು ಅನುಷ್ಠಾನಗೊಳಿಸುವುದು, ಸುಖ ಸಂತೋಷಗಳನ್ನು ನೆಲೆಗೊಳಿಸುವುದು. ಆದರೆ ಮಾನವನು ಪರಮಾತ್ಮನ ಆಶಯಗಳನ್ನು ಭಗ್ನಗೊಳಿಸುವಾಗ, ಬಲಿಷ್ಠರು ಕನಿಷ್ಠರನ್ನು ನಿಗ್ರಹಿಸುವಾಗ, ಬಲ್ಲಿದರು ಬಡವರನ್ನು ತುಳಿಯುವಾಗ, ನಿರೋಗಿಗಳು ರೋಗಿಗಳನ್ನು ಅಲಕ್ಷಿಸುವಾಗ, ಸುಖಿಗಳು ದುಃಖಿಗಳನ್ನು ಪೀಡಿಸುವಾಗ, ದುರಾತ್ಮರು ಧರ್ಮಾತ್ಮರನ್ನು ಹಿಂಸಿಸುವಾಗ, ದೇಶದ್ರೋಹಿಗಳು ದೇಶಭಕ್ತರಿಗೆ ಸಂಕಟಪೀಯುವಾಗ, ಜಗತ್ತಿನಲ್ಲಿ ಶಾಂತಿ, ಸಂವೇದನೆಗಳನ್ನು ನೆಲೆಗೊಳಿಸುವರಾರು? ದುಃಖಿತರ ದೀನ ದೃಷ್ಟಿಯು ನೇರವಾಗಿ ಪರಮಾತ್ಮನೆಡೆಗೆ ಹರಿಯುವುದು. ಅವರ ರಕ್ಷಣೆಗಾಗಿ ಲೋಕ ಶರಣ್ಯನಾದ ಪರಮಾತ್ಮನಿಗೆ ಶರಣು ಹೋಗುವರು. ಭಕ್ತ ವತ್ಸಲನಾದ ಪರಮಾತ್ಮನು ಅಜ್ಞಾನಿ ಮಾನವರೆಡೆಗೆ ತನ್ನ ಕೃಪಾಕಟಾಕ್ಷವನ್ನು ಬೀರುವನು. ಜಗದ್ರಕ್ಷಕ ನಿರಂಜನನ ಆಜ್ಞೆಯನ್ನು ಧರಿಸಿ, ಧರ್ಮ ಸಂಸ್ಥಾಪನಾರ್ಥವಾಗಿ ದೇವ ಪ್ರತಿನಿಧಿಗಳು ಈ ಜಗತ್ತಿನಲ್ಲಿ ಅವತರಿಸುವರು. ಅವರ ರೂಪಿನಲ್ಲಿ ಮಾನವರು, ಮಾನವರೊಡನೆಯೇ ಹುಟ್ಟಿ ಬೆಳೆದವರು. ಆದರೆ ನೀತಿಯಲ್ಲಿ ಅಮರರು. ಜ್ಞಾನ ಸಂಪತ್ತಿನಲ್ಲೂ, ಶಕ್ತಿಯಲ್ಲೂ, ಸಾಮಾನ್ಯ ಮಾನವರಿಗಿಂತ ದಶಪಾಲು ಅಧಿಕರು. ಆದರೂ ಅವರೆಂದಿಗೂ ಅನೃತವನ್ನು ನುಡಿಯರು. ಅನ್ಯಾಯಕ್ಕೆ ಕರಚಾಚರು. ಧರ್ಮಚಾರದಿಂದ ವಿರುಪರಾಗರು, ಧರ್ಮೋತ್ಥಾನಕ್ಕಾಗಿ, ಸತ್ಯ ಪ್ರತಿಪಾದನೆಗಾಗಿ, ಜಗತ್ಕಲ್ಯಾಣಕ್ಕಾಗಿ, ದೇಹಕ್ರಾಂತಿಯನ್ನು, ಕಲಾಭಾವವನ್ನೂ, ಪ್ರಾಣಲೋಭವನ್ನೂ, ಜನನಿಂದೆಯನ್ನು,

ವಿಪತ್ಪರಂಪರೆಗಳನ್ನೂ, ನಿರ್ಲಕ್ಷಿಸಿ ಅಹರ್ನಿಶಿ ಶ್ರಮಿಸುವವರು. ಅವರು ಮುಮುಕ್ಷುಗಳಿಗೆ ಮೋಕ್ಷ ಪಥವನ್ನು ತೋರಿಸುವವರು. ಧರ್ಮ ಪಥ ಭ್ರಷ್ಟಾಂಧರಿಗೆ, ಧಾರ್ಮಿಕ ಮಾರ್ಗವನ್ನು ದಿಗ್ದರ್ಶಿಸುವವರು. ಉಚ್ಚನೀಚಗಳ ತುಲನೆಯುಳ್ಳ ವಿಕಲ ಮನಸ್ಕರಿಗೂ, ಮತಭೇದವುಳ್ಳ ಅಜ್ಞಾನಿಗಳಿಗೂ, ಸೋದರತ್ವ, ಸಮಾನತತ್ವಗಳ ಸದ್ಬೋಧೆಯನ್ನೀಯುವವರು. ನೀತಿ ಬೋಧನೆಗಳಿಗೆ ಮಣಿಯದ, ಕಂಟಕರನ್ನು ನಿಗ್ರಹಿಸಿ ಧರ್ಮ ಸಂಸ್ಥಾಪನೆಗೈಯ್ಯುವವರು. ಜಗತ್ತಿನಲ್ಲಿ ಶಾಂತಿಯು ನೆಲೆಗೊಂಡು, ಮಾನವರು ಪರಮಾತ್ಮನ ಧ್ಯಾನದಲ್ಲಿ ತಾದಾತ್ಮ್ಯರಾದೊಡನೆಯೇ ಇವರು ನೆಮ್ಮದಿಯನ್ನು ಕಾಣುವರು.'' ಎಂಬ ಕರೀಂಖಾನರ ಮಾತಿನಲ್ಲಿ ಭಗವಂತನು, ಭೂಮಿಯಲ್ಲಿನ ದುಷ್ಟರನ್ನು ನಿಗ್ರಹಿಸಲು ಆಯಾ ಕಾಲಕ್ಕೆ ಮಾನವ ರೂಪದಲ್ಲಿ ಅವತರಿಸಿ, ಜಗತ್ಕಲ್ಯಾಣವನ್ನು ಮಾಡುವನು ಎಂಬ ತಿಳುವಳಿಕೆಯನ್ನು ಬಹಿರಂಗಗೊಳಿಸುವರು. ಆದಕ್ಕಾಗಿಯೇ ಕರೀಂಖಾನರು ಮಾನವತಾವಾದಿಗಳಾಗಿ, ಈ ಮಣ್ಣಿನ ಗುಣಗಳನ್ನು ಸೂಕ್ಷ್ಮವಾಗಿ ಅರಿತಿರುವ ಪುಣ್ಯ ಜೀವಿಗಳಾಗಿದ್ದಾರೆ.

ಡಾ. ಹಿ.ಚಿ. ಬೋರಲಿಂಗಯ್ಯನವರು ತಮ್ಮ ಸಂದರ್ಶನದಲ್ಲಿ ಕರೀಂಖಾನರ ಆಚರಣೆಯ ವಿಷಯವಾಗಿ ಹೇಳುತ್ತ ''ನಾನು ಕಂಡಂತೆ ಅವರು ಯಾವಾಗಲೂ ಮಸೀದಿಗೆ ಹೋಗಿರಲಿಲ್ಲ, ಅಪರೂಪಕ್ಕೆ ನೆಂಟರು ಬಂದಾಗ ಒಂದೆರೆಡು ಸಲ ಹೋದದ್ದುಂಟು ಎಂದು ಕೇಳಿದ್ದೆ. ಹಾಗೆಯೇ ದೇವಸ್ಥಾನಕ್ಕೆ ಹೋದರೂ, ದೇವಸ್ಥಾನ ಬೇರೆ ಎಂದು ತಿಳಿದಿರಲಿಲ್ಲ. ಅವರ ಒಂದು ಹಾಡು 'ನಟವರ ಗಂಗಾಧರ...' ಯಾವುದೇ ಒಬ್ಬ ಹಿಂದೂ ಕೂಡ ಬರೆಯಲೂ ಸಾಧ್ಯವಿಲ್ಲದಂತಹ ರಚನೆಯಾಗಿತ್ತು. ಅಷ್ಟು ಅದ್ಭುತವಾಗಿತ್ತು ಅದು. ಮುಸ್ಲಿಂ ಧರ್ಮದ ಬಗ್ಗೆ ತಿರಸ್ಕಾರವಿರಲಿಲ್ಲ; ಹಿಂದೂ ಧರ್ಮದ ಬಗ್ಗೆಯೂ ತಿರಸ್ಕಾರವಿರಲಿಲ್ಲ; ಯಾವ ಧರ್ಮದ ಬಗ್ಗೆಯೂ ತಿರಸ್ಕಾರವಿರಲಿಲ್ಲ; ಅಂತಹ ಪರಂಪರೆಯನ್ನು ಉಳಿಸಿ ಬೆಳೆಸಿದರು. ಅವರ ಅಭಿಪ್ರಾಯದಂತೆ ಸೂಫಿ ಪಂಥದ ಆಚಾರದಂತೆ ಹಿಂದೂ, ಮುಸ್ಲಿಂ ಎರಡೂ ಧರ್ಮದಲ್ಲಿ ಒಳ್ಳೆಯದೇನಿದೆ ಅವುಗಳನ್ನು ಇಟ್ಟುಕೊಳ್ಳೋಣ. ಅವೆರಡರಲ್ಲಿ ಏನೇನು ಕೆಟ್ಟದ್ದಿದೆಯೋ ಅದನ್ನು ಕೈಬಿಡಬೇಕು ಎನ್ನುತ್ತ , ಮುಸ್ಲಿಂ ಧರ್ಮೀಯಲ್ಲಿರುವ ವರದಕ್ಷಿಣೆ ಕೊಡುವುದು ಮತ್ತು 'ಬಿರಿಯಾನಿ' ಊಟ ಹಾಕಿಸಿ, ವಧುವಿನ ಕಡೆಯವರು ತೊಂದರೆ ಪಡುವ ಬಗೆಯನ್ನು ಕಂಡು ತುಂಬಾ ನೊಂದು ನುಡಿದಿದ್ದಾರೆ. ಅವರ ಮಾತಲ್ಲಿ ಹೇಳುವುದಾದರೆ 'ಸಾವಿರಕ್ಕೂ ಹೆಚ್ಚು ಮಂದಿ ಬಂದು ಬಿರ್ಯಾನಿ ಊಟ ಮಾಡಿ ಹೋಗುತ್ತಿದ್ದರು. ಬಡವನಾದವನು ಏನು ಹಾಕ್ತಾನೆ? ಅವನು ಸತ್ತೇ ಹೋಗ್ತಾನೆ' ಎಂದು ದುಃಖ ವ್ಯಕ್ತಪಡಿಸುತ್ತಿದ್ದರು. 'ತಲಾಖ್' ವಿಷಯದಲ್ಲೂ ಅತ್ಯಂತ ನೊಂದು ಮಾತನಾಡುವ ಇವರು 'ಆಕೆಯ ಜೀವನ ಏನಾಗಬೇಕು ?' ಎಂದು ನೊಂದುಕೊಳ್ಳುವರು. ಹಿಂದೂ ಧರ್ಮದಲ್ಲಿ ಕೂಡ 'ಪುರೋಹಿತ ಶಾಹಿ ಜನ, ಸಾಮಾನ್ಯ ಜನರನ್ನು ಹೇಗೆ ಶೋಷಣೆ ಮಾಡ್ತಾರೆ' ಎಂದು ಮರುಕ ಪಡುವರು. ಇದು ತಪ್ಪಬೇಕು ಎಂದು ವಿಷಾದದಿಂದ ನುಡಿಯುವರು. ಕರೀಂಖಾನರಿಗೆ ಧರ್ಮದ ಹೆಸರಿನಲ್ಲಿ ನಡೆಯುವ ಮೂಢನಂಬಿಕೆಯ ಶೋಷಿಸುವ, ಆಚರಣೆಗಳು ಬೇಕಾಗಿರಲಿಲ್ಲ. ಸುಖ, ಶಾಂತಿ, ಸರಳ ಜೀವನ ನಡೆಸುವುದು ಬೇಕಾಗಿತ್ತು. ಅದನ್ನು ತಮ್ಮ ಕೃತಿಗಳಲ್ಲಿ ಹಾಗೂ ಸ್ವಭಾವದಲ್ಲಿ ವ್ಯಕ್ತಪಡಿಸಿದ್ದಾರೆ.

೧೯೪೫-೪೬, ಆಗ ಕೋಮು ಗಲಭೆಯ ದಳ್ಳುರಿ ಅಲ್ಲಲ್ಲಿ ಹಬ್ಬಿತ್ತು. ಗಾಂಧೀಜಿ ಬಹಳ ಚಿಂತಿತರಾಗಿ ಸಾಮೂಹಿಕ ಜನಜಾಗೃತಿ ಮೂಡಿಸಲು ಪಾದಯಾತ್ರೆ ಹೊರಟರು. ಸ್ವಾತಂತ್ರ್ಯ ಪೂರ್ವದಲ್ಲಿ ಅಷ್ಟಾಗಿ ಈ ವ್ಯತ್ಯಾಸ ಕಾಣುತ್ತಿರಲಿಲ್ಲ. ಹಳ್ಳಿ ಪಟ್ಟಣಗಳಲ್ಲಿಯು ಜನರೆಲ್ಲ ಸೌಹಾರ್ದದಿಂದಲೇ ಬದುಕುತ್ತಿದ್ದರು. ಪ್ರೀತಿ, ಪ್ರೇಮದಿಂದ ತಮ್ಮ ತಮ್ಮಲ್ಲಿ ಒಪ್ಪಂದ ಮಾಡಿಕೊಂಡು ಸಹಬಾಳ್ವೆಯಲ್ಲಿ ತೊಡಗಿದ್ದರು. ಇತ್ತೀಚಿತಲಾಗಿ ಈ ಕೋಮು ದಳ್ಳುರಿಯು ಮಾನವ ಸಮಾಜದ ಮೇಲೆ ಗದಾ ಪ್ರಹಾರ ಮಾಡಿಬಿಟ್ಟಿದೆ. ಸ್ವಾತಂತ್ರ್ಯ ಚಳುವಳಿಯಲ್ಲಿ ಮುಸಲ್ಮಾನರು ಬಹಳ ದೊಡ್ಡ ಪ್ರಮಾಣದಲ್ಲಿ ಭಾಗವಹಿಸಿದರು. ಕರೀಂಖಾನರು ಹಿಂದೂ-ಮುಸ್ಲಿಂ ಕೇರಿಯಲ್ಲಿ ಬೆಳೆದುದರಿಂದ ಜಾತೀಯತೆ ಅವರಲ್ಲಿ ಅಷ್ಟಾಗಿ ಪರಿಣಾಮ ಬೀರಲಿಲ್ಲ. ಉಳಿದ ಜಾತಿಯವರೊಡನೆ ಅನ್ಯೋನ್ಯವಾಗಿ ಉಳಿದುಕೊಂಡಿದ್ದರು.

ಜಾನಪದ ತಜ್ಞ ಡಾ. ಎನ್.ಆರ್. ನಾಯಕರು ಕರೀಂಖಾನರ ಜಾತೀಯತೆಯ ನಿಲುವಿನ ಬಗ್ಗೆ ಹೇಳುತ್ತ – ''ನಮ್ಮ ನಾಡಿನಲ್ಲಿ ಇತರೆ ಮುಸ್ಲಿಂ ಬಾಂಧವರು ಕರೀಂಖಾನರನ್ನು ನೋಡಿ ಕಲಿಯಬೇಕು. ಎಷ್ಟೋ ಸಲ ಮುಸ್ಲಿಂರು ತಾವು ಬೇರೆನೇ ಎಂಬ ಭಾವನೆಯನ್ನು ಇಟ್ಟುಕೊಂಡಿದ್ದಾರೆ. ಅವರಿಗೆ ಅದು ಒಳ್ಳೆಯದಲ್ಲ. ಆ ರೀತಿಯಿಂದ ಕರೀಂಖಾನರು ನಮ್ಮ ನಾಡಿನ ಕ್ರಮದ ಜೊತೆಗೆ ಬೆರೆತರು. ಅವರೊಬ್ಬ ಮುಸ್ಲಿಂ ಎಂದೆನಿಸುವುದಿಲ್ಲ. ಅವರ ವೇಷ ಭೂಷಣ ನಡೆ ನುಡಿಗಳನ್ನು ಗಮನಿಸಿದರೆ ಅವರು ಅಪ್ಪಟ ಹಿಂದುಗಳಾಗಿಯೇ ಕಾಣುತ್ತಿದ್ದರು. ಅವರ ಹೆಸರನ್ನು ನೋಡಿದರೆ ಮಾತ್ರ ಅವರೊಬ್ಬ ಮುಸ್ಲಿಂ ಬಾಂಧವರೆಂದು ತಿಳಿಯುತ್ತದೆ. ಅವರು ಈ ಭಾಗದ ಭೂಮಿಯ ಮಣ್ಣಿನ ಗುಣದಲ್ಲಿ ಹೊಂದಿಕೊಂಡಿದ್ದರು. ಉಳಿದ ಮುಸ್ಲಿಂ ಬಾಂಧವರು ಇವರಂತಾಗಲಿಕ್ಕೆ ಪ್ರಯತ್ನಿಸಿದರೆ ಅದು ಸಂತೋಷದ ವಿಷಯ'' ಎನ್ನುವ ಮಾತು ಕರೀಂಖಾನರ ಜಾತೀಯತೆಯ ಬಗೆಗಿನ ವಿಶಾಲ ಮನೋಭಾವವನ್ನು ತಿಳಿಸುತ್ತದೆ.

ಕರೀಂಖಾನರು ಮೂಲಭೂತವಾದಿಗಳಲ್ಲ, ಎನ್ನುವ ನಿಟ್ಟೂರು ಶ್ರೀನಿವಾಸರಾಯರ ಮಾತು. ನೂರಕ್ಕೆ ನೂರರಷ್ಟು ಸತ್ಯ.ಕರೀಂಖಾನರಿಗೆ ಮುಸ್ಲಿಂ ಧರ್ಮದಲ್ಲಿ ತುಂಬಾ ನಂಬಿಕೆ ಇದೆ, ಶ್ರದ್ಧೆ ಇದೆ. ಅದಕ್ಕೆ ಇವರ ವಿಶಾಲ ದೃಷ್ಟಿಗೆ ಅಡಚಣೆ ಬರಲಿಲ್ಲ. ಬರೀ ರಾಷ್ಟ್ರವಾದಿಗಳಲ್ಲದೇ ಮಾನವತಾ ವಾದಿಗಳು ಆಗಿಯೇ ಇದ್ದಾರೆ. ಇದರಿಂದ ಇವರ ಜಾತ್ಯತೀತ ನಿಲುವು ವ್ಯಕ್ತವಾಗುತ್ತದೆ.ಕರೀಂಖಾನರಿಗೆ ಇಸ್ಲಾಂ ಧರ್ಮದ ಬಗ್ಗೆ ತುಂಬಾ ಆದರಣೀಯವಾದ ಗೌರವವಿತ್ತು. ಹಿಂದು ಶಾಸ್ತ್ರವನ್ನು ಕೂಡ ಯಾವುದೇ ಬಲ್ಲವನಿಗಿಂತ ಹೆಚ್ಚಾಗಿ ತಿಳಿದುಕೊಂಡಿದ್ದರು. ಮನಸ್ಸು ಪರಿಶುದ್ಧವಾಗಿದ್ದರೆ ನಾವು ಯಾವುದೇ ಧರ್ಮದಲ್ಲಿ ನಂಬಿಕೆ ಇಟ್ಟುಕೊಂಡರೂ ಏನಾದರೂ ಸಾಧಿಸಬಹುದು, ಎಂಬ ಧ್ಯೇಯ ಇವರದು. ಮನಸ್ಸಿನ ಪರಿಶುದ್ಧತೆ, ದೈಹಿಕ, ಮಾನಸಿಕ ಬೆಳವಣಿಗೆಗೆ ಅನುಕೂಲವಾಗುತ್ತದೆ ಎಂಬ ತತ್ವದವರು ಕರೀಂಖಾನರು, ಇವರು ಈ ವಯಸ್ಸಿನಲ್ಲೂ ಅಚಲವಾದ ಆತ್ಮವಿಶ್ವಾಸ ಹೊಂದಿರುವ ಗಟ್ಟಿಗರಾಗಿದ್ದರು. ತುಂಬಾ ಪರಿಶುದ್ಧ ಜೀವನ ನಡೆಸಿದರು. 'ಇಷ್ಟೊಂದು ಗೌರವದ ಮಾತನ್ನು ನಾವು ಇನ್ನೊಬ್ಬರ ಬಗ್ಗೆ ಹೇಳಲಿಕ್ಕೆ ಆಗುವುದಿಲ್ಲ, ಎಲ್ಲಿಯೋ ಬುದ್ಧನ ಬಗ್ಗೆ ಹೇಳಬಹುದು. ಆದರೆ ಹಾಲಿ ಈ ವ್ಯಕ್ತಿ ಅದಕ್ಕೆಲ್ಲ ಸಾಕ್ಷಿಯಾಗಿ ನಿಂತರು. ಎನ್ನುವ ಪ್ರೊ. ಕಾಳೇಗೌಡರ ಮಾತು ಕರೀಂಖಾನರು ದೈವೀಗುಣ ಸಂಪನ್ನರು ಎನ್ನುವುದನ್ನು ಪ್ರತಿಪಾದಿಸುತ್ತದೆ.

ಕೋಮು ಸೌಹಾರ್ದದ ಬಗ್ಗೆ ಕರೀಂಖಾನರು ಒಂದು ಕಡೆ ಮಾತನಾಡುತ್ತ ''ಹಿಂದೆ ಎಂಥಾ

ಕೋಮು ಸೌಹಾರ್ದ ಇತ್ತು ಎನ್ನುವುದಕ್ಕೆ ಲೋಕಮಾನ್ಯ ತಿಲಕರು ಕಾಲವಾದಾಗ ಅವರ ಪವಿತ್ರ ದೇಹಕ್ಕೆ ಮುಂದೆ ಹೆಗಲನ್ನು ಕೊಟ್ಟವರಲ್ಲಿ ಒಂದು ಕಡೆ ಬೂಲಾಬಾಯಿ ದೇಸಾಯಿಯವರು, ಮತ್ತೊಂದು ಕಡೆ ಮೌಲಾನಾ ಶೌಕತ ಅಲಿಯರು. ಅಬ್ಬಾ! ಯಾವ ಮೌಲಾನಾ, ಮಸೀದಿಯಲ್ಲಿ ವೇದಿಕೆಯ ಮೇಲೆ ನಿಂತು ಕುರಾನಿನ ಮಂತ್ರಗಳನ್ನು ಪಠಿಸುತ್ತ ಅವುಗಳ ಬಗ್ಗೆ ವ್ಯಾಖ್ಯಾನವನ್ನು ನೀಡುವಂತಹ ಒಬ್ಬ ಮೌಲ್ವಿ ಹಿಂದುವಿನ ದೇಹಕ್ಕೆ ತನ್ನ ಹೆಗಲನ್ನು ಕೊಟ್ಟು, ರಾಜ ಬೀದಿಯಲ್ಲಿ ನಿರಂತರವಾಗಿ ಹೋಗುತ್ತಿದ್ದಾನೆ. ಆದರೆ ಅದು ಕೇವಲ ಹಿಂದೂವಿನ ದೇಹವಲ್ಲ, ಅದು ನಾಯಕನ ದೇಹ. ತನ್ನ ನಾಯಕನ ದೇಹಕ್ಕೆ ಅವರು ಹೆಗಲು ಕೊಟ್ಟು ಸಾಗುತ್ತಿದ್ದಾರೆ. ಇಂಥ ಒಂದು ಮಧುರ ವಾತಾವರಣ ಈ ಸಂದರ್ಭದಲ್ಲಿ ನಿರ್ಮಾಣವಾಯಿತು' ಎನ್ನುವ ಕರೀಂಖಾನರ ಮಾತಲ್ಲಿ ಅಂದಿನ ಜನರ ಧರ್ಮ ಸಹಿಷ್ಣುತೆ ವ್ಯಕ್ತವಾಗುತ್ತದೆ.

## ಕರೀಂಖಾನ್ ಮತ್ತು ಆಧ್ಯಾತ್ಮ :

ಭಗವಂತನ ಬಗ್ಗೆ ಅಪಾರ ಭಕ್ತಿ ಇಟ್ಟುಕೊಂಡಿದ್ದ ಕರೀಂಖಾನರು, ಭಗವಂತನ ಇರುವಿಕೆಯನ್ನು ತಮ್ಮ ಮಾತುಗಳಲ್ಲಿ ತಿಳಿಸುತ್ತಾರೆ. 'ನಾನು ಭಗವಂತನನ್ನು ಬಹಳವಾಗಿ ನಂಬಿರುವೆನು. ದೇವರನ್ನು ಜೂಜಿನ ಕೋಳಿಯಾಗಿ ಮಾಡಿಕೊಂಡು ಹೋರಾಟಕ್ಕೆ ಇಳಿಸುವ ರೀತಿಯಲ್ಲಿಲ್ಲ ನನ್ನ ದೇವರು. ಆತ ಸರ್ವ ಭೂತಾತ್ಮಕ.

> 'ನಕಾಷ್ಟೇ ವಿದ್ಯತೆ ದೇವೋನ ಪಾಷಾಣೇನ ಮೃಣ್ಮಯೇ
> ಭಾವೇಷು ವಿದ್ಯತೆ ದೇವೋ ತಸ್ಮೈ ಭಾವೇಹಿ ಕಾರಣಂ' ॥

ಪರಮಾತ್ಮ, ಮರಗಳಲ್ಲಾಗಲೀ ಮರದ ಮೂರ್ತಿಗಳಲ್ಲಾಗಲೀ ಇಲ್ಲ. 'ನಪಾಷಾಣೇ' ಲೋಹಗಳಲ್ಲಾಗಲೀ, ಕಲ್ಲುಗಳಾಗಲೀ, ಅವುಗಳ ಮೂರ್ತಿಗಳಲ್ಲಾಗಲೀ ಇಲ್ಲ. 'ನಮೃಣ್ಮಯೇ' ಮಣ್ಣಿನ ಹುತ್ತಗಳಲ್ಲಾಗಲೀ ಮಣ್ಣಿನ ಮೂರ್ತಿಗಳಲ್ಲಾಗಲೀ ಇಲ್ಲ. ದೇವರು ನಮ್ಮ ಭಾವನೆಗಳಲ್ಲಿ ಇದ್ದಾನೆ ಎಂದು ತಿಳಿ, ಎಂದು ಹೇಳುತ್ತವೆ ನಮ್ಮ ಉಪನಿಷತ್‌ಗಳು''. ಕರೀಂಖಾನರ ಈ ಮಾತಿನಲ್ಲಿ ಕೃತ್ರಿಮ ಭಕ್ತಿ ವ್ಯಕ್ತಪಡಿಸದೇ ಸಹಜ ಭಕ್ತಿಯಿಂದ ಭಗವಂತನನ್ನು ಕಾಣಬಹುದೆಂಬುದು ಗೋಚರಿಸುತ್ತದೆ.

'ಭಗವಂತ ಎಲ್ಲಾ ಕಡೆಯು ಇದ್ದಾನೆ, ಪರಿಶುದ್ಧವಾದ ಭಾವದಲ್ಲಿ ಇರುತ್ತಾನೆ. ಮಾನವ ನಿರ್ಮಿತ ಮಸೀದಿ, ಮಂದಿರ ಚರ್ಚಗಳಲ್ಲಿ ಪರಮಾತ್ಮನನ್ನು ಹುಡುಕುವುದು ಪ್ರಯಾಸದ ಕೆಲಸ, ಆದರೆ ಮನೋಮಂದಿರ ಭಗವಂತ ನಿರ್ಮಾಣ ಮಾಡಿದ್ದಾನೆ, ಆತನ ಆವಾಸಸ್ಥಾನ ಅದು. ನಾವು ಗಮನಿಸಿಕೊಂಡಾಗ ಹೃದಯ ಮಂದಿರ ಒಂದು ದೇವಗನ್ನಡಿಯಂತೆ ಗೋಚರಿಸುತ್ತದೆ. ಆ ನಿಲುವುಗನ್ನಡಿಯಲ್ಲಿ ಮಾನವ ತನ್ನ ಶರೀರಕ್ಕಂಟಿಕೊಂಡಿರುವ ಕ್ರೋಧ, ದ್ವೇಷ, ಅಸೂಯೆ, ಮಾಲಿನ್ಯ ಕಂಡು ಚಕಿತನಾಗುತ್ತಾನೆ. ಅನುಪಾತದ ನಿರ್ಮಾಣ ಲೋಕದಿಂದ ಮಾಲಿನ್ಯವನ್ನು ತೊಳೆದುಕೊಂಡು, ಪರಿಶುದ್ಧ ಹೃದಯ ಆದಾಗ ನನಗೆ ಮರಗಳಲ್ಲಿ ಪರಮಾತ್ಮನ ವಿಭುತ್ವ ಗೋಚರಿಸುತ್ತದೆ. ಎನ್ನುವ ಕರೀಂಖಾನರ ಮಾತಲ್ಲಿ ಭಗವಂತನ ಸರ್ವಾಂತರ್ಯಾಮಿತ್ವ ತಿಳಿಯುತ್ತದೆ. ಭಗವಂತನ ಮಹಿಮೆಯನ್ನು ವಿವರಿಸುತ್ತಿರುವ ಕರೀಂಖಾನರು 'ಭಗವಂತನೊಬ್ಬನೆ ಶ್ರೀಮಂತ, ನಿತ್ಯ ದಾನಿ, ಅವನು ಅನುಗ್ರಹಿಸಿದರೆ ಕೀರ್ತಿ ಗೌರವಗಳು ಪ್ರಾಪ್ತವಾಗುತ್ತವೆ. ಪತ್ನಿ

ಪುತ್ರರು ಲಭಿಸುತ್ತಾರೆ. ಮಾನ ಸನ್ಮಾನ ಸಂಪತ್ತುಗಳು ಒಲಿಯುತ್ತವೆ. ಆ ಮಹಿಮಾಮಯ ಮುನಿದು ಮುಖ ತಿರುವಿದರೆ ಮಾನವ ನಿಸ್ಸಹಾಯಕ ನಿರ್ಗತಿಕ, ನಿರಾಶ್ರಿತನಾಗುತ್ತಾನೆ. ಬಡವನಿರಲಿ, ಬಲ್ಲಿದನಿರಲಿ ಮಾನವರೆಲ್ಲರೂ ಆ ದಯಾ ಧರ್ಮದ ದಾತಾರನ ಕರುಣಾ ದ್ವಾರದಲ್ಲಿ ಸೆರಗೊಡ್ಡಿ ನಿಂತಿರುವ ಭಿಕ್ಷುಕರು. ಆದ್ದರಿಂದ ಬೇಡಿದರೆ, ಆಗಿರಿಮಲ್ಲ ಅಂದರೆ ಶ್ರೀಶೈಲದ ಮಲ್ಲಿಕಾರ್ಜುನನನ್ನಲ್ಲಿ ಬೇಡಬೇಕು. ಆ ಉದಾರಿಯನ್ನು ಮರೆತು ಮಾನವ ಮಾನವನನ್ನು ಬೇಡಿದರೆ ಭಿಕ್ಷುಕ ಭಿಕ್ಷುಕನನ್ನು ಬೇಡಿದಂತೆ ಎನ್ನುವ ಕರೀಂಖಾನರ ಮಾತು ವಿಶಿಷ್ಟವಾದದ್ದು. ಜಗತ್ಕರ್ತನಾದ ಪರಮಾತ್ಮನು ದಯಾಘನನು, ಅಪಾರ ಮಹಿಮಾನ್ವಿತನೂ, ಅನಂತ ಲೀಲಾಮಯನೂ ತನ್ನ ಅದ್ಭುತ ಕಲಾ ಕೌಶಲದಿಂದ ಈ ಜಗತ್ತನ್ನು ರಚಿಸಿದನು. ಎಂದು ಸ್ವಾರಸ್ಯಕರವಾಗಿ ಹೇಳಿದ ಮಾತು ಅವರ ದೈವತ್ವದ ಒಲುಮೆಯನ್ನು ತಿಳಿಸಿಕೊಡುತ್ತದೆ.

**ಬ್ರಹ್ಮಚರ್ಯ :**

ವರ್ಷ ವೃಷ್ಟಿಯ ತಾಣವಾದ ಹಾಸನ ಜಿಲ್ಲೆಯ ಸಕಲೇಶಪುರದಲ್ಲಿ ಅಬ್ದುಲ್ ರೆಹಮಾನ್ ಖಾನ್ ದಂಪತಿಗಳ ಗರ್ಭದಲ್ಲಿ ಹರ್ಷವನ್ನು ಪಸರಿಸುವ ಬಿರು ಮುಗುಳಾಗಿ ಉದಯಿಸಿದ ಕರೀಂಖಾನರು ಉಜ್ವಲ ರಾಷ್ಟ್ರಪ್ರೇಮಿ, ದೇಶ ತನಗೇನು ಮಾಡಿದೆ ಎನ್ನುವುದಕ್ಕಿಂತ ತಾನು ದೇಶಕ್ಕಾಗಿ ಏನು ಮಾಡಬಲ್ಲೆ ಎನ್ನುವ ತುಡಿತದಿಂದ ದೇಶ ಸೇವೆ ಮಾಡಿ ಜೀವನವನ್ನು ಪಾವನ ಮಾಡಿಕೊಂಡ ಪುಣ್ಯಜೀವಿ ಕರೀಂಖಾನರು. ಈ ದೇಶಪ್ರೇಮಿ ತನ್ನ ಸ್ವಂತ ಜೀವನವನ್ನು ಬದಿಗಿಟ್ಟು ಭಾರತಾಂಬೆಯ ಸ್ವಾತಂತ್ರ್ಯಕ್ಕಾಗಿ, ಕನ್ನಡಮ್ಮನ ಏಳ್ಗೆಗಾಗಿ, ಸರ್ವಧರ್ಮಗಳ ಅಭ್ಯುದಯಕ್ಕಾಗಿ, ತಮ್ಮ ತನು, ಮನ, ಧನಗಳನ್ನು ಮುಡಿಪಾಗಿಟ್ಟ ಶ್ರೇಷ್ಠ ಜೀವಿ. ಇಂಥ ಉದಾತ್ತ ವಿಚಾರ ಧಾರೆಯಿಂದಾಗಿ ಕೊನೆತನಕ ಬ್ರಹ್ಮಚಾರಿಯಾಗಿಯೇ ಉಳಿದು ದೇಶಕ್ಕೆ ತಮ್ಮನ್ನು ಸಮರ್ಪಿಸಿಕೊಂಡರು.

ಒಳ್ಳೆಯ ರೂಪಸ್ಥ ಹೆಣ್ಣು ಇವರ ಮದುವೆಗೆ ಗೊತ್ತಾಗಿತು. ಸಂಪಾದನೆ ಇಲ್ಲದೇ ಇನ್ನೊಂದು ಆತ್ಮವನ್ನು ಯಾಕೆ ನೋಯಿಸಬೇಕು ಎಂದು ಒಪ್ಪಿಗೆ ಕೊಡಲಿಲ್ಲ. ಆ ಹೆಣ್ಣು ಏಳು ವರ್ಷ ಕಾದಳು, ಆದರೆ ಕೊನೆಗೂ ಇವರು ಮದುವೆಯಾಗಲೇ ಇಲ್ಲ. ಇವರ ಜೀವನ ಹಗುರವಾಗಿರಲಿಲ್ಲ. ರಾಜಕಾರಣಿಗಳ ಜೊತೆಯಲ್ಲಿ ತಿರುಗಾಡುತ್ತಿದ್ದರು. ಇದರಿಂದ ಸಮಯ ವ್ಯರ್ಥವಾಯಿತು. ರಾಜಕಾರಣಿಗಳು ತಮ್ಮದನ್ನು ನೋಡುಕೊಳ್ಳುತ್ತಿದ್ದರೇ ಹೊರತು ಕರೀಂಖಾನರ ಬಗ್ಗೆ ನೋಡಿರಲಿಲ್ಲ. ಆ ಕಾರಣದಿಂದ ಮದುವೆಯಿಂದ ದೂರ ಉಳಿಯುವಂತಾಯಿತು. ಕೊನೆಗೆ ಜೀವನ ಮಾಡುವದೇ ಕಷ್ಟವಾಯಿತು. ಶ್ರೀರಂಗಪಟ್ಟಣದ ಸೇತುವೆಯಿಂದ ಧುಮುಕಿ ಬಿಡುವುದೇ ಲೇಸು ಎನ್ನುವಷ್ಟರ ಮಟ್ಟಿಗೆ ಬಂತು. '' ಇನ್ನೊಂದು ಜೀವ ಕಟ್ಟಿಕೊಂಡು ಅದಕ್ಕೆ ಯಾಕೆ ತೊಂದರೆ ಕೊಡಬೇಕು ? ಆ ಸಮಯದಲ್ಲಿ ಅದೆಷ್ಟು ಸಂಬಂಧ ಬಂದರೂ ಇಷ್ಟ ಪಡಲಿಲ್ಲ. ಒಳ್ಳೊಳ್ಳೆ ಸಂಬಂಧ ಬಂದಿತ್ತು'' ಎನ್ನುವ ಮಾತಿನಿಂದ ಕರೀಂಖಾನರು ಆ ಜನ್ಮ ಬ್ರಹ್ಮಚಾರಿಯಾಗಿ ತಮ್ಮನ್ನು ದೇಶಕ್ಕೆ ಅರ್ಪಿಸಿಕೊಂಡಿದ್ದನ್ನು ಅವಲೋಕಿಸಬಹುದು. ಕರೀಂಖಾನರ ರೂಪ ವ್ಯಕ್ತಿತ್ವಕ್ಕೆ ಮಾರು ಹೋದ ಅದೆಷ್ಟೋ ಹಿಂದೂ, ಮುಸ್ಲಿಂ ಹೆಣ್ಣು ಮಕ್ಕಳು ಇವರನ್ನು ಆಸೆ ಪಟ್ಟದ್ದು ಉಂಟು. ಮುಸ್ಲಿಂ ಹಿರಿಯರು ಕರೀಂಖಾನರಿಗೆ 'ಆ ರೀತಿ ಸಂಬಂಧ ಇಟ್ಟುಕೊಳ್ಳುವುದು ಒಳ್ಳೆಯದಲ್ಲ. ಕೋಮು ಗಲಭೆಗಳಾಗಿ ಬಿಡುತ್ತವೆ'' ಎನ್ನುವ ಸಲಹೆ ಕೊಟ್ಟರಂತೆ. ಆ ಕಾಲದಲ್ಲಿ ಮಡಿವಂತಿಕೆ ಇತ್ತು. ಆದ್ದರಿಂದ

ಅದು ನೆರವೇರಲಿಲ್ಲ. ಅದೆಷ್ಟೋ ವರ್ಷ ಉರುಳಿ ಹೋದ ಮೇಲೆ ಮದುವೆಯ ವಯಸ್ಸು ಕಳೆದು ಹೋಯಿತು. ಆಮೇಲೆ ಸಮಾಜ ಸೇವೆಗೆ ಸಂಪೂರ್ಣವಾಗಿ ತೊಡಗಿಕೊಂಡರು'.

ಕರೀಂಖಾನರು ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿದ್ದರಿಂದ ಬ್ರಿಟಿಷರು ಇವರ ಅಣ್ಣ ನಡೆಸುತ್ತಿರುವ ಬಟ್ಟೆ ಅಂಗಡಿ ಪರವಾನಗಿ ರದ್ದು ಪಡಿಸಿದರು. ಉದರ ಪೋಷಣೆಗಾಗಿ ಇರುವ ಏಕೈಕ ಮಾರ್ಗದ ಉತ್ಪನ್ನ ತಪ್ಪಿ ಇಡೀ ಕುಟುಂಬ ಬೀದಿಗೆ ಬಿತ್ತು. ಮುಂದೆ ದಾರಿಯಿಲ್ಲ, ಜಮೀನಿಲ್ಲ, ಏನೂ ಇಲ್ಲ, ಬಟ್ಟೆ ವ್ಯಾಪಾರ ಮಾಡಿ ಜೀವನ ನಡೆಸುತ್ತಿದ್ದ ಇವರ ಕುಟುಂಬದವರೆಲ್ಲ ಇವರನ್ನು ದೂಷಿಸಿದರು. 'ನಮಗ್ಯಾಕೆ ಬೇಕಿತ್ತು ಇದು' ಎಂದು ಹೇಳಿದರು. ಒಂದು ವ್ಯವಸ್ಥೆಯಿಂದ ಅಷ್ಟು ಚೆನ್ನಾಗಿದ್ದ ಮನೆಯ ಆರ್ಥಿಕ ಸ್ಥಿತಿ ಒಡೆದು ಹೋಯಿತು. ಎಲ್ಲರನ್ನು ಕಷ್ಟಕ್ಕೆ ಸಿಲುಕಿಸಿದೆ, ಎಂದು ಕರೀಂಖಾನರು ದುಃಖಿಸಿದರು. ಈ ಸಂಕಟದ ವಿಷಯ ಇವರ ಮೇಲೆ ಗಾಢ ಪರಿಣಾಮ ಬೀರಿತು. ಈ ನೋವಿನಲ್ಲಿ ತಮ್ಮ ವೈವಾಹಿಕ ಜೀವನವನ್ನು ಮರೆತುಬಿಟ್ಟರು. ತನ್ನ ಕುಟುಂಬವನ್ನು ಏನಾದರೂ ಮಾಡಿ ಉಳಿಸಬೇಕೆಂದು ತೀರ್ಮಾನಿಸಿ, ತಮ್ಮ ವೈಯಕ್ತಿಕ ಜೀವನದ ಬಗ್ಗೆ ಕಾಳಜಿ ವಹಿಸಲಿಲ್ಲ. ಸಂಪೂರ್ಣವಾಗಿ ಸಮಾಜ ಮುಖಿಯಾಗಿ ಬಿಟ್ಟರು. ಬಹಳ ಸುಂದರ ರೂಪದವರಾದ ಇವರು ಕೆಂಪು ಕೆಂಪಾಗಿ ಬಹಳ ಆಕರ್ಷಕ ವ್ಯಕ್ತಿತ್ವದಿಂದ ಕೂಡಿದ್ದರು. ಅದಕ್ಕೆ ತಕ್ಕಂತೆ ನಡುವಳಿಕೆ ಕೂಡ ಇತ್ತು. ಆದರೆ ವೈವಾಹಿಕ ಜೀವನದಲ್ಲಿ ಎಡವಿದ ಬಗ್ಗೆ ವಿಷಾದವಿತ್ತು. ಅದು ಆಗಲಿಲ್ಲವಲ್ಲ, ಆಸೆ ಪೂರೈಸಿಕೊಳ್ಳಲಿಲ್ಲ ಎಂಬ ನೋವು ಅದು ಎಲ್ಲೋ ಒಂದು ಕಡೆ ಮನಸ್ಸಿನ ಆಳದಲ್ಲಿ ಕೊರೀತಾ ಇತ್ತು. ಅದಕ್ಕೆ ಇವರು ಕಾಮದ ವಿಚಾರ ಬಂದಾಗ ಸ್ವಲ್ಪ ಸಿಡಿ ಮಿಡಿಗೊಳ್ಳುವರು. ಇವರು ತಮ್ಮ ಬಗ್ಗೆ ಹೇಳಿಕೊಳ್ಳುತ್ತ 'ನಾನು ನೋಡಿ ಎಷ್ಟ ವರ್ಷ ಇದ್ರು ಏನೂ ಮಾಡಲಿಕ್ಕಾಗಲಿಲ್ಲ, ಅಷ್ಟು ಸುಂದರನಾಗಿದ್ದೆ ನನ್ನನ್ನು ಬಹಳ ಹುಡುಗಿಯರು ಮೆಚ್ಚಿಕೊಂಡಿದ್ರು'' ಕೊಡಗಿನ ಹೆಣ್ಣು ಮಗಳು, ಹಾಗೆ ಚಿಕ್ಕಮಗಳೂರಿನ ಕಾಫಿ ಎಸ್ಟೇಟ್ ಮಾಲಕನ ಮಗಳು ಇವರನ್ನು ಬಹಳ ಮೆಚಿಕೊಂಡಿದ್ದರು. ಆದರೆ ಇವರು ಆ ಕಡೆ ಗಮನ ಕೊಡಲಿಲ್ಲ. ಮನೆಯಲ್ಲಿ ತಾಪತ್ರಯವಿರುವಾಗ ಇಂಥಹ ಸಮಸ್ಯೆ ಇನ್ನ್ಯಾಕೆ ನಮಗೆ ಬೇಕಪ್ಪ? ಅದು ಒಂದು ಹಿಂದೂ ಹೆಣ್ಣು ಮಗಳು, ಇವೆಲ್ಲ ಯಾಕೆ ಎನ್ನುವರು. ಆಕೆ ಯಾರು ಎಂದು ಕೇಳಿದರೆ ಅವರು ಈಗಲೂ ಹೇಳುವುದಿಲ್ಲ. ವೈವಾಹಿಕ ಜೀವನ ಸಮೃದ್ಧವಾಗಿಲಿಲ್ಲವೆಂಬ ವಿಷಾದ, ಕೊರಗು ಅವರಿಗಿದೆ, ಆ ವಿಷಾದ ಎಲ್ಲೋ ಒಂದು ಕಡೆ ಗೊತ್ತಾಗುತ್ತಿತ್ತು.

ಸಿನೇಮಾ ರಂಗದಲ್ಲಿ ತೊಡಗಿಕೊಂಡು ಮದ್ರಾಸಿಗೆ ಹೋದಾಗ ಅಲ್ಲಿ ಕೆಲವು ಜನ ಇವರನ್ನು ವೇಶ್ಯೆಯರ ಹತ್ತಿರ ಕರೆದುಕೊಂಡು ಹೋಗುವ ಪ್ರಯತ್ನ ಮಾಡಿದ್ದರು. ಒಂದಿಷ್ಟು ಸುಖ ಅನುಭವಿಸಿ ಎಂದವರೂ ಇದ್ದರು. ಆಗ ಇವರು ''ನನಗೆ ಹೊಟ್ಟೆ ತುಂಬುವುದೇ ಮುಖ್ಯ, ಆ ಸುಖ ಬೇಕಾಗಿಲ್ಲ: ಎಂದು ದೂರ ಸರಿದದ್ದೂ ಇದೆ. 'ನಾನು ನನ್ನ ಕುಟುಂಬ ಹಾಳು ಮಾಡಿದೆ. ನಾನು ಈಗ ಸುಖವಾಗಿ ಇರಕೂಡದು' ಈ ತರದ ಏನೇನು ಅನಿಸಿಕೆಗಳನ್ನು ಬಹಿರಂಗಪಡಿಸುವರು. ಇಂಥಹ ಚಿಂತೆ ಇವರನ್ನು ಕಾಡುತ್ತಲೇ ಇತ್ತು. ಮದ್ರಾಸಿನಲ್ಲಿ ಇದ್ದ ೧೦ ವರ್ಷದಲ್ಲಿ ಅನ್ಯ ಮಾರ್ಗಕ್ಕೆ ಎಳೆಯಲು ಪ್ರಯತ್ನಿಸಿದರೂ, ಅವರಿಂದ ಅದು ಸಾಧ್ಯವಾಗಲಿಲ್ಲ. ''ಆಸೆಯಿರಲಿಲ್ಲ ಅಂತಲ್ಲ, ಆಸೆಯಿತ್ತು ದೃಢ ಕಾಯನಾಗಿದ್ದೆ, ನನಗೆ ಎಲ್ಲ ಶಕ್ತಿನೂ ಇತ್ತು. ಸೌಂದರ್ಯ ಇತ್ತು. ನನ್ನನ್ನು ಅನೇಕರು ಮೆಚ್ಚಿಕೊಂಡಿದ್ದರು. ನಾನು ಮಾನಸಿಕವಾಗಿ ಆಸ್ಥಿತಿಯಲ್ಲಿರಲಿಲ್ಲ'' ಎಂದು ವಿಷಾದದಿಂದ

ನುಡಿಯುವರು. ''ಮದುವೆಯೆಂದರೆ ಗಂಡ ಹೆಂಡಿರು ಸುಖವಾಗಿ ಬದುಕುವ ಒಂದು ಒಪ್ಪಂದ, ಮದುವೆ ಪರಸ್ಪರ ಒಪ್ಪಂದದ ಮೇಲೆ ನಡೆಯುವ ಒಂದು ಬಂಧನ. ಚಳುವಳಿ, ಸಾಹಿತ್ಯ, ಸಿನೇಮಾದಲ್ಲಿ ಜೀವನದ ಬಹಳ ಸಮಯವನ್ನು ಕಳೆಯುತ್ತಿದ್ದರಿಂದ ಮದುವೆ ಮಾಡಿಕೊಳ್ಳಲು ನನಗೆ ಪುರಸೊತ್ತು ಸಿಗಲಿಲ್ಲ, ಯಾವಾಗಲೂ ದೇಶದ ಚಿಂತನೆ. ಈ ದೇಶ ಹೀಗಾಯಿತಲ್ಲ ಎಂಬ ಚಿಂತೆ ಕಾಡ್ತಾನೇ ಇರ್ತಿತ್ತು. ದೇಶದ ಬಗ್ಗೆ ಹಾಡು, ಲಾವಣಿ, ಚಲನಚಿತ್ರದಲ್ಲಿ ಒಂದು ಹೊತ್ತಿನ ಊಟಕ್ಕಾಗಿ ಪರದಾಡಬೇಕಾದ ಸಮಯದಲ್ಲಿ ಇನ್ನೊಂದು ಜೀವನಕ್ಕೆ ಸಂಕಟಕೊಡಬಾರದೆಂದು ಮದುವೆಯನ್ನು ಮಾಡಿಕೊಳ್ಳಲಾಗಲಿಲ್ಲ'' ಎನ್ನುವ ಮಾತುಗಳು ಕರೀಂಖಾನರು ವೈವಾಹಿಕ ಜೀವನದಲ್ಲಿ ಎಡವಿದ ವಿವರವನ್ನು ತಿಳಿಸುತ್ತವೆ.

ಡಾ. ಎಸ್. ವಿ. ಅಯ್ಯನಗೌಡರ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಇವರು ಹೇಳುವಂತೆ 'ಕರೀಂಖಾನರು ಬ್ರಹ್ಮಚಾರಿಗಳಾಗಿರದೇ ಸಂಸಾರಿ ಆಗಿದ್ದರೆ ಪರಿಪೂರ್ಣ ಜೀವನವನ್ನು ಅನುಭವಿಸಿ, ನಿಶ್ಚಿತ ನೆಲೆಯಲ್ಲಿ ಇರಲು ಸಾಧ್ಯವಿತ್ತು. ಮದುವೆಯಾಗಲಿಲ್ಲವೆಂದು ಅಡ್ಡ ದಾರಿ ಹಿಡಿದದ್ದು ಇಲ್ಲ, ಸಚ್ಚಾರಿತ್ರ್ಯವನ್ನು ತಮ್ಮ ಜೀವನದುದ್ದಕ್ಕೂ ಪಾಲಿಸಿಕೊಂಡು ಬಂದರು. ಇವರ ಜೀವಿತಾವಧಿಯಲ್ಲಿ ಎಲ್ಲಿಯೂ ಮುಗ್ಗರಿಸಿದ್ದು ಯಾರ ಬಾಯಲ್ಲೂ ಕೇಳಿದ್ದಿಲ್ಲ, ಇವರು ಸಾಮಾಜಿಕ ಜೀವನದಲ್ಲಿ ಹೆಣ್ಣಿನ ವಿಷಯದಲ್ಲಿ ಮರ್ಯಾದಸ್ಥರಾಗಿ ನಡೆದುಕೊಳ್ಳುತ್ತಿದ್ದರು 'ಕರೀಂಖಾನರು ರಸ್ತೆಯ ಬೀದಿಯಲ್ಲಿ ಹೊರಟರೆ ಅವರಿಗೆ ಸಿಗುವ ಗೌರವ ದೇವರಿಗೆ ಕೊಡುವ ಗೌರವವಾಗಿತ್ತು. ಹುಡುಗಿಯರು, ಹೆಂಗಸರು, ಬಲ್ಲಿದರು, ಬಡವರು ಎನ್ನದೇ ಅವರನ್ನು ಅತೀ ಆತ್ಮೀಯವಾಗಿ ಕಾಣುತ್ತಿದ್ದರು'' ಎನ್ನುವುದನ್ನು ನೆನಪಿಸುತ್ತಾರೆ.

ಕರೀಂಖಾನರ ಸಹೋದರರ ಗಫಾರ ಖಾನ ಇವರ ಬಗ್ಗೆ ಹೇಳುತ್ತ ''ನಾನು ಕಂಡಂತೆ ಅವರು ಯಾವುದೂ ದುರಭ್ಯಾಸಕ್ಕೆ ಅಂಟಿಕೊಂಡಿರಲಿಲ್ಲ, ಅದರಲ್ಲೂ ತನ್ನ ಇಂದ್ರಿಯಗಳ ಮೇಲೆ ನಿಗ್ರಹ ಇಟ್ಟುಕೊಂಡ ಮನುಷ್ಯ. ಅನೇಕ ಸಲ ಕೆಲವು ಹೆಣ್ಣು ಮಕ್ಕಳು ನಮ್ಮ ಮನೆಗೆ ಬರುತ್ತಿದ್ದರು. ಅವರು ಕರೀಂಖಾನರಿಗೆ ನಮಸ್ಕರಿಸುತ್ತಿದ್ದರು. ಅವರನ್ನು ಕಣ್ಣೆತ್ತಿಯೂ ನೋಡುತ್ತಿರಲಿಲ್ಲ. ಕರೀಂಖಾನರೆಂದರೆ ಎಲ್ಲರ ಮನೆಯಲ್ಲೂ ಸಲುಗೆ, ಬ್ರಾಹ್ಮಣರಿರಲಿ, ಲಿಂಗಾಯತರಿರಲಿ, ಇತರ ಜಾತಿಯವರಾರೇ ಇರಲಿ, ಅವರ ಅಡಿಗೆ ಮನೆಯಿಂದ ದೇವರ ಮನೆಯವರೆಗೆ ಕರೀಂಖಾನರು ಹೋಗಿ ಬರುತ್ತಿದ್ದರು. ಬ್ರಾಹ್ಮಣ ಕೇರಿಯಲ್ಲಿ ಕರೀಂಖಾನ್ ಹೊರಟರೆಂದರೆ, ಕುಳಿತಿದ್ದ ಎಲ್ಲ ಗಂಡು ಹೆಣ್ಣು ಮಕ್ಕಳು ಎದ್ದು ನಿಂತು ಕರೀಂಖಾನರಿಗೆ ಗೌರವ ಕೊಡುತ್ತಿದ್ದರು. ಇವರ ಹವ್ಯಾಸ ಕೇವಲ ಬರೆಯುವುದಾಗಿತ್ತು'' ಎನ್ನುವ ಮಾತು ಕರೀಂಖಾನರು ಎಂದಿಗೂ ತಮ್ಮ ಜೀವನಾದರ್ಶವನ್ನು ಸಾರ್ವತ್ರಿಕವಾಗಿ ಉಳಿಸಿಕೊಂಡು ಬಂದಿದ್ದಾರೆ ಎಂಬುದು ತಿಳಿಯುತ್ತದೆ.

ಚಂದನ ದೂರದರ್ಶನದಲ್ಲಿ ಸಂದರ್ಶನ ತೆಗೆದುಕೊಂಡ ದೊಡ್ಡರಂಗೇಗೌಡರು ಹೇಳುವಂತೆ 'ಎಷ್ಟೋ ವ್ಯಕ್ತಿಗಳಲ್ಲಿ ಕರೀಂಖಾನರು ಅಪರೂಪದ ವ್ಯಕ್ತಿಗಳು. ನಿಟ್ಟೂರು ಶ್ರೀನಿವಾಸರಾಯರಂತೆ ಡಾ. ಎಚ್. ಎನ್. ನರಸಿಂಹಯ್ಯರ ಹಾಗೆ, ಜಿ. ನಾರಾಯಣರವರ ಹಾಗೆ ಕರೀಂಖಾನರೂ ಕೂಡ ಅಷ್ಟೇ ಆದರ್ಶವಾದಿಗಳು' ಎನ್ನುವ ಮಾತುಗಳು ಎಷ್ಟೊಂದು ಮೌಲ್ಯಯುತ ! ಜಾನಪದ ಹಾಡುಗಾರ ಶ್ರೀ ಅಪ್ಪಗೆರೆ ತಿಮ್ಮರಾಜ ಕರೀಂಖಾನ್‌ರನ್ನು ನೆನಪಿಸಿಕೊಳ್ಳುತ್ತ 'ಕರೀಂಖಾನ್ ಅವರು ಬೀದಿ ಬೀದಿಯಲ್ಲಿ ಜಾನಪದ ಗೀತೆ ಹಾಡುವುದು ನನಗೆ ಸ್ಫೂರ್ತಿ ನೀಡಿತು. ನಾನು ಒಬ್ಬ

ಜಾನಪದ ಹಾಡುಗಾರನಾಗಲಿಕ್ಕೆ ಅವರೇ ಕಾರಣ, ನನ್ನ ವೈಯಕ್ತಿಕ ವಿಷಯದಲ್ಲಿ ಕೂಡ ಗಮನಹರಿಸಿ ನೀನು ಜಂಗಮನಾಗಿ ಇರಬೇಡ ವಿವಾಹಿತನಾಗಿರಬೇಕು ಎಂದರು. ಅವರ ಮಾತಿನಿಂದ ಮದುವೆಯಿಂದ ಜೀವನ ಸಾರ್ಥಕಗೊಳ್ಳುತ್ತದೆ ಎನ್ನುವುದು ವ್ಯಕ್ತವಾಗುತ್ತದೆ.

**ಕರೀಂಖಾನರ ಗುಣ ಸ್ವಭಾವ :**

ಕರೀಂಖಾನರ ಸ್ವಭಾವದ ಒಂದೊಂದೇ ಎಳೆಯನ್ನು ಬಿಡಿಸುತ್ತ ಹೋದಂತೆ ಅವರ ವ್ಯಕ್ತಿತ್ವ ದರ್ಶನವೂ ಆಗುತ್ತದೆ. ಒಂದು ವ್ಯವಸ್ಥೆಗೆ ತನ್ನನ್ನು ಒಪ್ಪಿಸಿಕೊಂಡ ವ್ಯಕ್ತಿ, ಅದರಿಂದ ದೊರಕುವ ಪ್ರಯೋಜನಗಳತ್ತಲೇ ತನ್ನ ದೃಷ್ಟಿನೆಟ್ಟಿರುತ್ತಾನೆ. ಇದಕ್ಕಾಗಿ ಅವನು ಏನೇನೂ ಕಷ್ಟಪಡಬೇಕಾಗಿಲ್ಲ. ಸಮೂಹವನ್ನು ನಿರ್ಯೋಚನೆಯಿಂದ ಅನುಸರಿಸಿದರೆ ಸಾಕು. ಯಾವುದೇ ತಲೆಬಿಸಿಯ ಅಗತ್ಯವಿಲ್ಲ. ವಿಶೇಷ ಪರಿಶ್ರಮ, ಸಾಧನೆ, ಚಿಂತನೆಗಳ ಅಗತ್ಯವೂ ಇಲ್ಲ. ಸುಮ್ಮನೆ ಹಿಂಬಾಲಿಸಿದರಾಯಿತು. ಇದರಿಂದ ಅವನ ಪಾಲಿಗೆ ತೊಡಕಿಲ್ಲದ, ವಿರೋಧವಿಲ್ಲದ, ವಿವಾದ ಸಂಘರ್ಷಗಳಿಗೆ ಎಡೆಕೊಡದ ನಿರಂತರವೂ ಆದ ಬದುಕು ಲಭ್ಯವಾಗುವುದು ಕಡಿಮೆ ಪ್ರಯೋಜನಕಾರಿಯಲ್ಲ, ಇಂತಹ ವ್ಯಕ್ತಿಗೆ ಹತ್ತರ ಕೂಡ ಹನ್ನೊಂದಾಗುತ್ತ ಗುಂಪಿನ ಕೂಡ ಗೋವಿಂದ ಎನ್ನುತ್ತ, ಗಾಳಿ ಬಿಟ್ಟತ್ತ ತೂರಿಕೊಳ್ಳುತ್ತ, ಸಾಗುವುದೇ ಜಾಯಮಾನವಾಗುತ್ತದೆ. ಇದರ ಮೂಲಕ ಅವನು ಪಡೆದುಕೊಳ್ಳುವ ಪ್ರಯೋಜನ ಹಲವರ ದೃಷ್ಟಿಯಲ್ಲಿ ಮಹತ್ವದ್ದೆನಿಸುವುದರಿಂದ ಇಂಥ ಅನುಕರಣ ಶೀಲ ವ್ಯಕ್ತಿಗಳ ಸಮೂಹವೇ ಸೃಷ್ಟಿಯಾಗಿ, ಆ ಮೂಲಕ ಒಂದು ವ್ಯವಸ್ಥೆ ರೂಪುಗೊಳ್ಳುತ್ತದೆ. ಈ ವ್ಯವಸ್ಥೆಯ ಹಿತ ಪ್ರಯೋಜನಗಳನ್ನುಂಡವರು ಅದನ್ನು ಉಳಿಸಿಕೊಳ್ಳಲು ಪ್ರಯತ್ನವನ್ನೂ ಮಾಡುತ್ತಾರೆ. ಸಾಮಾನ್ಯವಾಗಿ ಬೆರಳೆಣಿಕೆಯಷ್ಟು ಜನರನ್ನು ಮಾತ್ರ ಹೊರತುಡಿಸಿ, ಉಳಿದವರಿಗೆಲ್ಲರಿಗೂ ಜೀವನದ ಪುರುಷಾರ್ಥ ಇದೇ ಆಗಿರುತ್ತದೆ. ಕರೀಂಖಾನರಂಥ ಒಬ್ಬಿಬ್ಬರು ಮಾತ್ರ ವ್ಯವಸ್ಥೆಯ ವ್ಯೂಹದಿಂದ ಹೊರಬರುತ್ತಾರೆ. ಆಮೇಲೆ ಸಮಾಜ ಘಾತುಕವಾದ ನೆಲೆಗಳನ್ನು ಹುಡುಕಿಕೊಂಡು ಹೋಗಿ ಅವುಗಳನ್ನು ನಿರ್ಮೂಲನ ಮಾಡಲು ಸಂಕಲ್ಪ ಮಾಡುತ್ತಾರೆ. ಇವರನ್ನು ಯಾವಾಗಲೂ 'ಸಾಮಾಜಿಕ ಶ್ರೇಷ್ಠತೆ'ಯ ಅಭೀಪ್ಸೆ ಕಾಡುತ್ತಿರುತ್ತದೆ. ವೈಯಕ್ತಿಕ ಶ್ರೇಷ್ಠತೆಯನ್ನು ಸಂಪಾದಿಸಿಕೊಳ್ಳುತ್ತಿರುವ ಹಾಗೇ ಅದನ್ನು ಸುತ್ತಣ ಸಮಷ್ಟಿಯಲ್ಲಿ ಜೀರ್ಣಿಸಿಕೊಳ್ಳಬೇಕಾಗುತ್ತದೆ. ಮೇಲಕ್ಕೇರಿಸಿಕೊಂಡ ವ್ಯಕ್ತಿ ಈ ಪ್ರಕ್ರಿಯೆಯಲ್ಲಿ ಸ್ವಲ್ಪ ಕೆಳಕ್ಕೆ ಬಂದು ಕೆಳಕ್ಕಿರುವ ಸಮಾಜವನ್ನು ಕೂಡಾ ತನ್ನ ಕಡೆ ಮೇಲಕ್ಕೆತ್ತಿಕೊಳ್ಳುತ್ತಾನೆ. ಇದೇ ಸಂಸ್ಕೃತಿಯ ಅಥವಾ ಇತಿಹಾಸ ಚಲನೆಯ ಪ್ರಕ್ರಿಯೆ.

ಕರೀಂಖಾನರು ಈ ಪ್ರಕ್ರಿಯೆಯಲ್ಲಿ ತಮ್ಮ ವ್ಯಕ್ತಿತ್ವದ ಸಾರ್ಥಕತೆಯನ್ನು ಕಂಡುಕೊಂಡರು. ಆದರಿಂದಾಗಿ ಅವರ ಧೋರಣೆಗಳು ಕೂಡಾ ಇತರರಿಗಿಂತ ವಿಶಿಷ್ಟವಾಗಿರುವುದನ್ನು ಅವು ಅವರ ಜೀವನದುದ್ದಕ್ಕೂ ಮೈಚಾಚಿ ನಿಂತಿರುವುದನ್ನು ನಿದರ್ಶನಗಳಿಂದ ಕಂಡುಕೊಳ್ಳಲು ಸಾಕಷ್ಟು ಅವಕಾಶವಿದೆ. ಈ ನಿದರ್ಶನಗಳನ್ನು ಪರಾಮರ್ಶಿಸುವಾಗ ಒಬ್ಬ ವ್ಯಕ್ತಿಯ ವೈಯಕ್ತಿಕ ಹಾಗೂ ಸಾಮಾಜಿಕ ಹೀಗೆ ಎರಡೂ ನೆಲೆಗಳು ಮುಖ್ಯವಾಗಿರುವುದರಿಂದ ಕರೀಂಖಾನರ ವ್ಯಕ್ತಿತ್ವ ಮತ್ತು ಧೋರಣೆಗಳನ್ನು ಉಭಯ ನೆಲೆಗಳಲ್ಲೂ ಶೋಧಿಸಬೇಕಾಗುತ್ತದೆ.

"ಕರೀಂಖಾನರಲ್ಲಿ ಜೀವನಾನುಭವ ದೊಡ್ಡ ಬುತ್ತಿ ಇದೆ. ಅದಕ್ಕೂ ಮಿಗಿಲಾಗಿ ಸಂಪನ್ನತೆಯ ಮನುಷ್ಯ ಪ್ರೀತಿಯ ಅಪಾರ ಸಂಪತ್ತಿದೆ. ಈ ಮಾತುಗಳು ಕರೀಂಖಾನರ ಸಮಗ್ರ ವ್ಯಕ್ತಿತ್ವವನ್ನು ಕಟ್ಟಿಕೊಡಲಾರವಾದರು ಅವರ ವ್ಯಕ್ತಿತ್ವದ ಅಭ್ಯಾಸಕ್ಕೆ ಪೂರಕವಾದ ಕೆಲವು ಸೂಚನೆಗಳನ್ನಂತೂ

ಖಂಡಿತವಾಗಿಯೂ ನೀಡುತ್ತವೆ. ಬಾಲ್ಯದಲ್ಲಿ ಫುಟಬಾಲ್ ಪ್ರಿಯರಾದ ಕರೀಂಖಾನರಿಗೆ ಒಂದು ಸಲ ಫುಟಬಾಲ್ ಆಡುವ ಕನಸಾಯಿತಂತೆ, ಜೋರಾಗಿ ಕಾಲನ್ನು ಒದ್ದಿದ್ದಾರೆ, ಅದು ಒಂದು ಗೋಡೆಗೆ ಬಡಿದು ಅಪಘಾತಕ್ಕೊಳಪಟ್ಟಿತು. ಆ ಕಾಲಿಗೆ ಆಪ್ರೇಶನ್ ಕೂಡ ಮಾಡಬೇಕಾಯಿತು. ಸ್ವಭಾವತಃ ಕ್ರಿಯಾಶೀಲರಾಗಿರುವ ಕರೀಂಖಾನರು ಜೀವನದಲ್ಲಿ ಯಾವುದರ ಬಗ್ಗೆಯೂ ಆಸಕ್ತಿ ವಹಿಸದೇ ಇರಲಿಲ್ಲ. ಹತ್ತು ಹಲವರು ಮಾಡುವಂಥ ಕೆಲಸವನ್ನು ಅವರೊಬ್ಬರೇ ಮಾಡಿ ಮುಗಿಸಿದ್ದು ವೈಪರಿತ್ಯವೇ ಸರಿ'' ಎಂದು ಅವರೊಡನೆ ಒಡನಾಟವಿರುವ ಶ್ರೀಮತಿ ಎನ್. ನಾಗರತ್ನಾರವರು ಕರೀಂಖಾನರ ಕುರಿತು ಹೇಳುವ ವಿಚಾರ, ಅವರ ಕ್ರಿಯಾಶೀಲತೆಗೆ ಹಿಡಿದ ಕನ್ನಡಿಯಾಗಿದೆ.

ಕರೀಂಖಾನರಿಗೆ ಮಕ್ಕಳನ್ನು ಕಂಡರೆ ತುಂಬಾ ಪ್ರೀತಿ ಅವರು ಸಂಗ್ರಹಿಸಿದ 'ಕನ್ನಡ ಜನಪದ ಗೀತೆಗಳು' ಎನ್ನುವ ಪುಸ್ತಕದಲ್ಲಿ ಮಕ್ಕಳ ಕುರಿತು ಹೇಳುತ್ತಾ :

**'ನನ್ನಯ್ಯ ನಂಥೋರು ಹನ್ನೆರಡು ಮಕ್ಕಳು ।'**

ಎನ್ನುವ ಹಾಡುಗಳು ಮಕ್ಕಳು ಮೈಮನ ಮರೆಸುತ್ತಾರೆ ಎಂಬುದಕ್ಕೆ ಸಾಕ್ಷಿಯಾಗಿ ನಿಲ್ಲುತ್ತದೆ. ಮಕ್ಕಳು ತಪ್ಪು ಮಾಡಿದರೆ ನಯವಾದ ಮಾತಿನಲ್ಲಿ ತಿದ್ದುತ್ತಿದ್ದರು. ಬೇರೆಯಾರಾದರೂ ಮಕ್ಕಳನ್ನು ಹೊಡೆದರೆ ಅವರನ್ನು ಹೊಡೆಯದಂತೆ ತಡೆಯುತ್ತಿದ್ದರು. ಮಾತಿನ ದಂಡನೆ, ಬೆತ್ತದ ಪ್ರಯೋಗಗಳಲ್ಲಿ ಇವರಿಗೆ ನಂಬಿಕೆಯಿರಲಿಲ್ಲ. ಮಕ್ಕಳ ಕುಸುಮ, ಕೋಮಲ ಮನಕ್ಕೆ ಯಾವ ಶಾಖವು ತಟ್ಟಬಾರದೆಂದು ಅವರು ಸದಾ ಹೇಳುತ್ತಿದ್ದರು. ಸ್ವತಃ ಮಕ್ಕಳನ್ನು ಹಡೆಯದಿದ್ದರೂ, ಮಕ್ಕಳ ಚೇಷ್ಟೆಯಿಂದ ದೊಡ್ಡವರಿಗೆ ಶ್ರಮವಾದರೂ, ಮಕ್ಕಳ ತಿಳುವಳಿಕೆ, ಅಂಗಪುಷ್ಟಿಗಳು ಹೆಚ್ಚಾಗುವುದರಿಂದ ಅಂತಹ ಹೊತ್ತಿನಲ್ಲಿ ಶಿಕ್ಷೆ ಮಾಡುವದು ಸರಿಯಲ್ಲ ಎಂದು ಹೇಳಿದ್ದಿದೆ. ಮಕ್ಕಳನ್ನು ನೋಡಬೇಕೆಂದರೆ ನಿದ್ದೆ ಹೋದಾಗ ನೋಡಬೇಕೆಂದು ಹೇಳುತ್ತಿದ್ದರು. ಅವರ ಅಕೃತ್ರಿಮ, ನಿಷ್ಕಲ್ಮಶ ಮುಖಗಳನ್ನು ಅಪ್ಯಾಯ ಮಾನತೆಯಿಂದ ವೀಕ್ಷಿಸುತ್ತಿದ್ದರು. ''ಅವರು ದ್ವಾರಕಾ ಹೋಟೆಲಿನಲ್ಲಿ ಇರುವಾಗ ಸನ್ಮಾನದ ಶಾಲೂ ಕೂಡ, ಹೋಟೆಲ್ ಹುಡುಗರು ಕೆಲಸ ಮಾಡಿ ರಾತ್ರಿ ಹೊತ್ತು ಅಲ್ಲಿ ಇಲ್ಲಿ ಮಲಗಿದಾಗ ಚಳಿಯಿಂದ ನಡುಗುತ್ತಿರುವ ಮಕ್ಕಳನ್ನು ಕಂಡು ಶಾಲನ್ನು ಹೊದಿಸಿಬಿಡುತ್ತಿದ್ದರು. ಅವರಿದ್ದಲ್ಲಿ ಕೆಲವು ಮಕ್ಕಳು ಬರುತ್ತಿದ್ದವು, ಅವರಿಗೆಲ್ಲ ಚಾಕಲೇಟ ಕೊಡುತ್ತಿದ್ದರು. ಬೆಳಿಗ್ಗೆ ಈ ಮಕ್ಕಳೆಲ್ಲ ಕರೀಂಖಾನರು ಏಳುವಷ್ಟರ ಹೊತ್ತಿಗೆ ಅವರ ಹಾಸಿಗೆ ಹತ್ತಿರ ಬಂದು ನೆರೆಯುತ್ತಿದ್ದರು. ಅವರಿಗೆಲ್ಲ ತಿಂಡಿ ತೀರ್ಥ ಕೊಟ್ಟು ಕಳಿಸದೇ ಇರುತ್ತಿರಲಿಲ್ಲ ಕರೀಂಖಾನರಿಗೆ ಮಕ್ಕಳೆಂದರೆ ಎಷ್ಟು ವಾತ್ಸಲ್ಯವಿತ್ತು ಎನ್ನುವುದು ತಿಳಿಯುತ್ತದೆ.

''ಕರೀಂಖಾನರ ಒಳ್ಳೆಯ ಗುಣವನ್ನು ಒಳ್ಳೊಳ್ಳೆಯ ಜನರು ದುರುಪಯೋಗ ಮಾಡಿಕೊಂಡಿದ್ದಾರೆ. ಕೆಲವರು ತಮ್ಮ ಜೀವನಕ್ಕೆ ಬೇಕಾದಂತೆ ಉಪಯೋಗಿಸಿಕೊಂಡಿದ್ದಾರೆ. ಕರೀಂಖಾನರು ಯಾರಿಗೂ ತೊಂದರೆಕೊಟ್ಟವರಲ್ಲ. ಒಂದು ಸಲ ದ್ವಾರಕಾ ಹೋಟೇಲಿನಲ್ಲಿರುವಾಗ ಯಾರೋ ಒಬ್ಬ ಬಂದು ಅವರಲ್ಲಿದ್ದ ಕಾಸನ್ನು ಎಲ್ಲಾ ಎತ್ತಿಕೊಂಡು ಹೋಗಿದ್ದಾನೆ. ಇವರು ಮಲಗೇ ಇದ್ದರಂತೆ, ಕರೀಂಖಾನರು ಮೂಲತಃ ಉದಾರ ಸ್ವಭಾವದ ಅಂತಃಕರಣಿಗಳು. ಇವರೇ ಇವರ ಮಾತಲ್ಲಿ ಹೇಳುವಂತೆ ''ಅವನ ಕಷ್ಟ ಏನಿದೆಯೋ ಅವನು ನನ್ನ ಹತ್ತಿರ ಬಂದಿರಬೇಕು'' ಆಗ ಆತ್ಮೀಯರಾದ ಶಿವಲಿಂಗಯ್ಯ ಮಾತನ್ನು ಮುಂದುವರೆಸುತ್ತ 'ಏನ್ಸರ್ ಕಳ್ಳ ಬಂದರೂ ಹೀಗೆ ಮಲಗಿಯೇ ಇದ್ದಿರಲ್ಲ' ಎಂದಾಗ 'ಏನು ಕೇಳೋಕ ಹೋಗ್ಲಿ ನಾನು ಅವನ ಹತ್ತಿರ ? ಅವನಿಗೇನೋ ಕಷ್ಟವಿದೆ ಬಂದವ್ನೆ ಅವ್ನಿಗೆ ನಾನೇನಾದ್ರು ಕೇಳೋದೋ, ಅವ್ನೇನಾದರೂ ಮಾಡೋದು ಸುಮ್ಮನೆ

ಮಲ್ಕೊಂಡಬಿಟ್ರೆ ಒಳ್ಳೆದಲ್ವಾ. ಅದರ ಬದಲಿಗೆ ಏನೇನು ಆಗೋಗ್ಲೋದು ನನಗಿಷ್ಟವಿಲ್ಲ'' ಎಂದು ಬಿಟ್ಟರಂತೆ.

ಭಿಕ್ಷೆ ಕೇಳುವವರಿಗೆ ಕೈಗೆ ಸಿಕ್ಕಿದಷ್ಟು ಕೊಡುತ್ತಿದ್ದರು. ಅದು ಯಾಕೆ ಹೀಗೆ ಎಂದು ಪ್ರಶ್ನಿಸಿದರೆ ''ನಾನು ಎಷ್ಟು ಕೊಟ್ಟೇನೋ ಅಷ್ಟರಿಂದ ಒಂದು ಹೊತ್ತಿನ ಊಟಕ್ಕಾದರೂ ಆಗ್ಲಿ, ಎಂಬುದು ಇವರ ಇಚ್ಛೆಯಾಗಿತ್ತು. ಕರೀಂಖಾನರು ಉಳಿದುಕೊಂಡ ದ್ವಾರಕಾ ಹೊಟೇಲ್ ಅಂದರೆ ಎಲ್ಲಾ ಸೌಕರ್ಯಗಳಿದ್ದಂತಹ ವ್ಯವಸ್ಥಿತವಾದ ವಸತಿ ಗೃಹವಲ್ಲ, ಅಲ್ಲಿ ತಮ್ಮನ್ನು ಕಾಣಲು ಹೋದವರಿಗೆ ದೋಸೆ, ಬೋಂಡ ತಿನ್ನಿಸದೇ ಕಳುಹಿಸುತ್ತಿರಲಿಲ್ಲ, ರೊಕ್ಕ ಜೇಬಿನಲ್ಲಿದ್ದರೆ ಬಂದವರಿಗೆಲ್ಲ ಒಳ್ಳೆಯದಾಗೇ ತಿಂಡಿ, ತೀರ್ಥಗಳನ್ನು ಕೊಡುತ್ತಿದ್ದರು. ಕಿಸೆಯಲ್ಲಿ ಕಾಸಿಲ್ಲದಿದ್ದರೆ ಬಂದವರಿಗಷ್ಟೇ ಕೊಟ್ಟು ತಾವು ನೀರು ಕುಡಿದು ದಿನ ಕಳೆಯುತ್ತಿದ್ದರು. ''ಇವರ ಹತ್ತಿರ ಯಾರು ಬಂದರೂ ಇಸ್ಕೊಂಡು  ಹೋಗುವವರೇ ಹೊರತು ಕೊಡುವವ ಯಾರೂ ಬರುತ್ತಿರಲಿಲ್ಲ, ಇವೆಲ್ಲ ಆಗಿ ಹಾಸ್ಪಿಟಲ್‌ನಲ್ಲಿ ಮಲಗಿಕೊಂಡಿರುವಾಗಲೂ ಜನರು ಬಂದು ಕೇಳುತ್ತಿದ್ದರು. ಬೌರಿಂಗ್ ಆಸ್ಪತ್ರೆಯನ್ನು ಹುಡುಕಿಕೊಂಡು ಜನ ಬರುತ್ತಿದ್ದರು. ೨೦ ರೂ.ಗೆ, ೫೦ ರೂ.ಗೆ ಇವರಿಗೆ ಬಂದು ಪೀಡಿಸುತ್ತಿದ್ದರು. ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾಗಿದ್ದಾಗ ಕರೀಂಖಾನರನ್ನು ಆಸ್ಪತ್ರೆಗೆ ಸೇರಿಸಿದ ಸಮಯದಲ್ಲಿ ನಾನು ಅವರ ಸೇವೆ ಮಾಡುತ್ತಿದ್ದೆ, ನಾನು ಎಲ್ಲಾದರೂ ಆಚೆ ಕಡೆ ಹೋದಾಗ ಇದ್ದ ಬದ್ದ ಎಲ್ಲವನ್ನು ಸಂಗ್ರಹಿಸಿ ಎಲ್ಲ ಮುದ್ದೆ ಮಾಡಿ ಕೈಯಲ್ಲಿ ಇಟ್ಟುಕೊಂಡು ಇರುತ್ತಿದ್ದರು. ಪಕ್ಕಕ್ಕೆ ಬಂದು ಕುಳಿತಿರುವ ಅವರಿಗೆ ನಾನು ಆತ್ತ ಕಡೆ ಹೋದಾಗ ಮೆತ್ತಗೆ ಕೈಗೆ ಇಟ್ಟುಬಿಡುವರು. ಅವ್ರು ಹಾಗೆಯೇ ತೆಗೆದುಕೊಂಡು ಜೇಬಿಗೆ ಇಳಿಬಿಡುತ್ತಿದ್ದರು. ಈ ತರಹ ಜನರೂ ಇದ್ದಾರೆ.  ಒಮ್ಮೆ ಕರೀಂಖಾನರನ್ನು ಕೇಳಿಯೇ ಬಿಟ್ಟೆ ಏನ್ ಸಾರ್ ನಾವು ಅಲ್ಲಿ ಇಲ್ಲಿ ಕಷ್ಟಪಟ್ಟು ಸೇರಿಸ್ಕೊಡ್ತೇವೆ. ಆರು ಏಳು ತಿಂಗಳು ಸೇವೆ ಮಾಡುತ್ತೇವೆ. ನೀವು ಅದನ್ನೆಲ್ಲ ಲೆಕ್ಕಕ್ಕೆ ಹಾಕೋದು ಬಿಟ್ಟು ನೀವು ಹಿಂಗ್ ಕೊಡೋದಾದ್ರೆ ನಿಮ್ಮ ಅಣ್ಣ ತಮ್ಮಂದ್ರಿಗೆ ಕೊಡಿ. ನಿಮ್ಮ ಮನೆಯವರಿಗೆ ಕೊಡಿ, ನಿಮಗೆ ದಿನಾ ಊಟ ಕಳಿಸ್ತಾರೆ, ಹಾದಿ ಬೀದಿಯವರಿಗೆಲ್ಲ ಕೊಡ್ತಿರಾ ? ಎಂದಾಗ ಅವರು ನಗುತ್ತಿದ್ದರು. ಹಾಗೆಯೇ ''ಏನ್ಮಾಡೋದು, ಕೆಲವು ಜನ ಮೋಸ ಮಾಡಿದ್ದಾರೆ, ನೋವು ಕೊಟ್ಟಿದ್ದಾರೆ, ಕೆಲವರಿಂದ ಅನುಕೂಲ ಕೂಡಾ ಆಗಿದೆ'' ಎನ್ನುತ್ತಾ ಮಾತಿನ ದಾಟಿಯನ್ನೇ ತಿರುಗಿಸಿ ಬಿಡುವರು ಎನ್ನುತ್ತಾರೆ ಅಕಾಡೆಮಿಯ ಶ್ರೀ ಶಿವಲಿಂಗಯ್ಯ. ಕರೀಂಖಾನರ ಉದಾರ ಗುಣವೇ ಅವರನ್ನು ದೌರ್ಬಲ್ಯರನ್ನಾಗಿ ಮಾಡಿತು, ಎನ್ನುವುದು ವ್ಯಕ್ತವಾಗುತ್ತದೆ. ಕರೀಂಖಾನರಿಗೆ ಎಂದಿಗೂ ಸ್ವಾರ್ಥ ಸಾಧನೆಯ ಮೂಲಕ ಧನ ಸಂಪಾದಿಸಬೇಕೆಂಬ ಹಪಹಪಿತನ ಇರಲಿಲ್ಲ.

''ಕರೀಂಖಾನರು ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಲ್ಲಿ ಅಧ್ಯಕ್ಷರಾಗಿದ್ದಾಗ ನಾನು ಅವರ ಜೊತೆ ರಿಜಿಸ್ಟ್ರಾರ್  ಕೆಲಸ ಮಾಡುತ್ತಿದ್ದೆ, ಅವರಿಗೆ ಬರುವ ಪೆನ್ಶನ್ ಹಾಗೂ ಇತರೇ ಕಡೆಗಳಿಂದ ಬರುವ ಸ್ವಲ್ಪ ಹಣವನ್ನು ಇಟ್ಟುಕೊಂಡಿರುತ್ತಿದ್ದರು. ಯಾರಾದರೂ ವೃತ್ತಿ ರಂಗಭೂಮಿಯ ಗೆಳೆಯರು ಬಂದಾಗ ಎಷ್ಟೆಂದು ನೋಡದೆ ತಮ್ಮಲ್ಲಿರುವ ಹಣವನ್ನು ಕೊಡುತ್ತಿದ್ದರು. 'ಏನ್ ಸಾರ್ ನಿಮಗಿಲ್ಲವೆಂದರೆ', ''ಏನೋ ಇರ್ತದೆ ದೇವರು ಕೊಡ್ತಾನೆ ಅಷ್ಟು ಅಲ್ಲದೇ ನಿಮ್ಮವರು ಬಂದು ಊಟ ಕೊಟ್ಟು ಹೋಗ್ಯಾರಿ ಬಿಡಿ'' ಎಂದು ಹೇಳುತ್ತಿದ್ದರು. ಇವರು ಕೊಡುಗೈ ದಾನಿ : ಜಾನಪದ ಅಕಾಡೆಮಿಯ ಕೆಲಸ ಮಾಡುವಾಗ ಗುಲಬರ್ಗಾ ರಾಯಚೂರುಗಳಿಗೆ ಟ್ರೇನ್‌ನಲ್ಲಿ ಹೋದರೆ, ಟ್ರೇನ್ ಪಕ್ಕದಲ್ಲಿ ಭಿಕ್ಷುಕರು ಬರುತ್ತಾರೆಂದು ತಿಳಿದು

ಅವರಿಗೆ ಚಿಲ್ಲರೆ ಮಾಡಿಸಿಕೊಂಡು ಇಡುತ್ತಿದ್ದರು. ಬಂದವರಿಗೆ ಸ್ವಲ್ಪ ಸ್ವಲ್ಪ ಕೊಟ್ಟು, ಇವರ ಹತ್ತಿರ ಮುಗಿಯಲು "ನಿಮ್ಮ ಹತ್ರ ಇದ್ರೆ ಚಿಲ್ಲರೆ ಕೊಡಿ ಪಾಪ ಬಂದಿದ್ದಾನೆ" ಎನ್ನುತ್ತಿದ್ದರು. ಬಡತನ ನೋಡಿ ಹೇಗೆ ಮರುಗುವರೆಂದರೆ ಇವ್ರೇ ಬಡವರು ಆಗಿದ್ರೂ ಬೇರೆ ಬಡವರನ್ನು ಕಂಡು ಮರುಗುತ್ತಿದ್ದರು. ಇವರ ಉದಾರತೆಯಿಂದ ಇವರ ಬದುಕು ಬಹು ದೊಡ್ಡದು ಎನಿಸಿತು. ಇವರ ಬದುಕೇ ಒಂದು ದೊಡ್ಡ ಕಾದಂಬರಿ, ಒಂದು ಮಹಾಕಾವ್ಯ, ಒಮ್ಮೆ ಇವರಿಗೆ ಆರೋಗ್ಯ ಸರಿಯಿಲ್ಲಾದಾಗ ಗೆಳೆಯರ ಬಳಗದಿಂದ ಹಣ ಸಂಗ್ರಹಿಸುವ ಕಾರ್ಯ ನಡೆಯಿತು. ಸಂಗ್ರಹಿಸಿದ ಹಣದಲ್ಲಿ ಆಸ್ಪತ್ರೆ ಖರ್ಚು ಹೋಗಲಾಗಿ ಮೇಲಾಗಿದ್ದ ಹಣವನ್ನು ಉಪಯೋಗಿಸಿ ೧೫೦೦ ರೂಪಾಯಿಯ ಒಂದು ಬಂಗಾರದ ಉಂಗುರವನ್ನು ಕರೀಂಖಾನರಿಗೆ ಕೊಟ್ಟೆವು. ಅದನ್ನು ಅಧ್ಯಕ್ಷರಾಗಿದ್ದಾಗ ಕೆಲವು ದಿನ ಧರಿಸಿದರು. ಆ ಮೇಲೆ ಅದನ್ನು ನನಗೆ ಕೊಟ್ರು. "ನನಗೆ ಮಕ್ಕಳಿಲ್ಲ ನೀವು ನನ್ನ ಮಗ ಇದ್ದಹಾಗೆ ಇದ್ದೀರಿ, ನೀವು ಇದನ್ನು ತೊಟ್ಕೊಳ್ಳಬೇಕು" ಎಂದು ಬಲವಂತ ಮಾಡಿದರು. ನಾನು ಆ ಉಂಗುರವನ್ನು ಧರಿಸಿಕೊಂಡೆ, ನಮ್ಮನ್ನು ಬಹಳ ಪ್ರೀತಿಯಿಂದ ಕಾಣುತ್ತಿದ್ದರು. ಆ ಉಂಗುರ ಇಂದಿಗೂ ನನ್ನ ಹತ್ತಿರ ಅಮೂಲ್ಯವಾಗಿಯೇ ಇದೆ. ಈ ಮೇಲಿನ ಎಲ್ಲ ಮಾತುಗಳು ಕರೀಂಖಾನರ ಅಂತಃಕರಣ, ಸಹಾನುಭೂತಿಯನ್ನು ಹಾಗೂ ಮಹೋನ್ನತವಾದ ಸ್ವಭಾವವನ್ನು ಎತ್ತಿ ತೋರಿಸುವಲ್ಲಿ ಸಾಕಷ್ಟು ಪುಷ್ಟಿಯನ್ನು ಕೊಡುತ್ತದೆ." ಎಂದು ಗೌರವದಿಂದ ನೆನಪಿಸಿಕೊಳ್ಳುತ್ತಾರೆ. ಅಕಾಡೆಮಿಯಲ್ಲಿ ಹಿಂದೆ ರಿಜಿಸ್ಟರ್ ಆಗಿದ್ದ ಶ್ರೀ ಹಿ.ಚಿ. ಬೋರಲಿಂಗಯ್ಯ.

ಅನನ್ಯ ಕೃಷ್ಣ ಭಕ್ತ, ಜಾನಪದ ತಜ್ಞ ಡಾ. ಎಸ್. ಕೆ. ಕರೀಂಖಾನ್ ಸಾಹಿತ್ಯ ಸಂಭಾಷಣೆಯ ಮೆರಗು ನೀಡಿದವರು. ರಾಜ್ಯ ಜಾನಪದ ಅಕಾಡೆಮಿ ಅಧ್ಯಕ್ಷರಾಗಿ ಕಾರಿನಲ್ಲೇ ತಿರುಗಾಡಬಹುದಾದ ಅವಕಾಶವಿದ್ದರೂ, ಬಸ್ಸಲ್ಲೇ ಪ್ರಯಾಣಿಸಿದರು. ಇವರು ಗಾಂಧೀವಾದಿ, ಹೀಗಾಗಿ ಸರಳ ಬದುಕನ್ನೇ ತನ್ನ ಜೀವನದಲ್ಲಿ ಅಪ್ಪಿಕೊಂಡಿದ್ದರು. ಗಾಂಧೀ ಬಜಾರಿನ ಸದಾ ಕಲರವ ಮಧ್ಯೆ ಇವರನ್ನು ಭೇಟಿ ಮಾಡಿದಾಗ "ಸಂತೆಯೊಳಗೊಂದು ಮನೆಯ ಮಾಡಿದ ಸಂತ"ನನ್ನು ನೋಡಿದ ಅನುಭವವಾಗುತ್ತದೆ. ಗಾಂಧೀ ಬಜಾರಿಗೆ ವಿಶಿಷ್ಟ ಗತ್ತು ಹುಮ್ಮಸ್ಸು ತಂದುಕೊಡುವ ಬೆಳಗುಗಳು ಈ ಗಾಂಧೀ ಬಜಾರಿನ ಕರ್ನಾಟಕದ ಗಾಂಧೀಗೆ ಹೊಸತೇನು ಹೊತ್ತು ತರುವುದಿಲ್ಲ. ಹಲವರ ಬದುಕಿಗೆ ರಾಗ ತಾಳವನ್ನು ನೀಡುವ ಬೆಳಗುಗಳು, ಇವರ ಪಾಲಿಗೆ ಕೇವಲ ಮೌನವನ್ನು ಮಾತ್ರ ನೀಡಿವೆ. ಶಾಂತ ಸ್ವಾಭಿಮಾನದ ಕರೀಂಖಾನರಿಗೆ ಸ್ವಾತಂತ್ರ್ಯ ಹೋರಾಟದ ಫಲವಾಗಿ ಚಿಕ್ಕಾಸೂ ಸಿಗಲಿಲ್ಲ, ಇವರು ಅದಕ್ಕಾಗಿ ಹಾತೊರೆಯಲಿಲ್ಲ. ೧೯೫೪ ರಲ್ಲಿ ರಾಷ್ಟ್ರಾಧ್ಯಕ್ಷರಿಂದ ಗೌರವಕ್ಕಾಗಿ ಭೇಟಿಗೆ ಕರೆ ಬಂದರೂ ಇವರು ಹೋಗಲಿಲ್ಲ, ಮೈಸೂರು ಮಹಾರಾಜರಿಂದ ಅರಮನೆಯಲ್ಲಿ ವಿಶೇಷ ಅತಿಥಿಯಾಗಿರಬೇಕೆಂದು, ಆಹ್ವಾನ ಬಂದರೂ ಇವರು ಅದಕ್ಕೆ ಮನ್ನಣೆ ನೀಡಲಿಲ್ಲ. ಸಾದಾ, ಸೀದಾ, ಸರಳ ಬದುಕಿನ ಹರಿಕಾರರಾದ ಕರೀಂಖಾನರಿಗೆ ಅಂದಿನ ಸ್ವಾರ್ಥದ ಪರಿಸ್ಥಿತಿ ಅರ್ಥವಾಗುತ್ತ ಹೋಯಿತು. ಒಬ್ಬರು ಆಡಿದಂತೆ ನಡೆಯುವುದಿಲ್ಲ, ದಿನಗಳುರುಳಿದಂತೆ ನಮ್ಮ ನಾಡಿನ ಸ್ಥಿತಿಗಳು ಸುಭದ್ರವಾಗಿ ನಿಲ್ಲಲಾರದೇನು ಎಂದು ಮನದಲ್ಲಿಯೇ ದುಃಖಿಸುತ್ತಿದ್ದರು.

ಕರೀಂಖಾನರು ಮಿತ ಭಾಷಿಗಳು, ಮಾತನಾಡಬೇಕು ಎನಿಸಿದರೆ ಸ್ನೇಹಿತರ ಹತ್ತಿರ, ಸಲಿಗೆಯವರ ಹತ್ತಿರ ನಾಲ್ಕು ಮಾತನಾಡುತ್ತಿದ್ದರು. ಬೇರೆಯವರ ಹತ್ತಿರ ಸುತ್ತು ಬಳಸಿ ಮಾತನಾಡುವುದನ್ನು ಅವರು ಇಷ್ಟಪಡುತ್ತಿರಲಿಲ್ಲ. ಇವರ ವ್ಯಕ್ತಿತ್ವದ ಬಗ್ಗೆ ಡಾ. ಸೋಮಶೇಖರ ಇಮ್ರಾಪೂರರವರು ಹೇಳುವಂತೆ "ಇವರು ಜಾತ್ಯತೀತ ನಿಲುವಿನ ವ್ಯಕ್ತಿಯಾಗಿದ್ದರು. ಯಾರು

ಏನು ಹೇಳಿದರೂ ಅದನ್ನು ಗ್ರಹಣ ಮಾಡಿಕೊಳ್ಳುವ ಶಕ್ತಿ ಅವರಿಗಿತ್ತು. ಎಂದಿಗೂ ಅವರು ತಮ್ಮ ಅಭಿಪ್ರಾಯವನ್ನು ಬೇರೆಯವರ ಮೇಲೆ ಹೇರುತ್ತಿರಲಿಲ್ಲ. ವಿಶೇಷವಾಗಿ ತರುಣರಿಗೆ ಪ್ರೋತ್ಸಾಹ ನೀಡುತ್ತಿದ್ದರು. ಇವರ ದೊಡ್ಡ ಗುಣವೆಂದರೆ ಕ್ಷಮಾ ಗುಣ. ಸೋಲುವುದೇ ಇವರ ದೌರ್ಬಲ್ಯ. ಯಾರಿಗೂ ಎದುರು ಮಾತನಾಡುವವರಲ್ಲ. ಇವರನ್ನು ಸುಲಭವಾಗಿ ಮೋಸ ಮಾಡಬಹುದು. ವಿಶೇಷವಾಗಿ ಅವರಲ್ಲಿ ಗೌರವವಿರುವುದು ಅವರ ಕ್ರಿಯಾಶೀಲತೆಯಲ್ಲಿ; ಸುಮ್ಮನೆ ಕುಳಿತುಕೊಳ್ಳುವವರಲ್ಲ. ಸುಮ್ಮನೆ ಕುಳಿತರೂ ಏನಾದರೂ ಆಲೋಚನೆ ಮಾಡುತ್ತಿರುವರು. ಒಳ್ಳೆಯ ಮಾರ್ಗದರ್ಶಕರಾಗಿದ್ದರು. ನಿಜವಾದ ಮಾನವತಾವಾದಿಯೇ ಆಗಿದ್ದರು. ಇವರಿಗೆ ಭಾರತದ ಇತಿಹಾಸದ ಬಗ್ಗೆ, ಜಗತ್ತಿನ ಇತಿಹಾಸದ ಬಗ್ಗೆ ಸಂಪೂರ್ಣ ಅರಿವಿತ್ತು. ಯಾವ ವಿಷಯ ಕೊಟ್ಟರೂ ನಿರರ್ಗಳವಾಗಿ ತಮ್ಮ ಭಾಷಾ ಪ್ರೌಢಿಮೆಯಿಂದ ಮಾತನಾಡುವ ಶಕ್ತಿ ಇತ್ತು ಎಂಬ ಹೇಳಿಕೆ ಕರೀಂಖಾನರ ಬದುಕಿನ ನೈಜ ಸ್ವಭಾವ ವ್ಯಕ್ತವಾಗುತ್ತದೆ.''

ಕರೀಂಖಾನರು ಯಾವಾಗಲೂ ಬರವಣಿಗೆಯಲ್ಲಿ ತೊಡಗಿರುತ್ತಿದ್ದರು. ಭಾಷಾ ಶುದ್ಧತೆಗೆ ಹೆಚ್ಚಾಗಿ ಮಹತ್ವ ಕೊಡುತ್ತಿದ್ದರು. ಇವರ ಭಾಷೆ ಅಲಂಕಾರಿಕವಾಗಿತ್ತು. ಇವರು ತಮ್ಮ ಮೇಲೆ ಗುರು ನಾರಾಯಣ ಶಾಸ್ತ್ರಿ ಮತ್ತು ಕವಿ ಬಾಣಭಟ್ಟನ ಶೈಲಿಯ ಪ್ರಭಾವವಾಗಿರುವುದರ ಬಗ್ಗೆ ಹೇಳಿಕೊಂಡಿದ್ದಾರೆ. ವೈವಿಧ್ಯಮಯವಾದ ಭಾಷೆ ಇವರಲ್ಲಿ ಚಿಕ್ಕವರಿರುವಾಗಲೇ ಕರಗತವಾಯಿತು. ಸಂಸ್ಕೃತ ಗ್ರಂಥಗಳನ್ನು ಹೆಚ್ಚು ಹೆಚ್ಚು ಓದುತ್ತ ಬರವಣಿಗೆಯಲ್ಲಿ ತೊಡಗಿಕೊಂಡಿದ್ದರಿಂದ ಇವರಲ್ಲಿ ಭಾಷಾ ಪ್ರಭುದ್ಧತೆ ಉಂಟಾಯಿತು. ಇವರು ಒಂದು ಕನ್ನಡ ಪದಗಳನ್ನು ಬಳಸಿದರೆ ಹತ್ತು ಹನ್ನೆರಡು ಸಮಾನ ಪದಗಳಿರುವಂತೆ ಬಳಸಬೇಕು ಎನ್ನುತ್ತಿದ್ದರು. ಭಾಷಾ ಸೌಂದರ್ಯದ ಗುಟ್ಟನ್ನು ಅರಿತಿದ್ದರು. ಕನ್ನಡ ಪದಗಳ ಬಗೆಗೆ ಇವರದು, ನಿರ್ದಿಷ್ಟವಾದ ತಿಳುವಳಿಕೆ, ತಮಗೆ ಯಾವುದಾದರೂ ಪದದ ಬಗೆಗೆ ಸಂದೇಹ ಬಂದರೆ ಪಂಡಿತರಿಂದ ಬಗೆಹರಿಸಿಕೊಳ್ಳುತ್ತಿದ್ದರು. ಕನ್ನಡ ಸಂಸ್ಕೃತಗಳಲ್ಲಿ ಪ್ರಚಂಡ ಪಂಡಿತರಾಗಿದ್ದ ಗುರು ಅಚ್ಚಂಗಿ ನಾರಾಯಣ ಶಾಸ್ತ್ರಿಗಳ ಬಳಿ ಪದಗಳ ವ್ಯುತ್ಪತ್ತಿ ಧಾತುಗಳ ಬಗೆಗೆ ಸಂದೇಹವಿರುವ ಸಂಗತಿಗಳು ಇವನ್ನೆಲ್ಲ ಚರ್ಚಿಸುತ್ತಿದ್ದರು, ತಿಳಿದುಕೊಳ್ಳುತ್ತಿದ್ದರು. ಇವರು ಕ್ರಿಯಾಪದವನ್ನು ಎಚ್ಚರಿಕೆಯಿಂದ ಬಳಸುತ್ತಿದ್ದರು.

ಕರೀಂಖಾನರ ಮಾತೃ ಭಾಷೆ ಉರ್ದು. ಆ ಭಾಷೆಯಲ್ಲಿ ತಕ್ಕಷ್ಟು ಪಾಂಡಿತ್ಯವಿತ್ತು. ಇಂಗ್ಲೀಷ ಭಾಷೆಯನ್ನು ಅವರು ಕಲಿತದ್ದು ಬಹಳ ತಡವಾಗಿ, ತಮ್ಮ ಚಿಕ್ಕ ವಯಸ್ಸಿನಲ್ಲೇ ಕನ್ನಡ ಮತ್ತು ಸಂಸ್ಕೃತದಲ್ಲಿ ಪಾಂಡಿತ್ಯ ಸಂಪಾದಿಸಿದರು. ಇವರ ಭಾಷಾ ಶೈಲಿಗೆ ಸಂಸ್ಕೃತ ಭಾಷಾ ಪ್ರಭಾವವೇ ಕಾರಣವಾಗಿದೆ. ಕರೀಂಖಾನರಿಗೆ ಸಂಸ್ಕೃತ ಭಾಷೆಯಲ್ಲೂ ತುಂಬಾ ಒಲವಿತ್ತು. ಸಂಸ್ಕೃತವನ್ನು ಭಾರತೀಯರೆಲ್ಲರೂ ಕಲಿಯಬೇಕೆಂಬುವುದು ಅವರ ಅಭಿಲಾಷೆಯಾಗಿತ್ತು. 'ಸಂಸ್ಕೃತ, ಕರ್ಣ ಮನೋಹರವಾದ ಭಾಷೆ. ಜರ್ಮನರು, ಜಪಾನಿಯರು ಮುಂತಾದ ವಿದೇಶಿಯರು ಅದರಲ್ಲಿ ಪ್ರಾವಿಣ್ಯಾ ಪಡೆಯಲು ಬಯಸುತ್ತಿರುವಾಗ ಭಾರತೀಯರು ಅದನ್ನು ಕಲಿಯುವುದರಲ್ಲಿ ತಪ್ಪೇನು ?' ಎಂದು ಕೇಳುತ್ತಾರೆ.

ಇವರ ಮಾತು ಎಂದರೆ ಬಹಳ ಗಡಸು ಧ್ವನಿಯಾಗಿತ್ತು. ವಯೋವೃದ್ಧರಾಗಿದ್ದರೂ ಅವರು ಹಾಡಿದರೆ ಬಹಳ ಮಾಧುರ್ಯವನ್ನು ನೀಡುತ್ತಿತ್ತು. ಇವರ ಭಾಷೆ ಶುದ್ಧವಾಗಿತ್ತು. ಸಂಸ್ಕೃತ ಭೂಯಿಷ್ಠವಾಗಿತ್ತು. ಇವರು ಎಂದೂ ಸುಳ್ಳಾಡುತ್ತಿರಲಿಲ್ಲ. ಇದ್ದುದನ್ನು ಇದ್ದಂತೆ ಹೇಳುವ ವ್ಯಕ್ತಿತ್ವ ಅವರದಾಗಿದೆ. ಶ್ರೀ ದೊಡ್ಡ ರಂಗೇಗೌಡರು ಎಸ್.ಕೆ. ಕರೀಂಖಾನರ ಬಗ್ಗೆ ಹೇಳುತ್ತ "ನನ್ನ ಬಾಲ್ಯದ ದಿನಗಳಲ್ಲಿ ಬಂದವರು ಎಸ್.ಕೆ. ಕರೀಂಖಾನರು. ಅವರೊಂದು ಓಡಾಡುವ ಜಾನಪದ ವಿಶ್ವಕೋಶ ಸಂಸ್ಕೃತ ಭಾಷೆಯಲ್ಲಿ ಅವರಿಗೆ ಇರತಕ್ಕಂತ ಹಿಡಿತ ಇದೆಯಲ್ಲ, ಅದು ಮಿಗಿಲಾದದ್ದು, ಅಭೂತಪೂರ್ವವಾದದ್ದು ಮೂವತ್ತು ನಿಮಿಷದ ಕಾಲ ಒಬ್ಬರೇ ಒಂದೇ ವಾಕ್ಯದಲ್ಲಿ ಕರ್ನಾಟಕದಲ್ಲಿ ಮಾತನಾಡಬಲ್ಲ ಪಂಡಿತರೊಬ್ಬರು ಇದ್ದಾರೆಂದರೆ ಅವರೇ ಎಸ್.ಕೆ. ಕರೀಂಖಾನ್" ಎಂದು ತಮ್ಮ ಸಂದರ್ಶನದಲ್ಲಿ ವ್ಯಕ್ತಪಡಿಸಿರುವುದು ಕರೀಂಖಾನರ ಅದ್ಭುತವಾದ ವಾಕ್ ಚಾತುರ್ಯವನ್ನು, ಪ್ರತಿಭೆಯನ್ನು ಪರಿಚಯಿಸಿ ಕೊಡುತ್ತದೆ.

"ನಾನು ನನ್ನ ಶಿಷ್ಯನಾದ ವೃಷಭೇಂದ್ರ ಸ್ವಾಮಿ ಜೊತೆಯಲ್ಲಿ ಪಾರ್ಕಿನಲ್ಲಿ ಕುಳಿತಿದ್ದೆ. ರೇಡಿಯೋದಿಂದ ಒಂದು ಉಪನ್ಯಾಸ ಕೇಳಿಬರ್ತಾ ಇತ್ತು. ಆಗ ನಾನು ವೃಷಭೇಂದ್ರ ಸ್ವಾಮಿಗೆ ಕೇಳಿದೆ. ನನ್ನವೇ ಪ್ರೌಢಶೈಲಿ ಹಾಗಂತ ಆಕ್ಷೇಪಣೆ ಮಾಡ್ತಾರಲ್ಲ ಈಗ ಈ ಮಾತನಾಡ್ತಾ ಇರೋನೇನು ಸುಲಭ ಶೈಲಿಯಲ್ಲಿ ಮಾತನಾಡ್ತಾ ಇದ್ದಾನಾ ? ನನಗಿಂತ ಸುಲಭ ಶೈಲಿಯಲ್ಲಿ ಮಾತನಾಡ್ತಾ ಇಲ್ವೇ? ಅಂದೆ. ಅಷ್ಟೊತ್ತಿಗೆ ಉಪನ್ಯಾಸ ಮುಗಿತು. ವ್ಯವಸ್ಥಾಪಕರು ಇದುವರೆಗೆ ಮಾತನಾಡಿದವರು ಸಕಲೇಶಪುರದ ಕರೀಂಖಾನ್ ಅಂದಾಗ ನನಗೆ ದಿಗ್ಭ್ರಮೆಯಾಯಿತು." ಈ ಮಾತುಗಳ ಅಂತರಂಗವನ್ನು ಅವಲೋಕಿಸಿದರೆ, ಕರೀಂಖಾನರ ಭಾಷಣಗಳು ಆಕಾಶವಾಣಿ ಮುಂತಾದ ಸಮೂಹ ಮಾಧ್ಯಮಗಳಲ್ಲಿ ಪ್ರಚಾರಗೊಂಡಿದ್ದವು. ತಮ್ಮ ಮಾತುಗಳನ್ನು ತಾವೇ ನಂಬಲಾರದಷ್ಟು ಪ್ರಭಾವಶಾಲಿಯಾದ ಮಾತುಗಳಾಗಿರುತ್ತಿದ್ದವು.

ಕನ್ನಡದ ಬಗ್ಗೆ ಅಪಾರ ಅಭಿಮಾನವಿರುವ ಕರೀಂಖಾನರಿಗೆ ಸಂತೋಷದ ಸಂಗತಿಯೆಂದರೆ ತಾನು ಕನ್ನಡಿಗನೆನ್ನುವದು. ಕನ್ನಡ, ಮೃದು ಭಾಷೆ, ಮಧುರ ಭಾಷೆ, ಸಹವಾಸಕ್ಕೆ ಸಂಭಾಷಣೆಗೆ ಯೋಗ್ಯವಾದ ಭಾಷೆ ಎಂಬುದು ಇವರ ಅನಿಸಿಕೆ. ಇವರು ಕನ್ನಡದಲ್ಲಿ ರಚಿಸಿದ ಗದ್ಯ ಪದ್ಯಗಳು ಅತ್ಯಂತ ಮೋಹಕವಾಗಿವೆ. ಮತ್ತೊಬ್ಬರಲ್ಲಿ ಒಳ್ಳೆಯತನವಿದ್ದರೆ ಅದನ್ನು ಗುರುತಿಸುವ ಮೆಚ್ಚುವ ಗುಣ ಹಾಗೂ ಮನಸ್ಸು ಇವರಲ್ಲಿತ್ತು.

ಇವರು ಕೈಲಾಗದವರನ್ನು ಕಂಡರೆ ತುಂಬಾ ನೊಂದುಕೊಳ್ಳುತ್ತಿದ್ದರು. ಎಲ್ಲ ಜಾತಿಯವರನ್ನು ತುಂಬಾ ಗೌರವದಿಂದ ಕಾಣುತ್ತಿದ್ದರು. ಇವರು ಜಾನಪದ ಅಕಾಡೆಮಿಯ ಅಧ್ಯಕ್ಷರಾಗಿದ್ದ ಕಾಲದಲ್ಲಿ ಗೊಂಡರು, ಗಿರಿಜನರು, ಕುಣಬಿಗಳು, ಕೆಂಬಟ್ಟಿ ಹಾಲಕ್ಕಿ, ಅಗೇರು, ಮುಕ್ರಿಗಳು, ಗೌಳಿಗಳು, ಕಚ್ಚೇಗೌಳಿಗರು, ಸಿದ್ಧಿಗಳು ಮುಂತಾದ ಬುಡಕಟ್ಟು ಜನಾಂಗಗಳ ವಿಡಿಯೋ, ಆಡಿಯೋ ಮಾಡುವಾಗ ಇವರೂ ಬುಡಕಟ್ಟು ಜನರಂತಾಗಿ ಅವರ ಪರಿಸ್ಥಿತಿ ಕುರಿತು ಅಧ್ಯಯನ ಮಾಡಿದರು. 'ಗೆಜ್ಜೆ ಮಾತಾಡುತಾವೆ' ಎಂಬ ಪುಸ್ತಕದಲ್ಲಿ ಈ ಬುಡಕಟ್ಟು ಜನಾಂಗಗಳ ಆಚರಣೆಯ ಕುರಿತು ವಿಸ್ತಾರವಾದ ವಿಷಯ ಪ್ರಸ್ತಾಪನೆಗೊಂಡಿದೆ.ಬಡಬಗ್ಗರ ಬಗ್ಗೆ ಕಳಕಳಿಯುಳ್ಳ ಕರೀಂಖಾನರು ಅವರ ಉದ್ಧಾರದ ಬಗ್ಗೆ ಶ್ರಮಿಸುತ್ತಿದ್ದರು. ಹಾಡುಗಾರ ಅಪ್ಪಗೆರೆ ತಿಮ್ಮ ರಾಜು, ಸಾಹಿತಿ ದೊಡ್ಡ ರಂಗೇಗೌಡ, ಶ್ರೀ ವೈ. ಕೆ. ಮುದ್ದುಕೃಷ್ಣ ಶ್ರೀ ಕೃಷ್ಣಮೂರ್ತಿ ಕಿಕ್ಕೇರಿ, ಈ ಮುಂತಾದ ಕಲಾವಿದರು ಕರೀಂಖಾನರು ತಮ್ಮ ಮೇಲೆ ಬೀರಿದ ಪ್ರಭಾವವನ್ನು ಹೀಗೆ ನೆನೆಯುತ್ತಾರೆ.

''ಕಳೆದ ಒಂಭತ್ತು ವರ್ಷಗಳಿಂದ ಕರೀಂಖಾನರ ಸೇವೆಯಲ್ಲೇ ಇರುವ ನನಗೆ ಅದೇ ಭಾಗ್ಯ ಪೂರ್ವ ಜನ್ಮದ ಸುಕೃತ ಫಲ. ಕರೀಂಖಾನರು ಗುರುಗಳಾಗಿ, ಮಾರ್ಗದರ್ಶಕರಾಗಿ ಆಶೀರ್ವದಿಸಿದ್ದಾರೆ. ನಮ್ಮ 'ಆದರ್ಶ ಸುಗಮ ಸಂಗೀತ ಅಕಾಡೆಮಿ' ಕರೀಂಖಾನರ ಕನಸಿನ ಕೂಸು. ನಮ್ಮ ಅಕಾಡೆಮಿ ಗುರುದಕ್ಷಣೆಯಾಗಿ ಗೌರವ ಪೂರ್ವಕವಾಗಿ ಭಕ್ತಿಯಿಂದ ''ಡಾ. ಎಸ್. ಕೆ. ಕರೀಂಖಾನ್ ಪ್ರಶಸ್ತಿ''ಯನ್ನು ಸ್ಥಾಪಿಸಿದೆ. ದಶಕ-ದಶಕಗಳ ಕರೀಂಖಾನ್ ಸಾಹೇಬರ ಕನಸಾಗಿದ್ದ 'ಶ್ರೀ ಕೃಷ್ಣ ಲೀಲಾ' ಗ್ರಂಥವನ್ನು ಪ್ರಕಟಿಸಿದ್ದೇವೆ'' ಎಂದು ಶ್ರೀ ಕೃಷ್ಣಮೂರ್ತಿ ಕಿಕ್ಕೇರಿ ನೆನಪಿಸಿಕೊಳ್ಳುವರು.

ಶ್ರೀ ವೈ. ಕೆ. ಮುದ್ದುಕೃಷ್ಣ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತ ಇಲಾಖೆ, ಬೆಂಗಳೂರು ಇವರು ತಮ್ಮ ಸಂದರ್ಶನದಲ್ಲಿ ''ನಾನು ಗಾಯಕನಾಗಲು ಕರೀಂಖಾನರೇ ಕಾರಣರು'' ಎನ್ನುವ ಬಹುಗುರುತರವಾದ ಜವಾಬ್ದಾರಿಯನ್ನು ಕರೀಂಖಾನರ ಮೇಲೆ ಹೊರಿಸಿದರು. ಹತ್ತು ಹಲವು ಗಾಯಕರು, ಕಲಾವಿದರು ಕರೀಂಖಾನರ ಹೆಸರನ್ನು ಸ್ಮರಿಸದೆ ಇರುವುದಿಲ್ಲ, ಅನೇಕ ಜನ ತಮ್ಮ ಬದುಕಿನಲ್ಲಿ ಬೆಳಕಾಗಿ ಬಂದ ಕರೀಂಖಾನರನ್ನು ನೆನೆಯುತ್ತಾರೆ. ಅನೇಕ ಜಾನಪದ ಕಲಾವಿದರಿಗೆ, ಪ್ರಶಸ್ತಿ, ಮಾಶಾಸನ, ಬಡಬಗ್ಗರಿಗೆ ಕೈಲಾದಷ್ಟು ಹಣಕೊಟ್ಟು ಅವರನ್ನು ಉದ್ಧಾರ ಮಾಡಲು ಪ್ರಯತ್ನಿಸಿದರು. ಇಂದು ಅವರೆಲ್ಲಾ ಮನುಷ್ಯರಾಗಿ ಬದುಕುತ್ತಿದ್ದಾರೆ. ಈ ಮಾತುಗಳು ಕರೀಂಖಾನರ ವ್ಯಕ್ತಿತ್ವದ ಸಂಪೂರ್ಣ ವಿವರವನ್ನು ನೀಡುತ್ತದೆ. ಇಂಥಹ ವ್ಯಕ್ತಿಯ ಸೇವೆ ಕರ್ನಾಟಕಕ್ಕೆ ಲಭಿಸಿರುವುದು ದೇವರ ಅನುಗ್ರಹದಿಂದ ಇರಬೇಕು.

''ಇವರು ಮಾತಲ್ಲಿ ಮತ್ತು ಕೃತಿಯಲ್ಲಿ ಆತ್ಮೀಯರಾಗಿರುತ್ತಾರೆ. ತುಂಬಾ ಸರಳತೆಯನ್ನು ಮೈಗೂಡಿಸಿಕೊಂಡ ವ್ಯಕ್ತಿಯಾಗಿ ಕಿಂಚಿತ್ತೂ ಅಹಂಕಾರವನ್ನು ತಮ್ಮ ಸ್ವಭಾವದಲ್ಲಿ ಅಳವಡಿಸಿಕೊಂಡವರಲ್ಲ, ಇವರ ಸಜ್ಜನಿಕೆಯನ್ನು ಯಾರೂ ಮೆಚ್ಚಿಕೊಳ್ಳಲೇ ಬೇಕು. ಇವರಲ್ಲಿ ಇವರ ಸಾಹಿತ್ಯದಲ್ಲಿ ಉತ್ಕೃಷ್ಟವಾದ ಅಂಶಗಳಿದ್ದರೂ ತಮ್ಮ ಗಟ್ಟಿಗಾರಿಕೆ, ಹೆಚ್ಚುಗಾರಿಕೆ ಬೇರೆಯವರಲ್ಲಿ ಪ್ರದರ್ಶಿಸಿದವರಲ್ಲ, ಹಾಗೇನಾದರೂ ಇದ್ದರೆ ಬೇರೆ ರೀತಿಯ ಗೌರವ ಸಿಗುತ್ತಿತ್ತೊ ಏನೋ ! ಆದರೆ ಅವರ ಸರಳತೆಯಿಂದ ಅವರನ್ನು ಯಾರೂ ಕೂಡ ಬಹಳ ದೊಡ್ಡವರು ಎಂದು ಗೌರವಿಸದಿದ್ದರೂ ಕೂಡ ಅವರ ದೊಡ್ಡಸ್ತಿಕೆ ಅವರಲ್ಲಿದೆ. ಪ್ರತಿಯೊಬ್ಬರಲ್ಲೂ ಒಂದಲ್ಲ ಒಂದು ರೀತಿಯ ದೌರ್ಬಲ್ಯಗಳು ಇದ್ದೇ ಇರುತ್ತವೆ. ಇಲ್ಲಿ ಅವರ ಸರಳತೆಯೂ ಅವರ ದೌರ್ಬಲ್ಯವೆನ್ನಬಹುದು. ಆದಕ್ಕಾಗಿ ಜಾನಪದ ಕ್ಷೇತ್ರದಲ್ಲಿ, ಸಾಹಿತ್ಯ ಕ್ಷೇತ್ರದಲ್ಲಿ, ಸಾಮಾಜಿಕ ಕ್ಷೇತ್ರದಲ್ಲಿ ಅವಿರತವಾದ ಪ್ರಯತ್ನವನ್ನು ಮಾಡಿದರು. ಅಷ್ಟೊಂದು ಪ್ರಚಾರ ಅವರಿಗೆ ಬಾರದಿರಲು ಅವರ ಸರಳತೆಯೇ ಕಾರಣವಾಗಿರಬೇಕು. ಆದರೆ ಅವರ ಸಚ್ಚಾರಿತ್ರ್ಯದ ವ್ಯಕ್ತಿತ್ವ ಮಾತ್ರ ಎಲ್ಲರ ಗಮನವನ್ನು ಸೆಳೆಯುತ್ತದೆ.'' ವೀರೇಂದ್ರ ಹೆಗ್ಗಡೆಯವರಂತಹವರ ಮಾತುಗಳು ಕರೀಂಖಾನರ ಸ್ವಭಾವ ಮತ್ತು ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ.

ಕರೀಂಖಾನರ ಮನಸ್ಸು ಮಗುವಿನಂಥದ್ದು, ಯಾವಾಗಲೂ ಜೀವನದಲ್ಲಿ ನಗುನಗುತ್ತಲೇ ಇರುತ್ತಿದ್ದರು. ಇವರಿಗೆ ಸಿಟ್ಟು ಬಂದಿರುವುದನ್ನು ಇದುವರೆಗೂ ನೋಡಿರಲಿಲ್ಲ, ಯಾವ ಪಂಡಿತನಿಗೂ ಕಡಿಮೆ ಇರದ ಜ್ಞಾನ ಇವರಲ್ಲಿತ್ತು. ಸಂಸ್ಕೃತ ವಾಕ್ಯಗಳಿಲ್ಲದೇ ಅವರ ಭಾಷಣ ಇರುತ್ತಿರಲಿಲ್ಲ, ಪ್ರಾರಂಭದಲ್ಲಿ ಸಂಸ್ಕೃತ ಶ್ಲೋಕದಿಂದಲೇ ಪ್ರಾರಂಭವಾಗುವ ಇವರ ಭಾಷಣದಲ್ಲಿ ಮುಂದೆ ಅಚ್ಚ ಕನ್ನಡವನ್ನು ಉಪಯೋಗಿಸಿ ಪೂರ್ತಿ ಭಾಷಣ ಮಾಡುತ್ತಿದ್ದರು. ಏನೇ ಮಾತನಾಡುವುದಾದರೂ ಬರೆದುಕೊಂಡು, ಓದಿಕೊಂಡು ಮಾತನಾಡುವ ಸ್ವಭಾವವಿರಲಿಲ್ಲ.

ಇವರ ಮಾತೆಂದರೆ ನೇರ ನುಡಿ. ಯಾವುದೇ ವಿಷಯದಲ್ಲಾದರೂ ಅಪಾರ ಅನುಭವ ಹೊಂದಿದ ಇವರು ನಿರರ್ಗಳವಾಗಿ ಮಾತನಾಡುತ್ತಿದ್ದರು.

'ಸ್ವಾಭಿಮಾನಿ ಸಂತ' ಎಂಬ ಬಿರುದಿಗೆ ಪಾತ್ರರಾದ ಕರೀಂಖಾನರು ಸಮಯಕ್ಕೆ ಹೆಚ್ಚಿನ ಮಹತ್ವ ಕೊಟ್ಟವರು. ಜಾನಪದ ಅಕಾಡೆಮಿಯ ಅಧ್ಯಕ್ಷರಾದಾಗ ಕೆಲವರಿಂದ ಕೆಲ ಆಪಾದನೆಗಳು ಬಂದಾಗ ರಾಜೀನಾಮೆ ಬರೆದು ಹೊರಬಂದರು. ಆಗ ರಿಜಿಸ್ಟ್ರಾರ್ ಹಾಗೂ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಹಾಗೂ ಗ್ರಾಮಾಭಿವೃದ್ಧಿ ಸಚಿವ ಎಂ. ಪಿ. ಪ್ರಕಾಶರವರ ಒತ್ತಾಯಕ್ಕೆ ಮಣಿದು ಅಧ್ಯಕ್ಷಗಿರಿ ಹೊತ್ತು ಕರ್ನಾಟಕದಲ್ಲಿ 'ಸಾಧನೆ ಮಾಡಿ ತೋರಿಸಿದರು. ಅಧ್ಯಕ್ಷಗಿರಿ ಹೊತ್ತ ಕೆಲವರು ರಿಜಿಸ್ಟ್ರಾರ್ ಹತ್ತಿರ ಬಂದು ಕೆಲವು ಕಾರ್ಯಕ್ರಮ ರೂಪಿಸಿ ಅದು ಇದು ಮಾಡಿ ಎಂದು ಹೇಳಿ ಹೊರಟು ಹೋಗುವವರಂತೆ ಕರೀಂಖಾನರು ನಡೆದುಕೊಳ್ಳಲಿಲ್ಲ. ಅಧ್ಯಕ್ಷಗಿರಿಯ ಕರ್ತವ್ಯದ ರೀತಿಯನ್ನು ಕನ್ನಡಿಗರಿಗೆ ತೋರಿಸಿ ಕೊಟ್ಟು ಮಾದರಿ ಅಧ್ಯಕ್ಷರಾಗಿ ಮೆರೆದರು. ಒಬ್ಬ ಉದ್ಯೋಗಿಯಂತೆ ಅಕಾಡೆಮಿಗೆ ಬಂದು ಪೂರ್ತಿ ಸಮಯವನ್ನು ಇಲ್ಲಿಯೇ ವಿನಿಯೋಗಿಸಿದರು.

ಅಕಾಡೆಮಿಯು ಮೊದಲು ನೃಪತುಂಗ ರೋಡಿನಲ್ಲಿ ಮೂರನೆಯ ಮಹಡಿಯ ಮೇಲಿತ್ತು. ಆ ಕಟ್ಟಡ ಕೆನರಾ ಫೈನಾನ್ಸ್ ಕಾರ್ಪೋರೇಶನ್ ಕಾಂಪ್ಲೆಕ್ಸ್ ಎಂದು ಇತ್ತು. ಮೂರು ಮಹಡಿಯ ಮೇಲಿರುವ ಕಟ್ಟಡವನ್ನು ಕಾಲುನೋವಿದ್ದರೂ ಹತ್ತಿಕೊಂಡು ಹೋಗುತ್ತಿದ್ದರು. ಬೆಳಿಗ್ಗೆ ಹತ್ತು ಗಂಟೆಗೆ ಕಛೇರಿಗೆ ಬಂದು ಕುಳಿತರೆಂದರೆ ರಾತ್ರಿ ಎಂಟು ಗಂಟೆಯವರೆಗೆ ಅಕಾಡೆಮಿಯಲ್ಲಿ ಕುಳಿತಿರುತ್ತಿದ್ದರು. ತಮ್ಮ ಪೂರ್ಣ ಪ್ರಮಾಣದ ಸಮಯವನ್ನು ಇಲ್ಲಿ ಕಳೆಯುತ್ತಿದ್ದರು. ಅಕಾಡೆಮಿಯ ಹಣಕಾಸಿನ ವ್ಯವಹಾರದಲ್ಲೂ ತುಂಬಾ ಕಟ್ಟುನಿಟ್ಟಿನ ನಿಯಮವನ್ನು ಅನುಸರಿಸುತ್ತಿದ್ದರು. ಲೆಕ್ಕ ನೋಡಲು ಒಬ್ಬ ಫೈನಾನ್ಸ್ ಆಫೀಸರ್ ಇದ್ದು, ಲೆಕ್ಕ ಪರಿಶೀಲಿಸುತ್ತಿದ್ದರು. ಒಂದು ಪೈಸಾನು ಅಕಾಡೆಮಿಯ ಹಣ ದುರುಪಯೋಗವಾಗಬಾರದೆಂಬುದು ಅವರ ಅನಿಸಿಕೆಯಾಗಿತ್ತು. ''ಸ್ವಾರ್ಥ ಎಲ್ಲಿ ಇರೋದಿಲ್ಲವೋ ಅಲ್ಲಿ ಹೆಚ್ಚು ಕೆಲಸ ಸಾಧ್ಯ'' ಎನ್ನುವ ಮಾತು ಡಾ. ಎಸ್. ಕೆ. ಕರೀಂಖಾನರಿಗೆ ಸಲ್ಲುವಂತಹದ್ದು. ಇಷ್ಟೆಲ್ಲ ವಿಚಾರ ಮಾಡಿ ಮತ್ತೊಬ್ಬರಿಗೆ ತಮ್ಮಿಂದ ತೊಂದರೆಯಾಗದಂತೆ ನೋಡಿಕೊಳ್ಳುವ ಜನ ನಮ್ಮಲ್ಲಿ ಎಷ್ಟಿದ್ದಾರೆಂದು ವಿಚಾರಿಸಿದಾಗ ಭ್ರಮ ನಿರಸವಾಗುತ್ತದೆ.

''ಬಿ. ಉದಯಶಂಕರ ಸ್ಮಾರಕ ಚಿತ್ರ ಸಾಹಿತಿ ಪ್ರಶಸ್ತಿ''ಯನ್ನು ಕರೀಂಖಾನರಿಗೆ ನೀಡಿ ಸನ್ಮಾನಿಸಲು, ಸನ್ಮಾನಿತ ಕರೀಂಖಾನರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತ ''ನನ್ನ ಪ್ರೀತಿಯ ಕನ್ನಡ ಬಂಧು ಭಗಿನಿಯರೇ'' ಎಂದು ಕರೀಂಖಾನರು ಮಾತನಾಡಲಾರಂಭಿಸಿದಂತೆಯೇ ರವೀಂದ್ರ ಕಲಾಕ್ಷೇತ್ರದಲ್ಲಿ ತುಂಬಿದ್ದ ಸಹಸ್ರಕ್ಕೂ ಹೆಚ್ಚು ಮಂದಿ ಅಭಿಮಾನಿಗಳ ಚಪ್ಪಾಳೆ, ಹೊರಗೆ ನಿಂತಿದ್ದ ಸುಮಾರು ಮಂದಿಯಲ್ಲಿ ಮಾರ್ದನಿಸಿತು. ''ಉದಯ ಶಂಕರರು ಜನಿಸಿದ್ದು ಸಾಹಿತ್ಯ ರಚಿಸಿದ್ದು ನನಗಾಗಿಯೇ'' ಎಂದು ಅವರೆಂದಾಗ ಒಂದೆರಡು ಕ್ಷಣ ಜನತೆಗೆ ಅವರ ಮಾತಿನ ಜಾಡು ಹಿಡಿಯಲಾಗಲಿಲ್ಲ. ''ಆದರೆ, ಕಷ್ಟಪಟ್ಟು ಸಾಹಿತ್ಯ ಬರೆದವರು ಅವರು. ಪ್ರಶಸ್ತಿ ಪಡೆದವನು ನಾನು'' ಎಂದು ವಾಕ್ಯ ಮುಗಿಸಿದಾಗ ಈ ಹಿರಿಯನ ವಿನಯ ಕಂಡು ಮತ್ತೆ ಚಪ್ಪಾಳೆಯ ಸದ್ದು ಮುಗಿಲಿಗೇರಿತು. ತಮ್ಮ ದೀರ್ಘಾಯುಸ್ಸಿಗೆ ಕನ್ನಡದ ನೆಲದ ಗುಣವೇ ಕಾರಣ ಎಂಬ ಭಾವದಲ್ಲಿ ಮಾತನಾಡುತ್ತ ಕರೀಂಖಾನರು 'ವಿದೇಶದಲ್ಲಿ ಹುಟ್ಟಿದ್ದರೆ ಎಷ್ಟು ಜನ್ಮವಾಗಿರುತ್ತಿತ್ತು ತಿಳಿಯದು, ದೇವರು ಕರ್ನಾಟಕದ ಮೇಲೆ ಸದಾ ಅಮೃತವನ್ನು ಸುರಿಸುತ್ತಿರಲಿ, ಇಲ್ಲಿ ಎಂದೂ ಅತಿವೃಷ್ಟಿ,

ಅನಾವೃಷ್ಟಿ, ಕ್ಷಾಮಡಾಮಗಳು ಇಲ್ಲದಿರಲಿ, ಕನ್ನಡಿಗರು ಚಿರಂಜೀವಿಗಳಾಗಲಿ'' ಎಂದು ಮಾತು ಮುಗಿಸಿದಾಗ ಹೃದಯ ತುಂಬಿ ಬಂದ ಸಭೆ ಒಂದರೆಕ್ಷಣ ಮೂಕವಾಯಿತು. ಈ ಸಮಾರಂಭದಲ್ಲಿ ಹಿರಿಯ ನಿರ್ದೇಶಕ ಜಿ. ವ್ಹಿ. ಅಯ್ಯರ, ಪಾರ್ವತಮ್ಮ ರಾಜಕುಮಾರ ಮುಂತಾದವರು ಉಪಸ್ಥಿತರಿದ್ದರು. ಅಭಿನಂದನ ಭಾಷಣ ಮಾಡಿದ ಬರಗೂರು ರಾಮಚಂದ್ರಪ್ಪನವರು ''ಕರೀಂಖಾನ ಅವರಿಗೆ ದೊರೆತ ಸನ್ಮಾನ, ಘನತೆ, ಸದಭಿರುಚಿ ಅಭಿನಂದನೆಯ ಸಂಕೇತವಾಗಿದೆ'' ಎಂದು ಹೇಳಿದರು. ಈ ಎಲ್ಲ ವಿಷಯಗಳು ಕರೀಂಖಾನರ ಸ್ವಭಾವ ಹಾಗೂ ವ್ಯಕ್ತಿತ್ವದ ವಿವರವನ್ನು ನೀಡುತ್ತದೆ.

ಸೂಕ್ಷ್ಮ ಮನಸ್ಸಿನ ಇವರು ಪುಕ್ಕಟ್ಟೆಯಾಗಿ ಬಂದುದನ್ನು ನಿರ್ದಾಕ್ಷಿಣ್ಯವಾಗಿ ತಿರಸ್ಕರಿಸುತ್ತಿದ್ದರು. ಕರೀಂಖಾನರ ವ್ಯಕ್ತಿತ್ವ ಇವರ ಕಲಾಭಿರುಚಿ ಅಷ್ಟೇ ಸ್ವಾರಸ್ಯವಾದದ್ದು, ಸಾಂಸ್ಕೃತಿಕ ಬದುಕೇ ಇವರ ಮಡದಿ, ಮಕ್ಕಳು ಎಂದು ಅನೇಕ ಸಂಘ ಸಂಸ್ಥೆಗಳು ಸನ್ಮಾನ ಪತ್ರಗಳು ಹೇಳಿದವು.

ಬೆಂಗಳೂರಿನ ಬಸವನ ಗುಡಿಯ ಬುಲ್ ಟೆಂಪಲ್ ರೋಡಿನಲ್ಲಿರುವ ದ್ವಾರಕಾ ಹೋಟೇಲಿನ ವಸತಿ ಗೃಹದಲ್ಲಿ ಸುಮಾರು ಮೂವತ್ತು ವರ್ಷ ಏಕಾಂಗಿ ಉಳಿದು ಬಿಟ್ಟರು. ಶೌಚಾಲಯ, ನೀರು ವ್ಯವಸ್ಥೆ ಸರಿಯಾಗಿಲ್ಲದ ಕಾಮನ್ ಬಾಥರೂಂ, ಟಾಯ್ಲೆಟ್ ವ್ಯವಸ್ಥೆ ಹೊಂದಿರುವ ಹೊಟೇಲ್ ಅದು. ಸಂಸಾರವಿಲ್ಲದವರೇ ಹೆಚ್ಚು ಮಂದಿ ಇರುವ ಆ ಹೋಟೇಲ್‌ನ ಸಿಂಗಲ್ ರೂಂ ಒಂದರಲ್ಲಿ ಖಾನ್ ಸಾಹೇಬರು ವಾಸ ಮಾಡಿದರು. ಇವರನ್ನು ದ್ವಾರಕಾ ಹೋಟೇಲಿನ ಮಾಲೀಕ ಶ್ರೀ ಹೊಳ್ಳರವರು ಅತೀ ಆದರದಿಂದ ನೋಡಿಕೊಳ್ಳುತ್ತಿದ್ದರು. ಅವರನ್ನು ಕರೀಂಖಾನರ ಬಗ್ಗೆ, ಕೇಳಿದಾಗ ''ಅವರನ್ನು ನಾವು ನಮ್ಮ ಕುಟುಂಬದ ವ್ಯಕ್ತಿಯಂತೆ ಕಂಡೆವು. ಅವರೂ ನಮ್ಮನ್ನು ತಮ್ಮ ಕುಟುಂಬದವರಂತೆ ಕಂಡರು. ಅವರಿಗೆ ಈ ದೇಶದ ಬಗ್ಗೆ ಸಾಹಿತ್ಯದ ಬಗ್ಗೆ ತುಂಬಾ ಅಭಿಮಾನವಿತ್ತು. ಒಬ್ಬ ಸಾದಾ ವ್ಯಕ್ತಿಯಾಗಿದ್ದರು. ಬಾಡಿಗೆಯನ್ನು ಪ್ರತಿ ತಿಂಗಳು ಕೊಡದಿದ್ದರೂ ಒಂದೇ ಕಂತಿನಲ್ಲಿ ಕೊಡುತ್ತಿದ್ದರು. ಇತರೇ ಹೆಣ್ಣು ಮಕ್ಕಳನ್ನು ತನ್ನ ತಾಯಿ, ಅಕ್ಕ, ತಂಗಿಯರಂತೆ ಕಾಣುತ್ತಿದ್ದರು. ಅವರೊಬ್ಬ ಜಾತ್ಯತೀತ ವ್ಯಕ್ತಿಗಳಾಗಿ ತಮ್ಮ ಬದುಕನ್ನು ಕಳೆದರು'' ಎನ್ನುವ ಮಾತುಗಳು, ದೀರ್ಘ ಕಾಲದವರೆಗೂ ಒಂದೇ ವಸತಿ ನಿಲಯದಲ್ಲಿ ಉಳಿಯುವುದೆಂದರೆ ಮಾಲಕ ಮತ್ತು ಕರೀಂಖಾನರಲ್ಲಿ ಎಂಥ ಮಧುರವಾದ ಬಾಂಧವ್ಯವಿತ್ತು ಎಂಬುದನ್ನು ಗಮನಿಸಬಹುದು.

ಖಾನ ಸಾಹೇಬರು ತಮ್ಮನ್ನು ಜಾನಪದ ಸಾಹಿತ್ಯ ಸಂಗ್ರಹದ ಕಾರ್ಯದಲ್ಲಿ, ಸ್ವಾತಂತ್ರ್ಯ ಚಳುವಳಿಯ ಕಾರ್ಯದಲ್ಲಿ , ಕರ್ನಾಟಕದ ಏಕೀಕರಣದ ವಿಚಾರದಲ್ಲಿ ಹೀಗೆ ಹತ್ತು ಹಲವು ಸಾಮಾಜಿಕ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರಿಂದ ಇವರನ್ನು ನೋಡಲು ಬರುವವರು ಯಾರೂ ಇಲ್ಲವೆಂದು ತಿಳಿಯಬಾರದು. ನಿಜವಾಗಿಯೂ ಇವರನ್ನು ಹುಡುಕಿಕೊಂಡು ಬಂದವರು ಬಹಳ ಮಂದಿಯಿದ್ದಾರೆ. ಕ್ರಾಂತಿಯ ಬಗ್ಗೆ ಚರ್ಚಿಸಲು ಬರುವ ತರುಣರು, ಹಿಂದೊಂದು ಕಾಲದಲ್ಲಿ ಸಿನೆಮಾ ನಾಟಕ ಕಂಪನಿಗಳಲ್ಲಿ ಅಂಟಿದ ನಂಟನ್ನು ಜ್ಞಾಪಿಸಿಕೊಂಡು ಸಹಾಯವನ್ನು ಯಾಚಿಸಲು ಬರುವ ಅಶಕ್ತ ಕಲಾವಿದರು, ರೂಮಿಗೆ ಯಾರೇ ಬಂದರೂ ಅವರೊಡನೆ ಆತ್ಮೀಯವಾಗಿ ಮಾತನಾಡಿ ಹಾಸಿಗೆ ಮೂಲೆ ಮುಡುಕಿನಲ್ಲಿ ಇರಿಸಿದ್ದ ಹಣ ತೆಗೆದು ಅತಿಥಿಗಳಿಗೆ ಕಾಫಿ, ತಿಂಡಿ ಕೊಡಿಸಿ, ನಮ್ಮದು ಈಗಾಗಲೇ ಆಗಿದೆ ಎಂದು ಹೇಳಿ, ಅವರಿಂದ ಬೀಳ್ಕೊಂಡು ಬಂದ ಮೇಲೆ ನೀರು ಕುಡಿದು ಮಲಗುವುದು ಸಾಮಾನ್ಯವಾಗಿ ಆಗಾಗ ನಡೆಯುವ ಘಟನೆ.

ಡಿಸೆಂಬರ್ ೯-೧೯೯೫ ರಂದು ಕರ್ನಾಟಕ ಸರಕಾರ, 'ಜಾನಪದಶ್ರೀ' ಪ್ರಶಸ್ತಿ ನೀಡಿ ಇವರನ್ನು ಗೌರವಿಸಿತು. ಜೊತೆಗೆ ೧ ಲಕ್ಷ ರೂ. ಬೇರೆ. ಆ ಒಂದು ಲಕ್ಷ ರೂ.ಯನ್ನು ಫಿಕ್ಸಡ್ ಡಿಪೋಸಿಟ್ಟಿಗೆ ಹಾಕಿ ಅದಕ್ಕೆ ಬರುವ ಬಡ್ಡಿಯನ್ನು ಖಾನ್ ಇವರಿಗೆ ನೀಡುವುದು ಸರಕಾರದ ಉದ್ದೇಶ. 'ಜಾನಪದಶ್ರೀ' ಪ್ರಶಸ್ತಿ ಪ್ರಧಾನ ಸಮಾರಂಭದಂದು ಆಗಿನ ಮುಖ್ಯಮಂತ್ರಿಯಾಗಿ ಹಾಗೂ ಈಗಿನ ಮಾಜಿ ಪ್ರಧಾನಿ ಶ್ರೀ ದೇವೇಗೌಡರು ಖಾನರಿಗೆ ನೀಡುತ್ತಿರುವ ಮಾಸಾಶನವನ್ನು ಈಗಿರುವ ೫೦೦ ರೂಪಾಯಿಯಿಂದ ೧೫೦೦ ರೂಪಾಯಿಗೆ ಏರಿಸುವುದಾಗಿ ಭರವಸೆ ನೀಡಿದರು. ಆ ಭರವಸೆ ಇನ್ನೂ ಭರವಸೆಯಾಗಿಯೇ ಉಳಿಯಿತು. ಆಗ ದೊರೆಯುತ್ತಿರುವ ಮಾಸಾಶನ ೫೦೦ ರೂಪಾಯಿ ಮಾತ್ರ. ಅದರಲ್ಲಿ ಬಾಡಿಗೆ ೨೦೦ ರೂ. ಉಳಿದ ೩೦೦ ರೂ. ಗಳಲ್ಲಿ ಖಾನರವರ ಜೀವನ ಸಾಗಬೇಕಿತ್ತು. ಬಡತನದ ಬೇಗೆಯಲ್ಲಿ ಬೇಯುತ್ತಿರುವ ಇವರು ಯಾರ ಮುಂದೆಯೂ ದೇಹಿ ಎಂದವರಲ್ಲ. ಇದಕ್ಕೆಲ್ಲ ಮುಖ್ಯಿ ಕಾರಣ ಖಾನರವರ ಸ್ವಾಭಿಮಾನ. ಕಲೆಗಾಗಿ ದುಡಿದು, ಬಡತನದಲ್ಲಿ ನರಳಿದರೂ ಯಾರ ಮುಂದೂ ಕೈಚಾಚಿದವರಲ್ಲ. ಸ್ವಾತಂತ್ರ್ಯ ಪೂರ್ವದಲ್ಲಿ ತಮ್ಮೊಂದಿಗೆ ಜೈಲುವಾಸವನ್ನು ಅನುಭವಿಸಿದ ಕರೀಂಖಾನರಿಗೆ ಏನಾದರೂ ಸಹಾಯ ಮಾಡಬೇಕೆಂದು ಈ ಹಿಂದೆ ಮುಖ್ಯಮಂತ್ರಿಗಳಾಗಿದ್ದ ಕೆ. ಸಿ. ರೆಡ್ಡಿ, ಕೆಂಗಲ್ ಹನುಮಂತಯ್ಯ ನೀಡಿದ ಸಹಾಯ ಹಸ್ತವನ್ನು ವಿನಯದಿಂದ ತಿರಸ್ಕರಿಸಿದ್ದು ಖಾನ ಸಾಹೇಬರ ಸ್ವಾಭಿಮಾನಕ್ಕೆ ಹಿಡಿದ ಕೈಗನ್ನಡಿಯಾಗಿದೆ.

ಕರೀಂಖಾನರು ಎಂದಿಗೂ ತಾಳ್ಮೆ ಕಳೆದುಕೊಳ್ಳುತ್ತಿರಲಿಲ್ಲ. ತಮ್ಮ ಮನಸ್ಸಿಗೆ ಒಪ್ಪದೇ ಇದ್ದುದನ್ನು ಹಾಗೇ ಸವಮಾಜಕ್ಕೆ ಅಹಿತವಾದುದನ್ನು, ಯಾರು ಮಾಡಿದರೂ ಇವರು ಅದನ್ನು ಒಪ್ಪಿಕೊಳ್ಳುತ್ತಿರಲಿಲ್ಲ. ಎಲ್ಲವೂ ವ್ಯವಸ್ಥಿತವಾಗಿರಬೇಕೆಂದು ಇವರು ಬಯಸುತ್ತಿದ್ದರು. ಸ್ವಾತಂತ್ರ್ಯ ನಂತರ ಜನರ ಕನಸು ಸಾರ್ಥಕಗೊಂಡಿಲ್ಲ, ಎಂದು ಮರಗುತ್ತಿದ್ದರು. ಜನ ಸಾಮಾನ್ಯರು ನಿತ್ಯವೂ ಸಂಕಷ್ಟಪಡುವಂತಾಗಿದೆ. ಎನ್ನುವುದು ಇವರ ಅನಿಸಿಕೆ

"ರಾಷ್ಟ್ರಕ್ಕೆ ಏಕೈಕ ರಾಷ್ಟ್ರೀಯ ಭಾಷೆ ಅಳವಡಿಸುವ ಪ್ರಸ್ತಾವ ಒಳ್ಳೆಯದು. ಒಂದೇ ಭಾಷೆಯಡಿಯಲ್ಲಿ ಬದುಕುವ ಭಾಗ್ಯ, ನಾವೆಲ್ಲ ಒಂದೇ ನಾಡಿನ ಮಕ್ಕಳು ಎಂಬ ವಿಶಾಲ ಭಾವ ತನ್ನಿಂದ ತಾನೇ ಮೂಡಬಹುದು ಎಂದು ಹೇಳುವರು. ಏಕೈಕ ರಾಷ್ಟ್ರೀಯ ಭಾಷೆ ಅಳವಡಿಸಿಕೊಳ್ಳುವುದರಿಂದ ಸಮಸ್ಯೆ ಉಂಟಾಗಲು ಸಾಧ್ಯವಿಲ್ಲ, ಆದರೆ ಸ್ವಾರ್ಥ ಜನರಿಂದ ರಾಜಕಾರಣಿಗಳಿಂದ ಸಮಸ್ಯೆ ಆಮೇಲೆ ತಲೆದೋರಬಹುದು. ರಾಷ್ಟ್ರೀಯ ಭಾಷೆಯಿಂದ ನಮ್ಮ ಪ್ರಾಂತೀಯ ಭಾಷೆಗೆ ಧಕ್ಕೆಯಾಗುತ್ತದೆ ಎಂದು ಭಾವಿಸುವುದೇ ಮೂರ್ಖತನ ಆದರೆ ತಮ್ಮ ಕುರ್ಚಿಗಾಗಿ ಎಂತಹ ಹೀನ ಕೃತ್ಯಕ್ಕೂ ಇಳಿಯುವ ರಾಜಕಾರಣಿಗಳು ಭಾಷೆಯ ಹೆಸರಲ್ಲಿ ಒಡಕಿನ ಬೀಜ ಬಿತ್ತಿದರೆ ಏನು ಮಾಡೋಣ" ಎಂದು ಕರೀಂಖಾನರು ವಿಷಾದಿಸುವರು.

ಸ್ವಾರ್ಥಿ ಜನ ಅಥವಾ ರಾಜಕಾರಣಿಗಳಿಂದ ತಲೆದೋರಬಹುದಾದ ಸಮಸ್ಯೆಗಳನ್ನು ದೇಶದ ಏಳಿಗೆ ಬಯಸುವ ಜನತೆ ಮಾತ್ರ ಪರಿಹರಿಸಬಹುದು. ಯಾವುದೇ ಆಮಿಷಗಳಿಗೂ ಬಲಿಯಾಗದೇ ಇದ್ದರೆ ಸ್ವಾರ್ಥಿಗಳ ಆಟ ನಡೆಯುವದಾದರೂ ಹೇಗೆ ? ಎಂಬ ಕರೀಂಖಾನರ ಮಾತಿನಿಂದ ರಾಜಕೀಯದಿಂದ 'ಇಂದು ಬದುಕೇ ದುಸ್ತರವಾಗಿದೆ' ಎನ್ನುವ ವಿಚಾರ ವ್ಯಕ್ತವಾಗುತ್ತದೆ. "ಪ್ರಜೆಗಳು ತಮ್ಮ ನಿಜಶಕ್ತಿಯನ್ನು ಅರಿತು ಪ್ರಭುಗಳಾಗುವ ತನಕ ಇಲ್ಲಿ ಪ್ರಜಾಪ್ರಭುತ್ವ ಸರಿಯಾಗಿ ಆಡಳಿತ ನೀಡದು" ಎಂದು ಕರೀಂಖಾನರು ಪ್ರಜಾಪ್ರಭುತ್ವದ ವ್ಯವಸ್ಥೆಯೇ ಕುಸಿದು ಹೋಗಿದೆ ಎಂದು

ಮರುಕ ಪಡುವರು. ''ಒಂದು ಕಾಲಕ್ಕೆ ಉರಿದು ಬೂದಿಯಾದ ಜರ್ಮನಿ, ಜಪಾನ ದೇಶಗಳ ಜನತೆ ತಮ್ಮನ್ನು ತಾವು ಅರ್ಥ ಮಾಡಿಕೊಂಡ ಬಳಿಕ ರಾಷ್ಟ್ರಕ್ಕಾಗಿ ಒಂದುಗೂಡಿದರು. ಸಂಪದ್ಭರಿತ ದೇಶವನ್ನಾಗಿ ಮಾಡಿದರು'' ಎಂಬ ಮಾತಿನಿಂದ ಉದಾಹರಿಸಿದರು. ಬ್ರಿಟಿಷರ ದಾಸ್ಯದ ಸಮಯದಲ್ಲಿ ಭಾರತೀಯರೆಲ್ಲರ ಏಕೈಕ ಗುರಿ ಸ್ವಾತಂತ್ರ್ಯವಾಗಿತ್ತು. ಸ್ವಾತಂತ್ರ್ಯ ಗಳಿಸಿದ ನಂತರ ನಮ್ಮ ಏಳಿಗೆ ನಮ್ಮಿಂದ ಆಗಲಿಲ್ಲ, ಈಗ ನಮ್ಮ ಸ್ವಂತ ಮನೆಯನ್ನು ಸುಭದ್ರವಾಗಿ ಇಟ್ಟುಕೊಳ್ಳಬೇಕಾದದ್ದು ನಮ್ಮ ಕರ್ತವ್ಯ. ಇಲ್ಲಿಯೇ ನಾವು ಸೋತಿರುವಾಗ ಸ್ಥಿರ ಅಸ್ಥಿರ ಸರಕಾರಗಳ ಮಾತೆಲ್ಲಿ? ಅಸ್ಥಿರ ಪರಿಸ್ಥಿತಿ ಯಾವಾಗಲೂ ಒಳ್ಳೆಯದಲ್ಲ ಜನರೂ ಸರಿಯಾದ ದಿಕ್ಕಿನಲ್ಲಿ ಯೋಚಿಸಿ ಯಾವುದೇ ಆಮಿಷಗಳಿಗೆ ಬಲಿಯಾಗದಿದ್ದರೆ ಸ್ಥಿರ ಸರ್ಕಾರ ಬರುವುದರಲ್ಲಿ ಸಂಶಯವಿಲ್ಲ ಎಂಬುದು ಕರೀಂಖಾನರ ಅನಿಸಿಕೆ.

ಬೆಂಗಳೂರಿಗೆ ಬಂದ ಮೇಲೂ ಸಿನೇಮಾ ರಂಗದವರಿಂದ ಖಾನರಿಗೆ ಶೋಷಣೆ ತಪ್ಪಲಿಲ್ಲ. ನ್ಯಾಯವಾಗಿ ಅವರಿಗೆ ಸಲ್ಲಬೇಕಾಗಿದ್ದ ಸಂಭಾವನೆ ನೀಡದೇ ಸತಾಯಿಸಿದವರೇ ಹೆಚ್ಚು. ಗೀತೆ, ಸಾಹಿತ್ಯ, ಕೃತಿ ಚೌರ್ಯ ಮಾಡಿದವರು ಅನೇಕರು. ಇಬ್ಬರಂತೂ ಸಂಭಾಷಣೆ ಬರೆಯುವಂತೆ ಹೋಟೇಲಿನಲ್ಲಿ ಇರಿಸಿ, ಎರಡು ತಿಂಗಳ ರೂಂ ಬಾಡಿಗೆಯನ್ನು ಕೊಡದೇ ತಲೆಮರೆಸಿಕೊಂಡು ತಿರುಗಿದ್ದುದರ ಫಲವಾಗಿ ಶಿಕ್ಷೆಯನ್ನು ಅನುಭವಿಸಬೇಕಾದಂತಹ ಅನಿವಾರ್ಯ ಪ್ರಸಂಗ ಖಾನ್ ಪಾಲಿಗೆ ಬಂತು. ಆ ಎರಡೂ ಸಂದರ್ಭಗಳಲ್ಲೂ ಹೋಟೇಲಿನ ಮಾಲಕರು ಖಾನ್ ಅವರ ಪುಸ್ತಕಗಳನ್ನೆಲ್ಲ ಬೀದಿಗೆಸೆದು ನಿರ್ಮಾಪಕರ ಮೇಲಿದ್ದ ಸೇಡನ್ನು ಇವರ ಮೇಲೆ ತೀರಿಸಿಕೊಂಡು ತೃಪ್ತಿಪಟ್ಟರು. ಈ ಅವಾಂತರಗಳಲ್ಲಿ ಖಾನರವರು ಸಂಗ್ರಹಿಸಿಟ್ಟಿದ್ದ, ಪ್ರಕಟವಾಗದೇ ಉಳಿದಿದ್ದ, ಅನೇಕ ಜಾನಪದ ಗೀತೆಗಳು, ಹೊಸಗನ್ನಡ ಗೀತೆಗಳು, ನಾಟಕಗಳು, ಕಾದಂಬರಿಗಳು ಬೀದಿಪಾಲಾದವು.

''ಸಾಹಿತ್ಯ, ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಲೋಕವು ಕರೀಂಖಾನರನ್ನು ನೋಯಿಸಿತ್ತು. ಚಿತ್ರ ಲೋಕವು ಇವರಿಗೆ ಹತಾಶೆಯನ್ನುಂಟು ಮಾಡಿತು. ಆದರೂ ಮುಗ್ಧ ಮನಸ್ಸಿನ ಕರೀಂಖಾನ ಇಂದಿಗೂ ಯಾರನ್ನೂ ದೂಷಿಸಲೂ ಹೋಗಲಿಲ್ಲ. ಯಾರ ಬಗ್ಗೆಯು ಅವರಿಗೆ ಕೋಪವಿಲ್ಲ. ಮನದಾಳದ ನೋವು ಮಾತಿನ ಅಲೆಯಲ್ಲಿ ವ್ಯಕ್ತಿಗಳ ನಿಂದನೆಯಾಗಿ ಬರುವುದಿಲ್ಲ. ಇದು ಕರೀಂಖಾನರ ದೊಡ್ಡ ಗುಣ. ನೋವುಂಡ ವ್ಯಕ್ತಿಯ ಹಿರಿತನ. ಇದು ಇವರ ಸ್ವಭಾವ ಮತ್ತು ವ್ಯಕ್ತಿತ್ವವನ್ನು ಸಾರಿ ಹೇಳುತ್ತದೆ.'' ಎನ್ನುತ್ತಾರೆ ಡಾ. ಸಿದ್ದಲಿಂಗಯ್ಯನವರು.

ಇವರು ತಮ್ಮ ಮಾತೃ ಭಾಷೆಯಲ್ಲಿ ಬರೆದಿರುವ ಕುರುಹುಗಳು ಕಂಡುಬಂದಿಲ್ಲ. ಉರ್ದು ಭಾಷೆಯ ಬಗ್ಗೆ ತುಂಬಾ ಅಭಿಮಾನವಿದೆ. ಇತರ ಭಾಷೆಗಳ ಬಗೆಗೂ ಅಷ್ಟೇ ಅಭಿಮಾನವಿದೆ. ಕರೀಂಖಾನರು ಎಂದಿಗೂ ಭಾಷಾಂಧರಾಗಲಿಲ್ಲ. ಒಳ್ಳೆಯ ವಿಚಾರ ಎಲ್ಲೇ ಇರಲಿ, ಅದನ್ನು ಮುಗ್ಧ ಮನಸ್ಸಿನಿಂದ ಸ್ವೀಕರಿಸುವ ಸ್ವಭಾವ ಇವರದು. ಕರೀಂಖಾನರಿಗೆ ಕನ್ನಡದ ಬಗ್ಗೆ ಅಪಾರ ಅಭಿಮಾನವಿತ್ತು. 'ನನಗೆ ಕನ್ನಡ ಭಾಷೆ ಬಗ್ಗೆ ಒಲವಿತ್ತು. ಎಲ್ಲೆಲ್ಲಿ ಕೀರ್ತನೆ ನಡೆಯುತ್ತಿತ್ತೋ, ಜಾನಪದ ಕಾರ್ಯಕ್ರಮಗಳು ಜರುಗುತ್ತಿದ್ದವೋ, ಯಕ್ಷಗಾನ ಪ್ರಯೋಗಗಳು ನಡೆಯುತ್ತಿತ್ತೋ ನಾನು ನೋಡಲು ಹೋಗುತ್ತಿದ್ದೆ. ಕನ್ನಡ ಭಾಷೆ ಮನೋಜ್ಞ ಭಾಷೆ' ಎಂದು ಕನ್ನಡ ಭಾಷೆಗಿರುವ ಅಭಿಮಾನವನ್ನು ತಮ್ಮ ಮಾತುಗಳಲ್ಲಿ ವ್ಯಕ್ತಪಡಿಸಿದ್ದಾರೆ. ಕರೀಂಖಾನರು ಕರ್ನಾಟಕ ಏಕೀಕರಣದ

ಕರಡನ್ನು ಬರೆದುಕೊಟ್ಟರು. ಅವರು ಅಖಂಡ ಕರ್ನಾಟಕದ ವಿಚಾರವನ್ನು ತಮ್ಮ ಹಾಡುಗಳ ಮೂಲಕ ಜನತೆಯ ಮುಂದಿಟ್ಟರು. ಕನ್ನಡ ಸಾಹಿತ್ಯದ ಶ್ರೀಮಂತಿಕೆಯ ಬಗ್ಗೆ ಅವರಿಗೆ ವಿಶೇಷವಾದ ಪ್ರೀತಿ ಇತ್ತು. ಇವರಿಗೆ ಮರಾಠಿ ಭಾಷೆ ತಿಳಿದಿತ್ತು. ಇವರು ಇಂಗ್ಲೀಷ್, ಸಂಸ್ಕೃತ, ತಮಿಳು, ತೆಲಗು, ಹಿಂದಿ ಭಾಷೆಗಳನ್ನು ಚೆನ್ನಾಗಿ ಬಲ್ಲವರಾಗಿದ್ದರು. ಕರೀಂಖಾನರ ಬದುಕಿನ ರೀತಿಯಂತೆ ಅವರ ಭಾಷೆಯ ಬಗೆಯೂ ಸರಳವಾದದ್ದು. ಇಂಗ್ಲೀಷ ಇರಲಿ, ಕನ್ನಡ ಇರಲಿ, ಮರಾಠಿ ಇರಲಿ, ಅಲ್ಲಿ ಕರೀಂಖಾನರ ಸರಳ ನಿರೂಪಣೆಯನ್ನು ನಾವು ಮೆಚ್ಚಲೇಬೇಕು.

ಕರೀಂಖಾನರು ಎಂತಹ ಸಂದರ್ಭದಲ್ಲೂ ಮತ್ತೊಬ್ಬರ ವಶೂಲಿಗೆ ಒಳಗಾದವರಲ್ಲ. ಇವರಿಗೆ ಯಾರ ಮುಲಾಜು ಇರಲಿಲ್ಲ. ಆದರೆ ಎಷ್ಟೋ ಮಂದಿ ತಾನು ಕರೀಂಖಾನರ ಸಹೋದರನೆಂದು, ಬಂಧುವೆಂದು, ಸರಕಾರದಿಂದ ಕೆಲಸವನ್ನು ಮಾಡಿಸಿಕೊಂಡು ಹೋದವರುಂಟು. ಕೆಲಸ ಮಾಡಿಕೊಂಡವರು ಕರೀಂಖಾನರಲ್ಲಿ ಬಂದು 'ನಿಮ್ಮ ಹೆಸರು ಹೇಳಿ ಕೆಲಸ ಮಾಡಿಕೊಂಡಿದ್ದೇನೆ' ಎಂದವರು ಇದ್ದಾರೆ. ಕರೀಂಖಾನರು ಒಂದು ಕಡೆ ಹೇಳುವಂತೆ 'ನನ್ನ ಹೆಸರು ಹೇಳಿ ಎಷ್ಟೋ ಜನ ಏನೆಲ್ಲ ಮಾಡಿಕೊಂಡಿದ್ದಾರೆ' ಎಂದಾಗ ಅವರಲ್ಲಿರುವ ಸಾರ್ವಭೌಮತ್ವ ಎದ್ದು ತೋರುತ್ತದೆ. ಹಿಂದೆ ಇವರು ಭಾಷಣ ಮಾಡುವಾಗ ಅನೇಕ ಜನ ಮಿನಿಸ್ಟರುಗಳು ಬರುತ್ತಿದ್ದರು. ಇವರ ಬಗ್ಗೆ ನೇರವಾಗಿ ಹೇಳಿ ಬಿಡುತ್ತಿದ್ದರು. ಇವರು ಏನೂ ಮಾಡಿಕೊಂಡಿಲ್ಲ, ಗಾಂಧೀವಾದ ಸಂಸ್ಥೆಯಲ್ಲಿ ಕೆಲಸ ಮಾಡಿದವರು ಎಂದು ಇವರನ್ನು ದೂರುತ್ತಿದ್ದರು. ಇವರು ಗಾಂಧೀಜಿಯ ತತ್ವ ಪ್ರತಿಪಾದಕರಾಗಿಯೇ ನಿಸ್ವಾರ್ಥ ಸೇವೆಯಲ್ಲಿ ತೊಡಗಿಸಿಕೊಂಡು ನಿಜ ಗಾಂಧಿಯಾದರು. ಸ್ವಾತಂತ್ರ್ಯ ಹೋರಾಟಗಾರರಿಗೆ ಸಿಗುವ ಪೆನ್‌ಷನ್ ಇವರು ಮುಟ್ಟಲೂ ನಿರಾಕರಿಸಿ ಮಂಜೂರಾದ ಹಣವನ್ನು ತಿರಸ್ಕರಿಸಿ 'ನಾನು ದೇಶ ಸೇವೆ ಮಾಡಿದೆನೇ ಹೊರತು ಹಣದಾಸೆಗಲ್ಲ' ಎಂದು ತಮ್ಮ ನಿಸ್ವಾರ್ಥ ಸೇವೆಯ ವಿಚಾರ ಬಹಿರಂಗಪಡಿಸಿದರು. ಕಾಂಗ್ರೆಸ್ ಸಂಸ್ಥೆಯಲ್ಲಿ ಕೆಲಸ ಮಾಡುವಾಗೊಮ್ಮೆ ಕರೀಂಖಾನರು ತಮ್ಮ ಮನೆಯವರಿಗೆ ಹೇಳಿ ಬಿಟ್ಟರು. 'ನಾನು ಕಾಂಗ್ರೆಸ್ ಸಂಸ್ಥೆಯಲ್ಲಿದ್ದೇನೆಂದು ಯಾವುದೇ ಶಿಫಾರಸ್ಸಿಗೆ ನನ್ನಲ್ಲಿ ಬರಬಾರದು, ಅಂಥ ರಾಜಕೀಯ ನಾನು ಮಾಡುವುದಿಲ್ಲ. ದೇಶ ಸೇವೆ ಮಾಡಬೇಕಾಗಿದೆ. ಗಾಂಧೀಜಿ ಆಶೀರ್ವಾದ ಮಾಡಿದ್ದಾರೆ'' ಎಂದು ಬಿಟ್ಟರು.

ಸಕಲೇಶಪುರದಲ್ಲಿ ಕರೀಂಖಾನರ ನೆರೆಹೊರೆಯವರು ಬಹುತೇಕ ಬ್ರಾಹ್ಮಣರಾಗಿದ್ದರು. ಇವರ ಆತ್ಮೀಯರಾದ ವಿಶ್ವೇಶ್ವರ ಭಟ್ಟರು ಒಂದು ಕಡೆ ತಮ್ಮ ಸಂದರ್ಶನದಲ್ಲಿ ಹೇಳುವ ಮಾತು ಔಚಿತ್ಯಪೂರ್ಣವಾಗಿದೆ. ''ನನಗೆ ಅನೇಕರು ಪಾದಪೂಜೆ ಮಾಡುತ್ತಾರೆ. ಆದರೆ ನಾನು ಮಾತ್ರ ಕರೀಂಖಾನರವರ ಪಾದಪೂಜೆ ಮಾಡುತ್ತೇನೆ. ದೇವರಿಗೆ ಭೇದಭಾವ ಎಲ್ಲಿ? ಇಂಥ ಸ್ವಭಾವದವರು ಸಿಗುವುದು ವಿರಳ. ನನ್ನ ಮದುವೆಗೆ ದೂರದ ಬೆಂಗಳೂರಿನಿಂದ ಬಂದು ಉಡುಗೊರೆಯಾಗಿ ಉಂಗುರವನ್ನು ತೊಡಿಸಿದರು. ಅದನ್ನು ಇಂದಿಗೂ ಜೋಪಾನವಾಗಿ ಕಾಯ್ದುಕೊಂಡು ಬಂದಿದ್ದೇನೆ'' ಎಂದು ನುಡಿಯುವಾಗ ಅದೆಂಥ ಆತ್ಮೀಯತೆಯ ಅಂತರಾಳದ ಮಾತುಗಳು ಎಂದೆನಿಸದೇ ಇರದು.

ಕರೀಂಖಾನರಿಗೆ ಸ್ತ್ರೀಯರಲ್ಲಿ ಗೌರವ ಸಹಾನುಭೂತಿಗಳು ಇದ್ದವು. ಸ್ತ್ರೀಯರ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡಬೇಕೆಂದು ತಮ್ಮ ಭಾಷಣದಲ್ಲಿ ಹೇಳುತ್ತಿದ್ದರು. ಸ್ತ್ರೀಯರ ಏಳಿಗೆಯಿಂದ ದೇಶದ

ಏಳಿಗೆ ಎನ್ನುತ್ತಿದ್ದರು. ಇವರು ಸ್ತ್ರೀ ಹಾಗೂ ಶಿಕ್ಷಣದ ಬಗ್ಗೆ ಮಹತ್ವ ಕೊಟ್ಟಿದ್ದರು ಎನ್ನುವುದು ಇವರ ನಡೆ, ನುಡಿ ಇವರ ಒಡನಾಡಿಗಳಿಂದ ತಿಳಿದು ಬರುತ್ತದೆ, ಮಕ್ಕಳೆಂದರೆ ಇವರಿಗೆ ಪ್ರೀತಿ ಇತ್ತು. ಚಿಕ್ಕವರಿಗೆ ಬುದ್ಧಿಹೇಳ್ತಾ ಇದ್ರು, ಒಳ್ಳೆ ಆಹಾರ ತಿನ್ನಿ ಎಂದು ಹೇಳುವರು. ಯಾವಾಗಲೂ ವಾರಕ್ಕೆ ಎರಡು ಬಾರಿಯಾದರೂ ಎಣ್ಣೆಸ್ನಾನ ಮಾಡಿರಿ ಎನ್ನುತ್ತಿದ್ದರು. ಪ್ರಾಣಾಯಾಮ ಮಾಡಿ, ಕೂದಲು ಕಪ್ಪಾಗಿರುತ್ತದೆ ಎನ್ನುತ್ತಿದ್ದರು. ಸ್ತ್ರೀಯರನ್ನು ಎಂದಿಗೂ ಕೀಳಾಗಿ ಕಾಣಲಿಲ್ಲ, ಸ್ತ್ರೀ ಕೂಡಾ ಎಲ್ಲ ರಂಗದಲ್ಲೂ ಸಮಾನಳಾಗಿರಬೇಕು, ಎಂಬುದು ಅವರ ಧೋರಣೆಯಾಗಿತ್ತು. ಸಮಾನತೆಯ ಬಗ್ಗೆ ಇವರೆಂದೂ ಒತ್ತಿ ಹೇಳುತ್ತಿದ್ದರು ಎನ್ನುವಲ್ಲಿ ಕರೀಂಖಾನರು ತಮಗೆ ತಿಳಿದ ವಿಷಯವನ್ನು ತಿಳಿಯಬೇಕೆನ್ನುವವರಿಗೆ ತಿಳಿಸಿ ಹೇಳುತ್ತಿದ್ದರು.

ಬೆಳಗಾವಿ ಜಿಲ್ಲೆಯ ಪಾರವ್ವ ಎಂಬಾಕೆ ಹಿಂದೆ ಝುಂಡಾ ಹಾರಿಸಿ ಜೈ ಅಂದಳು. ಸ್ವಾತಂತ್ರ್ಯ ಚಳುವಳಿಯಲ್ಲಿ ಈ ಪಾರವ್ವನಂಥ ದಿಟ್ಟ ಹೆಣ್ಣು ಮಗಳು ಬ್ರಿಟಿಷರ ವಿರುದ್ಧ ಸೆಣಸಾಡಿದಳು. ದೇಶಕ್ಕಾಗಿ ದುಡಿದಳು. ಅಪಮಾನವನ್ನು ಸಹಿಸಿದಳು. ಮೀಸೆ ಹೊತ್ತಾಕ್ಷಣಕ್ಕೆ ಶೂರರೆಂದಾಗಲಿ, ಮೀಸೆಯಿಲ್ಲೆಂದಾಕ್ಷಣ ಅವಳು ಅಬಲೆ ಎನ್ನುವುದಾಗಲಿ, ಕರೀಂಖಾನರು ಎಣಿಸಿದಂತಿಲ್ಲ. ಹೆಣ್ಣು ಯಾವುದಕ್ಕೂ ಕಡಿಮೆ ಇಲ್ಲ, ಹೆಣ್ಣಾದವಳೂ ಕೂಡ ಗಂಡಿಗಿಂತ ಶೌರ್ಯ, ಪರಾಕ್ರಮ, ದಾನ, ಗುಣಗಳನ್ನು ತೋರಿಸಿದ್ದಿದೆ, ಎಂದು ಪಾರವ್ವನ ಬಗ್ಗೆ ಅಭಿಮಾನದ ಮಾತುಗಳನ್ನು ಆಡುತ್ತಾರೆ.

ಧರ್ಮಸ್ಥಳದಲ್ಲಿ ನಡೆಯುವ ಧರ್ಮ ಸಮ್ಮೇಳನಕ್ಕೆ ಕರೀಂಖಾನರನ್ನು ಆಗಿನ ಧರ್ಮಾಧಿಕಾರಿಗಳಾದ ಮಂಜಯ್ಯ ಹೆಗಡೆಯವರು ಆಗಾಗ ಕರೆಯಿಸಿಕೊಳ್ಳುತ್ತಿದ್ದರು. ಆ ಪದ್ಧತಿ ವೀರೇಂದ್ರ ಹೆಗ್ಗಡೆಯವರ ಸಮಯದಲ್ಲೂ ನಿಲ್ಲಲಿಲ್ಲ. ಕರೀಂಖಾನರು ಅದೆಷ್ಟೋ ಸಲ ಧರ್ಮಸ್ಥಳಕ್ಕೆ ಬಂದು, ಧರ್ಮಾಧಿಕಾರಿಗಳ ಕೃಪಾಶೀರ್ವಾದಕ್ಕೆ ಪಾತ್ರರಾಗುತ್ತಿದ್ದರು. ಕರೀಂಖಾನರು ಆಸ್ಪತ್ರೆಯಲ್ಲಿದ್ದಾಗ, ಸಂಸ್ಕೃತ ಉಪಾಧ್ಯಾಯನೊಬ್ಬ ಮಂಜಯ್ಯ ಹೆಗಡೆಯವರ ೧೦೦ನೇ ವರ್ಷದ ಹುಟ್ಟುಹಬ್ಬಕ್ಕೆ ಮಂಜಯ್ಯ ಹೆಗಡೆಯವರಿಗೆ ಆಪ್ತರಾದವರೆಲ್ಲಾ ಬರಬೇಕೆಂದು ಆಹ್ವಾನವಿತ್ತರು. ಆಗ ಕರೀಂಖಾನರು ಕಾಲು ನೋವಿನಿಂದ ಬಳಲುತ್ತಿದ್ದರು. ತನಗೆ ಬರಲು ಸಾಧ್ಯವಿಲ್ಲವೆಂದರೂ ಕಾರಿನಲ್ಲಿ ಕರೀಂಖಾನರನ್ನು ಕರೆದುಕೊಂಡು ಹೋದರು. ವಿವಿಧ ಧರ್ಮಗಳ ಬಗ್ಗೆ ಮಾತನಾಡಲು ಅನೇಕ ಧರ್ಮೀಯರು ಬಂದಿದ್ದರು. ಕರೀಂಖಾನರು 'ಆತ್ಮ ಅನಾತ್ಮ' ಎಂಬ ವಿಷಯದ ಕುರಿತು ಮಾತನಾಡಿ ಧರ್ಮದಲ್ಲಿರುವ ಅಂಧತ್ವವನ್ನು ಹೋಗಲಾಡಿಸಲು ಸಂಕುಚಿತ ಭಾವನೆಯನ್ನು ಉಚ್ಚಾಟನೆ ಮಾಡಬೇಕು ಎಂದರು. ಆ ಉಪನ್ಯಾಸಗಳಲ್ಲಿ ಕರೀಂಖಾನರ ಉಪನ್ಯಾಸವೇ ತುಂಬಾ ಚೆನ್ನಾಗಿತ್ತು ಎಂದು ಹಲವಾರು ಪತ್ರಿಕೆಯವರು ಗುಣಗಾನ ಮಾಡಿದರು. ಇವೆಲ್ಲ ಕರೀಂಖಾನರ ಸ್ವಭಾವ ಮತ್ತು ವ್ಯಕ್ತಿತ್ವದ ಒಂದು ತುಣುಕುಗಳು.

ಶ್ರೀ ದೊಡ್ಡರಂಗೇಗೌಡರು 'ಹೊಸ ಹೊನಲು' ಎಂಬ ಕವನ ಸಂಕಲನವನ್ನು ಕರೀಂಖಾನರಿಗೆ ಅರ್ಪಿಸಿಕೊಂಡು ಕೃತಾರ್ಥರಾಗಿದ್ದಾರೆ. ಇವರಿಗೆ ಚಂದನ ದೂರದರ್ಶನದಲ್ಲಿ ಕರೀಂಖಾನರನ್ನು ಸಂದರ್ಶಿಸುವ ಅವಕಾಶ ಲಭಿಸಿತು. ಕರೀಂಖಾನರಿಗೆ ಲೇಖಕರ ಜವಾಬ್ದಾರಿ ಏನು ? ಎಂದು ಪ್ರಶ್ನಿಸಿದಾಗ "ಸಮಾಜವನ್ನು ನಡೆಸುವಲ್ಲಿ ಲೇಖಕರ ಪಾತ್ರವು ಅತೀ ಮುಖ್ಯವಾಗಿರುತ್ತದೆ. ಅವರಿಗೆ ಸಾಮಾಜಿಕ ಜವಾಬ್ದಾರಿ ಇರಬೇಕಾಗುತ್ತದೆ, ಲೇಖಕರು ಜನಸಮುದಾಯದ ಮಾನಸಿಕ ಅಭಿರುಚಿ ಅರಿತಿರಬೇಕಾಗುತ್ತದೆ, ಸಾಂಸ್ಕೃತಿಕವಾದಂತಹ ನಿಲುವು ಇರಬೇಕಾಗುತ್ತದೆ. ಕಾಳಜಿ

ಇರಬೇಕಾಗುತ್ತದೆ. ಕೇವಲ ಮನರಂಜನೆಗಾಗಿ ಹುಟ್ಟಿದ ಸಾಹಿತ್ಯವು ಸಮಾಜವನ್ನು ಸುಸ್ಥಿತಿಯಲ್ಲಿ ನಡೆಸಲಾರದು. ವಿಚಾರಶೀಲ ಸ್ಥಾನದಲ್ಲಿರುವ ಕೆಲ ಸಾಹಿತಿಗಳು, ವಿದ್ವಾಂಸರು ಸೇರಿ ಇದಕ್ಕೆಲ್ಲಾ ಪರಿಹಾರ ಕಂಡು ಹಿಡಿಯಲೇಬೇಕು. ಲೇಖಕರಿಗೂ ಜವಾಬ್ದಾರಿ ಇದೆ. ಅವರಿಗೆ ಜೀವನ ನಡೆಯಬೇಕಾಗಿದೆ. ಮೊದಲು ಹೊಟ್ಟೆ ಪ್ರಶ್ನೆ, ಅವನ ಆ ಪ್ರಶ್ನೆ ಬಗೆಹರಿಸಿಕೊಳ್ಳಬೇಕು ಮೇಲಾಗಿ ತಂತ್ರಜ್ಞರೇನು ಬರುತ್ತಾರೆ. ಈ ಭಾಷೆಯ ಅಭಿವೃದ್ಧಿಯಾಗಬೇಕಾದರೆ ಅವರು ವ್ಯಾಪಾರಿ ಮನೋಭಾವದಿಂದ ಬಂದಿರುತ್ತಾರೆ. ಆ ಕಾರಣದಿಂದ ಅವರ ಅಭಿರುಚಿಯನ್ನು ಲೇಖಕ ನೋಡಿಕೊಳ್ಳಬೇಕಾಗುತ್ತದೆ. ಅದಕ್ಕಾಗಿ ತಂತ್ರಜ್ಞರು, ನಿರ್ಮಾಪಕರು, ನಾಡಿನ ವಿದ್ವಾಂಸರು ಇವರೆಲ್ಲ ಸೇರಿ ಇದಕ್ಕೆಲ್ಲ ಪರಿಹಾರ ಕಂಡುಹಿಡಿಯಬೇಕಾಗಿದೆ. ಸಂಪೂರ್ಣ ಲೇಖಕನ ಮೇಲೆ ಭಾರ ಹಾಕುವದು ತಪ್ಪಾಗುತ್ತದೆ.'' ಸಾಹಿತಿಗಳು ಸಮಾಜದ ಕಣ್ಣು ಎಂದು ವ್ಯಕ್ತವಾಗುತ್ತದೆ. ಸಾಹಿತಿಗಳು ಒತ್ತಡ ರಹಿತವಾಗಿರಬೇಕಾಗುತ್ತದೆ ಎನ್ನುವುದು ಸ್ಪಷ್ಟವಾಗುತ್ತದೆ.

ಡಾ. ರಂಗಣ್ಣ ಹೂಗಾರರು ಕರೀಂಖಾನರಲ್ಲಿ ಪ್ರಶ್ನಿಸುತ್ತ ಜಾನಪದ ಹೆಸರಿನಲ್ಲಿ ಬರುತ್ತಿರುವ ಅಶ್ಲೀಲ ಕ್ಯಾಸೆಟ್ಟುಗಳ ಹಾವಳಿಯನ್ನು ತಡೆಯಲು ಜಾನಪದ ಆಸಕ್ತರು ಮತ್ತು ಸರಕಾರ ಏನು ವಿಚಾರ ಮಾಡಬೇಕು ? ಎಂದು ಕೇಳಿದಾಗ ಕರೀಂಖಾನರು ತಮ್ಮ ಮಾತಲ್ಲಿ ಹೇಳುತ್ತ ''ಸಾಮಾನ್ಯರು ಆ ಅಶ್ಲೀಲ ಹಾಡುಗಳ ಬಗ್ಗೆ ನಿರಾಸಕ್ತಿ ವಹಿಸಿದರೆ, ಆ ಕ್ಯಾಸೆಟ್ಟುಗಳನ್ನು ತಂದುಕೊಳ್ಳದಿದ್ದರೆ ಅದನ್ನು ತಡೆಯಬಹುದು. ಬೇಡದೇ ಇದ್ದ ಮೇಲೆ ಅದನ್ನು ಕೊಂಡುಕೊಳ್ಳಬಾರದು, ನೋಡಬಾರದು. ಆದ್ದರಿಂದ ಅಶ್ಲೀಲ ಕ್ಯಾಸೆಟ್ಟು ತಯಾರಿಸುವವರು ಅದನ್ನು ಬಿಟ್ಟು ಒಳ್ಳೆಯದನ್ನು ತಯಾರಿಸಲಿಕ್ಕೆ ವಿಚಾರಿಸುತ್ತಾರೆ. ವ್ಯಾಪಾರ ಮನೋಭಾವನೆಯಿಂದ ಅಶ್ಲೀಲ ಕ್ಯಾಸೆಟ್ಟುಗಳು ಬರುತ್ತವೆ'' ಎಂದು ತಮ್ಮ ಸಮರ್ಥ ಅನುಭವಗಳನ್ನು ವ್ಯಕ್ತಪಡಿಸುವರು.

೨೦೦೨ರಂದು ಶತಾಯುಷಿಗಳಾದ ಎಸ್. ಕೆ. ಕರೀಂಖಾನರನ್ನು, ಶ್ರೀ ಎ. ಎನ್. ಮೂರ್ತಿರಾವರನ್ನು ಹಾಗೂ ನಿಟ್ಟೂರು ಶ್ರೀನಿವಾಸರಾಯರನ್ನು ಮಾಜಿ ಮುಖ್ಯಮಂತ್ರಿ ಶ್ರೀ ವೀರಪ್ಪ ಮೊಯಿಲಿ ಸನ್ಮಾನಿಸಿದರು. ಅಗಸ್ಟ ೧೫ - ೨೦೦೩ ರಂದು ಗಾಂಧಿ ಯುಗದ ಕರ್ನಾಟಕದ ಗಾಂಧಿಗೆ ಸ್ವಾತಂತ್ರ್ಯೋತ್ಸವದ ಮಹತ್ವ ದಿನದಂದು ಸ್ವಾತಂತ್ರ್ಯ ಚಳುವಳಿಯ ನೆನಪು ಮಾಡುತ್ತ ಬೆಂಗಳೂರಿನಲ್ಲಿ ಗೌರವಿಸಲಾಯಿತು. ಇದಕ್ಕೆ ಎಲ್ಲರ ಹಾರೈಕೆ ಇದೆ. ಇಂತಹ ಕರೀಂಖಾನರು ತಮ್ಮ ಬದುಕಿನ ಕೊನೆಯ ಕ್ಷಣವನ್ನು ನೆನಪಿಸಿಕೊಳ್ಳುತ್ತ ''ನಾನು ಸತ್ತರೆ ನನ್ನ ಶವವನ್ನು ಹೂಳಬೇಡಿ, ಶವ ಸಂಸ್ಕಾರವನ್ನು ಮಾಡಬೇಡಿ, ಊರ ಹೊರಗಡೆ ಎಲ್ಲಾದರೂ ತೆಗೆದುಕೊಂಡು ಹೋಗಿ ಬಿಸಾಕಿ, ಯಾಕೆಂದರೆ ಈಗಾಗಲೇ ಬೇಕಾದಷ್ಟು ಮಾಡ್ವೆ, ಹದ್ದು, ಕಾಗೆ ಅವುಗಳಿಗಾದರೂ ಆಹಾರವಾಗಲಿ'' ಈ ಮಾತು ಪ್ರಾಣಿ ಪಕ್ಷಿಗಳು ಈ ಶರೀರವನ್ನು ಆಸ್ವಾದಿಸಿ ಆನಂದ ಪಡೆಯಲಿ ಎನ್ನುವ ಧ್ವನಿಯಲ್ಲಿ ಸರ್ವಾರ್ಪಣ ಭಾವವಿದೆ.

ಮಾನವನ ಬಗ್ಗೆ ಪ್ರಸ್ತಾಪಿಸುವ ಕರೀಂಖಾನರು ''ಮನುಷ್ಯನು ಭಯಭೀತನಾದಾಗ, ಕೋಪವಿಷ್ಠನಾದಾಗ, ಆತನ ಶರೀರದಲ್ಲಿಯೂ ವಿಷ ಉತ್ಪನ್ನವಾಗುತ್ತದೆ. ಹಾಗೆಯೇ ಉತ್ಪನ್ನವಾಗುವ ವಿಷವು ಮನುಷ್ಯನ ಶರೀರದಲ್ಲಿ ರಕ್ತವಾಗುತ್ತದೆ. ಹೀಗೆ ಬೆರೆತು ಹೋದ ರಕ್ತವು ಆತನ ಅನಾರೋಗ್ಯಕ್ಕೆ ಕಾರಣವಾಗಿ ಅನೇಕ ರೋಗಗಳ ಆವಸ್ಥಾನವಾಗುತ್ತದೆ. ಆತನ ಶರೀರವು ದುರ್ಬಲಗೊಳ್ಳುತ್ತದೆ. ಆದ್ದರಿಂದ ನನ್ನ ಪ್ರೀತಿಯ ಬಂಧುಗಳೇ ಸದಾ ಶಾಂತರಾಗಿರಿ, ಕ್ರೋಧ, ದ್ವೇಷ, ಅಸೂಯೆಗಳಂತಹ ದುರ್ಗುಣಗಳಿಂದ ದೂರವಿರಿ. ನಮ್ಮ ದೇಶಕ್ಕೆ ತರುಣ ಜನಾಂಗಕ್ಕೆ ನೆಮ್ಮದಿಯನ್ನು, ಕೀರ್ತಿ-

ಗೌರವಗಳನ್ನು ತರುವ ಪ್ರಯತ್ನದಲ್ಲಿ ಮುಂದುವರೆಯಿರಿ. ನಿಮಗೆ ಭಗವಂತನ ಆಶೀರ್ವಾದ ಎಂದೆಂದಿಗೂ ಇರಲಿ'' ಎಂದು ಮನತುಂಬಿ ಹಾರೈಸುವರು. ಈ ಇಳಿ ವಯಸ್ಸಿನಲ್ಲಿ ಏಕಾಂತತೆ ಕಾಡುವದಿಲ್ಲವೇ ? ಎನ್ನುವ ಪ್ರಶ್ನೆಗೆ ಸರಳ ಉತ್ತರ ಕೊಟ್ಟು ಬಿಡುತ್ತಾರೆ. ''ಕುಟುಂಬ ಇದೆ, ತಮ್ಮನ ಮಕ್ಕಳಿದ್ದಾರೆ, ಅದೂ ಅಲ್ಲದೇ ನಾನು ಮಧ್ಯದಲ್ಲಿ ಅಲ್ಲಿ ಇಲ್ಲಿ ಸಂಚಾರ ಮಾಡುತ್ತಿದ್ದೆ, ಆದ್ದರಿಂದ ಏಕಾಂಗಿ ಜೀವನ ನನ್ನ ಮೇಲೆ ಅಷ್ಟೊಂದು ಪ್ರಭಾವ ಬೀರಲಿಲ್ಲ'' ಎನ್ನುವರು. ಆದರೆ ಮನದಾಳದ ನೋವುಗಳನ್ನೆಲ್ಲ ವಿವರಿಸಲು ಇದು ಸಕಾಲವಾಗಿರಲಿಲ್ಲ.

ಕರೀಂಖಾನರು ಸ್ನೇಹಪರರು. ಅವರಿಗೆ ಲೆಕ್ಕಕ್ಕೆ ಸಿಗಲಾರದಷ್ಟು ಗೆಳೆಯರ ಬಳಗ ಇತ್ತು. ಬಿಡುವಿಲ್ಲದ ಜನಸೇವೆಯಲ್ಲಿ ತೊಡಗಿಸಿಕೊಂಡ ಕರೀಂಖಾನರಿಗೆ ಸಾಗರೋಪಾದಿಯಲ್ಲಿ ಸ್ನೇಹಿತರನ್ನು ಪಡೆದುಕೊಳ್ಳುವಂತಾಯಿತು. ಕರೀಂಖಾನರೆಂದೂ ಹರಟೆ ಹೊಡೆಯುತ್ತ ಕುಳಿತಿರಲಿಲ್ಲ. ಇವರು ಸ್ನೇಹ ಬಳಸಿ ಬಂದವರಿಗೆ, ನಿರಾಸೆಗೊಳಿಸಿರಲಿಲ್ಲ. ಸ್ನೇಹಿತರನೇಕರು ಕಷ್ಟಕಾಲದಲ್ಲಿ ಬಂದು ನೆರವಾಗಿದ್ದರು. ಜನಸೇವೆ ಕರೀಂಖಾನರ ಬದುಕಿನ ಹಂಬಲವಾಗಿತ್ತು.

ಕರೀಂಖಾನರು ಯಾರ ಬಗ್ಗೆಯೂ ಅಸೂಯೆ ಪಟ್ಟವರಲ್ಲ. ಕಲಾವಿದರೆಂದರೆ ಅವರಿಗೆ ಎಲ್ಲಿಲ್ಲದ ಪ್ರೀತಿ. ಇವರು ದ್ವಾರಕಾ ವಸತಿ ನಿಲಯದಲ್ಲಿರುವಾಗ ದಿನಾಂಕ ೦೬-೧೦-೧೯೯೪ ರಂದು ಆಗಿನ ಮುಖ್ಯಮಂತ್ರಿ ವೀರಪ್ಪ ಮೊಯಲಿಯವರಿಗೆ ಬರೆದ ಪತ್ರದಲ್ಲಿ ರಂಗಭೂಮಿಯ ಹಾಗೂ ಚಲನಚಿತ್ರ ಮಂದಿರದಲ್ಲಿ ಕೆಲಸ ಮಾಡಿರುವ ಶ್ರೀ ರಾಜೇಂದ್ರ ಕೃಷ್ಣರವರಿಗೆ ರಾಜ್ಯೋತ್ಸವ ಪ್ರಶಸ್ತಿ ಕೊಡಿಸಲು ವಿನಂತಿಸಿಕೊಂಡಿರುವುದು ಕಲಾವಿದರ ಬಗ್ಗೆ ಕರೀಂಖಾನರು ಹೊಂದಿರುವ ಕಳಕಳಿಯನ್ನು ಸೂಚಿಸುತ್ತದೆ.

ಶಿವರಾಮ ಕಾರಂತ ಮತ್ತು ಜಾನಪದ ಜಂಗಮರೆಂದು ಹೆಸರಾದ ಕರೀಂಖಾನರ ನಡುವೆ ಸ್ನೇಹ ಸಂಪರ್ಕವಿತ್ತು. ಸಾಮಾಜಿಕ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಈ ಇಬ್ಬರು ಮೇರು ಪರ್ವತದಂತಿದ್ದವರು. ಕನ್ನಡ ವಿಶ್ವವಿದ್ಯಾಲಯವು ತನ್ನ 'ನುಡಿ ಹಬ್ಬ' ಆಚರಣೆಯ ಸಮಯದಲ್ಲಿ ನಾಡು, ನುಡಿ ಸಂಸ್ಕೃತಿಯ ರಕ್ಷಣೆ, ವಿಸ್ತರಣೆ, ಏಳಿಗೆಗಾಗಿ ಶ್ರಮಿಸಿದ ಮಹಾನ್ ಪ್ರತಿಭೆಗಳನ್ನು ಗುರುತಿಸಿ ಅವರಿಗೆ 'ನಾಡೋಜ' ಎಂಬ ಪ್ರತಿಷ್ಠಿತ ಗೌರವ ಪದವಿಯನ್ನು ಪ್ರಧಾನ ಮಾಡಿತು.

ಕರೀಂಖಾನರು ರಾಷ್ಟ್ರಕವಿ ಕುವೆಂಪುರವರ ಬಗ್ಗೆ ಅಪಾರ ಅಭಿಮಾನ ಹೊಂದಿದ್ದರು. ಅನೇಕ ಸಲ ಇವರಿಬ್ಬರು ವೇದಿಕೆಯನ್ನು ಹಂಚಿಕೊಂಡಿದ್ದು ಇದೆ. ಕುವೆಂಪುರವರು ಕರೀಂಖಾನರವರನ್ನು ಅಭಿಮಾನದಿಂದ ಕಂಡಿದ್ದಾರೆ. ಕರೀಂಖಾನರ ಬಗ್ಗೆ ಮಾತನಾಡಿದ ಕುವೆಂಪುರವರು ''ಕರೀಂಖಾನರವರು ಮಾತಿನಲ್ಲಿ ಚಾತುರ್ಯತೆ ಹೊಂದಿದವರು, ನಾನೇ ಸಂಸ್ಕೃತ ಭೂಯಿಷ್ಠವಾದ ಮಾತನಾಡುತ್ತೇನೆ ಎಂದು ಜನರು ಹೇಳುತ್ತಾರೆ. ನನಗಿಂತ ಕರೀಂಖಾನರೇ ಮಾತಲ್ಲಿ ಸಂಸ್ಕೃತ ಬಳಸಿ ಮಾತನಾಡುತ್ತಾರೆ'' ಎಂದು ಹೇಳುವಾಗ ಕರೀಂಖಾನರ ಜ್ಞಾನದ ಹರವನ್ನು ಶ್ಲಾಘಿಸಿದಂತಿದೆ.

ಡಿ. ವಿ. ಗುಂಡಪ್ಪನವರ ಬಗ್ಗೆ ಕರೀಂಖಾನರವರು ಗೌರವವನ್ನು ಹೊಂದಿದ್ದರು. ಅವರ ಪದ್ಯಗಳ ರಚನೆಗೆ ಮಾರುಹೋಗಿದ್ದರು. ಅವರ ಒಂದು ಪದ್ಯವನ್ನು ತಮ್ಮ ಬದುಕಿಗೆ ಹೋಲಿಸಿಕೊಂಡು ಹೇಳುವುದಿದೆ. ''ಬದುಕು ಜಟಕಾ ಬಂಡಿ ವಿಧಿ ಅದರ ಸಾಹೇಬ'' ಎನ್ನುವ ಮಾತು ಕರೀಂಖಾನರ ಬಾಳಿನ ಗೀತೆಯನ್ನು ಪ್ರಚುರ ಪಡಿಸುತ್ತದೆ. ಡಿ.ವಿ.ಜಿಯವರೂ ಕೂಡ ಕರೀಂಖಾನರ ಸೇವೆಯನ್ನು

ಕೊಂಡಾಡಿರುವರು. ಕರೀಂಖಾನರು ನೆನಪಿಸುವ ''ವಿಧಿಯ ಕೈಚಾಟಿಯಲ್ಲಿ ಜಗದಾಟ ನಡೆಯುತ್ತಿದೆ' ಎನ್ನುವ ಪದ್ಯದ ಸಾಲು ನಾವೆಲ್ಲ ವಿಧಿಯು ನಡೆಸುವಂತೆ ನಡೆಯುವ ಜೀವಿಗಳು ಎಂಬುದು ತಿಳಿಯುತ್ತದೆ. ಕುವೆಂಪು, ಪ್ರೊ. ಡಿ. ವೈ. ನರಸಿಂಹಾಚಾರ್ಯ, ಎ. ಆರ್. ಕೃಷ್ಣಶಾಸ್ತ್ರಿಯವರ ಬಗ್ಗೆ ಕರೀಂಖಾನರವರಿಗೆ ಅಪಾರ ಅಭಿಮಾನವಿತ್ತು. ಇವರೆಲ್ಲರ ಕಾವ್ಯ ಕೃತಿಗಳು ಜನಸಾಗರವನ್ನು ಸೂರೆಗೊಂಡವು ಎನ್ನುವರು. ಲಕ್ಷ್ಮೀನಾರಾಯಣ ಭಟ್ಟರು ಕರೀಂಖಾನರ 'ಶ್ರೀ ಕೃಷ್ಣಲೀಲಾ' ಎಂಬ ಕೃತಿಗೆ ಹಿನ್ನುಡಿ ಬರೆದು ಅಭಿನಂದಿಸಿರುವುದು ಅವರಿಬ್ಬರಿಗೂ ಇರುವ ಮಧುರ ಸಂಬಂಧದ ಪ್ರತೀಕವಾಗಿದೆ. ವಿ. ಸೀತಾರಾಮಯ್ಯ, ತಿ. ನಂ. ಶ್ರೀಕಂಠಯ್ಯ, ಇದಿನಬ್ಬ, ಅಕ್ಬರಲಿ, ನಿಸ್ಸಾರ ಅಹಮ್ಮದ್, ಗೋವಿಂದ್ ಪೈ, ಪಂಜೇ ಮಂಗೇಶರಾಯರು, ಟಿ.ಪಿ. ಕೈಲಾಸಂ, ಚದುರಂಗ, ಬಿ.ಜಿ. ಮಾಸ್ತಿ, ಬೇಂದ್ರೆ, ದೇವುಡು ಇವರೆಲ್ಲರ ಬಗೆಗೂ ಕರೀಂಖಾನರಿಗೆ ತುಂಬಾ ಅಭಿಮಾನವಿತ್ತು. ಅಷ್ಟೇ ಅಲ್ಲದೆ ಅವರೊಡನೆ ಒಂದಲ್ಲ ಒಂದು ರೀತಿಯ ಸಂಬಂಧ ಹೊಂದಿದ್ದರು. ಶ್ರೀ ಎಲ್.ಆರ್. ಹೆಗಡೆ, ಮಹಾಬಲ ಹೆಗಡೆ, ಶಂಭು ಹೆಗಡೆ, ಚಿಟ್ಟಾಣಿ ರಾಮಚಂದ್ರ ಹೆಗಡೆ, ಹಾ.ಮಾ. ನಾಯಕ, ಸಿ. ಅಶ್ವಥ ಸುಗಮ ಸಂಗೀತ ಹಾಡುಗಾರ ಶಿವಮೊಗ್ಗ ಸುಬ್ಬಣ್ಣ, ಅನಂತ ಸ್ವಾಮಿ, ಶ್ರೀನಿವಾಸ ಉಡುಪ, ಡಾ. ಎನ್.ಆರ್. ನಾಯಕ, ಸೋಮಶೇಖರ ಇಮ್ರಾಪುರ ಮುಂತಾದವರ ನಿಕಟ ಸಂಬಂಧ ಕರೀಂಖಾನರಿಗಿತ್ತು. 'ಜಾನಪದ ಜಂಗಮ' ಪ್ರಶಸ್ತಿಯನ್ನು ಕರೀಂಖಾನರಿಗೆ ಡಾ. ಜಿ.ಎಸ್. ಶಿವರುದ್ರಪ್ಪನವರು ನೀಡಿ ಗೌರವಿಸಿದರು. ಇವರು ಕರೀಂಖಾನರ ಜನಸೇವೆಯನ್ನು ಕೊಂಡಾಡಿದ್ದಾರೆ. ಪ್ರೊ. ಎಲ್.ಎಸ್. ಶೇಷಗಿರಿರಾವ್ ಅವರು ಕರೀಂಖಾನರ 'ಶ್ರೀಕೃಷ್ಣಲೀಲಾ' ನಾಟಕ, ಚಲನಚಿತ್ರ ಕಥಾ ಪುಸ್ತಕಕ್ಕೆ ಮುನ್ನುಡಿ ಬರೆದು ಕರೀಂಖಾನರಿಗೂ, ತಮಗೂ ಇರುವ ಸಂಬಂಧ ವ್ಯಕ್ತಪಡಿಸಿದ್ದಾರೆ. ಇವರು ತಮ್ಮ ಮುನ್ನುಡಿಯಲ್ಲಿ ''ಈ ನಾಡಿನಲ್ಲಿ ಅವರ ಪುಸ್ತಕಕ್ಕೆ ಯಾರ ಮುನ್ನುಡಿಯ ಅಗತ್ಯವಿಲ್ಲ'' ಎಂದಿರುವ ಮಾತು ಕರೀಂಖಾನರ ಮೇಧಾಶಕ್ತಿ ಅದ್ಭುತವಾದದ್ದು ಎನ್ನುವುದನ್ನು ತಿಳಿಸಿ ಕೊಡುತ್ತದೆ.

ಕರೀಂಖಾನರಿಗೆ ಸರ್ವರನ್ನು ಸರಿಸಮಾನರಾಗಿ ಕಂಡ 'ಸರ್ವಜ್ಞ' ಕವಿ, 'ಕರ್ನಾಟಕದ ಕಬೀರ' ಎಂದು ಕರೆಸಿಕೊಂಡ ಕನ್ನಡದ ಮಹಮ್ಮದೀಯ ಸಂತ ಕವಿ ದಾರ್ಶನಿಕ ಸಮನ್ವಯಕಾರ, ಹರಿ-ಹರ-ಹಜರತ್ ತತ್ವಗಳ ತ್ರಿವೇಣಿ ಸಂಗಮವಾದ ಶಿಶುನಾಳ ಶರೀಫ, ವಿಲಿಯಂ ಬ್ಲೇಕ್, ಚೀನಾ ದೇಶದ ಕ್ರಾಂತಿ ಕವಿ ಸೋಲಿಯಾನ, "ಇನ್ ಅವರ್ ಡ್ರೀಮ್ಸ್ ಬಿಗಿನ್ಸ್ ಅವರ್ ರಿಸ್ಪಾನ್ಸಿಬಿಲಿಟೀಸ್" ಎಂದ ಕಿಟ್ಸ್ ಕವಿ, ಬಾಣಭಟ್ಟ, ಕುಮಾರವ್ಯಾಸ ಮುಂತಾದವರ ಸಾಹಿತ್ಯ ಕೃತಿಗಳನ್ನು ಆಳವಾಗಿ ಓದಿರುವ ಕರೀಂಖಾನರು ಅವರನ್ನು ಎಂದೆಂದಿಗೂ ನೆನೆಯುತ್ತಾರೆ, ಇದು ಅವರ ಭಾಷಣ ಕೃತಿಗಳಲ್ಲಿ ವ್ಯಕ್ತವಾಗುತ್ತದೆ.

ಸಾಹಿತಿ ಮತ್ತು ಸಾಹಿತ್ಯದ ಬಗ್ಗೆ ಮಾತನಾಡುವ ಕರೀಂಖಾನರು ''ಈ ಸಾಹಿತ್ಯದ ಕಲೆ ಇದೆಯಲ್ಲ ಇದು ಅಗೋಚರವಾದ ಒಂದು ಒತ್ತಡ, ಇದರ ಪ್ರೇರಣೆಯಿಂದ ಈ ಕಾರ್ಯ ನಡೆದು ಹೋಗುತ್ತದೆ' ಎಂದು ನುಡಿಯುವರು. ಮೇ ೧೬-೨೦೦೧ ರಂದು ಮುಸ್ಲಿಂ ಕವಿ ಸಮ್ಮೇಳನದಲ್ಲಿ ಅಧ್ಯಕ್ಷೀಯ ಭಾಷಣ ಮಾಡಿದ ಖಾನರು ''ಕವಿಗಳು ಜನರಲ್ಲಿ ಸ್ನೇಹ ಸೌಹಾರ್ದತೆಯನ್ನು ಬೆಸೆಯಬೇಕು, ದೇಶದ ಸ್ವಾತಂತ್ರ್ಯವನ್ನು ಸಂರಕ್ಷಿಸಬೇಕು, ರಾಷ್ಟ್ರಘಾತುಕನ ಪರಮ ನೀಚತನದ್ದು ಎನ್ನುವುದನ್ನು ಎಲ್ಲರೂ ಅರಿಯಬೇಕು.'' ಎಂಬ ಅಭಿಪ್ರಾಯಕ್ಕೆ ಬರುವರು.

ಚಳುವಳಿಯಲ್ಲಿ ಭಾಗವಹಿಸಿ ಸ್ವಾತಂತ್ರ್ಯ ಗಳಿಸಿಕೊಡುವುದರಿಂದ ಹಿಡಿದು, ೨೧ನೆಯ ಶತಮಾನದ ಅವಧಿಯಲ್ಲಿ ಹೆಜ್ಜೆ ಹಾಕಿರುವ ಕರೀಂಖಾನರು ಅಲ್ಲಿಂದ ಇಲ್ಲಿಯವರೆಗೆ ಆದ ಅನೇಕ ಸ್ಥಿತ್ಯಂತರಗಳನ್ನು ಕಣ್ಣಾರೆ ಕಂಡಿದ್ದಾರೆ. ಈ ರಾಜ್ಯಕ್ಕೆ ಅನೇಕ ಮುಖ್ಯಮಂತ್ರಿಗಳು ಆಗಿ ಹೋದರು. ಆದರೆ ಕರೀಂಖಾನರ ಬದುಕಿನ ಕಡೆ ಗಮನಹರಿಸಿದವರು ಯಾರೂ ಇರಲಿಲ್ಲ ಎನ್ನುವುದಕ್ಕೆ ಕರೀಂಖಾನರ ಜೀವನ ಸಾಕ್ಷಿಯಾಗಿದೆ. ''ವಿಜಯ ಕರ್ನಾಟಕ ದಿನಪತ್ರಿಕೆ'' ಜುಲೈ ೧೬-೨೦೦೩ರಲ್ಲಿ ''ಕರೀಂಖಾನರ ಬಳಿ ಕೀಲಿ ಕೈ ಇದೆ ಮನೆ ಇಲ್ಲ'' ಎಂಬ ತಲೆಬರಹದಲ್ಲಿ ಪ್ರಕಟಗೊಂಡಿತು. ಈ ನಾಡಿಗಾಗಿ, ದೇಶಕ್ಕಾಗಿ ದುಡಿದು ಹಣ್ಣಾದ ವ್ಯಕ್ತಿಗೆ ಸರಕಾರದಿಂದ ಮನೆ ಕೊಡುತ್ತೇವೆ ಎಂಬ ಹೇಳಿಕೆಗಳು ಪ್ರಚಾರಕ್ಕೆ ಬಂದವೇ ಹೊರತೂ, ಖಾನರಿಗೆ ಮನೆ ದೊರಕಲಿಲ್ಲ.

ಜಾಗತೀಕರಣದ ಸದ್ಯದ ಸಂದರ್ಭದಲ್ಲಿಯೂ ಗಾಂಧಿಯುಗದ ವಿಶ್ವಾಸಾತ್ಮಕ ಮೌಲ್ಯಗಳನ್ನು ಉಳಿಸಿಕೊಂಡು ಬಾಳಿದ ವ್ಯಕ್ತಿ ಕರೀಂಖಾನರು. ಸತ್ಯಸಂಧತೆ, ನಿಸ್ಪೃಹತೆ, ಕಲೆಗಾಗಿ ತನ್ನನ್ನೇ ತೆತ್ತುಕೊಳ್ಳುವ ಕಲಾರಾಧನೆ, ದೇಶಪ್ರೇಮ, ಸಹಜತೆ, ಮುಗ್ಧತೆ, ದೀನದಲಿತರ ಬಗೆಗಿರುವ ಒಡಲಾಳದ ಪ್ರೀತಿ ಇವಕ್ಕೆಲ್ಲ ಡಾ. ಕರೀಂಖಾನರು ಮಾದರಿಯಾಗಿದ್ದಾರೆ. ಅವರ ಜೀವನ ಹಾಗೂ ತ್ಯಾಗ, ಸರಳಜೀವನ, ದೀನ ದುರ್ಬಲರ ಬಗೆಗಿನ ಪ್ರೀತಿ ಇವನ್ನೆಲ್ಲ ಮುಂದಿನ ಜನಾಂಗ ಉಳಿಸಿ ಬೆಳೆಸಿಕೊಂಡು ಬಂದರೆ ಅದು ನಾವು ಕರೀಂಖಾನರಿಗೆ ಅರ್ಪಿಸುವ ಕೃತಜ್ಞತೆ . ನಮಗೆ ಮಾಹಿತಿ ಒದಗಿಸಿದ ಜಾನಪದ ಗಾರುಡಿಗ ಈ ಶತಾಯು ಈ ಧರೆಯನ್ನು ಬಿಟ್ಟು ಹೋದದ್ದು (ಜುಲೈ ೨೯, ೨೦೦೬) ಒಟ್ಟಾರೆ ಕನ್ನಡ ಕುಲಕೋಟಿಗೆ ಬರಿಸಲಾಗದ ದುಃಖ ತುಂಬಲಾರದ ನಷ್ಟ. ಈ 'ಅಭಿಮಾನ ಧನ'ನ ಆದರ್ಶ ನಮಗೆ ದಾರಿದೀಪವಾಗಲಿ, ಆತ ಬಿಟ್ಟು ಹೋದ ಬೆಳಕಿನಲ್ಲಿ ನಮ್ಮ ಆದರ್ಶ, ತಾತ್ವಿಕತೆ, ಹಾಗೂ ಜಾತ್ಯತೀತ ನಿಲುವನ್ನು ಬೆಳೆಸಿಕೊಳ್ಳುವ ಗುಣ ನಮಗೆಲ್ಲ ಪ್ರಾಪ್ತವಾಗಲಿ. ಡಾ|| ಕರೀಂಖಾನ್ ಎಂಬ ಮಹಾನ್ ನಕ್ಷತ್ರವೊಂದು ತಾರಾ ಪಥದಿಂದ ಕಣ್ಮರೆಯಾಗಿದೆ. ಆದರೆ ಆ ಬೆಳಕು ಇನ್ನೂ ನಮ್ಮ ಮೇಲೆ ಬೀಳುತ್ತಲೇ ಇದೆ. ಅವರ ವ್ಯಕ್ತಿತ್ವವನ್ನು, ಜೀವನಾದರ್ಶವನ್ನು ಅರಿತು ಅನುಷ್ಠಾನಕ್ಕೆ ತರುವ ಮೂಲಕ ಆ ಬೆಳಕನ್ನು ನಾವು ನಮ್ಮ ಎದೆಯಂಗಳದಲ್ಲಿ ಸದಾ ಕಾದಿಟ್ಟುಕೊಳ್ಳೋಣ.

☼ ☼ ☼

# ಸಾಧಕ ಕರೀಂಖಾನ್

## ಜನಪದ ಸಾಹಿತ್ಯ

ಜನಪದ ಗೀತ ಸಂಗ್ರಹಕಾರರಲ್ಲಿ ಎಸ್.ಕೆ. ಕರೀಂಖಾನರು ಅಗ್ರಗಣ್ಯರು. ಜನಪದರು ನೂರಾರು ವರ್ಷಗಳಿಂದ ಬದುಕಿ ಜಾನಪದವನ್ನು ಬೆಳೆಸಿ, ಸಾಕಿದ್ದಾರೆ ಮತ್ತು ಅದನ್ನು ಅನುಭವಿಸಿದ್ದಾರೆ. ಜನಪದವೆಂಬ ಪರಿಕಲ್ಪನೆ ಹುಟ್ಟಿದ್ದು ೧೮೪೬ ರಲ್ಲಿ, ಭಾರತದಲ್ಲಿ ಇದರ ಗ್ರಹಿಕೆ ಶುರುವಾದದ್ದು ಹತ್ತೊಂಬತ್ತನೆಯ ಶತಮಾನದಲ್ಲಿ. ಇದಕ್ಕೆ ಕಾರಣರು ಪಾಶ್ಚಿಮಾತ್ಯರು. ಅಂಥ ಜನಪದವನ್ನು ಗ್ರಹಿಸಿ ಸಂಗ್ರಹಿಸಿದರು. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ''ನಮ್ಮ ಜನಪದ ವಿದ್ವಾಂಸರು ಜನಪದವನ್ನು ಒಂದು ಕಡೆ ಸಾಮಗ್ರಿ ಎಂದು ಗ್ರಹಿಸಿದರು, ಮತ್ತೊಂದು ಕಡೆ ನಮ್ಮದೆಂಬ 'ದೇಸಿ ಸಾಹಿತ್ಯ' ಎಂದು ತಿಳಿದರು. ಸ್ವದೇಶಿ ಬಿಡುಗಡೆಗಾಗಿ, ಸ್ವದೇಶಿಯಾದ ಜನಪದವನ್ನು ಸಂಗ್ರಹಿಸಿದರು, ಮತ್ತು ಬಳಸಿಕೊಂಡರು. ಆ ಮೂಲಕ ಸ್ವಾತಂತ್ರ್ಯ ಸಂಪಾದನೆ ಮತ್ತು ಸ್ವದೇಶಿ, ಪರಿಕಲ್ಪನೆಯನ್ನು ಮೂಡಿಸುವಲ್ಲಿ ಮಹತ್ವದ ಪಾತ್ರ ವಹಿಸಿದರು. ಇವರನ್ನು ದೇಶಪ್ರೇಮಿಗಳು ಹಾಗೂ ದೇಶೋದ್ಧಾರಕರು ಎಂದು ಕರೆಯಬಹುದು.''

ಜನಪದ ಸಾಹಿತ್ಯಕ್ಕೆ ಗುಡಿಸಲುಗಳೇ ಉಗಮಸ್ಥಾನ. ಸಾಮಾನ್ಯ ಜನರ ಜೀವನ ಚಿತ್ರವೇ ಕಥೆ, ನಿಸರ್ಗವೇ ಪ್ರಸಂಗ ಆಡಿ ತೋರಿಸುವ ರಂಗಭೂಮಿ; ಜನಸಾಮಾನ್ಯರ ಕಿವಿಗಳೇ ಪರಿಸೆ, ಜನಪದ ಸಾಹಿತಿಗಳೆಲ್ಲ ನಿರಕ್ಷರ ಕುಕ್ಷಿಗಳೇ. ಸ್ಫೂರ್ತಿ ಬಂದಾಗ, ಸಂತೋಷವಾದಾಗ, ಪ್ರಸಂಗ ಬಂದಾಗ, ತಮಗೆ ತೋಚಿದಂತೆ ಹಾಡಿಕೊಂಡು ತೃಪ್ತಿ ಪಡತಕ್ಕಂಥವರು. ಹೀಗಿರುವಾಗ ಅವರು ಬರೆಯುವುದಾಗಲಿ, ಅವರಿಗೆ ಬರೆಸುವುದಾಗಲೀ ಹೇಗೆ ಸಾಧ್ಯ ? ಈ ಹಾಡುಗಳನ್ನು ಹಾಡುವವರು ಹೆಚ್ಚಾಗಿ ಬಾಯಿಪಾಠ ಮಾಡಿರುವುದೇ ಹೆಚ್ಚು. ಒಂದು ನುಡಿ ತಪ್ಪಿದರೆ ಇಡೀ ಹಾಡೇ ಮರೆತು ಹೋಗುವುದುಂಟು. ಈ ಸಾಹಿತ್ಯ ಕರ್ನಾಟಕದಲ್ಲಂತೂ ಬಹಳವಾಗಿ ಬೆಳೆದುಕೊಂಡು ಹಬ್ಬಿದೆ. ಬೀಸುವ ಹಾಡು, ಒನಕೆಯ ಹಾಡು, ಬೆಳದಿಂಗಳ ಹಾಡು, ಕೋಲಿನ ಹಾಡು, ಹೋಳಿ ಹಾಡು, ಮಕ್ಕಳ ಹಾಡು, ಸುಗ್ಗಿಯ ಹಾಡು, ಹಂತಿಯ ಹಾಡು, ಸಮುದ್ರ ತೀರದ ದೋಣಿಯ ಹಾಡು, ಹಬ್ಬ ಹರಿದಿನಗಳ ಪದ, ಶಿವಶರಣರ ಹಾಡು, ಗರತಿಯ ಹಾಡು, ಎಲ್ಲಮ್ಮನ ಹಾಡು, ಜೋಕುಮಾರನ ಹಾಡು, ರಾಮಾಯಣ, ಮಹಾಭಾರತದ ಹಾಡು, ಸ್ತುತಿ ಪದಗಳು, ಸೋಬಾನೆ ಪದಗಳು, ನಿಂದೆ ವ್ಯಥೆ, ಅಳಲು-ವ್ಯಂಗ್ಯ, ಬುದ್ಧಿ, ಜರಿದು ಹಾಡುವ ಪದ-ಗರತಿ-ಕುಲಸತಿ, ಪ್ರೇಮಿ ಪದಗಳು ಒಂದು ಕಡೆಯಾದರೆ, ಅಶ್ಲೀಲ, ವ್ಯಭಿಚಾರದಿಂದ ಕೂಡಿದ ಶೃಂಗಾರ ರಸದ ಹಾಡುಗಳು ಹೀಗೆ ಅನೇಕ ವಿಧವಾಗಿ ರಾಶಿರಾಶಿಯಾಗಿ ಈ ಪದಗಳು ಹರಡಿವೆ. ಈ ಎಲ್ಲ ಸಾಹಿತ್ಯದ ಕಾಲಮಾನವನ್ನು ಗುರುತಿಸುವುದಾಗಲೀ, ಅಳೆಯುವುದಾಗಲೀ, ರಚನಾಕಾರರನ್ನು ಗುರುತಿಸುವುದಾಗಲಿ, ಸಾಧ್ಯವಿಲ್ಲದ ಮಾತು. ಇಂಥ ಜನಪದಗೀತೆಗಳನ್ನು ಸಂಗ್ರಹಿಸುವಲ್ಲಿ ಕರೀಂಖಾನರು ತೊಡಗಿಸಿಕೊಂಡಿರುವ ಬಗೆಯೇ ಭಿನ್ನವಾದದ್ದು.

ಕರೀಂಖಾನರು ಒಂದು ಕಡೆ ಈ ಜನಪದದದ ವಿಷಯವಾಗಿ ಮಾತನಾಡುತ್ತ ''ಜಾನಪದ ಗೀತೆಗಳನ್ನು ರಚಿಸಿರುವವರು ಕಟ್ಟಾ ಸಾಹಿತಿಗಳಲ್ಲ ಪ್ರಾಸ, ಗಣ, ಮಾತ್ರೆ, ನೋಡಿಕೊಂಡು ಸಾಹಿತ್ಯ ರಚಿತವಾಗಿಲ್ಲ. ಇದಕ್ಕೆ ಅಲಂಕಾರಗಳೆಂಬ ವೇಷ ಭೂಷಣಗಳಾಗಲೀ, ಲಕ್ಷಣಗಳ ಕಟ್ಟುನಿಟ್ಟಾಗಲೀ

ಇಲ್ಲ. ಓದು ಬರಹವನ್ನರಿಯದ ಹಳ್ಳಿಗರ ಲಹರಿಯ ಝರಿಯಲ್ಲಿ ಕನ್ನಡವೇ ತನ್ಮಯವಾಗಿ ಒಂದೇ ಸಮನೆ ಪ್ರವಹಿಸುತ್ತ ಬಂದಿರುವುದೇ ಈ ಸಾಹಿತ್ಯವಾಗಿದೆ.'' ಈ ಹಾಡುಗಳು ಕೆಲವು ಕಡೆ ತ್ರಿಪದಿಗಳಲ್ಲಿ ಕೆಲವು ಕಡೆ ಚೌಪದಿಗಳನ್ನೊಳಗೊಂಡಿರುವುದರಿಂದ ಏರಿಳಿತಗಳಲ್ಲಿ ರಾಗವಾಗಿ ಹಾಡಲು ಬರುತ್ತದೆ. ಇನ್ನು ತಾಳ ಮದ್ದಳೆಗಳಿಗೆ ಹೊಂದದ ಹಾಡುಗಳು ಜನಪದ ಸಾಹಿತ್ಯದಲ್ಲಿ ಒಂದೂ ಇಲ್ಲವೆಂದೇ ಹೇಳಬಹುದು. ಇಂಥ ಅಗಾಧ ಸಾಹಿತ್ಯ ರಾಶಿಯನ್ನು ಸಂಗ್ರಹಿಸಲು ಕರೀಂಖಾನರ ಮೈಮನಸ್ಸು ತೆರೆದು ಕೊಂಡಿರುವುದು ಭಾಗ್ಯವೇ ಸರಿ.

'ಶತಮಾನದ ಕನ್ನಡ ಸಾಹಿತ್ಯ' ಎಂಬ ಹೊತ್ತಿಗೆಯಲ್ಲಿನ ಸಂಗ್ರಹಗಳನ್ನು ಹಿಂದಿನಿಂದ ಬಂದ, ಈಗ ಹುಟ್ಟಿಕೊಂಡ ಅನೇಕ ಜಾನಪದ ಆಸಕ್ತರು ಹಾಗೂ ವಿದ್ವಾಂಸರು ಒಂದು ರೀತಿಯಲ್ಲಿ ಜಾನಪದ ಯಜಮಾನರಂತೆ ಸಂಗ್ರಹಿಸಿದರು, ಮತ್ತು ಮಾತನಾಡಿದರು. ದೇಶದ ಜವಾಬ್ದಾರಿಯನ್ನು ಹೊತ್ತ ಗೌರವದ ಪ್ರಜೆಗಳಂತೆ ಪ್ರೇಮದಿಂದ ಜನಪದ ಸಾಹಿತ್ಯದ ಬಗ್ಗೆ ಬರೆಯುವ ಇವರನ್ನು ನೋಡಿದರೆ ಒಂದು ರೀತಿ ಹೆಮ್ಮೆ ಎನಿಸುತ್ತದೆ. ಅವರ ವ್ಯಕ್ತಿತ್ವದಲ್ಲಿ ಒಂದು ರೀತಿಯ ಮುಗ್ಧತೆ ಇರುವುದೂ ಇದಕ್ಕೆ ಕಾರಣವಿರಬಹುದು. ಅಂಥ ಕೆಲ ಹಿರಿಯರನ್ನು ಇಲ್ಲಿ ಗಮನಿಸಬಹುದು. ಹುಲ್ಲೂರು ಜೋಯಿಸ್, ಎಸ್.ಆರ್. ಪಂಚಮುಖಿ, ಎಲ್. ಗುಂಡಪ್ಪ ಗೋರೂರು ರಾಮಸ್ವಾಮಿ ಅಯ್ಯಂಗಾರ್, ಮತ್ತಿಘಟ್ಟ ಕೃಷ್ಣ ಮೂರ್ತಿ, ಎಸ್.ಕೆ.ಕರೀಂಖಾನ (ಜನಪದ ಗೀತೆ ಭಾಗ- ೧ ಮತ್ತು -೨) ಇಂಥವರ ಹೆಸರೇ ಜನಪದ ಸಾಹಿತ್ಯದ ಹೆಸರಂತೆ ಕಂಡುಬರುತ್ತವೆ. ಡಾ. ಕರೀಂಖಾನರು ದಕ್ಷಿಣ ಕರ್ನಾಟಕದಲ್ಲೆಲ್ಲ ಜನಪದ ಗೀತೆಗಳನ್ನು ಹಾಡಿ ಜನಪದ ಸಾಹಿತ್ಯ-ಸಂಸ್ಕೃತಿ ಸಂವರ್ಧನೆಗೆ ಪ್ರೇರಣೆ ನೀಡಿದ್ದಾರೆ. ಇವರ ಪರಂಪರೆಯನ್ನು ಸಮರ್ಥವಾಗಿ ಮುಂದುವರಿಸಿದವರು ಕೆ.ಆರ್.ಲಿಂಗಪ್ಪ'' ಹೀಗೆ ಕರೀಂಖಾನರು ಜಾನಪದ ಕ್ಷೇತ್ರಕ್ಕೆ ಕೊಟ್ಟಿರುವ ಕಾಣಿಕೆಯನ್ನು ಪ್ರಸ್ತಾಪಿಸಿರುವುದು ಔಚಿತ್ಯ ಪೂರ್ಣವಾದದ್ದು. ಜನರ ಬಾಯಿಂದ ಬಾಯಿಗೆ ಕೇಳ್ಕೆ ಮೂಲಕವಾಗಿ, ಹಬ್ಬಿ ನಿಂತಿರುವುದೇ ಈ ಸಾಹಿತ್ಯದ ವಿಶೇಷತೆ. ಇದಕ್ಕೆ ಜಾನಪದಗೀತೆ ಅಥವಾ ಹಳ್ಳಿ ಹಾಡುಗಳೆಂದೂ ಕರೆಯುತ್ತೇವೆ. ಇಂಥ ಅಮೂಲ್ಯ ನಿಧಿಯನ್ನು ಅಂದು ಸಂಶೋಧಕ ಪ್ರಜ್ಞೆಯಿಂದ ಸಂಗ್ರಹಿಸಿ, ಉಳಿಸಿರುವ ಕೀರ್ತಿ ಕರೀಂಖಾನರಿಗೆ ಸಲ್ಲುತ್ತದೆ.

ಒಂದು ಕಾಲಕ್ಕೆ 'ಗೊರವರ ದುಂದುಬಿಯೋ ಬೀದಿವರೆ ಬೀರನ ಕತೆಯೋ' ಎಂದು ಶಿಷ್ಟಕವಿಗಳಿಂದ ಹಂಗಿಸಿಕೊಂಡ ಜನಪದ ಸಾಹಿತ್ಯವೇ, ಕ್ಲಿಷ್ಟಸಂಪ್ರದಾಯದ ಮಹಾ ಕಾವ್ಯಗಳಿಗೂ ಮೂಲ ಹೂರಣವಾದ ಸತ್ಯ ನಿಚ್ಚಳವಾಗಿದೆ. ಅಷ್ಟೇ ಅಲ್ಲ ಭಾರತದ ರಾಮಾಯಣ, ಮಹಾಭಾರತಗಳ ಮೂಲವೇ ಜನಪದ ಸಾಹಿತ್ಯದಲ್ಲಿದೆ ಎಂದರೆ ಅಚ್ಚರಿ ಪಡಬೇಕಾದುದಿಲ್ಲ. ಅಂತೆಯೇ ಶಿಷ್ಟ ಸಾಹಿತ್ಯದಲ್ಲಿ ಏನಿಲ್ಲವೋ ಅದು ಜನಪದ ಸಾಹಿತ್ಯದಲ್ಲಿದೆ.

**ಸಂಗ್ರಹಕಾರ ಕರೀಂಖಾನ್ :**

ಕರೀಂಖಾನರ ಪ್ರತಿಭಾ ನೇತ್ರಕ್ಕೆ ಕಾಣಿಸಿದ ಬಹುಮೌಲ್ಯವಾದ ನಿಧಿಯೆಂದರೆ ಜನಪದ ಸಾಹಿತ್ಯ. ಹಳ್ಳಿಯಲ್ಲಿ ರಾಶಿಯಾಗಿ ಬಿದ್ದ ಜನಪದ ಸಾಹಿತ್ಯ ಭಾವ, ಭಾಷೆ, ಬೆಡಗುಗಳಿಂದ ಯಾರನ್ನೂ ತನ್ನ ಕಡೆಗೆ ಎಳೆದುಕೊಳ್ಳುವ ಶಕ್ತಿಯುಳ್ಳದ್ದು. ಆದರೆ ಇಪ್ಪತ್ತನೆ ಶತಮಾನದ ಎರಡನೆಯ ದಶಕ ಮುಗಿಯುವವರೆಗೆ ನಮ್ಮ ಸಾಹಿತ್ಯಜ್ಞರು ಆ ಕಡೆಗೆ ವಿಶೇಷ ಲಕ್ಷ್ಯ ಕೊಟ್ಟಿರಲಿಲ್ಲ. ಇಪ್ಪತ್ತನೇ ಶತಮಾನದ ಮೂರನೇ ದಶಕದಲ್ಲಿಯೇ ಎಸ್.ಕೆ.ಕರೀಂಖಾನರು ಹಳ್ಳಿ ಹಳ್ಳಿ ಅಲೆದು, ಜನಪದ ಗೀತೆಗಳ ಸಂಗ್ರಹಗಳಾದ 'ಜನಪದ ಗೀತೆಗಳು' ಮತ್ತು 'ಕನ್ನಡ ಜನಪದ ಗೀತೆಗಳು' ಸಂಗ್ರಹವನ್ನು ಪ್ರಕಟಿಸುವುದರ ಮೂಲಕ ಕನ್ನಡ ಜನಪದ ಗೀತೆಗಳ ಸಂಗ್ರಹಕಾರರಲ್ಲಿ ಆದ್ಯರೆನಿಸಿದರು.

ದಕ್ಷಿಣ ಕರ್ನಾಟಕದ ಹಳ್ಳಿಯಲ್ಲಿ ಹುಟ್ಟಿದ ಎಸ್.ಕೆ. ಕರೀಂಖಾನರವರು ಡಾ. ಗೋರುರು ರಾಮಸ್ವಾಮಿ ಅಯ್ಯಂಗಾರರಂತೆ ತಮ್ಮ ಸಾಹಿತ್ಯದ ಮೂಲಕ ಗ್ರಾಮೀಣ ಸಂಸ್ಕೃತಿಯ ಸೊಗಡನ್ನು ಜನಮನಕ್ಕೆ ತಲುಪಿಸಿದ್ದಾರೆ. ತಮ್ಮ ಹುಟ್ಟೂರಾದ ಸಕಲೇಶಪುರದ ಅಕ್ಕಪಕ್ಕದ ಊರುಗಳನ್ನೇ ತಮ್ಮ ಕಾರ್ಯಕ್ಷೇತ್ರವನ್ನಾಗಿ ಆರಿಸಿಕೊಂಡು ಜನಪದ ಗೀತೆಗಳ ಸಂಪುಟಗಳನ್ನು ರಚಿಸುವಷ್ಟು ಜನಪದ ಗೀತೆಗಳನ್ನು ಸಂಗ್ರಹಿಸಿದ್ದರು.

ಕರೀಂಖಾನರು ತಾವು ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸುವ ಪ್ರಾರಂಭಾವಸ್ಥೆಯಲ್ಲಿಯೇ ಆ ಕಡೆಗೆ ಗಮನ ಹರಿಸಿದ್ದಾರೆ. ಇದು ಇವರ ದರ್ಶನ ಶಕ್ತಿಯ ವೈಶಿಷ್ಟ್ಯಕ್ಕೆ ಒಂದು ಹೆಗ್ಗುರುತೆಂದು ಹೇಳಬಹುದು. ಇವರು ಅನಾಥವಾಗಿ ಬಿದ್ದಿರುವ ಜಾನಪದ ಸಾಹಿತ್ಯವನ್ನು ಉಳಿಸಿ, ಬೆಳೆಸುವ ಕೈಂಕರ್ಯವನ್ನು ಬೆಳೆಸಿಕೊಂಡರು. ಜನಪದ ಗೀತೆಗಳ ಸಂಗ್ರಹ ಹಾಗೂ ಗಾಯನದಿಂದ ನಾಲ್ವತ್ತರ ದಶಕಗಳಲ್ಲಿ ಮನೆ ಮಾತಾಗಿದ್ದ ಎಸ್.ಕೆ.ಕರೀಂಖಾನ್ ಅವರದು ಬಹುಮುಖದ ವ್ಯಕ್ತಿತ್ವವಾಗಿರುವುದು ಅಪರೂಪವೇನಲ್ಲ, ಇವರೇ ತಮ್ಮ ಕಿರುಪರಿಚಯದಲ್ಲಿ ಹೇಳಿದ ಮಾತುಗಳೆಂದರೆ'' ವಿದ್ಯಾಭ್ಯಾಸ ಎಂಟನೇ ತರಗತಿಯವರೆಗೆ ಮಾಡಿದರೂ, ಈ ಅವಧಿಯಲ್ಲೇ ಇಸ್ಲಾಮ್ ಧರ್ಮಾಧ್ಯಯನದೊಂದಿಗೆ ಹಿಂದೂ ಪುರಾಣಗಳ ಪರಿಚಯವೂ ಪ್ರಾಪ್ತವಾಯಿತು. ಶಾಸ್ತ್ರೀಯ ಸಂಗೀತದ ಲಘು ಅಭಿಜ್ಞತೆಯಿತ್ತಾದರೂ ಆಕರ್ಷಕ ದಾಟಿಯ ಸುಲಭಾರ್ಥದ ಜನಪದ ಗೀತೆಗಳು ಹೆಚ್ಚು ಪ್ರಿಯವಾದದ್ದು. ಜನಪದ ಗೀತೆಗಳ ಸಂಗ್ರಹ ಪ್ರಚಾರದಲ್ಲಿ ಆಸಕ್ತಿ ತೀವ್ರವಾಯಿತು ಎನ್ನುವಲ್ಲಿ ಹಾಡುಗಾರಿಕೆ ಮತ್ತು ಸಂಗ್ರಹಕಾರ್ಯ ಇವರನ್ನು ನಿಂತಲ್ಲಿ ನಿಲ್ಲಗೊಡಲಿಲ್ಲವೆಂಬುದು ಸ್ಪಷ್ಟ

''ಮುಂದೇನು ಕೊಟ್ಟೀತು । ಮನವೇನು ತಣಿದೀತು।
ಮುಂಜಾನೆದಾನಗಿರಿಮಲ್ಲ। ಮುಂಜಾನೆ ದಾನೆ ಗಿರಿಮಲ್ಲ ಕೊಟ್ಟರೆ
ಮನತುಂಬಿ ನನ್ನ ಮನೆ ತುಂಬಿ॥''

ಇದೇ ಜನಪದ ಸಾಹಿತ್ಯದ ಮೂಲಮಂತ್ರ; ಭದ್ರ ಬುನಾದಿ; ಜೀವಾಳ. ಭಗವಂತನೊಬ್ಬನೇ ಶ್ರೀಮಂತ! ನಿತ್ಯದಾನಿ! ಅವನು ಅನುಗ್ರಹಿಸಿದರೆ ಕೀರ್ತಿ, ಗೌರವಗಳು ಪ್ರಾಪ್ತವಾಗುತ್ತವೆ.'' ಎಂದು ಕರೀಂಖಾನರು ಹೇಳಿದ್ದಾರೆ.

ಕರೀಂಖಾನರು ಹೆಚ್ಚಿನ ವಿದ್ಯಾಭ್ಯಾಸವನ್ನು ಮಾಡಲಿಲ್ಲವಾದರೂ ಜಾನಪದ, ಇತಿಹಾಸ, ಪುರಾಣ, ಮಹಾಕಾವ್ಯಗಳ ಬಗ್ಗೆ ಆಸಕ್ತಿ ಬೆಳೆಸಿಕೊಂಡರು. ವಿಪುಲವಾಗಿ ಓದಿಕೊಂಡರು. ಭಾರತದ ಹಾಗೂ ಕರ್ನಾಟಕದ ಚರಿತ್ರೆಯ ಬಗ್ಗೆ ಕರೀಂಖಾನ್ ಅವರು ಹೊಂದಿರುವ ಖಚಿತವಾದ ಮತ್ತು ಅಪಾರವಾದ ಜ್ಞಾನ, ವಿಸ್ಮಯವನ್ನು ಹುಟ್ಟಿಸುತ್ತದೆ. ಇತಿಹಾಸದ ಸಂಗತಿಯನ್ನು ತಮ್ಮದೇ ಆದ ದೃಷ್ಟಿಕೋನದಿಂದ ವಿಶ್ಲೇಷಿಸುವ ಸಾಮರ್ಥ್ಯ ಇವರಿಗಿದೆ. ''ಈ ಗಟ್ಟಿ ಆಸಾಮಿ ತಮ್ಮ ಎಳೆ ಹರೆಯದ ದಿನಗಳಲ್ಲಿ ಕನ್ನಡ ಜನಪದ ಗೀತೆಗಳ ಅಪೂರ್ವ ಸಾಹಿತ್ಯ ಮತ್ತು ಸಂಗೀತಕ್ಕೆ ಮಾರು ಹೋದರು. ಆ ಮೂಲಕ ಜಾನಪದ ಮಾಧುರ್ಯದ ಪ್ರಚಾರಕ್ಕೆ, ಸಂಗ್ರಹಕ್ಕೆ ತೊಡಗಿ ಚಿಕ್ಕಪ್ರಾಯದಲ್ಲಿ ಮನೆಬಿಟ್ಟು ಹೊರಟವರು'' ಎನ್ನುವುದು ಕರೀಂಖಾನರ ಮನಸ್ಸಿನಲ್ಲಿ ಜನಪದ ಸಾಹಿತ್ಯ ಹಾಸುಹೊಕ್ಕಿರುವುದನ್ನು ಸ್ಪಷ್ಟಪಡಿಸುತ್ತದೆ.

ಕರೀಂಖಾನರು ಕಾಂಗ್ರೆಸ್ ಚಳುವಳಿ, ಕರ್ನಾಟಕದ ಏಕೀಕರಣ, ಚುನಾವಣೆ ಮೊದಲಾದ ಸಂದರ್ಭಗಳಲ್ಲಿ ಜನಪದ ಗೀತೆಗಳನ್ನು ಪ್ರಚಾರ ಮಾಧ್ಯಮವಾಗಿ ಬಳಸಿಕೊಂಡರು. ಇವರು

ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿ ಕರ್ನಾಟಕದಾದ್ಯಂತ ಬಹಳಷ್ಟು ಸಲ ಕಾಲ್ನಡಿಗೆಯಲ್ಲೇ ಸಂಚಾರ ಮಾಡುತ್ತಿದ್ದರಿಂದಾಗಿ ಬೇರೆ ಬೇರೆ ಪ್ರದೇಶಗಳ ಜಾನಪದ ಗೀತೆಗಳನ್ನು ಕಲಿಯುವ, ದಾಖಲಿಸುವ ಅವಕಾಶವೂ ಅನಾಯಾಸವಾಗಿಯೇ ಸಿಕ್ಕಿತು. ಜನಪದ ಗೀತೆಗಳ ಸಂಗ್ರಹ ಮತ್ತು ಹಾಡುಗಾರಿಕೆ ಅವರ ಹವ್ಯಾಸ ಹಾಗೂ ಜೀವನೋಪಾಯವೂ ಆಯಿತು. ಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣದಂತಹ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಳುವಳಿಗೆ ಪೂರಕವಾದಂತಹ ಕೆಲಸ ಮಾಡಿದರು. ಪರಿಚಾರಕರಾಗಿ ಹೋಗಿ ಜಾನಪದ ಸಾಹಿತ್ಯವನ್ನು ಎಲ್ಲಾ ಕಡೆಗೆ ತಲುಪಿಸುವ ಕೆಲಸ ಮಾಡಿದರು'' ಎನ್ನುವ ಮಾತಲ್ಲಿ ಕರೀಂಖಾನರು ಜನಪದ ಸಾಹಿತ್ಯವನ್ನು ನಂಬಿ ಬದುಕಿದವರು. ಜನಪದ ಗೀತೆಗಳನ್ನು ಭಾವ ತುಂಬಿ ಹಾಡಿದ್ದರಿಂದ, 'ಹಾಡುಗಳ ಸರದಾರ'ನಾಗಿ ಹಾಡಿನ 'ಕರೀಂಬಾಯಿ' ಆದರು. ಹಳ್ಳಿಯ ಬಯಲಿನಲ್ಲಿ ಯಾವುದಾದರೊಂದು ಮರದ ಕೆಳಗೆ ನಿಂತು ಅವರು ಜನಪದ ಗೀತೆಗಳನ್ನು ಹಾಡಲು ಆರಂಭಿಸುತ್ತಿದ್ದರು. ಹಾಡಿಗಾಗಿ ಆಕರ್ಷಿತರಾದ ಜನ ಇವರತ್ತ ಜಮಾಯಿಸುತ್ತಿದ್ದರು. ಹಾಡಿದ್ದು ಮುಗಿದ ನಂತರ ಜನಪದ ಗೀತೆಗಳ, ಕಥೆಗಳ ಸಂಗ್ರಹ ಮಾಡುತ್ತಿದ್ದರು. ಕರೀಂಖಾನರ ಹಾಡಿಗೆ ಆ ಕಾಲದ ಪಂಡಿತ ಪಾಮರರೆಲ್ಲ ಮಾರುಹೋಗಿದ್ದರು. 'ಕನ್ನಡದ ಆಸ್ತಿ ಮಾಸ್ತಿ'ಯವರು ಇವರ ಹಾಡಿಗೆ ಮಾರುಹೋಗಿ ತಮ್ಮ ಮೆಚ್ಚಿಗೆ ವ್ಯಕ್ತಪಡಿಸಿದ್ದು ಇದೆ. ಕರೀಂಖಾನರು ಅತ್ಯಮೂಲ್ಯವಾದ ಜಾನಪದ ಸಾಹಿತ್ಯವನ್ನು ಸಂಗ್ರಹಿಸುವುದರಲ್ಲಿ ಪ್ರಯತ್ನಪಟ್ಟರು. ಇವರು ಹಳ್ಳಿಯಲ್ಲಿ ಹೇರಳವಾಗಿ ಲಭ್ಯವಾಗುತ್ತಿದ್ದ ಜಾನಪದ ಗೀತೆಗಳನ್ನು ಹಸ್ತ ಪ್ರತಿಯಲ್ಲಿ ಬರೆದುಕೊಳ್ಳುತ್ತಾ, ಅಲ್ಲಲ್ಲಿ ಭಾವತುಂಬಿ ಹಾಡುತ್ತಾ, ಜನರ ಮನಸ್ಸನ್ನು ಗೆಲ್ಲುತ್ತಿದ್ದರು. ಆದರೆ ತಾವು ಸಂಗ್ರಹಿಸಿದ್ದೆಷ್ಟು? ಬಳಸಿದೆಷ್ಟು? ಉಳಿಸಿದೆಷ್ಟು? ಎಂಬ ವಿಚಾರವನ್ನೇ ಮಾಡಿರಲಿಲ್ಲ; ಹಾಗೂ ಅವುಗಳನ್ನು ಜೋಪಾನವಾಗಿಡುವ ವ್ಯವಸ್ಥೆಯನ್ನು ಕೂಡ ಮಾಡಿರಲಿಲ್ಲ, ಇದರಿಂದ ಜಾನಪದ ಸಾಹಿತ್ಯಕ್ಕೆ ತುಂಬಲಾರದ ನಷ್ಟವಾಗಿದೆ. ಅವರು ಸಂಗ್ರಹಿಸಿದ, ಈಗ ಲಭ್ಯವಿರುವ 'ಜನಪದ ಗೀತೆ' ಮತ್ತು 'ಕನ್ನಡ ಜನಪದದ ಗೀತೆಗಳು' ಎನ್ನುವ ಎರಡು ಜಾನಪದ ಸಂಗ್ರಹಗಳು ಸಿಗುತ್ತವೆ.

'ಜನಪದ ಗೀತೆ' ಎಂಬ ಶೀರ್ಷಿಕೆಯ ಸಂಗ್ರಹವು ೧೩೫ ಪುಟಗಳನ್ನೊಳಗೊಂಡ ಜಾನಪದ ಸಂಗ್ರಹವಾಗಿದೆ. ಇದು ೧೯೭೪ರಲ್ಲಿ ಮುದ್ರಣಗೊಂಡಿದೆ. 'ಕನ್ನಡ ಜನಪದ ಗೀತೆಗಳು' ಎಂಬ ಜಾನಪದ ಗೀತೆಗಳ ಸಂಗ್ರಹವು ೧೩೨ ಪುಟಗಳನ್ನೊಳಗೊಂಡ ಸಂಗ್ರಹವಾಗಿದೆ. ಇದು ಮುದ್ರಣಗೊಂಡಿದ್ದು ೧೯೮೭ರಲ್ಲಿ, ಈ ಎರಡೂ ಸಂಗ್ರಹಗಳು ಮರುಮುದ್ರಣಗೊಂಡಿವೆ. 'ಜನಪದ ಗೀತೆ' ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟ ಪ್ರಕಾಶಕರು ಬೆನ್ನುಡಿಯಲ್ಲಿ ಹೇಳುವಂತೆ 'ಜನಪದ ಗೀತೆ' ಸಂಗ್ರಹ ಬಹಳ ಜನಪ್ರಿಯವಾದದ್ದು. ಜನತೆಯ ಬೇಡಿಕೆಯ ಒತ್ತಡದಿಂದ ಈ ಸಂಗ್ರಹದ ಮುದ್ರಣ ಕಾರ್ಯವನ್ನು ಈಗ ಕೈಕೊಳ್ಳಲಾಗಿದೆ. ನಮ್ಮ ಸಾಹಿತ್ಯ ಮಾಲೆಯಲ್ಲಿ ಈ ಹೊತ್ತಿಗೆಯನ್ನು ಹೊರತರಲು ಒಪ್ಪಿಗೆಯನ್ನಿತ್ತ ಸನ್ಮಾನ್ಯ ಎಸ್.ಕೆ. ಕರೀಂಖಾನರಿಗೆ ನಮ್ಮ ಧನ್ಯವಾದಗಳು'' ಎಂದಿರುವುದು ಕರೀಂಖಾನರ ಸಂಗ್ರಹದ ಮಹತ್ವ ತಿಳಿಯಬಹುದು. 'ಕನ್ನಡ ಜನಪದ ಗೀತೆಗಳು' ಮುದ್ರಿಸಿದ ಪ್ರಕಾಶಕರು ಹೇಳುವಂತೆ ಕನ್ನಡ ನಾಡಿನ ಸಾಂಸ್ಕೃತಿಕ ಹಾಗೂ ಸಾಹಿತ್ಯದ ಚರಿತ್ರೆಯ ಅಭ್ಯಾಸಕ್ಕೆ ಜಾನಪದ ಗೀತೆಗಳ ಕೊಡುಗೆ ಅಪಾರವಾದದ್ದು. ತಲೆತಲಾಂತರದಿಂದ ಕೇವಲ ಹಳ್ಳಿಗಳಗರ ಬಾಯಲ್ಲಿ ಉಳಿದುಕೊಂಡು ಜೀವಂತವಾಗಿದ್ದ ಅಷ್ಟಿಷ್ಟು ಗೀತೆಗಳನ್ನು ಭಾರತವು ಸ್ವತಂತ್ರವಾಗುವ ಮುನ್ನಿನ ದಿನಗಳಿಂದಲೂ ಯಾವ ಸಂಘ ಸಂಸ್ಥೆಯ ಸರ್ಕಾರದ ಧನಸಹಾಯವಿಲ್ಲದಿದ್ದರೂ ಕೂಡಾ, ಆದರ ಮೋಡಿಗೆ ಬೆರಗಾಗಿ, ಜ್ಞಾನ ಸಂಪತ್ತಿಗೆ ಮಾರುಹೋಗಿ ಹಳ್ಳಿ ಹಳ್ಳಿಗೆ ಕಾಲ್ನಡಿಗೆಯಲ್ಲಿ ತಿರುಗಾಡಿ,

ಅವರೊಂದಿಗೆ ಬೆರೆತು, ಮನ ಒಲಿಸಿ ಹಾಡಿಸಿ, ಬರೆದಿಟ್ಟುಕೊಂಡು ಇಂದು ನಮಗೆ ಈ ರೂಪದಲ್ಲಿ ಉಳಿಸಿಕೊಟ್ಟಿರುವ ಅಸದೃಶ ಸಾಹಸ, ಕೀರ್ತಿ ಶ್ರೀಮಾನ್ ಎಸ್.ಕೆ.ಕರೀಂಖಾನ್‌ರವರಿಗೆ ಸಲ್ಲುತ್ತದೆ. ಅವರ ಅಂತಃಕರಣದ, ಅಭಿಮಾನದ ''ಕನ್ನಡ ಜನಪದ ಗೀತೆಗಳು'' ಮನೆಮನಗಳಲ್ಲೂ ಬೆಳಗುವ ಒಂದು ದಿವ್ಯವಾದ ಕರ್ನಾಟಕ ಸಂಸ್ಕೃತಿಯ ಜ್ಯೋತಿಯಾಗಿದೆ.'' ಎನ್ನುವ ಮಾತು ಕರೀಂಖಾನರ ಜಾನಪದ ಸಂಗ್ರಹದ ವಿಶಿಷ್ಟತೆಯನ್ನು ಹೇಳುತ್ತದೆ. ಕರೀಂಖಾನರು ಸಂಗ್ರಹಿಸಿದ ಕನ್ನಡ ಜಾನಪದ ಗೀತೆಗಳು, ಕನ್ನಡ ಜಾನಪದ ಸಾಹಿತ್ಯ ಕಿರೀಟದ ನವರತ್ನಗಳಂತಿವೆ. ದೊರೆತಿರುವ ಜನಪದ ಗೀತೆಗಳಲ್ಲಿ ನಾಡಿನ ಸಂಸ್ಕೃತಿಯ ವಿಷಯವು ವ್ಯಕ್ತವಾಗಿದೆ. ಈ ಜನಪದ ಗೀತೆಗಳ ಸೃಷ್ಟಿಗೆ ಮೂಲ ಪ್ರೇರಣೆ ಹೇಗೆ ಒದಗಿತು ? ಎಂಬುದನ್ನು ಹೇಳುವುದು ಸುಲಭದ ಕೆಲಸವಲ್ಲ. ಮೂಲಭೂತವಾಗಿ ಜನಪದ ಕಾವ್ಯ (ಸಾಹಿತ್ಯ) ಅಜ್ಞಾತ ಕವಿಗಳ 'ಅಮರ ಕಾವ್ಯ' ಎಂಬುದು ಸತ್ಯ.

''ಜಾನಪದವೇ ಒಂದು ಮೂಲ ನಾಟಿ ಸೊಬಗು, ಈ ರೀತಿ ನಾಟಿ, ಮತ್ತು ದೇಶಿ ಸೊಗಡಿನ ಮೂಲಕ ಜಾನಪದ ಪರಂಪರೆಗೆ ಇವರು ಕೊಟ್ಟ ಕೊಡುಗೆ ಅನನ್ಯ'' ಎನ್ನುವ ಮಾತಲ್ಲಿ ಕರೀಂಖಾನರು ಪರಂಪರೆಯನ್ನು ಉಳಿಸುವಲ್ಲಿ ಮಾಡಿದ ಪ್ರಯತ್ನ ಅಚ್ಚಳಿಯದೇ ಉಳಿಯುವಂಥದ್ದು. ಇವರ ಸಂಗ್ರಹವನ್ನು ಗಮನದಲ್ಲಿಟ್ಟುಕೊಂಡು ಇಲ್ಲಿ ಬರುವ ಗೀತೆಗಳನ್ನು ಈ ರೀತಿ ವಿಂಗಡಿಸಲಾಗಿದೆ. ಇವರ ಸಂಗ್ರಹದಲ್ಲಿ ವಿಷಯಾನುಗುಣವಾದ ವರ್ಗೀಕರಣವನ್ನು ಮಾಡಿಲ್ಲವಾದರೂ ಮೊದಮೊದಲಿನ ಗೀತೆಗಳೆಲ್ಲವೂ ದೇವರನ್ನು ಕುರಿತವು ಮತ್ತು ಸ್ತುತಿರೂಪದ ಗೀತೆಗಳು. ದೇವರು, ಗಣನಾಯ್ಕ, ಶರಣು, ಸರಸ್ವತಿ, ಬೀರಪ್ಪ 'ಸೋಲಿಸಬೇಡ ಗೆಲಿಸಯ್ಯ', 'ಬೇಲೂರ ಚೆನ್ನಯ್ಯ', 'ಮೇಲುಕೋಟೆ ಚೆಲುವಯ್ಯ', 'ಬಾಲಗೋಪಾಲ', 'ಕಾಳಪ್ಪ', 'ನಂಜುಂಡ', ಮುಂತಾದ ಪುರುಷ ದೇವರ ಕುರಿತು ಇರುವ ಗೀತೆಗಳು ಹಾಗೆಯೇ ಸ್ತ್ರೀ ದೇವಿಯರ ಕುರಿತು. 'ಮಾರಮ್ಮ', 'ದ್ಯಾವಮ್ಮ', ಮುಂತಾದ ಗೀತೆಗಳು. ಮಹಾಭಾರತ ಮತ್ತು ರಾಮಾಯಣಕ್ಕೆ ಸಂಬಂಧಿಸಿದ ಹಾಡುಗಳಲ್ಲಿ 'ಕಹಿ ಬಾಳು', (ಪಾಂಡವರ ಕಷ್ಟಗಳನ್ನು ಕುರಿತದ್ದು) 'ದ್ರೌಪದಿ ವಸ್ತ್ರಾಪಹರಣ', 'ಹನುಮ', ಮುಂತಾದ ಗೀತೆಗಳು, ತೌರಿನ ಘನತೆ, ಮಗಳಿಗೆ ತಾಯಿಯ ಬುದ್ಧಿವಾದ, ಬಳೆಗಾರ, ಜೋಗುಳ, ತಾಯಿ ಇಲ್ಲದ ತೌರು, ಹರಕೆ, (ಗರತಿಗೆ ತೌರಿನ ಬಗ್ಗೆ ಇರುವ ಅಭಿಮಾನ ಹಾಗೂ ಜವಾಬ್ದಾರಿಯ ವಿವರ ನೀಡುವ ಗೀತೆ) ಕಾವಲಿಯ ಹಾಡು, (ಅತ್ತಿಗೆ ನಾದಿನಿಯರ ವಿರಸದ ಹಾಡು) ಹಗರಣ, ಬಾರು ನಾ (ಪ್ರಿಯಕರನನ್ನು ಕರೆಯುವ ಗೀತೆ) ಗೆಣೆಯ, ಗೆಣತಿ, ಕೆಂಚಿತಾರೆ, ಜಾಣ ಜಾಣೆ, (ಪ್ರೇಮವನ್ನು ಕುರಿತ ಗೀತೆಗಳು) 'ಸೋದ್ರತ್ತೆ ಮಗಳು', 'ಮಾತಾಡು ಮಲ್ಲಿಗೆ', (ಒಗಟಿನ ಅರ್ಥಕೊಡುವ ಗೀತೆಗಳು) 'ಗೋಳಿನ ಗಂಡ', (ಹಾಸ್ಯ ಪ್ರಧಾನ ಗೀತೆ) 'ಕೋಗಿಲೆ', (ನಿಸರ್ಗ ಗೀತೆ) 'ಬಡವಿಬಾಳು', (ಬಡತನದ ಬೇಗೆಯನ್ನು ತಿಳಿಸುವ ಹಾಡು) 'ವಿಧವೆ' (ವೈದವ್ಯದ ಕುರಿತ ಗೀತೆ), 'ನೀತಿ' (ಸಂಸಾರಿಯು ಸೂಳೆಯ ಸಂಗ ಮಾಡಬಾರದೆಂಬ ನೀತಿ ಗೀತೆ) 'ಕೋಣವೇ ಗೌಡ', (ಜಿಪುಣತನದ ಗೀತೆ) ಹಾಗೂ, 'ಜವರಾಯ', (ಯಮನೊಂದಿಗೆ ಗೃಹಿಣಿಯ ಸಂಭಾಷಣೆ ಗೀತೆ) 'ಬಸವಣ್ಣ' (ಕೃಷಿಕರ ಮಿತ್ರ ಬಸವಣ್ಣನ ಕುರಿತ ಗೀತೆ) ಎಂದು ವಿಂಗಡಿಸಿಕೊಂಡು ಕರೀಂಖಾನ್‌ರ ಸಮಗ್ರ ಜಾನಪದ ಸಂಗ್ರಹ ವಿವೇಚನೆಯನ್ನು ಇಲ್ಲಿ ಮಾಡಲಾಗಿದೆ.

**ದೇವರನ್ನು ಕುರಿತ ಮತ್ತು ಸ್ತುತಿರೂಪದ ಗೀತೆಗಳು :**

ಕರೀಂಖಾನರ ಜನಪದ ಸಂಗ್ರಹಗಳಲ್ಲಿ ದೇವ ದೇವಿಯರ ಕುರಿತ ಗೀತೆಗಳು ಹೆಚ್ಚಾಗಿವೆ.ಇವರು ದೇವರಲ್ಲಿ ಇಟ್ಟುಕೊಂಡ ಆತ್ಮಾಭಿಮಾನವೇ ಇದಕ್ಕೆ ಕಾರಣ. ಬಡವನಿರಲಿ,

ಬಲ್ಲಿದನಿರಲಿ, ಮಾನವರೆಲ್ಲರೂ ಆ ದಯಾ ಧರ್ಮದ ದಾತಾರನ ಕರುಣಾದ್ವಾರದಲ್ಲಿ ಸೆರಗೊಡ್ಡಿ ನಿಂತಿರುವವರು ಎಂಬುದು ಕರೀಂಖಾನರ ಅಭಿಪ್ರಾಯವಾಗಿದೆ. 'ದೇವರು' ಎಂಬ ಶೀರ್ಷಿಕೆಯುಳ್ಳ 'ರಾಗಿ ಕಲ್ಲುಪದ' ಗೀತೆಯಲ್ಲಿ ರಾಗಿಯು ದೇವರು ನೀಡಿದ ಧಾನ್ಯ, ಬಡವನಿಂದ, ಶ್ರೀಮಂತರವರೆಗೂ ರಾಗಿ ಉಣ್ಣದವರೇ ಇಲ್ಲ, ರಾಗಿಕಲ್ಲಿನಲ್ಲಿ ಬೀಸದ ಧಾನ್ಯಗಳೇ ಇಲ್ಲ, ಬೀಸುವ ಕಲ್ಲಿಗೂ ಜನಪದರು ಮಹತ್ವ ಕೊಟ್ಟಿದ್ದರು.

ರಾಗಿ ಬೀಸೋಕಲ್ಲೆ ರನ್ನ ಮುತ್ತಿನ ಕಲ್ಲೆ
ಅಣ್ಣನ ಮನೆಯ ಸಿರಿಗಲ್ಲೆ। ಪಚ್ಚೆಕಲ್ಲೆ
ಶೋಬನದ ಕಲ್ಲೆ ಕೊಡು ದನಿಯ।

ಕಲ್ಲು ಹಿಡಿಯುವಾಗ, ಗೌರಮ್ಮನಿಗೆ, ರಂಗಯ್ಯನಿಗೆ, ಮಲ್ಲಯ್ಯನಿಗೆ, ಲಕ್ಕಮ್ಮನಿಗೆ, ಕೆಂಚಮ್ಮ ಮುಂತಾದ ದೇವರನ್ನು ನೆನೆಯುತ್ತ ರಾಗಿ ಕಲ್ಲಿಗೆ 'ಕಲ್ಲಮ್ಮ' ಎಂದು ಸಂಬೋಧಿಸುವ ಔಚಿತ್ಯಪೂರ್ಣವಾದ ಮಾತು, ಜಾನಪದರು ಬಹುದೇವತಾ ಉಪಾಸನೆ ಮಾಡುತ್ತಿದ್ದರು ಎಂಬುದನ್ನು ಅರಿವಿಗೆ ತರುತ್ತದೆ. ಇಲ್ಲಿ ಬರುವ ಎಲ್ಲ ಹಾಡುಗಳು ತ್ರಿಪದಿ ಛಂದಸ್ಸಿನಲ್ಲಿವೆ. ಹೆಚ್ಚಾಗಿ ರಾಗಿ ಬೆಳೆದು, ರಾಗಿ ಕಲ್ಲಿನಿಂದ ಬೀಸುವಂತ ಭಾಗ್ಯ ಉಂಟಾಗಲಿ ಎಂಬ ಆಶಯವನ್ನು ಈ ಗೀತೆಯಲ್ಲಿ ಕಾಣಬಹುದು.

ಕಲ್ಲು ಕೊಟ್ಟಮ್ಮಗೆ ಎಲ್ಲಾ ಭಾಗ್ಯವು ಬರಲಿ
ಪಲ್ಲಕ್ಕಿ ಮೇಲೆ ಮಗ ಬರಲಿ। ಆಮನೆಗೆ
ಮಲ್ಲಿಗೆ ಮುಡಿಯೋ ಸೊಸೆ ಬರಲಿ॥

ಎಂಬಲ್ಲಿ ಬೀಸುವ ಕಲ್ಲುಗಳು ಆ ಕಾಲದಲ್ಲಿ ಎಲ್ಲರಲ್ಲಿಯೂ ಇರುತ್ತಿರಲಿಲ್ಲ, ಕೆಲವೇ ಮಂದಿ ಉಳ್ಳವರಲ್ಲಿ ಇರುತ್ತಿದ್ದ ಕಲ್ಲನ್ನು ಉಪಯೋಗಿಸಿ ಬೀಸಿಕೊಳ್ಳುವ ಪರಂಪರೆ ಇದ್ದಂತೆ ತೋರುತ್ತದೆ. ಜನಪದರಲ್ಲಿ ಪ್ರಮುಖ ದೇವನೆಂದರೆ ಗಣಪ. ಶಿವನ ಪುತ್ರನಾದ ಈತನಿಗೆ ಯಾವುದೇ ಕಾರ್ಯದ ಪ್ರಾರಂಭದಲ್ಲೂ ಮೊದಲ ಪೂಜೆ. ಬದುಕಲ್ಲಿ ನಂಬಿ ನಡೆದ ಜನಕ್ಕೆ ಸಿದ್ಧಿಯ ಭಾಗ್ಯ ಕೊಡುವುದು ಈ ಗಣನಾಯ್ಕನಿಗೆ ಸಂಬಂಧಿಸಿದ ವಿಚಾರ. ಈತ ನಂಬಿನಡೆದವರ ಕೈ ಬಿಡಲಾರ, ಎಂಬುದು ಸಾಮಾನ್ಯರ ವಿಚಾರ. ಕರುಣಾ ಸಾಗರನಾದ ಗಣಪನ ಶಾರೀರಿಕ ಅಂಗಾಂಗಳೆಲ್ಲ ಜಾನಪದರ ಕೃಷಿಗೆ ಸಂಬಂಧಿಸಿದಂತೆ ಹೋಲಿಸಿಕೊಳ್ಳಲಾಗಿದೆ. ಆದ್ದರಿಂದ ಕೃಷಿಗೆ ಸಂಬಂಧಿಸಿದಂತೆ ಕೆಲಸ ಕಾರ್ಯದಲ್ಲಿ ಆತನಿಗೆ ಮೊದಲ ಸ್ಥಾನ. 'ಗಣನಾಯ್ಕ' ಗೀತೆಯಲ್ಲಿ ಬರುವ–

ಬಿಲ್ಪತ್ರೆ ವನದಲ್ಲಿ ಗಣನಾಯ್ಕ।
ನಿನ್ನ ಧ್ಯಾನಮಾಡಿ ನೆನ್ದೇವಯ್ಯ ಗಣನಾಯ್ಕ॥
ಕಂಟಕ ಹರ ನೀನು ಗಣನಾಯ್ಕ
ನಮ್ಗೆ ವರವನು ಪಾಲಿಸಯ್ಯ ಗಣನಾಯ್ಕ॥

ಇಲ್ಲಿ ಆಧ್ಯಾತ್ಮ ಜನಪದರ ಬದುಕಲ್ಲಿ ಹಾಸುಹೊಕ್ಕಾಗಿತ್ತು ಎಂಬ ಅರಿವುಂಟಾಗುತ್ತದೆ. ನಾಲ್ಕು ಪಾದಗಳಲ್ಲಿರುವ ಈ ಗೀತೆ ಬದುಕಿಗೆ ಉತ್ತೇಜನ ಕೊಡುವ ಸಾಮರ್ಥ್ಯವುಳ್ಳದ್ದಾಗಿದೆ.

'ಸರಸ್ವತಿ' ಎಂಬ ಗೀತೆಯಲ್ಲಿ ಸರಸ್ವತಿ ವಿದ್ಯಾದೇವತೆ ಎಂಬ ಹಿರಿಮೆಗೆ ಪಾತ್ರಳಾಗಿದ್ದಾಳೆ. ಇವಳನ್ನು ವಾಣಿ, ಶಾರದೆ ಎಂದೂ ಕರೆಯುತ್ತಾರೆ. ಸರಸ್ವತಿ ವಾಕ್ (ಮಾತು) ಸ್ವರೂಪಳು, ವೇದಗಳ ತಾಯಿ. ಅವಳನ್ನು ಸ್ತುತಿಸುವುದರಿಂದ, ನಾಲಿಗೆಯ ತೊಡರು, ಗಂಟಲ ತೊಡರುಗಳು ಮಾಯವಾಗಿ

ಸ್ಪಷ್ಟ ಉಚ್ಚಾರವಾಗುತ್ತದೆಯಲ್ಲದೇ, ಇವಳಿಂದ ಜ್ಞಾನಾಭಿವೃದ್ಧಿಯಾಗಿ ಸಮೃದ್ಧಿ ಹೊಂದುತ್ತಾರೆ ಎಂಬ ವಿಷಯ ವೇದಕಾಲದಿಂದ ಅರಿವಿಗೆ ಬಂದಿದೆ. ಈಕೆ ವಾಗ್ದೇವಿ ಮತ್ತು ಸಂಗೀತದ ಅಧಿದೇವತೆ.

ತಾಳಾದ ಗತಿಗೆ ನಲಿಯೋಳೆ ಸರಸಾತಿ
ನಾಲಿಗೆಲಕ್ಷರವ ನಿಲಿಸವ್ವ । ಕೋಲೆ

ಕೋಲಾಟದ ಪದ್ಯವಾಗಿರುವ ಈ ಗೀತೆಯಲ್ಲಿ ಸರಸ್ವತಿಯ ವರ್ಣನೆ ತುಂಬಾ ಸೊಗಸಾಗಿದೆ. ಅಧ್ಯಾತ್ಮದ ಬಗ್ಗೆ ಒಲವಿರುವ ಕರೀಂಖಾನರಿಗೆ ಈ ಗೀತೆಗಳಲ್ಲಿ ವ್ಯಕ್ತವಾಗುವ ಗುಣ ಗಳೆಲ್ಲ ಅವರನ್ನು ಸಂತನಂತೆ ಬದುಕಲು ಪ್ರೇರಿಸಿದಂತೆ ಗೋಚರಿಸುತ್ತದೆ.

'ಶರಣು' ಎಂಬ ಗೀತೆಯಲ್ಲಿ ಶಿವನ ಕುರಿತ ವಿಚಾರವಿದೆ. 'ಮೂಡಲಗೇರಿ ಪಟ್ಟಣದ ಮಹಾಸ್ವಾಮಿ,'ಭೋಗ, ಚುಂಚನಗಿರಿ' ಮುಂತಾದ ಪ್ರದೇಶಗಳಲ್ಲಿ ಶಿವನ ನೆಲೆಯಿದೆ, ಎಂಬಲ್ಲಿ ಪ್ರಾದೇಶಿಕತೆಯ ವಿಚಾರದಲ್ಲಿ ಶ್ರದ್ಧೆ ಇರುವ ಕರೀಂಖಾನರು ಜಂಗಮರಾಗಿ ಜನಪದ ಗೀತೆಗಳನ್ನು ಸಂಗ್ರಹಿಸುವ ಕಾರ್ಯ ಮಾಡಿದ್ದಾರೆ, ಎಂಬುದು ಸತ್ಯ. ಇವರು ಜಾತ್ಯತೀತ ವ್ಯಕ್ತಿಗಳಾದ್ದರಿಂದ ಹಿಂದೂ ದೇವ-ದೇವಿಯರ ಬಗ್ಗೆ ತುಂಬಾ ಶ್ರದ್ಧೆವಹಿಸಿರುವುದು ಸ್ಪಷ್ಟ. 'ದೇವನೊಬ್ಬ ನಾಮಹಲವು' ಎಂಬ ತಮ್ಮ ಆತ್ಮೀಯ ಸಂದೇಶವನ್ನು ಜನಮನಕ್ಕೆ ತಲುಪಿಸುವಲ್ಲಿ ಸಫಲರಾಗಿದ್ದಾರೆ. ಇವರ ಜೀವಿತದುದ್ದಕ್ಕೂ ಶಿವಸ್ತುತಿಯೇ ಹೆಚ್ಚಾಗಿ ಕಂಡುಬರುತ್ತದೆ.

''ಬಿಡಿನುಡಿ ಮುತ್ತುಗಳಾದ ತ್ರಿಪದಿಗಳು, ದ್ವಿಪದಿ, ಚೌಪದಿಗಳು, ಸಾಂಗತ್ಯ ಷಟ್ಪದಿಗಳು, ಲಾಲಿ ಪದ, ಶಿಶು ಪ್ರಾಸ, ಕಥನ ಗೀತೆಗಳು ಇವೆಲ್ಲಕ್ಕೂ ಮಹತ್ವವಾದ ಪದ್ಯಗಂಧಿ, ಛಂದೋಬಂಧದಲ್ಲಿರುವ ವೀರವಚನ ಗಾಥೆ, ಜನಪದ ಮಹಾಕಾವ್ಯ ಎಲ್ಲವೂ ಕನ್ನಡದಲ್ಲಿವೆ.'' ಎನ್ನುವುದು ಸಹಜವಾದದ್ದು.

ಇಂಥ ಹಾಡುಗಳು ಜಾನಪದ ಸಾರಸತ್ವವನ್ನು ತೆರೆದಿಡುತ್ತವೆ. ಕರೀಂಖಾನರು ಆಯಾ ಹಾಡಿನ ವಸ್ತುವಿಗೆ ತಕ್ಕಂತೆ ಅವರೇ ಶೀರ್ಷಿಕೆಗಳನ್ನು ಕೊಟ್ಟಿದ್ದಾರೆ. ಶಿವಪೂಜೆಯಿಂದ ಶಿವ ಸಾಕ್ಷಾತ್ಕಾರವಾಗುವುದು, ಆತನನ್ನು ನಂಬಿ ನಡೆದರೆ ಸೋಲು ಬರಲಾರದು. ಸಜ್ಜನರೂ ಒಮ್ಮೊಮ್ಮೆ ತಪ್ಪು ಮಾಡುತ್ತಾರೆ. ಆದರೆ 'ಅರಿಯದೆಸಗಿದ ಪಾಪ ಅರಿತರದು ಒಳ್ಳೆಯದು' ಎಂಬಂತೆ ತಪ್ಪುಗಳನ್ನು ಅರಿತು ನಡೆಯುವದೆಂದು ಎಚ್ಚರಿಸಿದರೆ ಅದು ಶಿವನ ಅಮೃತನುಡಿಯೆಂದೇ ತಿಳಿಯಬೇಕು. 'ಶರಣು' ಎಂಬ ಗೀತೆಯಲ್ಲಿ ಬರುವ.

ನಡೆ ತಪ್ಪು ನುಡಿ ತಪ್ಪು ನುಡಿದ ನಾಲಿಗೆ ತಪ್ಪು
ನಡತೆಯೂ ತಪ್ಪು ಗಳ್ಹದಿನಾರು
ನಡತೆಯೂ ತಪ್ಪುಗಳ್ಹದಿನಾರು ಸಜ್ಜನರಿರಾ
ತಪ್ಪು ಇದ್ದರೆ ತಿದ್ದಿ ಹೇಳಿರಯ್ಯಾ ಶರಣೋ ॥

ಎಂಬಲ್ಲಿ ಅರಿತು ನಡೆದರೆ ಜೀವನ ಸಮೃದ್ಧವಾಗುವುದು ಎಂಬ ಅರಿವನ್ನು ಕರೀಂಖಾನರು ತಮ್ಮ ಜಾನಪದ ಸಂಗ್ರಹದ ಮೂಲಕ ಪ್ರಕಟಪಡಿಸಿದರು. ಕಬ್ಬಿನ ಬೆಳೆಗೆ ಕಪ್ಪುಭೂಮಿ ಉತ್ತಮ, ಗಂಗೆಯಿಂದ ಬೆಳೆ ಸಮೃದ್ಧವಾಗುತ್ತದೆ. ತಾಟಕರಿದ್ದಲ್ಲಿ ಜಗಳ ಹುಟ್ಟುತ್ತದೆ. ಗುರು ಹಿರಿಯರಿಂದ ನ್ಯಾಯ ಬಗೆಹರಿಯುವ ವಿಚಾರವನ್ನು 'ಶರಣು' ಪದ್ಯ ಹೇಳಿದೆ.

''ಕಬ್ಬು ಹುಟ್ಟುವುದಣ್ಣ ಕರಿಯ ಭೂಮಿ ಇದ್ದಲ್ಲಿ
ಉಬ್ಬಿ ಹರಿಯುವುದಣ್ಣ ಗಂಗೆ ನೀರಿದ್ದಲ್ಲಿ
ಕದನ ಹುಟ್ಟುವುದಣ್ಣ ತಾಟಕರು ಇದ್ದಲ್ಲಿ
ನ್ಯಾಯ ಹರಿಯುವುದಣ್ಣ ಗುರುಹಿರಿಯರಿದ್ದಲ್ಲಿ....''

ಹೀಗೆ ಜನಪದರು ಒಳ್ಳೆ ಫಸಲು ಪಡೆಯಲು ಭೂಮಿ ನೋಡಿ ಹದಗೊಳಿಸುತ್ತಿದ್ದರು. ಅಂದು ಗುರುಹಿರಿಯರ ಸಲಹೆಯಂತೆ ನ್ಯಾಯಗಳು ಬಗೆಹರಿಯುತ್ತಿದ್ದವು. ಇಂದಿನಂತೆ ಕೋರ್ಟು ಕಚೇರಿ ಮೂಲಕ ಪರಿಸ್ಥಿತಿ ವಿಷಮಗೊಳ್ಳುತ್ತಿರಲಿಲ್ಲ. ಭಯಭಕ್ತಿಯಿಂದ ಅಂದಿನ ಜನರು ಜೀವನ ಕಂಡಿದ್ದರು. ಕುಟ್ಟುವ ಹಾಗೂ ಬೀಸುವ ಕೆಲಕ್ಕೆ ಸಂಬಂಧಿಸಿದ ಹಾಡುಗಳು ಕನ್ನಡ ಜನಪದ ಸಾಹಿತ್ಯದಲ್ಲಿ ತುಂಬ ಪ್ರಸಿದ್ಧವಾಗಿವೆ. ಕೃಷಿಗೆ ಸಂಬಂಧಿಸಿದಂತೆ ಬೀಜ ಬಿತ್ತುವುದರಿಂದ ಹಿಡಿದು ಧಾನ್ಯವನ್ನು ಮನೆಗೆ ತರುವವರೆಗೆ ನಾನಾ ಹಂತಗಳಿಗೆ ಸಂಬಂಧಿಸಿದ, ಗೀತೆಗಳು ಕರ್ನಾಟಕದ ವಿವಿಧ ಭಾಗಗಳಲ್ಲಿ ಪ್ರಚಾರದಲ್ಲಿವೆ.

'ಸೋಲಿಸಬೇಡ ಗೆಲಿಸಯ್ಯ' ಎಂಬ ಜಾನಪದ ಗೀತೆಯಲ್ಲಿ ದೇವನನ್ನು ತಿಮ್ಮಯ್ಯ, ಮಾದಯ್ಯ, ರಂಗಯ್ಯ, ನಂಜುಂಡ, ಚೆನ್ನಿಗ, ಮಲ್ಲಯ್ಯ ಮುಂತಾದ ಹೆಸರುಗಳಿಂದ ಸಂಬೋಧಿಸಲಾಗಿದೆ. ಈ ಗೀತೆಯಲ್ಲಿ ದೇವರನ್ನು ಹಲವು ಪದ ಪುಂಜಗಳಿಂದ ವರ್ಣಿಸಲಾಗಿದೆ. ದೇವನನ್ನು ಕೊಂಡಾಡುತ್ತ, ನಮ್ಮ ಬದುಕಲ್ಲಿ ಸೋಲುಬೇಡ, ಗೆಲುವು ಸದಾ ಬರಲಿ ಎಂದು ಪ್ರಾರ್ಥಿಸುವುದನ್ನು ಕಾಣುತ್ತೇವೆ.

ಹೆಂಗಸರು ಮತ್ತು ಗಂಡಸರು ಬೆಳಿಗ್ಗೆ ಏಳುವುದರಿಂದ ತೊಡಗಿ ದಿನದ ವ್ಯವಹಾರಗಳನ್ನು ಮುಗಿಸುವವರೆಗೆ, ವಿವಿಧ ಹಂತಗಳಿಗೆ ಸಂಬಂಧಿಸಿದ ಮುಖ್ಯವಾಗಿ ಸ್ತುತಿಪರವಾದ ಹಾಡುಗಳು ವಿಶೇಷ ಗಮನಕ್ಕೆ ಅರ್ಹವಾಗಿವೆ. 'ಜನಪದದ ನಿಜ ಅರ್ಥವಂತಿಕೆಯನ್ನು ರೂಪಿಸಿದವರು ಕರೀಂಖಾನರು. ಜಾನಪದ ಹಾಡುಗಳನ್ನು ಸಾರಾಸಗಟಾಗಿ ಸಂಗ್ರಹಿಸಿದರು. ಇವರು ಜಗತ್ತಿನ ಜನಪದ ಶಕ್ತಿಯಾಗಿ ನಮ್ಮ ಮುಂದೆ ನಿಲ್ಲುತ್ತಾರೆ. 'ಸೋಲಿಸಬೇಡ ಗೆಲಿಸಯ್ಯಾ'' ಎಂಬ ಹಾಡು ಇವತ್ತಿಗೂ ಒಂದು ಮಹತ್ವದ ಹಾಡನ್ನು ಸಂಗ್ರಹಿಸುವುದರೊಂದಿಗೆ ತಮ್ಮ ಮಧುರ ಕಂಠಸಿರಿಯಿಂದ ಹಾಡಿ ಜನಮನವನ್ನು ತಣಿಸುತ್ತಿದ್ದುದನ್ನು ನಾನು ಅನುಭವಿಸಿದ್ದೇನೆ'' ಎನ್ನುವ ಪ್ರೊ. ಸಿ.ಟಿ. ಕೃಷ್ಣಸ್ವಾಮಿಯವರು ಹೇಳುವ ಮಾತುಗಳು ಕರೀಂಖಾನರ ಜಾನಪದ ಸಂಗ್ರಹದ ಕಾರ್ಯ, ಶ್ರದ್ಧಾಪೂರ್ಣವಾದ ಕೆಲಸವಾಗಿತ್ತು ಎಂಬುದು ವೇದ್ಯ.

'ನಾಮದಯ್ಯ' ಮತ್ತು 'ಬಾಲಗೋಪಾಲ' ಎಂಬ ಗೀತೆಗಳಲ್ಲಿ ಕೂಡಾ ಶ್ರೀಕೃಷ್ಣನ ಜಗತ್ ಕಲ್ಯಾಣದ ವಿಚಾರವನ್ನು ಪ್ರಸ್ತುತ ಪಡಿಸಲಾಗಿದೆ. ಹಾಡಿನ ಗೇಯಗುಣಕ್ಕೆ ತಕ್ಕಂತೆ ಪದ್ಯದ ಸಾಲಿನ ಎರಡನೇ ಮತ್ತು ನಾಲ್ಕನೇ ಪದ್ಯದ ಸಾಲಿನ ಕೊನೆಯಲ್ಲಿ ರಾಗ ಹೊಂದಿಸಲು 'ಸಯ್ಯ' ಎಂಬ ಪದ ಎಲ್ಲ ಕಡೆಗೆ ಬಳಸಲಾಗಿದೆ.

ಹೊತ್ನಂತೆ ಎದ್ದು ಯಾರ್‍ಯಾರ ನೆನದೇವು
ಹದಿನೆಂಟು ನಾಮದ ಒಡೆಯಾನ ಸಯ್ಯ
ಹದಿನೆಂಟು ನಾಮದ ಒಡೆಯಾನ ತಿಮ್ಮಪ್ಪ
ಹೊತ್ನಂತೆ ಎದ್ದು ನೆನದೇವು ಸಯ್ಯ ||

ಕರೀಂಖಾನರು ಇಂಥ ಜಾನಪದ ಗೀತೆಗಳನ್ನು ಆಸಕ್ತಿಯಿಂದ ರಾಗಬದ್ಧವಾಗಿ ಹಾಡುವ ಬಗೆ ಜನಮೆಚ್ಚಿಗೆಯನ್ನು ಪಡೆದಿತ್ತು. ಈ ದೇವನನ್ನು ನೆನೆದರೆ ನಮ್ಮ ಕಷ್ಟಗಳೆಲ್ಲ ಕಳೆದುಹೋಗುತ್ತವೆ ಎಂಬ ಭಾವವಿದೆ.

ಕರೀಂಖಾನರ ಜಾನಪದ ಕೆಲಸಕ್ಕೆ ನಿರ್ದಿಷ್ಟವಾದ ನಿಯಮಗಳಿಲ್ಲದಿದ್ದರೂ ಹಳ್ಳಿಹಳ್ಳಿಗೆ ಕಾಲ್ನಡಿಗೆಯಲ್ಲಿ ನಡೆದು ಇವುಗಳನ್ನು ಸಂಗ್ರಹಿಸುವುದು ಅಷ್ಟು ಸುಲಭವಾದ ಕೆಲಸವಾಗಿರಲಿಲ್ಲವೆಂಬುದು ಸ್ಪಷ್ಟ. ಹಾಸನ ಜಿಲ್ಲೆಯ ಅನೇಕ ಪ್ರಾದೇಶಿಕ ವಿವರಗಳು ಇವರು ಸಂಗ್ರಹಿಸಿದ ಗೀತೆಗಳಲ್ಲಿ ಮೈಗೂಡಿ ಅವುಗಳ ಪ್ರಾದೇಶಿಕ ವೈಶಿಷ್ಟ್ಯತೆಯನ್ನು ಸ್ಪಷ್ಟಪಡಿಸುತ್ತವೆ. 'ಮೊದಲಕೋಲು' ಎಂಬ ಗೀತೆಯಲ್ಲಿ ಹಾಸನಾಂಬೆಯ ಉಲ್ಲೇಖ, ಹಾಗಲವಾಡಿ, ಮೇಗಲಪುರ, ಚುಂಚನಗಿರಿ, ಗೊರವೂರು, ಹೇಮಾವತಿ ನದಿ, ಕಾವೇರಿ, ಕಪಿನಿ ಮೊದಲಾದವುಗಳ ಉಲ್ಲೇಖಗಳು. ಇವು ಹಾಸನ ಜಿಲ್ಲೆಯಲ್ಲಿಯೇ ಸಂಗ್ರಹಿತವಾದವು ಕರೀಂಖಾನರು ಈ ಸಂಬಂಧವಾಗಿ ಅನೇಕ ಕಷ್ಟನಷ್ಟಗಳನ್ನು ಅನುಭವಿಸಿದರೂ ಸಹ ತಮ್ಮ ಶ್ರದ್ಧೆ ಜೀವನ ಮೌಲ್ಯಗಳನ್ನು ತಿಳಿಸುವ ಹಿನ್ನೆಲೆಯಾಗಿ ಇರುವುದು ತಿಳಿಯುತ್ತದೆ.

'ಕಾಳಪ್ಪ' ಎಂಬ ಹಾಡಿನಲ್ಲಿ –

ಬಿಳಿಯ ಕುದ್ರೇನೇರಿ ಬಂದಾನೆ ಕಾಳಪ್ಪ
ಬೆಳ್ಳಿ ಬೆತ್ತ ಕೈಲಿ ಹಿಡಕೊಂಡು ।
ಬೆಳ್ಳಿ ಬೆತ್ತ ಕೈಲಿ ಹಿಡಿಕೊಂಡು ಈ ಊರ
ಬೀದೀಲಿ ಇಳಿದ ಕುದರೇಯ ॥

ಆಪತ್ತು ಬಂದಾಗ ಭಗವಂತ ಅವತರಿಸುತ್ತಾನೆ, ಭಕ್ತ ಕೋಟಿ ಭಗವಂತನ ಸ್ವಾಗತಕ್ಕೆ ಶೃಂಗರಿಸುವ ಬಗೆಯೇ ಮಹತ್ವದ್ದು.

ತಿಂಗಾನೆ ತಿಂಗಳಿಗೆ ಚಂದಾ ನಂಜನಗೂಡು
ಗಂಧ ತುಂಬೀದೇ ಗುಡಿಗೆಲ್ಲ। ತಾನಿತಾ ॥

ಇದು ಜನಪ್ರಿಯ ಜಾನಪದ ಹಾಡು. ದೈವ ಭಕ್ತಿಯ ತೆನೆಯಾಗಿ ನಿಂತ ಶರಣರೂ, ದಾಸರೂ ತಮ್ಮೊಳಗಿನ ಕೃತಜ್ಞತಾ ಬುದ್ಧಿಯನ್ನು ಹಲವು ವಿಧದಲ್ಲಿ ತೋರ್ಪಡಿಸಿ ಕೊಂಡಿದ್ದಾರೆ. ''ಇಳೆ ನಿಮ್ಮದಾನ, ಬೆಳೆ ನಿಮ್ಮದಾನ'' ಎಂದು ವಚನಿಸಿ ದೇವದೇವನ ಉಪಕಾರವನ್ನು ಸ್ಮರಿಸಿದ್ದಾರೆ.

ಕರೀಂಖಾನರ 'ಜನಪದಗೀತ' ಮತ್ತು 'ಕನ್ನಡ ಜನಪದ ಗೀತೆಗಳು' ಎಂಬ ಸಂಗ್ರಹದಲ್ಲಿ ಪುರುಷದೇವರ ಜೊತೆಗೆ ಸ್ತ್ರೀದೇವಿಯರ ಸ್ತುತಿ ವರ್ಣನೆಗಳೂ ಬಂದಿವೆ. ಇದು ಸಮಾನತೆಯ ಸಂಕೇತವಾಗಿದೆ. ಇಲ್ಲಿ ಬರುವ 'ಮಾರಮ್ಮ', 'ದ್ಯಾವಮ್ಮ' ಮುಂತಾದ ದೇವಿಯರ ಕುರಿತ ಹಾಡುಗಳು ಸ್ತ್ರೀ ದೇವಿಯರ ಮಹತ್ವ ಸಾರುವಂಥದ್ದಾಗಿದೆ. 'ದ್ಯಾವಮ್ಮ' 'ಜನಪದ ಗೀತೆಯಲ್ಲಿ ಬರುವ ಮಹತ್ವ ದೇವತೆ, ಈಕೆಯನ್ನು ಕುರಿತು ಹಳ್ಳಿಯ ಜನ ಹಾಡಿಕೊಳ್ಳುವ ಬಗೆ ಹೀಗಿದೆ.

ಆರುತಿ ಹೊರಟಾವು ಕೀರುತಿ ಉಳ್ಳೋಳ್ಗೇ
ಕೇರಿ ಕೇರೀಲಿ ಮೆರೆಯೊಳ್ಗೇ
ಕೇರಿ ಕೇರೀಲಿ ಮೆರೆಯೋ ದ್ಯಾವಮ್ಮಗೆ
ಆರುತಿ ಹೊರಟಾವು ಐನೂರು ॥

'ದ್ಯಾವಮ್ಮ' ಜಾನಪದ ದೇವತೆ, ಈಕೆ ಒಮ್ಮೊಮ್ಮೆ ಚಂಡಿ, ಚಾಮುಂಡಿಯಾಗುತ್ತಾಳೆ. ಈಕೆಯ ಗುಣಗಾನ ಇಲ್ಲಿದೆ. ಇವಳು ಉಗ್ರಸ್ವರೂಪಳೂ, ಭಕ್ತರ ಸಂಕಟವನ್ನು ಪರಿಹರಿಸುವವಳೂ ಆಗಿದ್ದಾಳೆ. 'ಹಾಗೆ ಕಾಳವ್ವನ ಉಯ್ಯಾಲೆ' ಎಂಬ ಗೀತೆಯಲ್ಲಿ ಈಕೆ ಕೇರಿಯ ದೇವತೆ. ಇವಳಿಗೆ ಕೋಟಿ ಕೋಟಿ ಭಕ್ತರಿದ್ದಾರೆ. ತೊಂದರೆ ತಾಪತ್ರಯಗಳು ಬಂದಾಗ ಜನಸಾಮಾನ್ಯರು ಇವಳ ಮೊರೆ ಹೋಗುವುದು ಸಹಜವಾದದ್ದು. ಇಲ್ಲೆಲ್ಲ ಬಹುತೇಕ ಲೋಕಮಾತೆಯಾದ ಹೆಣ್ಣು ಸೃಷ್ಟಿಯ ಮೂಲವೆಂದು ನಾವೆಲ್ಲ ನಂಬಿಕೊಂಡು ಬಂದ ಸಂಗತಿಯಾಗಿದೆ. ''ಸಂತೇಲಿ ಕಳೆದುಹೋದ ಮಕ್ಕಳನ್ನು ಹುಡುಕಿ ಅವರ ತಂದೆ ತಾಯಿಗಳಿಗೆ ಒಪ್ಪಿಸುವ ರೀತಿಯಲ್ಲಿ ನಾನು ಜನಪದ ಸಾಹಿತ್ಯವನ್ನು ಸಂಗ್ರಹಿಸಿ ಸಂಪಾದಿಸುವ ಕೆಲಸ ಮಾಡಿದೆ' ಎಂಬುದು ಅವರು ಅಂತಃಕರಣ ಶುದ್ಧಿಯಾಗಿ ಹೇಳುವ ಮಾತಾಗಿದೆ. ಊರೂರು ಸುತ್ತುವಾಗ ಉಪನ್ಯಾಸಗಳನ್ನು ನೀಡುತ್ತ , ಹಾಡುತ್ತ , ಹೋದಂತೆ ಅಭಿಮಾನಿಗಳು ಇವರಿಗೆ ಪ್ರೋತ್ಸಾಹಿಸಿದರು. ತಮ್ಮಲ್ಲಿರುವ ಚೂರುಪಾರುಗಳನ್ನು ಕೊಟ್ಟು ಸಹಕರಿಸುತ್ತಿದ್ದರು. ರಾಶಿರಾಶಿಯಾಗಿ ಸಂಗ್ರಹಿಸಿದ ಗೀತೆಗಳೆಲ್ಲ ಇಂದು ಇವರಿಂದ ದೊರೆಯದಿರುವುದು ವಿಷಾದದ ಸಂಗತಿಯಾಗಿದೆ.

ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರು, ಎಂದು ನಂಬಿದವರು ಜನಪದರ ಜೀವನ ವಿಧಾನ, ಸುಖ-ಸುಮ್ಮಾನ, ದುಃಖ- ದುಮ್ಮಾನಗಳನ್ನೆಲ್ಲ ಭಗವಂತನಿಗೆ ಅರ್ಪಿಸಿ ಬಾಳುತಿದ್ದ ಅವರ ಸಾಹಿತ್ಯವಂತೂ ಅಮರವಾದುದು

''ರಾಗಿ ಕಲ್ಲಿನ ಮೇಲೆ ಚೆಲ್ಲ್ವೊ ನಮ್ಹಾಡು ।
ಬಲ್ಲಂತ ಜಾಣಾರು ಬರಕೊಳ್ಳಿ ।
ಬಲ್ಲಂತ ಜಾಣಾರು ಬರಕೊಳ್ಳಿ ನಮ್ಹಾಡು ।
ಬಳ್ಳ ತಕ್ಕೊಂಡು ಅಳಕೊಳ್ಳಿ ॥

ಎಂದು ಅವಿದ್ಯಾವತಿಯಾದ ಹೆಣ್ಣು ಮಗಳು ಜಾಣರಾದ ವಿದ್ಯಾವಂತರಿಗೆ ಹೇಳುತ್ತಾಳೆ. ರಾಗಿಕಲ್ಲಿನ ಮೇಲೆ ಹಾಡುಗಳು ಚೆಲ್ಲಿ ಹೋಗಿವೆ, ಬೇಕಾದಷ್ಟು ಬರೆದುಕೊಳ್ಳಿ. ಹಾಗೆಯೇ ಬಳ್ಳ ತಂದು ಅಳಕೊಂಡು ಮೂಟೆ ಮೂಟೆ ತುಂಬಿಕೊಂಡು ಹೋಗಿ; ಹೆಣ್ಣಿನ ಅಭಿಮಾನ ಹೀಗಿದ್ದರೆ- ಗಂಡಸರೇನು ಕಮ್ಮಿಯೇ?

ಎಂಟು ಸಾವಿರ ಪದವ ಒಂಟೆ ಮೇಲ್ಹೇರಿಕೊಂಡು ।
ಮತ್ತೆ ಸಾವಿರ ಕೈಲಿ ಹಿಡಿಕೊಂಡು ಕೋಲೆ ।
ಹತ್ತು ಸಾವಿರ ಪದವ ಎತ್ತಿನ್ಮೇಲ್ಹೇರ್‍ಕೊಂಡು
ಬಸವಣ್ಣ ಸಭೆಗೆ ಬಂದೇವು ಕೋಲೆ ।
ಕೋಲಿನ್ಮೇಲೊಬ್ಬ ಬಸವಣ್ಣ ಕೂತ್ಕೊಂಡು ।
ಲಾಲಿಸಿ ಪದವ ಬರಕೊಂಡ ಕೋಲೆ ॥

ಇಷ್ಟೆಲ್ಲಾ ಪದಗಳನ್ನು ಬಸವಣ್ಣನವರು ಬರೆದುಕೊಂಡು ಅಭ್ಯಸಿಸಿದ್ದರು. ಆದ್ದರಿಂದಲೇ ಬಸವಣ್ಣನವರು ಸುಂದರ ಸುಲಭ ಶೈಲಿಯಲ್ಲಿ ಜನಪ್ರಿಯ ವಚನಗಳನ್ನು ರಚಿಸಿದರೆ, ಅದಕ್ಕೆ ಅವರಿಗೆ ದೊರೆತ ಜನಪದ ಶಿಕ್ಷಣವೇ ಕಾರಣ. ಇಂಥ ಸರಳ, ಸುಂದರ, ಸುಮಧುರ, ಮನೋಹರವಾದ ಕನ್ನಡ ಜನಪದ ಗೀತೆಗಳ ಸಂಗೀತ, ಕಾವ್ಯಾಂಶಗಳು ಎಲ್ಲ ವರ್ಗದ ಜನಮನವನ್ನು ತನ್ನೆಡೆಗೆ ಸೂಜಿಗಲ್ಲಿನಂತೆ ಸೆಳೆದುಕೊಳ್ಳುತ್ತದೆ.''ಜನಪದ ಗಾಯಕರಿಗೆ ಶ್ರಮದ ಅರಿವಿರಲಿಲ್ಲ ಎಂಬಲ್ಲಿ ಮೂರು ದಿನಗಳ ಕಾಲ ಒಂದು ಸೊಲ್ಲನ್ನು ಪುನರಾವರ್ತಿಸದೆ ಹಾಡಬಲ್ಲ ಸಾವಿರಾರು ಜನಪದ ಗೀತ ಗಾಯಕರು

ನಾಡಿನಾದ್ಯಂತ ತುಂಬಿದ್ದಾರೆ. ಕರ್ನಾಟಕದಲ್ಲಿ ಜಾನಪದ ಸಂಗ್ರಹ ಬೇಕಾದಷ್ಟಿದೆ. ಅದನ್ನು ಸಂಗ್ರಹಿಸಿ ಪರಿಷ್ಕರಿಸುವ ಕೆಲಸವಾಗಬೇಕೆಂಬ ವಿಚಾರ ಕರೀಂಖಾನರದು.

ಕರೀಂಖಾನರು ರೈತನ ವಿಷಯವಾಗಿ ಸ್ಪಷ್ಟಪಡಿಸುವ ವಿಚಾರವೆಂದರೆ ರೈತನು ತನ್ನ ರಾಗಿ ಹೊಲದಲ್ಲಿ ನಿಂತಿದ್ದಾನೆ :

''ರಾಗಿ ದೇವಾನೆ ಲೋಲ ಸಂಪನ್ನಾನೆ
ಸೋಗೆಲ್ಲ ಮುತ್ತು ನವರತುನ।
ಸೋಗೆಲ್ಲ ಮುತ್ತು ನವರತುನ ರಾಗಿದೇವ।
ಕೂಗಿ ಬೆಳೆಯೋ ನಮ್ಮ ಹೊಲದಲ್ಲಿ॥

ರೈತ ಹೀಗೆ ಅಭಿಮಾನದಿಂದ ಬೀಗಿ ಹೇಳುತ್ತಾನೆ. ರಾಗಿಯ ತೆನೆಯಲ್ಲಿ ಬರಿ ಕಾಳು ಮಾತ್ರ ಇಲ್ಲ, ತೆನೆಯಲ್ಲಿರುವುದೆಲ್ಲ ಜಾತಿ ಮುತ್ತು, ನವರತ್ನ, ರಾಗಿದೇವಾ! ನಮ್ಮ ಹೊಲದಲ್ಲಿ ಠೀವಿಯಿಂದ ಶಿಳ್ಳೆ ಹಾಕುತ್ತ ಬೆಳಿ, ಎಂದು ಅಭಿಮಾನದ ಅಮಲಿನಲ್ಲಿ ಹೇಳುತ್ತಾನೆ.''

**ಮಹಾಭಾರತ ಮತ್ತು ರಾಮಾಯಣಕ್ಕೆ ಸಂಬಂಧಿಸಿದ ಗೀತೆಗಳು :**

ಕರೀಂಖಾನರು ಸಂಗ್ರಹಿಸಿದ ಜಾನಪದ ಗೀತೆಗಳಲ್ಲಿ, ಲೋಕದ ವಿಶಿಷ್ಟ ಘಟನಾ ಸಂದರ್ಭಗಳನ್ನು ಕುರಿತ ಹಾಡುಗಳು, ಸಾಧು ಸತ್ಪುರುಷರ ಪವಾಡದ ಪದಗಳು, ವೀರ ಪುರುಷರ ಚರಿತ್ರೆಗೆ ಸಂಬಂಧಿಸಿದ ಉತ್ಸಾಹ ಭಾವದ ಹಾಡುಗಳು ಹೀಗೆ ಹಲವು ವಿಭಾಗ ಮಾಡಬಹುದಾದ ಈ ಸಾಹಿತ್ಯದ ಕಡೆಗೆ ಒಲವು ಮೂಡಿಸಿ ಕೊಂಡಿದುದರ ಅರಿವಾಗುತ್ತದೆ.

ಜಾನಪದ ಗೀತೆಗಳಲ್ಲಿ ಧರ್ಮದ ದಾರಿಯನ್ನು ತಿಳಿಸುವ ನೀತಿ ಸೂತ್ರಗಳು ಬೇಕಾದಷ್ಟಿವೆ. ಈ ಸೂತ್ರಗಳ ಅನುಷ್ಠಾನದಿಂದ ಮಾನವರೆಲ್ಲರೂ ತಮ್ಮಲ್ಲಿರುವ ದಾನವತೆಯನ್ನು ಕಳೆದುಕೊಂಡು, ತಾವಿದ್ದ ಭೂಲೋಕವನ್ನೇ ದೇವಲೋಕವನ್ನಾಗಿ ಮಾಡಿಕೊಳ್ಳಬಹುದು. ನಮ್ಮ ಶ್ರೀ ಸಾಮಾನ್ಯರಿಗೆ ಜೀವನ ನೀತಿಯನ್ನು ನಡೆಸಿಕೊಂಡು ಹೋಗುವುದೇ; ಧರ್ಮವಲ್ಲದೇ ಬೇರೆಯ ದರ್ಮ ನಿಯಮಗಳಿಲ್ಲ ಎಂತಲೇ ಅವರು ಮಾನವನೀತಿಯನ್ನು ಪೂರ್ತಿಯಾಗಿ ಪಾಲಿಸಿ ಖ್ಯಾತರಾದ ಐವರು ಪಾಂಡವರು, ರಾಮ-ಲಕ್ಷ್ಮಣ, ನಳ-ಹರಿಶ್ಚಂದ್ರರು, ಕುಂತಿ-ಸೀತಾ, ದ್ರೌಪದಿಯರು ಇವರನ್ನು ಆದರ್ಶ ಮಾನವರನ್ನಾಗಿ ಭಾವಿಸಿ, ಅವರ ಜೀವನ ಚರಿತ್ರೆಗೆ ಮೆಚ್ಚಿ ಮಾರು ಹೋಗಿರುವರು.

ಕರೀಂಖಾನರು ಸಂಗ್ರಹಿಸಿದ 'ಕನ್ನಡ ಜನಪದ ಗೀತೆಗಳು' ಎಂಬ ಸಂಗ್ರಹದಲ್ಲಿಯ 'ಪಾಂಡವರ ಬದುಕು' ಎಂಬ ಹಾಡಿನಲ್ಲಿ ಪಾಂಡವರು ಪಟ್ಟ ಪಾಡು ಹಾಡಾಗಿ ಜನಮನದಲ್ಲಿ ತುಂಬಿಕೊಂಡಿದೆ. ಉಳ್ಳವರಾದ ಪಾಂಡವರಿಗೆ ಅಷ್ಟೆಲ್ಲಾ ಕಷ್ಟಗಳು ಬಂದರೂ ದಿಕ್ಕೆಡದೆ ಸಹನೆಯಿಂದ ಬದುಕಿ ಜನಮನದಲ್ಲಿ ಉಳಿದು ಹೋಗಿದ್ದಾರೆ. ಸಾಮಾನ್ಯ ಕಷ್ಟಕ್ಕೆಲ್ಲ ಮರುಗದೆ, ನೀತಿ ನಿಯಮಗಳನ್ನು ಬಿಡದೆ, ಸಚ್ಚಾರಿತ್ರ್ಯದಿಂದ ಬದುಕು ಅನುಭವಿಸಬೇಕು ಎಂಬ ನೀತಿಯು ಜಾನಪದರ ಬದುಕಿನುದ್ದಕ್ಕೂ ಹಾಸುಹೊಕ್ಕಾಗಿದೆ. ಪಾಂಡವರ ಪೂಜೆಯಿಂದ ಬರಗಾಲಬಾರದೇ, ಹುಲುಸಾಗಿ ಪೈರು ಬರುವುದೆಂದು, ಉತ್ತುವ, ಬಿತ್ತುವ, ಕಾಳೊಕ್ಕುವ ಪ್ರತಿಯೊಂದು ಕಾರ್ಯದ ಪ್ರಾರಂಭದಲ್ಲಿಯೂ, ಪಾಂಡವರನ್ನು ಪೂಜಿಸುವವರು; ಅವರ ಘನತೆಯನ್ನು ನೆನೆಯುವರು. ಅಂಥ ಒಂದು ಗೀತೆಯನ್ನು ಕರೀಂಖಾನರು ಹೃದಯ ತುಂಬಿ ಹಾಡುತ್ತಾರೆ. 'ಪಾಂಡವರ ಬದುಕು' ಗೀತೆಯಲ್ಲಿ -

ಕಿನ್ನೊಡಿ ಕಿರುಗೆಜ್ಜೆ ಕಿವಿಗೆ ನಾಗರಸುತ್ತು
ಕಿನ್ನೊಡಿ ಮೇಲೆ ಕಿರುಗೆಜ್ಜೆ ತನ್ನಂದನ್ನ॥ಪ॥
ಮಂಟಪದ ಮನೆಕಟ್ಟಿ ಪಾಂಡವರು ಲೆತ್ತನಾಡಿ
ಮತ್ತೇ ಸೋತರು ರಾಜ್ಯವೆಲ್ಲ ತಾನಂದನ್ನ॥

ನೆತ್ತವನಾಡಿ ಪಾಂಡವರು ಸೋತು ರಾಜ್ಯ ಬಿಡುವ ಪ್ರಸಂಗವನ್ನು ಮನಕಲುಕುವಂಥ ರಾಗದಲ್ಲಿ ಹಾಡಿದರೆಂದರೆ ಜನಮನವೆಲ್ಲ ಕಣ್ಣೀರಿನ ಧಾರೆಯಲ್ಲಿ ಮುಳುಗುತ್ತಿದ್ದರು.

''ಜೂಜಾಡಿ ಪಾಂಡವರು ರಾಜ್ಯವ ಸೋತಾರು।
ಜೂಜಾಡಿ ನಳನು ಬಳಲಿದ।
ಜೂಜಾಡಿ ನಳನು ಬಳಲಿದ ಕಂದಯ್ಯ
ಜೂಜಿಗೆ ಮನವ ಕೊಡದಿರು॥

ಜಾನಪದರು ಈ ವಿಪತ್ಕಾರಿ ಜೂಜಿನಿಂದ ಜನಾಂಗವನ್ನು ರಕ್ಷಿಸಲು ಶ್ರಮಿಸುತ್ತಿದ್ದರು.'' ನ್ಯಾಯದಿಂದ ಜೂಜಾಡಲು ಆರಂಭಿಸಿದರೂ ದೂರ್ತರು ವಂಚನೆಯಿಂದ ಹಾದಿತಪ್ಪಿಸುವರು. ಆದರೆ ನ್ಯಾಯಕ್ಕೆ ಜಯದೊರೆಯುವುದು ಎಂಬ ಭಾವವಿದೆ.

ಕಲ್ಲು ಕಡಬು ಮಾಡಿ ಮುಳ್ಳ ಶಾವಿಗೆ ಮಾಡಿ
ಬನ್ನಿ ಎಲೆಯ ಪತರೋಳಿ ತಾನ್ನಂದನ್ನ॥

ಎನ್ನುವಲ್ಲಿ ಕಲ್ಲು ಕಡುಬು ತಿನುವಂತಹ ಪರಿಸ್ಥಿತಿ ಉಂಟಾಗಿ ಬನ್ನಿಯ ಎಲೆಯ ಪತ್ರಾವಳಿ ಮಾಡಿಕೊಂಡು ಅದರಲ್ಲಿ ಊಟಮಾಡಿ ಹೋಗಿದ್ದಾರೆ. ಇಂಥ ಜಾನಪದ ಗೀತೆಗಳು ಬದುಕಲ್ಲಿ ಕಷ್ಟನಷ್ಟಗಳು ಸಹಜ, ಬಂದದ್ದನ್ನು ಬಂದಹಾಗೆ ಸ್ವೀಕರಿಸಿ ನಮ್ಮ ಆದರ್ಶವನ್ನು ಕಾಯ್ದುಕೊಳ್ಳಬೇಕೆಂಬುದೇ ಜಾನಪದರ ವಿಚಾರವಾಗಿದೆ, 'ಪಾಂಡವರ ಬದುಕು' ಗೀತೆಯಲ್ಲಿ...

ಸತ್ಯವುಳ್ಳ ಪಾಂಡವರು ಸತ್ತಾರೆಂದೆನ್ನ ದೀರಿ
ಸತ್ತಾರೆ ಲೋಕ ಉಳಿಯಾದೋ ತಾನಂದನ್ನ
ಸತ್ತಾರೆ ಲೋಕ ಉಳಿಯಾದು ಪಾಂಡವರು
ಬಿತ್ತಿ ಹೋಗ್ಯವ್ರೇ ಅವರೇಯ ತಾನಂದನ್ನ

'ಅವರೆ' ಯನ್ನು ಪಾಂಡವರು ಬಿತ್ತಿ ಹೋಗಿದ್ದಾರೆ. ಅವರ ನೆನಪು ಎಂದರೆ ಪಾಂಡವರು ಇದ್ದಾರೆ. 'ಅವರೆ' ಎನ್ನುವುದಕ್ಕೆ ಅವರೆಕಾಳು ಉದಾಹರಣೆ. ಹೀಗೆ ಒಳ್ಳೆಯ ಜನಗಳು ಏನಾದರೂ ಒಂದು ಕಾರ್ಯ ಮಾಡಿ ಹೊರಟು ಹೋಗುತ್ತಾರೆ. ಅವರು ಹೋದರೂ ಅವರ ಕುರುಹು ಇರುತ್ತದೆ. ಉತ್ತಮ ಕಾರ್ಯ ಮಾಡಿದ ಜನ ಹೋಗಲಿಲ್ಲ, ಅವರೂ ಇದ್ದಾರೆ. ಇಂಥ ಹಾಡುಗಳನ್ನು ಹರಿಜನರು ವಿಶೇಷವಾಗಿ ದೀಪಾವಳಿ ಹಬ್ಬದ ಸಮಯದಲ್ಲಿ ಗುಂಪುಗುಂಪಾಗಿ ಹಾಡುತ್ತಿದ್ದರು ಎಂಬುದನ್ನು ತಮ್ಮ ಜಾನಪದ ಸಂಗ್ರಹದೊಂದಿಗೆ ಅದರಲ್ಲಿರುವ ಜೀವನಾರ್ಥವನ್ನು ಹೇಳುವ ರೀತಿ ಉತ್ಕೃಷ್ಟವಾದುದು.

ದೂರದರ್ಶನದಲ್ಲಿ ಕರೀಂಖಾನರನ್ನು ಸಂದರ್ಶಿಸಿದ ಪ್ರೊ. ದೊಡ್ಡರಂಗೇಗೌಡರು, ''ನೀವು ಇಪ್ಪತ್ತು ವರ್ಷಗಳ ಹಿಂದೆ ಹಾಡುವ ಬಗೆಯನ್ನು ನಮ್ಮ ಪ್ರೇಕ್ಷಕರಿಗೆ ಕೇಳಿಸುವಂತಾದರೆ ಒಳ್ಳೆಯದು'' ಎಂದು ಹೇಳಿದಾಗ ಜಾನಪದ ಗಾನಗಂಧರ್ವ ಹಾಡುವುದನ್ನು ಕೇಳುವುದೇ ಕರ್ನಾಟಕದ ಜನತೆಗೆ

ಭಾಗ್ಯವಾಯಿತು. ''ಸತ್ಯವುಳ್ಳ ಪಾಂಡವರು... ಎಂದು ಮತ್ತೊಮ್ಮೆ ನಾದದ ಪೊರೆತ, ಇಳಿವಯಸ್ಸಿನಲ್ಲೂ ಇವರ ಜಾನಪದ ಹಾಡಿನ ಮೋಡಿಗೆ ಬೆರಗಾಗದ ಜನರೇ ಸಿಗಲಾರರು ಎಂಬಂತೆ ಮೃದು ಮಧುರವಾಗಿ ಹಾಡಿದರು. ಬಾಲ್ಯಾವಸ್ಥೆಯಲ್ಲಿ ಶಾಲಾಶಿಕ್ಷಕರ ಪ್ರೋತ್ಸಾಹದಿಂದ ಒಂದು ಶತಮಾನದಷ್ಟು ಕಾಲ ಜಾನಪದವನ್ನು ಹಾಡಿದರು, ಉಂಡರು, ಆನಂದಿಸಿದರು.

''ಕರೀಂಖಾನರ ಜಾನಪದ ಪ್ರೇರಣೆಯೇ ನಾನು ಜಾನಪದ ವಿಷಯವನ್ನು ಸ್ನಾತಕೋತ್ತರ ಪದವಿ ವಿಷಯವನ್ನಾಗಿ ಆಯ್ಕೆಮಾಡಿ ಪದವಿ ಪಡೆಯಲು ಸಾಧ್ಯವಾಯಿತು. ೧೯೫೯-೧೯೬೦ ರಲ್ಲಿ ನಾನು ಮಹಾರಾಜ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದಾಗ ಅಲ್ಲಿಯ ಕಾರ್ಯಕ್ರಮ ಒಂದರಲ್ಲಿ ಜಾನಪದ ಗೀತೆಯನ್ನು ಹಾಡಿ ಜಾನಪದ ಸತ್ವವನ್ನು ಜನರ ಮನೋಮಂದಿರದಲ್ಲಿ ತುಂಬಿದ್ದರು. ಡಾ. ದೊಡ್ಡರಂಗೇಗೌಡರ ಮಾತು ಕರೀಂಖಾನರ ಹಾಡಿನ ವೈಖರಿಯನ್ನು ದೃಢಪಡಿಸುತ್ತದೆ. ಜಾನಪದ ಸಾಹಿತ್ಯದ ಸೊಗಡು ಸೊಗಸನ್ನು ನಭದೆತ್ತರಕ್ಕೆ ಬಿತ್ತರಿಸಿದರು. ಹಳ್ಳಿಗಮಾರರು ಹಾಡಿಕೊಳ್ಳುವ ಹಾಡುಪಾಡುಗಳೆಂದೂ ತಿರಸ್ಕಾರದಿಂದ ಕಾಣುತ್ತಿದ್ದ ಕಾಲದಲ್ಲಿ ಸ್ವಯಂ ಪ್ರೇರಣೆಯಿಂದ ಜನಪದ ಸಾಹಿತ್ಯ ಸಂಗ್ರಹಣೆಗೆ ಕರೀಂಖಾನರು ಕೈ ಹಾಕಿದ್ದು ತೀವ್ರ ಆಸಕ್ತಿ ಮತ್ತು ಶ್ರದ್ಧೆಗಳೇ ಕಾರಣವೆಂಬುದು ತಿಳಿಯುತ್ತದೆ.

''ಕರೀಂಖಾನರ ಹಾಡು ಎಂದರೆ ಎಲ್ಲ ಜನರಿಗೂ ಬಹಳ ಇಷ್ಟವಾಗಿತ್ತು , ಇವರ ಹಾಡಿಗೆ ಸಮ್ಮೋಹನ ಶಕ್ತಿಯಿದೆ. ೧೯೫೬ ರಲ್ಲಿ 'ಜನಪದ ಗೀತೆಗಳು' ಎಂಬ ಪುಸ್ತಕವನ್ನು ಪ್ರಕಟಿಸಿ, ಆ ಪುಸ್ತಕದ ಮುನ್ನುಡಿಯಲ್ಲಿ ಬಹಳ ಮಂದಿಯನ್ನು ನೆನಸಿಕೊಂಡಿದ್ದಾರೆ. ಇವರಿಗೆ ಜಾನಪದವನ್ನು ಉಳಿಸಿ ಬೆಳೆಸಬೇಕೆಂಬ ಬಗ್ಗೆ ಬಹಳ ಕಳಕಳಿಯಿತ್ತು,'' ಕರೀಂಖಾನರು ಜಾನಪದವೇ ಆಗಿದ್ದರು ಎನ್ನುವುದು ಸ್ಪಷ್ಟ ''ಪ್ರಥಮದಲ್ಲಿ ನೀವೆ ಜಾನಪದ ಸಾಹಿತ್ಯಕ್ಕೆ ಚಾಲನೆ ಕೊಟ್ಟವರು'' ಎಂದು ಮಾಸ್ತಿಯವರು ಪ್ರಶಂಸಿದರು. ಜನಜೀವನದ ಅಂತರಾತ್ಮವನ್ನು ತೆರೆದಿಡುವ ಇವರ ಜನಪದ ಸಾಹಿತ್ಯದ ಒಂದೊಂದು ಕೃತಿಯು ಒಂದೊಂದು ಮೈಲಿಗಲ್ಲು.

**ಗರತಿಯ ಹಾಡುಗಳು :**

ಕುಟುಂಬದಲ್ಲಿ ಹೆಣ್ಣಿನ ಸ್ಥಾನ ಬಹು ಮುಖ್ಯವಾದುದು. ಆಕೆಯು ಜವಾಬ್ದಾರಿಯಿಂದ ನಡೆಯಬೇಕಾದ ಅಂಶ ಹೆಚ್ಚಾಗಿ ಜನಪದರಲ್ಲಿ ಕಂಡುಬರುತ್ತದೆ. ರೀತಿ, ನೀತಿಗಳನ್ನು ಎಲ್ಲರೂ ಅರಿತುಕೊಂಡು ಅದರಂತೆಯೇ ಕಟುಂಬದಲ್ಲಿ, ಸಮಾಜದಲ್ಲಿ ಸಾಮರಸ್ಯದಿಂದ ನಡೆದುಕೊಳ್ಳುವುದೇ ಮಾನವ ಜೀವನದ ಮುಖ್ಯ ಆದರ್ಶವೆಂಬುದನ್ನು ನಮ್ಮ ಜನಪದರು ಚೆನ್ನಾಗಿ ಅರಿತುಕೊಂಡಿದ್ದಾರೆ. ಜಾನಪದದಲ್ಲಿ ಹೆಣ್ಣು ಅಗ್ರಮಾನ್ಯಳು. ಮಕ್ಕಳನ್ನು ಹೊತ್ತು, ಹೆತ್ತು, ಸಾಕಿ, ಮುದ್ದಾಡಿದ ಈಕೆ ತನ್ನ ಅನುಭವವನ್ನು ಸುಂದರವಾದ ಅನೇಕ ತ್ರಿಪದಿಗಳಲ್ಲಿ ಹಾಡಿದ್ದಾಳೆ. ಈ ಪದಗಳನ್ನು 'ಲಾಲಿ', 'ಜೋಗುಳ', 'ನಿದ್ದೆಪದ', 'ತೊಟ್ಟಿಲು ಪದ' ಮುಂತಾದ ಹೆಸರುಗಳಲ್ಲಿ ಕರೆಯುತ್ತೇವೆ. ಕಂದನ ಅಂಗಾಂಗಳು ಮತ್ತು ಗುಣ ವರ್ಣನೆಯ ಸಂದರ್ಭದಲ್ಲಿ ಬಳಕೆಯಾಗಿರುವ ರೂಪಕಗಳು ಕೊಡುವ ಚಿತ್ರ ಅಸಾಧಾರಣವಾದ ಚೆಲುವಿನಿಂದ ಕೂಡಿದೆ. ಈಕೆಯು ಆಡಲು ಹೋದ ತನ್ನ ಮಗನನ್ನು ಹುಡುಕುವ ಸಂದರ್ಭ, ಹಾಗೂ ಆತನ ಚಲುವಿಕೆಯನ್ನು ಕಂಡು, ಮೈ ಮೆರೆಯುವ ವಿಚಾರವನ್ನು 'ಜೋಗುಳ' ಗೀತೆಯಲ್ಲಿ ಗಮನಿಸಬಹುದು.

ನನ್ನಯ್ಯ ನಂಥೋರು ಹನ್ನೆರಡು ಮಕ್ಕಳು
ಹೊನ್ನೆಯ ಮರದ ನೆರಳಲ್ಲಿ। ಆಡ್ವಾಗ
ಸನ್ಯಾಸಿ ಜಪವ ಮರೆತಾನು ॥

ಎಷ್ಟು ಲೋಕಾನುಭವ, ಹೃದಯ ಶ್ರೀಮಂತಿಕೆ, ಹಾಡಿನ ಜಾಣ್ಮೆ, ಭಾವತುಂಬಿರುವಂಥ ವಿಚಾರ ನಮ್ಮ ಜಾನಪದ ಸಾಹಿತ್ಯ ನಿರ್ಮಾಣವಾಯಿತು ಎಂಬುದನ್ನು ಅರ್ಥೈಸಬಹುದು.

ಪ್ರೊ. ದೊಡ್ಡರಂಗೇಗೌಡರು ಹೇಳುವಂತೆ ''ಕರೀಂಖಾನರು ಜಾನಪದ ಪರ್ವತವಿದ್ದಂತೆ ನಾವೆಲ್ಲ ಚಿಕ್ಕ ಚಿಕ್ಕದನ್ನು ಹರಿದುತಿನ್ನುತ್ತಿದ್ದೇವೆ'' ಎಂಬಲ್ಲಿ ಕರೀಂಖಾನರ ಅನುಭವ ಅಸಾಧಾರಣವಾದದ್ದು. ಇವರ ಸಂಗ್ರಹಗಳಲ್ಲೆಲ್ಲಾ ಉತ್ಕೃಷ್ಟಗೀತೆಗಳೇ ಇವೆ. ಹೆಣ್ಣಿನ ಬಗ್ಗೆ ಇರುವ ಗೀತೆಗಳಲ್ಲಿ ''ಹೆಣ್ಣು ಹೆಚ್ಚಾಗಿ ಹೆಣ್ಣಿನ ಬಗ್ಗೆ ಮಮತೆ ಇಟ್ಕೊಂಡಿರೋಳು, ಉಸುರಿನ ಕೊನೆಯವರೆಗೂ ಹೆಣ್ಣು ತನ್ನ ತಾಯಿಯನ್ನು ನೆನೆಯೋಳು, ತಾಯಿಯ ಬಗ್ಗೆ ಹೇಗೆ ಹೇಳ್ಕೋತಾಳೆ ಅಂದ್ರೇ :

ತಾಯಿಯಿಲ್ಲದ ಮೇಲೆ ಇರಬಾರದೀ ಜನ್ಮ
ಹೋಗ್ಬೇಕು ಹೊಳೆಯ ಕರೆಗಾಗಿ। ತಾಯವ್ವ
ಬೀಳ್ಬೇಕು ಗಂಗೆಯ ಹೆಸರ್ಹೇಳಿ।''

ಈ ರೀತಿ ತನ್ನ ಅನುಭವವನ್ನು ಹೆಣ್ಣು ತೋಡಿಕೊಳ್ಳುತ್ತಾಳೆ. ಮತ್ತೊಂದು ಕಡೆ, ತಾಯಿ ಇಲ್ಲದೇ ಇರುವ ತವರಿಗೆ ಹೆಣ್ಣು ಬಡವಳಾಗಿ ಬಂದರೆ. ಆಗ ಆಗುವ ನೋವೇ ಬೇರೆಯದು, ತನ್ನ ಗಂಡ ದರಿದ್ರಾವಸ್ಥೆಗೆ ಸಿಕ್ಕಿರುವಾಗ ತೌರಮನೆಯಲ್ಲಿ ಆಶ್ರಯ ಪಡೆದು ಹೋಗೋಣವೆಂದು ಬಂದರೆ ಅವಳಿಗಾಗುವ ಅನುಭವವೆಂದರೆ :

ಅಣ್ಣ ಬಾಳಿದರೇನು ತಮ್ಮ ಬಾಳಿದರೇನು
ನನ್ನ ಕೈ ಹಿಡ್ದ ಪುರುಷನು। ಬಾಳಿದರೆ
ಉಣಲಿಕ್ಕೂ ಭಾಗ್ಯ ತಿನಲಿಕ್ಕೂ ॥

ಕೈ ಹಿಡಿದವನೆ ಈ ಬಾಳಿನ ನೋವು ನಲಿವಿಗೂ ಕಾರಣನಾಗುತ್ತಾನೆ. ಆತನಿಂದಲೇ ಈ ಜೀವನಕ್ಕೆ ಭಾಗ್ಯ ಪ್ರಾಪ್ತವಾಗುತ್ತದೆ ಎಂಬ ಮೌಲ್ಯವನ್ನು ಇಲ್ಲಿ ಲಕ್ಷಿಸಬಹುದು. ಹೆಣ್ಣು ಅತ್ತೆಯ ಮನೆಗೆ ಹೊರಟು ನಿಂತಾಗ, ಮನೆಯಲ್ಲಿಯ ಹಿರಿಯರೆಲ್ಲರೂ ಹೆಣ್ಣಿಗೆ ಬಾಳಿನ ರೀತಿ–ನೀತಿಗಳ ಪಾಠವನ್ನು ಕಲಿಸಿಯೇ ಇರುವರು.

ಅತ್ತೆಯ ಮನೆಯಲ್ಲಿ ಮುತ್ತಾಗಿ ಇರಬೇಕು
ಹೊತ್ತಾಗಿ ನೀಡಿದರು ಉಣಬೇಕು। ತೌರವರ
ಉತ್ತಮರ ಹೆಸರ ತರಬೇಕು ॥

ಅತ್ತೆ ಮಾವನಿಗೆ ಅಂಜಿ ನಡೆಯಬೇಕು. ಹಾಗೆಯೇ ಸುತ್ತಲಿನ ಜನರಿಗೆ, ಗಂಡನ ಧ್ವನಿಗೆ ಅಂಜಿ ನಡೆದರೆ ಇವಳು ಒಳ್ಳೆಯವರ ಮಗಳು ಎಂದು ಜನರು ಅಂದುಕೊಳ್ಳುತ್ತಾರೆ. 'ಮಗಳಿಗೆ ತಾಯಿಯ ಬುದ್ಧಿವಾದ' ಗೀತೆಯಲ್ಲಿ ಬರುವ

ಬಾಳುವೆ ಮಾಡಿದರೆ ಬಾತಂಗಿ ಅಂದಾರು
ಬಾಳುವೆ ಗೆಟ್ಟು ಮತಿಗೆಟ್ಟು। ಬಾಳಿದರೆ
ಹೆತ್ತವರ ಕುಲಕ್ಕೆ ಹಗೆಯಾದೆ

ಎಂಬ ಬುದ್ಧಿ ಮಾತಿನಲ್ಲಿ ಅದೆಷ್ಟು ಜೀವನಾನುಭವ ಅಡಗಿದೆ ಎಂಬುದು ಅರ್ಥವಾಗುತ್ತದೆ. ಹೆಣ್ಣು ತನ್ನ ನಡೆ, ನುಡಿಯನ್ನು ಚೆನ್ನಾಗಿಟ್ಟುಕೊಂಡು ನಡೆದರೆ ಅದೇ ಆದರ್ಶದ ಸಂಕೇತ. ಮುತ್ತೈದೆಗಿರುವ ಸ್ಥಾನದ ಮಹತ್ವವನ್ನು ಅರಿಯಬೇಕಾದ ಸಂಗತಿಯನ್ನು ತಾಯಿ ಮಗಳಿಗೆ ಬುದ್ಧಿಯ ಮೂಲಕ ಹೇಳುವಳು. ಹೆಣ್ಣು 'ಪತಿಭಕ್ತಿ'ಯ ಮೂಲಕ ಜೀವನ ಸಾಗಿಸಿ ಆತನ ಮಾತಿಗೆ ಗೌರವ ಕೊಟ್ಟು ನಡೆದರೆ ಸ್ವರ್ಗದ ವಿಚಾರ ಮಾಡಬೇಕಾದುದ್ದಿಲ್ಲ ಎಂಬ ನಂಬಿಕೆಯನ್ನಿಟ್ಟು ನಡೆದಿದ್ದಾರೆ ಜಾನಪದರು.

ಜಗಳಗಂಟಿ ಮಗಳಲ್ಲ, ತಾಟಗಿತ್ತಿ ಸೊಸೆಯಲ್ಲ, ತೌರಿಗೆ ಮಾತತಂದೋಳು ಮಗಳಲ್ಲ, ಕೇವಲ ಜಗಳದಿಂದ ಈ ಬದುಕನ್ನು ನಡೆಸಲಾಗದು. ಸೊಸೆ ಎಂದ ಕೂಡಲೆ ಅತ್ತೆಯ ಮನೆಯಲ್ಲಿ ಯಜಮಾನಿಕೆ ಮಾಡಲು ಬಂದವಳೂ ಅಲ್ಲ, ತೊತ್ತಾಗಿ ಬಾಳಲೂ ಬಂದವಳೂ ಅಲ್ಲ, ಏನಿದ್ದರೂ ಸಂಸಾರವೆಂದರೆ ನೂರು ಬರುತ್ತವೆ, ನೂರು ಹೋಗುತ್ತವೆ. ಹೊಂದಿಕೆಯ ಜೀವನವೇ ಮುಖ್ಯ. ಅರಿವಿದ್ದು ತಪ್ಪು ಮಾಡಿದ್ದರೆ ಅದಕ್ಕೆ ಪ್ರಾಯಶ್ಚಿತ್ತವು ಇಲ್ಲ. 'ಗರತಿ' ಎಂಬ ಪದವೇ ಆದರ್ಶದ ಪ್ರತಿರೂಪವಿದ್ದಂಥದ್ದು. ಗರತಿಯಾದವಳು ಮನೆಯ ಶಾಂತಿಯನ್ನು ಕಾಯದಿದ್ದರೆ ಆ ಮನೆಗೆ ಉಳಿಗಾಲವಾದರೂ ಹೇಗೆ ಬರುವುದು ? ಅದಕ್ಕಾಗಿಯೇ ಹೆಣ್ಣನ್ನು ಭೂಮಿಗೆ ಹೋಲಿಸಿದ್ದಾರೆ. ಭೂಮಿ ಸಹನಾಮೂರ್ತಿ. ಹಾಗೆಯೇ ಹೆಣ್ಣು ಸಹನೆಯಿಂದ, ತನ್ನ ಬುದ್ಧಿಚಾತುರ್ಯದಿಂದ ಮನೆಯ ಶ್ರೇಯೋಭಿವೃದ್ಧಿಗಾಗಿ ಶ್ರಮಿಸಬೇಕಾಗುತ್ತದೆ.

ಜಾನಪದ ಸಂಗ್ರಹಕ್ಕೆ ತೊಡಗಿದ ಕರೀಂಖಾನರಿಗೆ ಈ ಕೆಲಸ ಅಷ್ಟು ಸುಲಭವಾಗಿರಲಿಲ್ಲ. ಅವರು ತಮ್ಮ ಅನುಭವದ ವಿಷಯ ಹೇಳುತ್ತಾ ''ಜಾನಪದ ಸಾಹಿತ್ಯವನ್ನು ಕಾಪಾಡಿಕೊಂಡು ಬಂದಿರುವವರು ಈ ಹರಿಜನ ಮಹಿಳೆಯರು. ಅವರು ನಮ್ಮಂಥವರ ಮುಂದೆ ಹೇಳಬೇಕಾದರೆ ನಾಚಿಕೊಳ್ಳುತ್ತಿದ್ದರು. ಮುಜುಗರ ಮಾಡಿಕೊಳ್ಳುತ್ತಿದ್ದರು. ಆದ್ದರಿಂದ ಸ್ವಲ್ಪ ಸಲಿಗೆ ಮಾಡಿಕೊಳ್ಳಬೇಕು. ಒಂದು ಸೀರೆಯನ್ನೋ, ಕುಬುಸಾನೋ ತೆಗೆದುಕೊಂಡು ಹೋಗಿ ಕೊಡಬೇಕು. ಎಲೆ ಅಡಿಕೆ ಕಡ್ಡಿಪುಡಿ ಕೊಡಬೇಕು. ಅವರ ಮನೆಯ ಗಂಡಸರು ''ಪರವಾಗಿಲ್ಲ ನೀ ಹೇಳು'' ಅನ್ನೋಮಟ್ಟಿಗೆ ಆ ಸಲಿಗೆ ಮೇಲೆ ಅವ್ರು ಹೇಳ್ತಾ ಹೋಗೋವ್ರು. ಆವಾಗ ಸಂಗ್ರಹ ಮಾಡಬಹುದು. ಆ ಕಾಲದಲ್ಲಿ ಬರ್ಕೋಬೇಕಾಗಿತ್ತು. ಆ ಮೇಲೆ ಭಾಷೆ, ಶೈಲಿ ಯದ್ವಾತದ್ವಾ ಬಹಳ ಇರುವುದು, ಅದನ್ನೆಲ್ಲಾ ಸರಿಪಡಿಸಬೇಕು. ಹೀಗೆ ಸಂಗ್ರಹ ನಡೀತು.'' ಹೀಗೆ ಕರೀಂಖಾನರು ಮನೆ ಮನೆಗೆ ಜೋಳಿಗೆ ಹಿಡಿದು ಹೊರಟು ಜಾನಪದ ಸಂಗ್ರಹ ಮಾಡಿರುವದು ಅಪೂರ್ವವಾದ ಸಂಗತಿಯಾಗಿದೆ.

''ಜನಪದ ಗೀತೆಗಳು ಮುಖ್ಯವಾಗಿ ಕರ್ಮ ಗೀತೆಗಳು, ಅಂದರೆ ಕೆಲಸ ಮಾಡುತ್ತ ಹೇಳುವ ಹಾಡುಗಳು'' ಎಂದು ಮತಿಘಟ್ಟ ಕೃಷ್ಣಮೂರ್ತಿಯವರ ಮಾತನ್ನು ಗಮನಿಸುವಾಗ.ತೋಂಡಿಯಾಗಿ, ನಿರಂತರವಾಗಿ, ಉಳಿಯುವ ಸಾಹಿತ್ಯವನ್ನುಳ್ಳ ಜನರ ಕಾವ್ಯ ಮತ್ತು ಸಂಗೀತಗಳೇ ಈ ಜಾನಪದ ಗೀತೆಗಳು. ಕರೀಂಖಾನರ ಎಲ್ಲ ಗೀತೆಗಳನ್ನು ಸಂಗೀತಕ್ಕೊಳಪಡಿಸಿ ಹಾಡಲು ಯೋಗ್ಯವಾದಂಥದ್ದು, ಹಾಗೆ ನೋಡಿದರೆ 'ಬಳೆಗಾರ' ಎಂಬ ಗೀತೆಯಲ್ಲಿ ಹೆಣ್ಣಿಗೆ ತೌರೂರಿನ ಅಭಿಮಾನ ಇರುವಷ್ಟೇ ತನ್ನ ಹೆತ್ತವರ ಬಗೆಗಿರುವ ಕಾಳಜಿ ಬಳೆಗಾರ ಪದ್ಯದಲ್ಲಿ ಮೂಡಿಬಂದಿದೆ. ಹಿಂದೂ ಸಂಸ್ಕೃತಿಯಲ್ಲಿ ಮುತ್ತೈದೆ ಬಳೆ ತೊಡುವುದು ಅವಳ ಸೌಭಾಗ್ಯವೆಂದು ಪರಿಗಣಿಸಲಾಗಿದೆ. ಬಳೆ, ಕುಂಕುಮ, ತಾಳಿ, ಕಾಲುಂಗುರ, ಮೂಗುತಿ ಇವು ಹೆಣ್ಣಿನ ಪತಿವ್ರತಾ ಧರ್ಮವನ್ನು ಸಾರುವ ಸಂಕೇತಗಳಾಗಿವೆ. ಬಳೆಗಾರನಿಂದ ಬಳೆ ತೊಟ್ಟುಕೊಂಡ ನಾರಿಗೆ ತನ್ನ ತೌರಿನ ನೆನಪಾಗಿ ಆ ಮೂಲಕ ತನ್ನ ಹೆತ್ತಮ್ಮನ ನೆನಪಾಗಿ ಬಳೆಗಾರನಿಗೆ ತನ್ನ ತೌರಿಗೆ ಹೋಗಿ ಬಳೆಕೊಟ್ಟುಬರುವಂತೆ ಕೇಳಿಕೊಳ್ಳುತ್ತಾಳೆ. ತವರಿನ

ದಾರಿ ತಿಳಿಯದ ಬಳೆಗಾರನಿಗೆ, ತನ್ನ ಹೆಮ್ಮೆಯ ತೌರೂರಿನ ಪರಿಚಯ ಮಾಡಿಕೊಡುವ,ಹಾಡಿ ಹೊಗಳುವ ಗೀತೆಯನ್ನು ಕರೀಂಖಾನರು ಸಂಗ್ರಹಿಸಿದ 'ಬಳೆಗಾರ' ಗೀತೆಯಲ್ಲಿ ನೋಡಬಹುದು.

''ಹಂಚಿನ ಮನೆಕಾಣೊ ಕೆಂಚಿನ ಕದ ಕಾಣೊ
ಇಂತಾಡುವೆರಡು ಗಿಣಿಕಾಣೊ । ಬಳೆಗಾರ
ಅದೆ ಕಾಣೊ ನನ್ನ ತವರೂರು''

ಮನೆ ಮಗಳು ತನ್ನ ತೌರಿನ ಘನತೆಯನ್ನು ಹಾಡಿಹೊಗಳುವ ಈ ಗೀತೆಯು ಹೃದಯಸ್ಪರ್ಶಿಯಾದುದು. ತೌರಿನ ಕುರಿತು ಹೆಣ್ಣಿಗಿರುವ ಮಮತೆ, ಕಾಳಜಿ, ಪ್ರೀತಿ, ಹೆಮ್ಮೆ ಮುಂತಾದವು ಕರೀಂಖಾನರು ಸಂಗ್ರಹಿಸಿದ ಕನ್ನಡ ಜನಪದ ಗೀತೆಗಳಲ್ಲಿ 'ತೌರಿನ ಘನತೆ', 'ಹರಕೆ', 'ಬಳೆಗಾರ' ಮುಂತಾದ ಗೀತೆಗಳಲ್ಲಿ ವ್ಯಕ್ತವಾಗಿದೆ.

**ಪ್ರಣಯ, ಪ್ರೇಮಕ್ಕೆ ಸಂಬಂಧಿಸಿದ ಗೀತೆಗಳು :**

ಹೆಣ್ಣು ಗಂಡಿನ ಪರಸ್ಪರ ಆಕರ್ಷಣೆ ಪ್ರಕೃತಿಯಲ್ಲಿ ತೀರಾ ಸಹಜವಾದದ್ದು. ಅದರಲ್ಲಿಯೂ ಒಲಿದ ಮನಸ್ಸುಗಳು ಒಂದಾಗಲು ನಿರಂತರವಾಗಿ ಹಾತೊರೆಯುತ್ತಿರುತ್ತವೆ. ಇಂಡಿಯಾದ ಹಳ್ಳಿಗಾಡಿನ ಬದುಕಿನಲ್ಲಿ ಬಹುಪಾಲು ಜೀವನ ಸಂಗಾತಿಗಳು ಯಾರ್‍ಯಾರು ಆಗಬೇಕೆಂದು ನಿರ್ಧರಿಸುವವರು ಮನೆಯ ಹಿರಿಯರು ಮತ್ತು ರಕ್ತ ಸಂಬಂಧಿಗಳು. ಕೆಲವೊಮ್ಮೆ ಪರಸ್ಪರ ಪ್ರೀತಿ ಅನುರಾಗದಿಂದ ಮದುವೆ ಸಂಬಂಧ ಬಲಪಡಿಸಿಕೊಂಡವರು ಇದ್ದಾರೆ. ಕರೀಂಖಾನರ ಈ ಗೆಳೆಯ ಗೆಳತಿಯರ ಅನುರಾಗವನ್ನು ಸ್ಪಷ್ಟಪಡಿಸುವ 'ಗೆಣೆಯ ಗೆಣತಿ' ಎಂಬ ಒಂದು ಹಾಡು ಹೀಗೆ ಹೇಳುತ್ತದೆ.

ನೀರಿಗ್ಹೋಗೋ ಹೆಣ್ಣೆ ನಿಲ್ಲೇನಾ ಬರುತೀನಿ
ನಿನ್ನಾಣೆ ನಿನ್ನ ಕೊಡದಾಣೆ । ಕತ್ತೀನ
ಬಣ್ಣದ ಸರದಾಣೆ ಬರುತ್ತಿನಿ ।

ಪ್ರಿಯತಮೆಯ ಪ್ರೀತಿಗೋಸ್ಕರ ಆತ ಎಲ್ಲ ಆಣೆಗಳನ್ನು ಸ್ವೀಕರಿಸುತ್ತಾನೆ. ಜನುಮದ ಜೋಡಿಯಾಗಬೇಕಿದ್ದ ಪರಸ್ಪರರು ಒಂದುಗಳಿಗೆಯೂ ಬಿಟ್ಟಿರಲಾರದಂತೆ ಪರಿತಪಿಸುವ ವಿಚಾರ ಎರಡು ಹೃದಯಗಳಿಗೆ ಸಂಬಂಧಿಸಿದ ವಿಚಾರವಾಗಿದೆ. ಇಂಥ ಹಾಡುಗಳು ಜಾನಪದರ ಬದುಕಿನಲ್ಲಿ ಹೊಸ ಹುರುಪನ್ನು ತುಂಬಿ ಬಿಟ್ಟಿವೆ. ಈ ಹಾಡು ಸಿನಿಮಾ ಗೀತೆಯಾಗಿ ಹಾಡಲ್ಪಟ್ಟಿರುವುದು ಒಂದು ವಿಶೇಷ.

ಜಾನಪದ ಗೀತೆಗಳು ನಮ್ಮ ಸ್ತ್ರೀ ಜೀವನದ ಒಳಗನ್ನಡಿ; ಅದು ನಮ್ಮ ಹೆಣ್ಣು ಮಕ್ಕಳ ಹೃದಯದ ಪಡಿಗನ್ನಡಿ. ಇದರಲ್ಲಿ ಮಮತೆಯ ಮಾಧುರ್ಯವುಮೈವೆತ್ತಿದೆ. ಪ್ರೇಮದ ಸತ್ವವು ಅಳವಟ್ಟಿದೆ. ಇದರಲ್ಲಿ ಹೆಣ್ಣಿನ ತ್ಯಾಗಬುದ್ಧಿಯು ತುಳುಕುತ್ತಿದೆ. ಕೌಟುಂಬಿಕ ಬಾಳಿನ ರಸವು, ಪರಿಪಾಕಗೊಂಡಿದೆ. ಅದು ಜೀವನದ ಜೀವಾಳವಾಗಿದೆ; ಸುಖದ ಸೆಲೆಯಾಗಿದೆ ಎನ್ನುವುದನ್ನು ಜಾನಪದ ಸಂಗ್ರಹದ ಮೂಲಕ ಕರೀಂಖಾನರು ಜನಮನಕ್ಕೆ ತಲುಪಿಸುವ ಮಹತ್ವಪೂರ್ಣ ಕೆಲಸ ಮಾಡಿದರು.

ಗರತಿ ಪ್ರೇಮದ ಕಣಿ, ಕೂಲಿ ಮಾಡಿದರೂ ಕೋರಿ ಹೊತ್ತರೂ ಗರತಿಗೆ ಆಕೆಯ ಪತಿಯು ಸರದಾರನೇ, ಅರಸನೇ, ಮಾರಾಯನೇ ಆವನಿಂದ ಆಕೆ ತವರು ಮರೆಯುವಳು. ಆತನು ಸರದೊಳಗೆ

ಇರುವ ಗುಳದಾಳಿಯಂತೆ ಸರ್ವಬಳಗದಲ್ಲಿ ಶ್ರೇಷ್ಠನು. ಅವನಿಂದ ಸರ್ವ ಬಳಗವನ್ನು ಮರೆಯುವಳು. ಆತನ ನಗೆ ಹಚ್ಚಡದ ಪದರೊಳಗಿನ ಅಚ್ಚಮಲ್ಲಿಗೆ ಹೂವಿದ್ದಂತೆ. ಪತಿಯ ರೂಪ ಕಮಲದ ಹೂ; ಆತನ ಸಹವಾಸ ಮಲ್ಲಿಗೆಯ ಮಾಲೆ, ರಾಯರ ಕಾಲಹಿಮ್ಮಡ ಕಾಣಿಸಿದರೂ ಅದು ಕಮಲವೇ; ಚಂದ್ರನಿಗಿಂತ ಬಲು ಚೆಲುವಾಗಿರುವುದು, ಅರಸರ ದಯದಿಂದ ದೊರಕೊಂಡ ಅರಿಷಿಣ, ಕುಂಕುಮ, ಗೋದಮಲ್ಲಿಗೆಯ ಸನೆದಂಡೆ ಇವೇ ಆಕೆಯ ಸಕಲೈಶ್ವರ್ಯ. ಹೀಗೆ ಪ್ರೀತಿ ಪ್ರೇಮದಿಂದ ಸುಖಕರವಾದ ಕುಟುಂಬವನ್ನು ಹೊಂದಿ ಸುಖವನ್ನು ಕಾಣಬೇಕೆಂಬುದೇ ಇಲ್ಲಿಯ ಧ್ವನಿ.

ಒಂದು ಕಡೆ ಸ್ವಾತಂತ್ರ್ಯ ಚಳುವಳಿ ಇನ್ನೊಂದೆಡೆ ದೇಶಿ ಸಾಹಿತ್ಯದ ಸಂಗ್ರಹ. ಇವರು ಸೆರೆಮನೆಯಲ್ಲಿರುವಾಗಲೇ ಇವರ ಜಾನಪದ ಗೀತೆಗಳು ಬಹಳ ಜನಪ್ರಿಯತೆಯನ್ನು ಹೊಂದಿದ್ದವು ಎಂಬುದು ಬಹುಸೂಕ್ಷ್ಮವಾದ ಸಂಗತಿಯಾಗಿ ಪರಿಣಮಿಸುತ್ತದೆ. ಸಂಗ್ರಹಿಸಿರುವುದನ್ನು ಉಳಿಸುವ ಪ್ರವೃತ್ತಿ ಆವಾಗಲೇ ಇದ್ದಿದ್ದರೆ, ಕರೀಂಖಾನರಿಂದ ಜಾನಪದ ಸಾಹಿತ್ಯಕ್ಕೆ ಇನ್ನು ಹೆಚ್ಚಿನ ಆಧಾರಗಳು ಲಭ್ಯವಾಗುತ್ತಿದ್ದವು. ಕರೀಂಖಾನರು ಸರಸ ಪ್ರಿಯರಾಗಿದ್ದರು ಎಂಬುದನ್ನು 'ಗೆಣೆಯ ಗೆಣತಿ' ಹಾಡನ್ನು ಸಂಗ್ರಹಿಸುವಲ್ಲಿ ಮುತುವರ್ಜಿ ವಹಿಸಿದ ವಿಚಾರವು ತಿಳಿಯುತ್ತದೆ. ಪ್ರೀತಿಗಾಗಿ ಎಂಥ ತ್ಯಾಗಕ್ಕೂ ಸಿದ್ಧರಿರುವ ಮನಸುಗಳು–

ಅಡ್ಡ ಗುಡ್ಡವ ದಾಟಿ ಕದ್ದು ಕಣಿವೆಯ ದಾಟಿ
ಬಿದ್ದೋಡಿ ಬಂದೆ ನಿನಗಾಗಿ। ಗೆಣೆಕಾತಿ
ಕಬ್ಬಿನಂತವಳೇ ದನಿ ತೋರೆ॥

ಪ್ರೀತಿಗಾಗಿ ಕಾಯಲು ಅವರಿಗೆ ಸಮಯದ ಅಭಾವವಿರುವುದಿಲ್ಲ, ಮನದ ಮಿಡಿತಗಳು ಅವರನ್ನು ಸಮೀಪ ಸೇರಿಸುತ್ತವೆ. ಗೆಳೆಯ ಗೆಳತಿಯರು ಸದಾ ಉಲ್ಲಾಸಭರಿತರಾಗಿಯೇ ಇರುತ್ತಾರೆ. ಪರಸ್ಪರರನ್ನು ಅಗಲಿರಲಾರದಷ್ಟು ಹಂತಕ್ಕೆ ಬಂದಾಗ ಹೇಳಬೇಕಾದ ಅನೇಕ ವಿಚಾರಗಳು ಮನದ ಮಂದಿರದಲ್ಲೇ ಉಳಿದು ಹೋಗುತ್ತವೆ. ಆದರೆ ಹೇಳದಿರೆ ತಾಳಲಾರೆನು ಎನ್ನುವಂತೆ ತನ್ನ ಪ್ರಿಯತಮೆಗೆ 'ಕೆಂಚಿತಾರೆ' ಗೀತೆಯಲ್ಲಿ ಹೀಗೆ ಹೇಳಿದೆ.

ಎಲೆ ಕೆಂಚಿ ತಾರೆ ನಮ್ಮನೆತಂಕ ಬಾರೆ
ನೀನು ಬಾರದೆ ಹೋದರೆ ನಾನು ಕರೆ ಬಾವಿ ಪಾಲೆ
ಕೆಂಚಿ ಬಾರೆ॥

ವಿರಹದಿಂದ ಮರುಗುವ ಇವರಿಗೆ ಸಂಗಾತಿ ಸಮೀಪವಿದ್ದರೆ ಅದೇ ಸ್ವರ್ಗ, ಇಲ್ಲದಿದ್ದರೆ ಕೆರೆ, ಬಾವಿ ಹಾರಿದ ಪ್ರಸಂಗಕ್ಕೂ ಕೊರತೆ ಇಲ್ಲ.

**ಪ್ರಿಯಕರನನ್ನು ಕರೆಯುವ ಗೀತೆ :**

ಜನಪದರು ನೀತಿ – ನಿಯಮಗಳಿಗೆ ಬಹಳ ಗೌರವ ಕೊಡುತ್ತಿದ್ದರು ಎಂಬುದನ್ನು ಕರೀಂಖಾನರ ಅನೇಕ ಗೀತೆಗಳಲ್ಲಿ ಗಮನಿಸಬಹುದು. ಆದರ್ಶದ ಬದುಕಿಗೆ ನಾವು ಲಕ್ಷ್ಯ ಕೊಡದಿದ್ದರೆ ನಮ್ಮ ಹಡೆದವರು, ಸಂಬಂಧಿಗಳು, ಮಕ್ಕಳು, ಆಡುವವರ ಮಾತಿಗೆ ವಸ್ತುವಾಗಿ ಬಿಡುತ್ತೇವೆ. 'ಅರಿವೇ ಗುರು' ಎನ್ನುವಂತೆ ನಾವೇನು ಮಾಡುತ್ತೇವೆ ಎಂಬ ಅರಿವು ನಮಗಿಲ್ಲದಿದ್ದರೆ ನಾವು ಸಮಾಜದ್ರೋಹಿಗಳಾಗುತ್ತೇವೆ. ನೀತಿ ನಿಯಮ, ಕಟ್ಟುಪಾಡುಗಳಲ್ಲಿ ಈ ಜಗತ್ತು ನಿಂತು ಕೊಂಡಿದೆ,

ಆದರೂ ಅನೀತಿವಂತರಿಗೇನೂ ಕೊರತೆ ಇಲ್ಲ. ಸಮಾಜಕ್ಕೆ ತೊಡಕಾದ ವಿಚಾರವನ್ನು ತಿಳಿಸುವ ಕರೀಂಖಾನರು ಸಂಗ್ರಹಿಸಿರುವ 'ಬಾರುನಾ' ಗೀತೆಯನ್ನು ಅವಲೋಕಿಸಬಹುದು.

ತನ್ನ ಸತಿಧರ್ಮ ಬಿಡದ ಪತ್ನಿ ಎಂಥ ಕಷ್ಟಬಂದರೂ ಯಾವುದಕ್ಕೂ ಹೆದರದೆ, ಸಮಸ್ಯೆಗೆ ಪರಿಹಾರ ಕಂಡುಹಿಡಿಯುವುದರಲ್ಲೇ ಆಶಾವಾದಿಯಾಗಿ ಆದರ್ಶವನ್ನು ಪಾಲಿಸಲು ಮುಂದಾಗಿ ಆದರ್ಶನಾರಿಯಾಗಿ ಪತಿವ್ರತೆ ಎನಿಸಿಕೊಳ್ಳುವಳು. ಆದರೆ ಕೆಲವರು ತಾವು ನಿಂತ ನೆಲೆಯನ್ನು ಅರಿಯದೆ, ತಮ್ಮ ಜವಾಬ್ದಾರಿಯನ್ನು ತಿಳಿಯದೇ, ಆಸೆಗಳನ್ನು ನಿಯಂತ್ರಿಸಲಾಗದೇ ಹೆತ್ತ ಮನೆಗೂ, ಕೊಟ್ಟ ಮನೆಗೂ ಕೆಟ್ಟ ಹೆಸರನ್ನು ತಂದು ತಮ್ಮ ಚಪಲವನ್ನು ತೀರಿಸಿಕೊಳ್ಳುತ್ತಾರೆ. ಮನವು ಹೇಳಿದಂತೆ, ಒಲಿಸಿಕೊಳ್ಳುವವರು ಹೇಳಿದಂತೆ ತಾಳಹಾಕಿದರೆ ಇವರು ಸಮಾಜ ಕಂಟಕರಾಗುತ್ತಾರೆ, ಎಂಬುದನ್ನು ಜಾನಪದರು ಬಲ್ಲವರಾಗಿದ್ದರು. ಇಂದಿನ ವಿದ್ಯಾವಂತರಂತೆ ಶಿಕ್ಷಣವನ್ನು ಕಲಿಯದಿದ್ದರೂ ಅನಕ್ಷರಸ್ಥರಾಗಿಯೂ ಸತಿಧರ್ಮ, ಪತಿಧರ್ಮವನ್ನು ಕಾಯ್ದುಕೊಂಡು ಬಂದಿದ್ದರು. ತನ್ನ ತೃಪ್ತಿಗೋಸ್ಕರ ಅನ್ಯರನ್ನು ಆಹ್ವಾನಿಸುವ ಹೆಣ್ಣು ಸಮಾಜ ಕಂಟಕಿಯಾಗುತ್ತಾಳೆ. ಮನೆಯಲ್ಲಿ ಯಾರು ಇಲ್ಲದಾಗ ತನ್ನಾಸೆ ತೃಪ್ತಿಗಾಗಿ, ಅವಳು ಎಂಥ ಕೆಲಸಕ್ಕೂ ಹೇಸಳು ಎಂಬ ಅರ್ಥ ಬರುವ ಒಂದು ಗೀತೆಯಲ್ಲಿ ಪ್ರಿಯಕರನ್ನು ಕರೆಯುವ ಬಗೆ ಹೀಗಿದೆ :

ಗಂಡ ದಂಡಿಗ್ಹೋದ ಬಾರುನಾ
ನಲ್ಲನಿಗೆ। ಮಾವ ಮಲೆನಾಡಿಗ್ಹೋದ ಬಾರುನಾ ॥

ಮತಿಗೆಟ್ಟವಳು ಇಂಥ ಕೆಲಸವನ್ನು ಪ್ರೋತ್ಸಾಹಿಸುತ್ತಾಳೆ. ಎನ್ನುವ ಅರ್ಥವನ್ನು 'ಬಾರುನಾ' ಪ್ರಿಯಕರನನ್ನು ಕರೆಯುವ ಗೀತೆ ಸ್ಪಷ್ಟಪಡಿಸುತ್ತದೆ. ಇಂಥ ವಿಚಾರಗಳು ಜಾನಪದರು ಸಮ್ಮತಿಸುತ್ತಿರಲ್ಲಿಲ ಎಂಬುದು ಸ್ಪಷ್ಟ "ಸಮಾಜವನ್ನು ಕಾಡುತ್ತಿರುವ ಇಂತಹದೇ ವಿಪತ್ತೆಂದರೆ ವೇಶ್ಯಾಗಮನ. ಇದರಿಂದ ತಮ್ಮವರನ್ನು ರಕ್ಷಿಸಲು ಜಾನಪದರು ಎಂತಹ ಕಟು ಹಾಗೂ ವ್ಯಗ್ರವಾಕ್ಯಗಳನ್ನು ಪಯೋಗಿಸಿದ್ದಾರೆ ಎಂಬುದು 'ನೀತಿ' ಗೀತೆಯಲ್ಲಿ

ಸೂಳೇಗೆ ಹೋದೋನು ಏನಾದ ಎಂತಾದ।
ಕಾಡು ನಾಯಾದ ಕಪಿಯಾದ।
ಕಾಡುನಾಯಾದ ಕಪಿಯಾದ ಆ ಮುರುವ।
ಸೂಳೇಯ ಕಾಲಿಗೆ ಕೆರವಾದ ॥

ಜಾನಪದರು ನೀತಿ ಹೇಳುವಾಗ ಸುತ್ತಿಗೆಯಿಂದ ತಲೆ ಮೇಲೆ ಹೊಡೆದಂತೆ ಹೇಳುತ್ತಾರೆ.ಸಂತೆ ಮುಗಿದಿದೆ, ವ್ಯಾಪಾರಿಗಳು ವ್ಯಾಪಾರ ಮುಗಿಸಿಕೊಂಡು ಹರಟೆಗೆ ಕುಳಿತಿದ್ದಾರೆ. ಬರೀ ಕಂಡವರ ಹೆಣ್ಣು ಮಕ್ಕಳ ವಿಚಾರ ಮಾತಾಡುತ್ತ ನಾಲಿಗೆ ಚಪಲ ತೀರಿಸಿಕೊಳ್ಳುತ್ತಿದ್ದಾರೆ. ಆ ಸಮಯದಲ್ಲಿ ವಯಸ್ಸಾದ ಅನುಭವಿ ವ್ಯಾಪಾರಿ ಎಚ್ಚರಿಕೆ ಕೊಡುತ್ತಾರೆ.

ಎಲೆಯೋರೆ ಅಡಕ್ಯೋರೆ ಹೊಗೆಯಸೊಪ್ಪಿನೋರೆ।
ಹೆಂಡರುಳ್ಳೋರೆ ಮನೆಗ್ಹೋಗ್ರೋ।
ಹೆಂಡರುಳ್ಳೋರೆ ಮನೆಗ್ಹೋಗ್ರೋ। ನಿಮ್ ಹೆಂಡ್ರು
ಕಂಡೋರ‍್ಗೆ ಬಾಯ ಬಿಡುತವ್ರೆ॥

ಜನಪದರು ಜನರನ್ನು ಜಾಗೃತಿಪಡಿಸುತ್ತಲೆ ಬಂದಿದ್ದಾರೆ. ಯಾರು ಸೂಳೆಯನ್ನು ನಂಬುತ್ತಾನೋ ಅವನಿಗೆ ಸಂಸಾರವಿಲ್ಲ. ಸೂಳೆ ಸಂಗ ಮಾಡಿದವನಿಗೆ ಮನೆ ವಾರ್ತೆ ಇರಲಾರದು. ಆತ ನಾಯಿಗೆ

ಸಮಾನ,ಅಲ್ಲದೆ ಸೂಳೆಯ ಕಾಲ ಕೆರವಾಗುತ್ತಾನೆ. ಆತ ಸೂಳೆಯ ಮನೆಯ ಸೂರಡಿಯಲ್ಲಿ ನಿಲ್ಲಬೇಕಾಗುತ್ತದೆ. ಆಕಸ್ಮಾತ ಆತನನ್ನು ಕಂಡ ಚಾರಿತ್ರ್ಯವಂತರು ಕೇರಿ ಕೇರಿಯಲ್ಲಿ ಕೆರದೇಟು ಕೊಡುವರು. ಅದಕ್ಕಾಗಿಯೇ ವಯಸ್ಸಿಗೆ ಬಂದಕೂಡಲೇ ಮದುವೆಯಾಗಿ ಸಂಸಾರಿಗಳಾಗಬೇಕು. ಇನ್ನೊಬ್ಬರ ಸಂಗ ಮಾಡಬಾರದು. ಅವಳಂಗ ಬೇರೆ, ಆವಳ ಗುಣ ಬೇರೆ ಅದಕ್ಕಾಗಿ ಯಾವ ಕಾರಣಕ್ಕೂ ಪುರುಷ ಪರಸ್ತ್ರೀ ಸಂಗ ಮಾಡಬಾರದೆಂಬ ನೀತಿ ಇಲ್ಲಿದೆ. ಹೆಣ್ಣೆಂದು ರಾವಣ ಮಣ್ಣು ಗೂಡಿದ. ಕಂಡವರ ಹೆಣ್ಣು ಬಯಸಬಾರದು. ನಿನ್ನ ಹೆಂಡತಿಯೊಂದಿಗೆ ಸುಖಿಯಾಗಿ ಇರಬೇಕು ಅದಕ್ಕಾಗಿಯೇ–

ಬಾಲೆಯ ಕಂಡು ಭಮಿಸಾದೆ
ಬಾಲರ ಪಡೆದು ಸುಖಿಯಾಗು''

ಹೀಗೆ ಜನಪದರು ಸಮಾಜದ ಅನಿಷ್ಟಗಳನ್ನು ಕುರಿತು ಹೇಳುವ ವಿಚಾರವನ್ನು ಕರೀಂಖಾನರು ತಮ್ಮ ಶ್ರಮದಿಂದ ಸಂಗ್ರಹಿಸಿ. ಜನರಿಗೆ ಕೊಡುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ.

**ಹಾಸ್ಯ ಪ್ರಧಾನ ಗೀತೆಗಳು :**

ಕರೀಂಖಾನರು ಹಾಸ್ಯಪ್ರಧಾನ ಗೀತೆಗಳನ್ನು ಸಂಗ್ರಹಿಸಿ ಜನಮನಕ್ಕೆ ತಲುಪಿಸುವ ಕೆಲಸವನ್ನು ಮಾಡಿರುವುದು ಶ್ಲಾಘನೀಯ. 'ಗೋಳಿನ ಗಂಡ' ಗೀತೆಯಲ್ಲಿ

ಯವ್ವ ಹಿಟ್ಟ ಅಂದ್ರೇ ನನ್ನ ಗಂಡ
ಸಿಟ್ಟು ತಾನೆ ಸೀನುತಾನೆ
ತೊಟ್ಟೆ ಕಾಯ್ನಂಗೆ
ಗುಕ್ಕ ಮಾಡಿ ನುಂಗುತ್ತಾನೆ ।। ಯವ್ವ ।।

ಈ ಹಾಡನ್ನು ಕರೀಂಖಾನ್‌ರ ಬಾಯಿಂದಲೇ ಕೇಳಿದರೆ ಹಾಡಿಗೊಂದು ವಿಶಿಷ್ಟ ಮಾಧುರ್ಯ ಪ್ರಾಪ್ತವಾಗುತ್ತದೆ. ಅಂಥ ಕಂಠಸಿರಿ ಅವರದ್ದು. ಗಂಡನೆಂದರೆ ಜಗಜಟ್ಟಿಯಂತೆ ಸದೃಢವಾಗಿರಬೇಕು. ಅಷ್ಟೇ ಅಲ್ಲ ಆರೋಗ್ಯವಂತನಾಗಿ ಮನೆಗೆ ದುಡಿದು ತಂದು ಹಾಕುವವನಾಗಿರಬೇಕು. ಹೋಗೆಂದರೆ ಕೆಲಸಕ್ಕೆ ಹೋಗದೇ, ಹಿಡಿಹುಲ್ಲು ತಾರದೇ, ಆರೋಗ್ಯ ಹೀನನಾಗಿ ಯಾವಾಗಲೂ ಮನೆಯ ಮೂಲೆಯಲ್ಲಿ ಕುಳಿತುಕೊಂಡು ಬದುಕುವ ಗಂಡನನ್ನು ಹೆಣ್ಣು ಮೆಚ್ಚಲಾರಳು, ಎಂಬರ್ಥವನ್ನು ಕೊಡುವ 'ಗೋಳಿನ ಗಂಡ' ಗೀತೆ ಜಾನಪದರು ಗಂಡನಿಗಿರಬೇಕಾದ ಅರ್ಹತೆಯನ್ನು ವಿವೇಚಿಸಿದ್ದಾರೆ.

**ಜಿಪುಣತನಕ್ಕೆ ಮಾದರಿ ಗೀತೆ :**

ಕರೀಂಖಾನ್‌ರವರು ಸಂಗ್ರಹಿಸಿದ ಗೀತೆಗಳಲ್ಲಿ 'ಕೋಣವೇ ಗೌಡ' ಗೀತೆ ಅತೀ ಮಹತ್ವದ್ದಾಗಿದೆ. ಜಿಪುಣರಾದವರು ಎಂಥ ಹೀನ ಕೆಲಸಕ್ಕೂ ಹೇಸುವುದಿಲ್ಲವೆಂಬ ಅರ್ಥ ಬರುವ ಈ ಗೀತೆಯಲ್ಲಿ ಕೋಣವೇ ಗೌಡನ ಜಿಪುಣತನದ ವಿವರ ದೊರೆಯುತ್ತದೆ. ಈ ಗೀತೆಯನ್ನು ಕರೀಂಖಾನರು ಹಾಡಿದರೆಂದರೆ ಸಭೆಯಲ್ಲಿ ಹರ್ಷೋದ್ಗಾರವೇಳುತ್ತಿತ್ತು. ಕುಳಿತವರು. ನಿಂತವರು ತಾಳಹಾಕುವಂತೆ ಕಂಡುಬರುತ್ತಿದ್ದರು. ಕೋಣವೇ ಗೌಡ ಎಷ್ಟು ಜಿಪುಣನೆಂದರೆ –

ನಮ್ಮೂರಲ್ಲಿದ್ದ ಕೋಣವೇ ಗೌಡ
ಜೀನನಂದರೆ ಹೆಸರ್ಹೇಳಬೇಕು

ಎಂಬಲ್ಲಿ ಅಷ್ಟೊಂದು ಪ್ರಚಾರದಲ್ಲಿದ್ದ ಈತ ಊರಿಗೆ ಬರಗಾಲ ಬಂದ ವೇಳೆಯಲ್ಲಿ ಬಿಕ್ಷುಕರು

ಬೇಡಲಿಕ್ಕೆ ಬರುತ್ತಾರೆಂದು ಬಗೆದು ತಾನು ಸತ್ತಂತೆ ನಟಿಸುವುದಾಗಿ ಹೆಂಡತಿಗೆ ಹೇಳಿ, ಸಂಪತ್ತಿರುವ ಈತ ಬಡವರಿಗೆ ಚೂರನ್ನು ಕೊಡದೆ ಅವರ ದುಃಖದಲ್ಲಿ ಪಾಲ್ಗೊಳ್ಳಲು ತಯಾರಿರುವುದಿಲ್ಲ. ಜಿಪುಣನಾದ ಈತ ಹೆಂಡತಿಗೆ ಹೇಳುತ್ತಾನೆ. 'ಗಂಡ ಸತ್ತೋದ ಅಂತ ಹೇಳು' ಎಂಬಲ್ಲಿ ಹೆಂಡತಿಗೂ ಇದು ಕಷ್ಟವೇ, ಆದರೆ ಪತಿಯ ಅಣತಿ ಮೀರಲಾಗುವುದಿಲ್ಲ. ಇದನ್ನರಿತ ಕೊಡಗಿನ ಮಾರಿದೇವತೆ ಈತನಿಗೆ ಪಾಠ ಕಲಿಸಿ ಆತನನ್ನು ಸಜ್ಜನನನ್ನಾಗಿಸುತ್ತಾಳೆ; ಕರೀಂಖಾನರು ಕೊಡುಗೈದಾನಿ, ತನ್ನಲ್ಲಿ ಏನೂ ಇಲ್ಲದೇ ಕೊಡುವುದಕ್ಕೆ ಬಯಸುವ ಇವರ ವ್ಯಕ್ತಿತ್ವದ ಮುಂದೆ ಕೋಣವೇ ಗೌಡ ಎಷ್ಟು ಕೆಳಗಿಳಿದು ಹೋಗುತ್ತಾನೆನನ್ನುವುದು ವೇದ್ಯ. 'ಕೊಟ್ಟಿದ್ದು ತನಗೆ ಬಚ್ಚಿಟ್ಟಿದ್ದು ಪರರಿಗೆ' ಎಂಬ ಮಾತು ಈ ಪದ್ಯಕ್ಕೆ ನಿದರ್ಶನವಾಗುತ್ತದೆ. ಕರೀಂಖಾನರು ಜಾನಪದ ಜಂಗಮರಾಗಿರುವುದರಿಂದಲೇ ಅವರಿಗೆ ಇಂಥ ಅಮೂಲ್ಯ ಗೀತೆಗಳನ್ನು ಸಂಗ್ರಹಿಸುವಂತಾಯಿತು. ಅವರಲ್ಲಿಯ ಶ್ರದ್ಧೆ, ಪ್ರಾಮಾಣಿಕತೆಯೇ ಅವರನ್ನು ಜಾನಪದ ಸಂಗ್ರಹಕ್ಕಾಗಿ ಅಲೆಯಿಸಿತು. ''ವಿಶ್ವ ವಿದ್ಯಾಲಯಗಳ ಅಬ್ಬರದಲ್ಲಿ ಕೂಡ ನಮ್ಮ ಜಾನಪದ ಜೀವಂತವಾಗಿದೆ. ಸಂಸ್ಕೃತಿಯ ಇನ್ನೊಂದು ಭಿನ್ನವಾದ ಅರ್ಥ ಜನಪದದಲ್ಲಿರುವದರಿಂದ ಕರೀಂಖಾನ್‌ರಂಥವರ ಸೇವೆ ಬಹಳ ಮಹತ್ವದ್ದಾಗಿದೆ.'' ಎಂದು ಡಾ. ಚಂದ್ರಶೇಖರ ಕಂಬಾರ ಹೇಳಿದರು.

ಜಾತಿಯಿಂದ ಮುಸ್ಲಿಮ್‌ರಾದರೂ ಕನ್ನಡ ಜನಪದ ನಂಟು ರಕ್ತಗತವಾಗಿ ಅಂಟಿಕೊಂಡು ಬಂದಿದೆ. ಊರಸುತ್ತಲಿನ ಪ್ರದೇಶಗಳಲ್ಲಿ ಜಾನಪದ ಹಾಡುಗಳು, ಬಯಲಾಟಗಳು ಇವರನ್ನು ಜಾನಪದದತ್ತ ಮನಸೆಳೆದವು. ಇವರು ಬಾಲ್ಯದಿಂದ ಉಂಡಿದ್ದು, ಉಟ್ಟಿದ್ದು, ಹಾಸಿದ್ದು, ನಕ್ಕಿದ್ದು, ನಲಿದದ್ದು, ಉಸಿರಾಡಿದ್ದು ಜನಪದ ಕಲೆಗಳನ್ನೇ, ಮನೆಯಲ್ಲಿ ನಡೆಯುವ ಜಾನಪದ ಕಲಾಮೇಳ ಇವರನ್ನು ಅಪ್ಪಟ ಜಾನಪದ ಪ್ರತಿಭೆಯನ್ನಾಗಿ ಅರಳಿಸಿತು. ಶಾಲೆಗೆ ಹೋಗುವಾಗ ಜಾನಪದ ಹಾಡುಗಳನ್ನು ಹಾಡಿ ಕುಣಿದಾಡುತ್ತಿದ್ದ ಸಂಗತಿಗಳನ್ನು ನೆನಪಿಸಿಕೊಳ್ಳುವುದೇ ಇವರಿಗೆ ಸಂತಸದ ಸಂಗತಿಯಾಗಿವೆ. ಬಯಲು ಲಾವಣಿಯ ಲಾವಣ್ಯ ಅವರ ಮನಸೆಳೆಯಿತು.

'ಗುಲ್ ಗುಲ್ ಗುಲ್ಲಕ್ಕ, ನಡೀ ನಮ್ಮ ಹೊಲಕ್ಕ, ಸೀತನಿ ತಿಲ್ಲಕ, ಹೋಗೋಣ ಮೆಲ್ಲಕ್ಕ' ಎನ್ನುವುದು ಇವರಿಗೆ ಗಾಯತ್ರಿ ಮಂತ್ರಗಳಾದವು. ಸಣ್ಣ ಹುಡುಗನಾಗಿ ಜಾನಪದ ಗೀತೆಗಳನ್ನು ಹಾಡುವ ಆಸಕ್ತಿ ಅವರ ಅಸ್ಖಲಿತ ಭಾಷಾಶೈಲಿಯ ಮೊದಲ ಪಾಠಗಳಾದವು. ಇದರಿಂದ ಕರೀಂಖಾನರು ಗ್ರಾಮ ಪ್ರದೇಶದಲ್ಲಿ ಅಲೆದಾಡುತ್ತ ಸಂಗ್ರಹಕಾರ್ಯದಲ್ಲಿ ತೊಡಗಿಕೊಂಡು ಅದ್ಭುತ ಕೆಲಸಮಾಡುವಂತಾಯಿತು. ಕರೀಂಖಾನರ ಇಂಥ ಸಾಧನೆಯ ಹಿಂದೆ ಒಂದು ಜಾನಪದ ಮನಸ್ಸು ಕೆಲಸ ಮಾಡಿದೆ ಎಂಬುದು ಗೋಚರಿಸುತ್ತದೆ. ಹೀಗೆ ಇವರು ಸಂಗ್ರಹಿಸಿದ ಉತ್ಕೃಷ್ಟ ಗೀತೆಗಳಲ್ಲಿ 'ಜವರಾಯ' ಗೀತೆ ಒಂದು. ಜಾನಪದ ಜಾದುಗಾರರಾದ ಕರೀಂಖಾನರು ಸಂಚಾರ ಹೊರಟಾಗ ಎಲ್ಲಿ ಹೋದರೂ ಇವರಿಂದ 'ಜವರಾಯ' ಗೀತೆಯನ್ನು ಹಾಡಿಸದೇ ಬಿಡುತ್ತಿರಲಿಲ್ಲ. ಈ ಹಾಡಿನ ಮೋಡಿಗೆ ಮಾರುಹೋದ ಜನರು ಕಣ್ಣೀರು ಮಿಡಿಯುತ್ತಿದ್ದರು. ಈ ಜನಪ್ರಿಯ ಹಾಡಿನ ಒಂದು ಮೆಲುಕು ಹೀಗಿದೆ.

''ಜವರಾಯ ಬಂದರೆ ಬರಿಕೈಲಿ ಬರಲಿಲ್ಲ
ಕುಡುಗೋಲು ಕೊಡಲ್ಯೊಂದು ಹೆಗಲೇರಿ
ಒಳ್ಳೊಳ್ಳೆ ಮರನ ಕಡಿಬಂದ
ಫಲಬಿಟ್ಟ ಮರನ ಕಡಿ ಬಂದ''

ಎಂದು ಗೀತೆ ಆರಂಭವಾಗುತ್ತದೆ. ಗೀತೆ ಯಮಧರ್ಮರಾಯನಿಗೂ ಒಬ್ಬ ಹಳ್ಳಿಯ ಮುಗ್ಧ

ಗೃಹಿಣಿಗೂ ನಡುವೆ ನಡೆದ ಸಂಭಾಷಣೆ ರೂಪದಲ್ಲಿದೆ. ಆ ಗೃಹಿಣಿಯಾದರೋ ಇನ್ನೂ ಯುವತಿ. ಒಂದು ಮುದ್ದಾದ ಗಂಡು ಮಗುವಿನ ತಾಯಿ ಆದರೇನು ? ಅಷ್ಟರಲ್ಲೇ ಆಯುಷ್ಯ ತೀರಿ ಅವಳು ಯಮನ ಸೊತ್ತಾಗುತ್ತಾಳೆ. ಅವಳನ್ನು ಸ್ವಾಧೀನಪಡಿಸಿಕೊಳ್ಳಲು, ಸ್ವತಃ ಜವರಾಯನೇ ಇಳಿದು ಬಂದಿದ್ದಾನೆ. ಲೋಕ ವ್ಯವಹಾರದೃಷ್ಟಿಯಲ್ಲಿ ಅವನು ನಿಷ್ಕರುಣ, ನಿರ್ದಯಿ, ಕೈಲಿ ಕುಡುಗೋಲು ಹಿಡಿದು ಕೊಡಲಿ ಹೆಗಲೇರಿಸಿ ಬಂದನೆಂದರೆ ಒಳ್ಳೊಳ್ಳೆ ಮರಗಳನ್ನು ಫಲಬಿಡುವ ಮರಗಳನ್ನು, ಫಲ ಬಿಡುತ್ತಿರುವ ಮರಗಳನ್ನು ಕಡಿದುಕೊಂಡು ಹೋಗುತ್ತಾನೆ. ಈತ ಬರಿಕೈಲಿ ಬರುವವನೂ ಅಲ್ಲ, ಬರಿಕೈಲಿ ಹೋಗುವವನು ಅಲ್ಲ. ಯಮನಿಗೆ ಪಾಶಕ್ಕೆ ಬದಲಾಗಿ ಕುಡುಗೋಲು ಕೊಡಲಿ ಎಂದಿರುವುದು ಎಷ್ಟು ಸಮಂಜಸ, ಚೆನ್ನ ಅಲ್ಲವೆ? ಕುಡುಗೋಲು ಕೊಯ್ಯುತ್ತದೆ, ಕೊಡಲಿ ಸೀಳುತ್ತದೆ. ಗದೆ–ಪಾಶ ಈ ಕೆಲಸ ಮಾಡಲಾರವು. ಹಳ್ಳಿಯ ಅನಾಮಿಕ ಕವಿಗಳ ಈ ಪ್ರಜ್ಞೆಗೆ ನಾವು ತಲೆದೂಗಲೇ ಬೇಕು. ಆಕಸ್ಮಿಕವಾಗಿ ಅವತರಿಸಿದ ಜವರಾಯನನ್ನು ಕಂಡು ಗೃಹಿಣಿಗೆ ಗಾಬರಿಯಾಯಿತು. ಆದರೂ ತೋರಗೊಡದೇ 'ಅತಿಥಿದೇವೋ ಭವ' ಎಂಬ ವಾಕ್ಯದಂತೆ ಉಪಚರಿಸುವ ಮಾತುಗಳನ್ನೇ ಆಡಿದಳು. ನೇರವಾಗಿ ಯಮನೊಂದಿಗೆ ಗೃಹಿಣಿ ಸಂಭಾಷಣೆಗೆ ಇಳಿಯುತ್ತಾಳೆ. ಯಮರಾಯನೂ ಆಕೆಗೆ ಉತ್ತರಿಸುತ್ತಾನೆ.

> ಎಂದು ಬಾರದ ಜವರಾಯ ಇಂದೇಕೆ ಬಂದೀರಿ
> ಕೊಳ್ಳಯ್ಯ ನೀರ ಕುಡಿನೀರ। ಕುಡಿಯೋಕೆ ಬಂದಿಲ್ಲ
> ಕೂರೋಕೆ ಬಂದಿಲ್ಲ ಗಂಡನ ಮಡದಿ ನಡಿ ಮಂದೆ॥

ಇದರರ್ಥ ಈತ ಬಂದರೆ ಮುಗಿಯಿತು; ಆಯುಷ್ಯ ತೀರಿತೆಂದೇ ತಿಳಿಯುವುದು. ಜನರನ್ನು ಆ ರೀತಿಯಾಗಿ ಕೊಲ್ಲುತ್ತಾನೆ ಎಂದು, ಒಳ್ಳೊಳ್ಳೆ ಜನರನ್ನು ಕೊಲ್ಲುತ್ತಾನೆ; ಕೊನೆಗೆ ಒಬ್ಬಳು ಗೃಹಿಣಿಯನ್ನು ಕೊಂಡೊಯ್ಯಲು ಬಂದಾಗ ಅವಳು 'ನನಗೆ ಎಳೆಯ ಮಗುವಿದೆ, ಆಮೇಲೆ ಗಂಡ ಇದ್ದಾನೆ, ಅವರನ್ನು ಬಿಟ್ಟು ಹೇಗೆ ಬರಲಿ, ಎಳೆ ಮಗು ಕಾಪಾಡೋಕೆ ನಿನ್ನ ಗಂಡನಿಗೆ ತಕ್ಕ ಮಿಂಡೇರು ಬರುತ್ತಾರೆ ನೀನು ನಡಿ ಎನ್ನುತ್ತಾನೆ. ಕೊನೆಗೆ ಗೃಹಿಣಿ ಒಂದು ಮಾತು ಆಡ್ತಾಳೆ ಆಚೆ ಕೇರಿಯಲ್ಲಿ ರಂಡೇರು, ಮಿಂಡೇರು ಎಲ್ಲರೂ ಇದ್ದಾರೆ ಅವರಿಗೂ ಸುಖವಿಲ್ಲ ಸಮಾಜಕ್ಕೂ ಸುಖವಿಲ್ಲ, ಅವರನ್ನು ಬಿಟ್ಟು ನನ್ನನ್ನು ಬಾ ಅಂತಿಯಲ್ಲ! ಎಂಬ ಮಾತು ಅಂತಃಕರಣ ಮಿಡಿಯುವಂಥದ್ದು. ಈ ಎಲ್ಲ ಕಾರಣದಿಂದ ಈ ಹಾಡಿಗೆ ಮಹತ್ವ ಪ್ರಾಪ್ತವಾಗಿದೆ.

## ಕರೀಂಖಾನರು ಹಾಡಿದ ಲಾವಣಿಗಳು

ಕರೀಂಖಾನರು ಜಾನಪದ ಗೀತೆಗಳ ಸಂಗ್ರಹದ ಜೊತೆಗೆ ಲಾವಣಿಗಳನ್ನು ತಮ್ಮ ಕಂಠದಿಂದ ಹಾಡಿರುವರು. ಅಷ್ಟೇ ಅಲ್ಲ ಸ್ವತಃ ಕರೀಂಖಾನರೆ ಲಾವಣಿ ರಚನೆಯಲ್ಲಿ ತೊಡಗಿ 'ಕೆಂಪೇಗೌಡ ವಂಶಸ್ಥರ ಲಾವಣಿ' ಬರೆದಿರುತ್ತಾರೆ. ಕಥನ ಕಲೆಯ ಅಂಶಗಳನ್ನು ಒಳಗೊಂಡ ಎಲ್ಲ ಹಾಡುಗಳನ್ನು ಕನ್ನಡದಲ್ಲಿ ಲಾವಣಿಗಳು ಎಂದು ಕರೆಯುವ ಪ್ರಯತ್ನ ನಡೆದಿದೆ. ಜಗತ್ತಿನ ಜಾನಪದದ ಹಿನ್ನಲೆಯಲ್ಲಿ ನೋಡಿದಾಗ ಈ ಬಗೆಯ ಲಾವಣಿ ಸಾಹಿತ್ಯದ ಬಗ್ಗೆ ಅರಿವಿರುವುದು ಅವಶ್ಯವಾಗಿದೆ.

ಇದೀಗ ಎರಡು ಎರಡೂವರೆ ನೂರು ವರ್ಷಗಳ ಹಿಂದೆ, ಕನ್ನಡ ನಾಡಿನಲಿ ಪ್ರವೇಶಿಸಿ, ನಮ್ಮ ಜಾನಪದರ ಮನಸ್ಸನ್ನು ಆಕರ್ಷಿಸಿದ ಸಾಹಿತ್ಯವಿದು. ಮಹಾರಾಷ್ಟ್ರದಲ್ಲಿ ಲೋಕಪ್ರಿಯವಾದ ಲಾವಣಿಕಾರರು ಆಗಿಹೋಗಿದ್ದಾರೆ. ಹೀಗೆ ಪ್ರಸಿದ್ಧಿ ಪಡೆದ ಲಾವಣಿ ನಮ್ಮ ನಾಡಿನ ಉತ್ತರದ ಗಡಿಯ ಜನರ ಮನವನ್ನು ಆಕರ್ಷಿಸಿತು. ಕನ್ನಡದಲ್ಲಿಯೂ ಲಾವಣಿಗಳ ನಿರ್ಮಾಣಕ್ಕೆ ಕಾರಣವಾಯಿತು.

ಹಳೆಯ ಕಾಲದ ಲಾವಣಿ ಸಾಹಿತ್ಯವೆಲ್ಲವೂ ರಸಪೂರ್ಣವಾದುದು. ಜಾನಪದ ಬಾಷೆಯ ಚೆಲುವಾದ ನುಡಿಗಟ್ಟಿನಿಂದ ತುಂಬಿ ನಿಂತಂತಹದು. ಆದರೆ ಗೀಗಿ ಪದಗಳು ಜನತೆಯ ಮನಸ್ಸನ್ನು ರಂಜಿಸುಬಲ್ಲವಾದರೂ, ಲಾವಣಿಗಳಲ್ಲಿರುವ ಸಾಹಿತ್ಯಿಕ ಗುಣಗಳು ಅವುಗಳಲ್ಲಿ ಎದ್ದು ಕಾಣುವುದಿಲ್ಲ. ಲಾವಣಿಗಳು ದೀರ್ಘವಾದ ಕೃತಿಗಳು, ಅವುಗಳನ್ನು ಇಡಿಯಾಗಿ ಕೇಳಿದರೆ ನಮಗೆ ಸಂತೃಪ್ತಿಯೆನಿಸುವುದು. ''ಉತ್ತರದೇವಿ, ಗುಣಸಾಗರಿ, ಜಾಗಾತಿ, ನಾಗರಗನ್ನೆ, ನಾಗವ್ವ, ಹಿರಿದಿಮ್ಮಿ, ಈರೋಬಿ, ಹೊನ್ನಾಲದೇವಿ ಮುಂತಾದ ಆನೇಕ ಲಾವಣಿಗಳು ತುಂಬಾ ಪ್ರಸಿದ್ಧವಾದವುಗಳಾಗಿವೆ.'' ಇಂಥ ಲಾವಣಿಗಳನ್ನು ಕರೀಂಖಾನರು ಹಾಡುವುದರ ಜೊತೆಗೆ ರಚನೆಯನ್ನು ಮಾಡಿರುವ ದಾಖಲೆಗಳಿವೆ. ಅಂಥ ಲಾವಣಿ ಪದ್ಯದಲ್ಲಿ ಕಿತ್ತೂರ ಚೆನ್ನಮ್ಮನ ಕುರಿತ, ಕೆಂಪೇಗೌಡರ ವಂಶಾವಳಿಯ ಕುರಿತ ಲಾವಣಿಗಳನ್ನೂ ಇವರು ರಚಿಸಿರುತ್ತಾರೆ. ಕೆಂಪೇಗೌಡರ ವಂಶಾವಳಿಯ ಕುರಿತ ಲಾವಣಿಗಳನ್ನು ಇವರು ರಚಿಸಿರುತ್ತಾರೆ. ಕೆಂಪೇಗೌಡರ ವಂಶಾವಳಿಯ ಲಾವಣಿ ಹೀಗೆ ಆರಂಭವಾಗುತ್ತದೆ–

ದೇಶದ್ ಮೇಲೊಂದ್ ಐತೇದೇಶ ನಮ್ಮ ಭಾರತದೇಶ।
ಸತ್ಯ ಧರ್ಮ ಬಾಳಿದ ದೇಶ, ನ್ಯಾಯ ನೀತಿ ಆಳಿದ ದೇಶ॥
ಭಾರತ್ ದೇಶದ ಕಣ್ಮಣಿ ನೋಡಿ ಕೆಂಪೇಗೌಡರ ಬೆಂಗ್ಳೂರು।
ಗಂಧದ ಗೂಡುಚಿನ್ನದ ಬೀಡು ಚೆಲ್ವಿನ್ ಕನ್ನಡ ನಾಡು ॥ ಪಲ್ಲವಿ ॥

ಹೀಗೆ ಭಾರತ ದೇಶದ ಹಿರಿಮೆ ಗರಿಮೆಗಳನ್ನು ಕೊಂಡಾಡುವ ವಿವರಗಳ ಜೊತೆಗೆ ಕೆಂಪೇಗೌಡರು ನಿರ್ಮಾಣ ಮಾಡಿರುವ ಬೆಂಗಳೂರಿನ ಕುರಿತ ವಿಚಾರ ಪ್ರಸ್ತಾಪಿಸಿ ಲಾವಣಿ ಬರೆದಿರುವ ಕರೀಂಖಾನರು ಮಾತನಾಡುತ್ತಾ ''ನನ್ನಿಂದಲೇ ಬೆಂಗಳೂರು ಕೆಂಪೇಗೌಡ ನಾಟಕವನ್ನು ಬರೆಯಿಸಿ ಯಶಸ್ವಿ ಪ್ರದರ್ಶನಗಳನ್ನು ನಡೆಸಿದರು. ಇಂಜಿನಿಯರ್ ಗಂಗಾಸ್ವಾಮಿಯವರ ನೆರವಿನಿಂದ ನನ್ನಿಂದಲೇ ಕೆಂಪೇಗೌಡರ ವಂಶಾವಳಿಯ ಲಾವಣಿಯನ್ನು ಬರೆಯಿಸಿ, ಕ್ಯಾಸೆಟ್ ತಯಾರಿಸಿದರು'' ಲಾವಣಿ ಬರೆಯುವಲ್ಲಿ ಇವರು ಸಿದ್ಧಹಸ್ತರು ಎನ್ನುವದು ವೇದ್ಯವಾಗುತ್ತದೆ.

ಜಾನಪದ ಸಾಹಿತ್ಯದಲ್ಲಿ ಇವರ ಸಂಗ್ರಹ ಮುಂತಾದವುಗಳನ್ನು ಮೀರಿಸಿದವರು ಸಾಕಷ್ಟು ಜನರಿದ್ದಾರೆ. ಆದರೆ ಇವರು ಅವರೆಲ್ಲರಿಗಿಂತ ಭಿನ್ನರಾಗಿಯೇ ಕಾಣುತ್ತಾರೆ. ಆ ಕಾಲದಲ್ಲಿ ಜಾನಪದದ ಕಡೆಗೆ ಏನೂ ಗಮನ ಇಲ್ಲದೇ ಇರುವ ಸಂದರ್ಭದಲ್ಲಿ ಇವರ ವಂಶಸ್ಥರು ಸ್ವತಃ ಕನ್ನಡಿಗರು ಅಲ್ಲದಿದ್ದರೂ ಕೂಡ, ಕರೀಂಖಾನರು ಕನ್ನಡದ ಒಂದು ಕ್ಷೇತ್ರದಲ್ಲಿ ಹೋಗಿ, ಜನಸಾಮಾನ್ಯರನ್ನು ಭೇಟಿಯಾಗಿ, ಅವರ ಹಾಡುಗಳನ್ನು ಸಂಗ್ರಹಿಸಿ ನಾಡಿಗೆ ಕೊಟ್ಟಿದ್ದು ಕರೀಂಖಾನರ ದೊಡ್ಡ ಕೊಡುಗೆ. ಆದ್ದರಿಂದ ಜಾನಪದದ ಆದ್ಯ ಸಂಗ್ರಹಕಾರರಲ್ಲಿ ಇವರೊಬ್ಬ ಪ್ರಮುಖ ವ್ಯಕ್ತಿ ಎಂದು ಹೇಳಬಹುದು.

ಕರೀಂಖಾನರು ನಿರ್ದಿಷ್ಟವಾದ ಒಂದು ಕ್ಷೇತ್ರದಲ್ಲಿ ನೆಲೆನಿಲ್ಲಲು ಇವರಿಗೆ ಸಾಧ್ಯವಾಗದಿರುವುದಕ್ಕೆ ಇವರ ಆರ್ಥಿಕ ದಿವಾಳಿತನವೇ ಕಾರಣವೆನ್ನಬಹುದು. ಜನಪದ ಸಂಗ್ರಹಗಳನ್ನು ಪ್ರಕಟಿಸಿ, ಮಾರಾಟ ಮಾಡಿ ಬಂದ ಹಣವನ್ನು ನಾಳೆಗಾಗಿ ಉಳಿಸಿಕೊಳ್ಳದೇ ಉದಾರತೆಯಿಂದ ಕೇಳಿದವರಿಗೆಲ್ಲ ಹಂಚಿಬಿಡುವ ಸ್ವಭಾವ ಹುಟ್ಟಿನಿಂದಲೇ ಬಂದು ಬಿಟ್ಟಿತು. ಹೀಗಾಗಿ ಇವರು ಸಂಗ್ರಹಿಸಿದ ಅನೇಕ ಮೂಲಾಧಾರಗಳು ನಶಿಸಿಹೋಗಿವೆ. ಸಿಕ್ಕಷ್ಟನ್ನು ಒಂದು ಕಡೆ ತರುವ ಚಿಕ್ಕ ಪ್ರಯತ್ನ ಇದಾಗಿದೆ ಎನ್ನಬಹುದು.

''ಕರೀಂಖಾನರು ಗೋರೂರು, ದೇವುಡು, ದೇ.ಜ.ಗೌ ಸಾಲಿನಲ್ಲಿಯೇ ಬರೆದವರು.

ದೇಶದ ಸ್ವಾತಂತ್ರ್ಯಕ್ಕೆ ಸ್ವತಃ ಸುಖವನ್ನು ತ್ಯಾಗಮಾಡಿ ರಾಷ್ಟ್ರೀಯ ವಾದಕ್ಕೆ ತಮ್ಮನ್ನು ತೊಡಗಿಸಿಕೊಂಡವರು. ಐವತ್ತು, ಆರವತ್ತು ವರ್ಷಗಳ ಹಿಂದೆ ಯಾವ ಸೌಲಭ್ಯವೂ ಇಲ್ಲದ ಸಂದರ್ಭದಲ್ಲಿ ಜಾನಪದ, ನಾಡು, ದೇಶಕ್ಕೆ ತಮ್ಮನ್ನು ನಿಸ್ವಾರ್ಥದಿಂದ ತೊಡಗಿಸಿಕೊಳ್ಳುವ ಅವಶ್ಯಕತೆಯಾದರೂ ಏನಿತ್ತು ? ಹಾಡು ಸಂಗ್ರಹಿಸಿ ಅದೂ ಒಬ್ಬ ಮುಸ್ಲಿಮನಾಗಿ, ಜಟ್ಟಿಯಾಗಿದ್ದ ಇವರು ವ್ಯಾಯಾಮಶಾಲೆಯ ಶಿಕ್ಷಕರಾಗಿ ಮುಂದುವರಿಯದೇ, ಮದುವೆ ಮಾಡಿಕೊಳ್ಳದೇ, ಸಂಸಾರ ಮಾಡಿಕೊಳ್ಳದೇ ಜಾನಪದಕ್ಕಾಗಿ, ದೇಶಕ್ಕಾಗಿ ಇಡೀ ತಮ್ಮ ಸ್ವಂತ ಸುಖವನ್ನು ಸಮರ್ಪಿಸಿಕೊಳ್ಳುವುದರ ಉದ್ದೇಶವೇನಿತ್ತು ? ಎಂಬ ಪ್ರಶ್ನೆ ಪ್ರಜ್ಞಾವಂತರಲ್ಲಿ ಮೂಡದೇ ಇರದು. ದೇವುಡು, ಮಾಸ್ತಿ, ಗೋರುರು, ಬೇಂದ್ರೆ ಇವರಿಗೆಲ್ಲ ಒಂದು ಸ್ಥಿರವಾದ ಉದ್ಯೋಗವಿತ್ತು. ಆದರೆ ಕರೀಂಖಾನರಿಗೆ ಅದ್ಯಾವುದರ ಪೂರ್ವ ಹಿನ್ನೆಲೆಯೂ ಇರಲಿಲ್ಲ'' ಎಂಬಲ್ಲಿ ಕರೀಂಖಾನರು ನಿಸ್ವಾರ್ಥ ಮನೋಬಾವದಿಂದ ತಮ್ಮ ಇಡೀ ಜೀವನವನ್ನೇ ದೇಶಕ್ಕಾಗಿ ಮುಡಿ ಪಾಗಿಟ್ಟರು ಎಂಬ ಅಂಶ ಮನದಟ್ಟಾಗುತ್ತದೆ.

ಇವರ ಜನಪದಗೀತೆಗಳನ್ನು ನೋಡುವಾಗ ಅಲ್ಲಿರುವ ಸೊಬಗು, ಲಾಲಿತ್ಯ, ಸೌಂದರ್ಯ, ಚಾತುರ್ಯ, ಆಧ್ಯಾತ್ಮಿಕ, ವಿಡಂಬನೆ, ಸಾಮಾಜಿಕ, ಕೌಟುಂಬಿಕ ಚಿತ್ರಣ ಇತ್ಯಾದಿಗಳನ್ನು ಉದಾಹರಣೆಸಹಿತ ವಿವರಿಸುವ ವಿಶ್ಲೇಷಿಸುವ ಪ್ರಯತ್ನವನ್ನು ಇಲ್ಲಿ ಮಾಡಿದಂತೆ ತೋರುತ್ತದೆ. ಜಾನಪದ ಗೀತೆಗಳಲ್ಲಿ ಧರ್ಮ, ಅಧರ್ಮ, ಪಾಪ, ಪುಣ್ಯ, ಸ್ವರ್ಗ, ನರಕಗಳ ಕಲ್ಪನೆ, ನಂಬಿಕೆಗಳು, ನೀತಿ, ಆದರ್ಶ, ಲೈಂಗಿಕತೆ, ಪ್ರೇಮ, ಪ್ರೀತಿ ಇತ್ಯಾದಿ ಮಾನವ ಬದುಕಿನ ಎಲ್ಲವೂ ಅನಾವರಣಗೊಳ್ಳುತ್ತವೆ. ನೈಜತೆ ಮುಖ್ಯ ಲಕ್ಷಣ, ನಾಟಕೀಯ ಲವಲೇಷವೂ ಇಲ್ಲಿರುವುದಿಲ್ಲ.

ಜಾನಪದ ಸಾಹಿತ್ಯದ ಸೊಗಸನ್ನು ಎತ್ತಿ ತೋರಿಸುವುದರಲ್ಲಿ ಕರೀಂಖಾನರು ಯಶಸ್ವಿಯಾಗಿದ್ದಾರೆ. ಜಾನಪದ ಭೂಮಿಯ ಮೇಲಣ ಪ್ರೇಮ, ಅಭಿಮಾನ, ದೈವಭಕ್ತಿ, ಅಲ್ಪತೃಪ್ತಿಯ ಜೀವನ, ತ್ಯಾಗಕ್ಕೆ ಸದಾ ಸಿದ್ಧತೆ ಇತ್ಯಾದಿ ವಿಶೇಷ ಗುಣಲಕ್ಷಣಗಳು ಜಾನಪದ ಗೀತ ಸಾಹಿತ್ಯದಲ್ಲಿ ಹೇಗೆ ಪಡಿಮೂಡಿವೆ ಎಂಬುದನ್ನು ನಿದರ್ಶನಗಳ ಮೂಲಕ ತೋರಿಸಿದ್ದಾರೆ. ಆಗ ಪ್ರಚಲಿತವಿದ್ದ ಎಲ್ಲ ಮೂಲಗಳಿಂದಲೂ ಜಾನಪದ ತ್ರಿಪದಿ ಲಾವಣಿಗಳನ್ನು ಬಳಸಿಕೊಂಡಿದ್ದಾರೆ. ಇದಕ್ಕೆ ಆಧಾರ ಗ್ರಂಥಸೂಚಿ ಕೊಟ್ಟಿದ್ದರೆ ಮೇಲಾಗುತ್ತಿತ್ತು. ಈ ವಿವೇಚನೆಯಲ್ಲಿ ಜಾನಪದ ಗಾದೆ, ಕಥೆ, ಒಗಟುಗಳನ್ನು ಬಳಸಿಕೊಂಡಿದ್ದರೆ ಮತ್ತೂ ಉತ್ತಮವಾಗುತ್ತಿತ್ತು. ಪುನರುಕ್ತಿಗಳು ಕಡಿಮೆಯಾಗಿ ಗ್ರಂಥ ಇನ್ನೂ ಸಂಗ್ರಹವಾಗಿ ಬಿಗಿಯಾಗಿ ಇರಬಹುದಾಗಿತ್ತು ಎನಿಸುವುದು. ಆದರೂ ಉಪಲಬ್ಧವಿರುವ ಈ ಎರಡೂ ಜಾನಪದ ಗೀತೆಗಳ ಗ್ರಂಥಗಳು ಒಳ್ಳೆಯ ಕಾಣಿಕೆ ಎಂಬುದರಲ್ಲಿ ಅನುಮಾನವಿಲ್ಲ.

## ಸ್ವಾತಂತ್ರ್ಯ ಚಳುವಳಿ

ಮಾನವ ಜೀವನಕ್ಕೆ ಪ್ರಾಣವಾಯು ಅವಶ್ಯವಿದ್ದಷ್ಟೇ ಅವನ ಬಾಳಿಗೆ ಬೆಳವಣಿಗೆಗೆ ಸ್ವಾತಂತ್ರ್ಯ ಅವಶ್ಯಕ. ಮಾನವ ಪ್ರಾಣಿಗೆ ಮಾತ್ರವಲ್ಲ, ಪ್ರಾಣಿಕುಲಕ್ಕೂ ಇದು ಅವಶ್ಯಕ. ನಾಗರಹಾವು, ಗಜರಾಜ, ಪಕ್ಷೀಂದ್ರ, ಗರುಡ ಪಕ್ಷಿ ತಮ್ಮನ್ನು ಸೆರೆ ಹಿಡಿದಾಗ ಆ ಪಾರತಂತ್ರ್ಯವನ್ನು ಸಹಿಸದೇ ತಮ್ಮ ಸ್ವಾತಂತ್ರ್ಯಕ್ಕಾಗಿ ಅಸುನೀಗಿದ ಉದಾಹರಣೆಗಳುಂಟು. ಗರ್ಭದಲ್ಲಿದ್ದ ಮಾನವ ಶಿಶು ತನ್ನ ಬೆಳವಣಿಗೆಗೆ ಸ್ವಾತಂತ್ರ್ಯ ಬೇಕೆಂದೇ ಗರ್ಭದಿಂದ ಹೊರಬರುವದು. ವಯಸ್ಸಿಗೆ ಬಂದ ಮಕ್ಕಳು ಮುಕ್ತ ಜೀವನಕ್ಕಾಗಿ ತಮ್ಮ ತಂದೆ-ತಾಯಿಗಳನ್ನು ಅಗಲಿ, ಸ್ವತಂತ್ರವಾಗಿರಲು ಹವಣಿಸುವದು. ಈ ಮಾತು ತನ್ನ ರಾಷ್ಟ್ರೀಯತ್ವದ

ಅರಿವು ಉಂಟಾದ ಜನಗಣಕ್ಕೆ ಅನ್ವಯಿಸುವದು. ಪ್ರತಿ ರಾಷ್ಟ್ರವು ಸ್ವತಂತ್ರವಿರಬೇಕೆಂದು ಇಚ್ಛಿಸುವುದು ಪ್ರಕೃತಿಸಿದ್ಧವು. ಒಬ್ಬನು ಇನ್ನೊಬ್ಬನನ್ನು ಕೇವಲ ಪಾಶವೀಬಲದಿಂದ ದಾಸ್ಯದಲ್ಲಿಡುವುದು ಎಷ್ಟು ಅನೀತಿಕರವೋ, ಹಾಗೂ ಅನ್ಯಾಯದ್ದೋ, ಅಷ್ಟೇ ಒಂದು ರಾಷ್ಟ್ರವು ಇನ್ನೊಂದನ್ನಾಳುವುದು ಅನ್ಯಾಯವಾದದ್ದು ಹಾಗೂ ಅಸಹ್ಯವಾದದ್ದು.

ಭಾರತದಲ್ಲಿ ಸ್ಥಾಪಿತವಾದ ಬ್ರಿಟಿಷರ ರಾಜ್ಯ ಈ ತರಹದಿತ್ತು. ಸ್ವಾತಂತ್ರ್ಯದ ಬಗ್ಗೆ ಎಚ್ಚರ ಹುಟ್ಟಿ ಆ ಬಗ್ಗೆ ಆತುರರಾದ ಭಾರತೀಯರು ವೈಯಕ್ತಿಕವಾಗಿ, ಇಲ್ಲವೇ ಸಣ್ಣ ದೊಡ್ಡ ಗುಂಪು ಕಟ್ಟಿ ಬ್ರಿಟೀಷರ ಆಳ್ವಿಕೆಯನ್ನೆದುರಿಸುತ್ತಲೇ ಇದ್ದರು. ೧೮೫೭ರಲ್ಲಿ ಶಸ್ತ್ರಾಸ್ತ್ರಗಳಿಂದ ಭಾರತೀಯ ಸೈನಿಕರು ಹಲಕೆಲವು ಅರಸರು ದೊಡ್ಡ ಬಂಡಾಯವನ್ನು ಹೂಡಿದ್ದರು. ಮುಂದೆ ಸಶಸ್ತ್ರ ಹೋರಾಟ ಸಾಧ್ಯವಿಲ್ಲವೆಂದು ಮನಗಂಡ ಭಾರತೀಯ ಮುಖಂಡರು ನಿಃಶಸ್ತ್ರ ಪ್ರತಿಕಾರದ ಮಾರ್ಗವನ್ನು, ಸಾರ್ವಜನಿಕ ಆಂದೋಲನದ ಮಾರ್ಗವನ್ನು ಸ್ವೀಕರಿಸಿ ಗಾಂಧೀಜಿಯವರ ಅಹಿಂಸಾ ಮಾರ್ಗವನ್ನು ಹಿಡಿದರು. ೧೯೧೯ರಲ್ಲಿ ಮುಂದೆ ಅದಕ್ಕೆ ಅಹಿಂಸಾಮಯ, ಅಸಹಕಾರದ ದುಷ್ಟ ಕಾನೂನುಗಳ ಭಂಗದ, ಕರನಿರಾಕರಣೆಯಂತಹ ಹಾಗೂ ವಿವಿಧ ಸತ್ಯಾಗ್ರಹಗಳ ರೂಪವನ್ನು ಕೊಟ್ಟರು.

ಎಂದಿನಂತೆ ಕರ್ನಾಟಕವು ತನ್ನ ವೀರಪರಂಪರೆಗೆ ಸಲ್ಲುವಂತೆ ಆ ಎಲ್ಲ ಗಾಂಧೀ ಪ್ರಣೀತ ಚಳುವಳಿಗಳಲ್ಲಿ ಭಾಗವಹಿಸುತ್ತ ಬಂದಿತು. ಕರ್ನಾಟಕದ ಇತರ ಭಾಗಗಳಲ್ಲಿ ನಡೆಸಿದ ದೇಶ ಸೇವಾ ಕಾರ್ಯದ ಸುಂದರವಾದ, ಸ್ಪಷ್ಟವಾದ, ರೋಮಾಂಚನಕಾರಿಯಾದ ದೇಶಭಕ್ತಿ, ಗಾಂಧೀ ನಿಷ್ಠೆ ಇವುಗಳಿಂದ ಪ್ರೇರಿತರಾಗಿ, ವೀರರಸದಿಂದ ತ್ಯಾಗ ನಿಶ್ಚಯತೆಗಳಿಂದ ಕೂಡಿದ ಹಲವು ವ್ಯಕ್ತಿಗಳಲ್ಲಿ ಎಸ್.ಕೆ.ಕರೀಂಖಾನ್ ಒಬ್ಬರು.

೧೯೪೨ರ ಚಳುವಳಿಯ ವಿಚಾರ ಸಾಕಷ್ಟು ಪ್ರಕಟಣೆಯಾಗಿವೆ. ಸಭೆ, ಮೆರವಣಿಗೆ, ಲಾಠಿಚಾರ್ಜು, ಗುಂಡು ಹಾರಾಟ, ಗಡೀಪಾರು ಇವೆಲ್ಲ ಸಂಸ್ಥಾನದಲ್ಲಿ ನಿತ್ಯದ ಮಾತಾಗಿತ್ತು. ಕಾರ್ಮಿಕರು, ವಿದ್ಯಾರ್ಥಿಗಳೂ ಭಾರೀ ಪ್ರಮಾಣದಲ್ಲಿ ಚಳುವಳಿಯಲ್ಲಿ ಸೇರಿಕೊಂಡು ಬ್ರಿಟಿಷರ ನಿರಂಕುಶ ಪ್ರಭುತ್ವವನ್ನು ಕುಂಟುವಂತೆ ಮಾಡಿದ್ದು ಪರಿಚಿತ ಸಂಗತಿ. ಅನೇಕರು ಭೂಗತವಾಗಿ ಕೆಲಸ ಮಾಡುತ್ತಲೂ ಇದ್ದರು. ''ಖಾದಿ, ಸ್ವದೇಶಿ ವಸ್ತುಗಳ ಪ್ರಚಾರ, ವೈಭವದ ವಿಚಾರ ಇಲ್ಲಿ ಹೇಳಬೇಕು. ಬೀದಿ, ಬೀದಿಗಳಲ್ಲಿ ಸಾರುವುದು ಸಭೆ ಕೂಡಿಸುವುದು, ಮೆರವಣಿಗೆ ನಡೆಸುವುದು, ರಾಷ್ಟ್ರಗೀತೆ ಹಾಡುತ್ತ ಜನರನ್ನು ಆಕರ್ಷಿಸುವುದು, ಪ್ರಭಾತಫೇರಿ ಇವೆಲ್ಲ ಅಂದಿನ ಪ್ರಚಾರ ವೈಖರಿ. ಆಗ ಧ್ವನಿವರ್ಧಕವಿಲ್ಲ, ಸೀಮೆಎಣ್ಣೆ ಡಬ್ಬ ಬಡಿದು ಜನರನ್ನು ಕೂಡಿಸಿ ಅಲ್ಲಲ್ಲಿ ಪ್ರಚಾರ, ಕನ್ನಡ, ತೆಲಗು, ತಮಿಳು ಹಿಂದಿಗೀತೆಗಳ ಹಾಡುವಿಕೆ. ''ಅಂತಾ ಗಾಂಧಿಮಯಂ, ಈ ಜಗಮಂತಾ ಗಾಂಧಿಮಯಂ'' ಹಾಗೂ ''ಮಾಕೊದ್ದು ಈ ತೆಲ್ಲಿ ದೊರೆತನಮು,'' ಮುಂತಾದ ತೆಲಗು ಹಾಡುಗಳು ಆಗ ಅತ್ಯಂತ ಜನಪ್ರಿಯ. ಸುಬ್ರಹ್ಮಣ್ಯ ಭಾರತೀಯವರ ತಮಿಳು ಹಾಡುಗಳೂ, ಇಕ್ಬಾಲರ ''ಸಾರೇ ಜಹಾಂಸೇ ಅಚ್ಛಾ'' ಹಾಡಲಾಗುತ್ತಿತ್ತು. ಇಕ್ಬಾಲರ ಈ ಗೀತೆಯಿಂದ ಮುಸಲ್ಮಾನ ಬಂಧುಗಳು ಉಬ್ಬಿ ಹೋಗುತ್ತಿದ್ದರು. ಎನ್ನುವ ಮಾತಿನಿಂದ ಜಾತ್ಯತೀತ ಮನಸ್ಕರಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ದೇಶಪ್ರೇಮಿಗಳು ತೊಡಗಿಕೊಂಡಿರುವ ವಿಚಾರ ತಿಳಿಯುತ್ತದೆ.

ಈ ಸ್ವಾತಂತ್ರ್ಯದ ಅವರ್ಣನೀಯ ಆಂದೋಲನದಲ್ಲಿ ಭಾಗವಹಿಸುವ ಪ್ರೇರಣೆ ಬೇರೆ ಬೇರೆ ಕಾರ್ಯಕರ್ತರಿಗೆ ಬೇರೆ ರೀತಿಯಿಂದ ಆಯಿತೆಂಬುದು ನಿಜವಿದ್ದರೂ, ಎಲ್ಲರೂ ತಿಲಕ ಮುಂತಾದ ಮಹನೀಯರ ಚರಿತ್ರೆಯಿಂದ, ಹಾಗೂ ಗಾಂಧೀಜಿ ಅವರ ಅಸಂದಿಗ್ಧ ತೇಜಸ್ವಿ ಕರೆಯಿಂದ ಪ್ರಭಾವಿತರಾದರು ಎನ್ನಲು ಅಡ್ಡಿ ಇಲ್ಲ.

ಮುಖ್ಯವಾಗಿ ನಿರ್ಭಯತೆ ಎಂಬುದೇ ಚಳುವಳಿಗಾರರ ಬಿರುದಾಗಿ ಬಿಟ್ಟಿತು. ಬಂದ ಕಷ್ಟ ನಷ್ಟಗಳನ್ನೆಲ್ಲ ನಿರ್ಭಯತೆಯಿಂದ ಎದುರಿಸಿ, ಅದರಲ್ಲಿಯೇ ಧನ್ಯತೆಯ ಅನುಭವವನ್ನುಂಟು ಮಾಡುವ ಆಧ್ಯಾತ್ಮಿಕ ವೃತ್ತಿಯನ್ನು ಭಾರತೀಯರಿಗೆ ಕಲಿಸಿದವರು ಮಹಾತ್ಮಾ ಗಾಂಧೀಯವರು. ಪ್ರಭಾತಫೇರಿಯಲ್ಲಿ ಭಾಗವಹಿಸುವ ಮಕ್ಕಳನ್ನೂ, ಮಹಿಳೆಯರನ್ನೂ, ಮೊದಲ್ಗೊಂಡು ಎದೆತಟ್ಟಿ ಗುಂಡಿನೆದುರಿಗೆ ನಿಲ್ಲಬಲ್ಲ ಸ್ವಯಂಸೇವಕರವರೆಗೆ ಯಾರಿಗೂ ಲಾಠಿ, ಜೈಲು, ಫಟಕೀ, ಶಿಕ್ಷೆ, ಮರಣ ದಂಡನೆ ಇವುಗಳ ಭಯವೂ ಇರಲಿಲ್ಲ. ಪೋಲಿಸರು ಅನ್ಯಾಯದಿಂದ ಹಾಕಿದ ಕೀಲಿಯನ್ನು ಅವರೆದುರೇ ಮುರಿಯಲು ಸಾಹಸ ಮಾಡಿದ ಮಾಣುದೇವಿ ಎಂಬ ಹೆಣ್ಣುಮಗಳ ಧೈರ್ಯಕ್ಕೆ ಯಾರು ಸಾಟಿ ? ಎನ್ನುವ ಮಾತಿನಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಸ್ತ್ರೀಪುರುಷರೆಲ್ಲರೂ ಸಮಗ್ರ ದೇಶವನ್ನು ಕಟ್ಟಲು ಪಣತೊಟ್ಟರು ಎನ್ನುವುದು ಸ್ಪಷ್ಟವಾಗುತ್ತದೆ.

ದೇಶದ ಸ್ವಾತಂತ್ರ್ಯಕ್ಕಾಗಿ ಎಲ್ಲ ಕಡೆಯಲ್ಲಿಯೂ ಕೂಗಾಟ ಪ್ರಾರಂಭವಾಯಿತು. ಸ್ವಾತಂತ್ರ್ಯಕ್ಕಾಗಿ ಶ್ರಮಿಸಿದ ಅನೇಕರಲ್ಲಿ ಕರೀಂಖಾನರೊಬ್ಬರಾಗಿದ್ದರು. "ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಳ್ಳುವ ಸಲುವಾಗಿಯೇ ಅಫಘಾನಿಸ್ತಾನದ ಕಾಬೂಲಿನಿಂದ ಕರೀಂಖಾನರ ತಂದೆಯನ್ನು ಭಾರತಮಾತೆ ಸಕಲೇಶಪುರದವರೆಗೂ ಕರೆದುಕೊಂಡು ಬಂದು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರೀಂಖಾನರೂ ಭಾಗವಹಿಸುವಂತೆ ಪ್ರೇರೇಪಿಸಿರಬೇಕು ಎನ್ನುವ ಮಾತಿನಲ್ಲಿ ಅಫಘಾನಿ ಮೂಲದ ಕರೀಂಖಾನರು ಭಾರತ ಮಾತೆಯನ್ನು ಬಂಧಮುಕ್ತಳನ್ನಾಗಿ ಮಾಡಲು ಹೋರಾಡಿದ್ದು ಆಕಸ್ಮಿಕವಾದರೂ ಸತ್ಯವಾಗಿದೆ. ರಾಷ್ಟ್ರೀಯ ಚಳವಳಿ ಕ್ರಮೇಣ ದೇಶವನ್ನು ವ್ಯಾಪಿಸಿತು. ಮಹಾತ್ಮಾಗಾಂಧಿ, ಜವಾಹರಲಾಲ ನೆಹರು, ಸುಭಾಷಚಂದ್ರ ಬೋಸ, ಬಾಲ ಗಂಗಾಧರ ತಿಲಕ ಮುಂತಾದವರ ಭಾಷಣ ಮತ್ತು ಲೇಖನಗಳು ತರುಣರನ್ನು ಬಡಿದೆಬ್ಬಿಸತೊಡಗಿದ್ದವು. ಪ್ರಾತಃ ಸ್ಮರಣೀಯರಾದ ರಾಷ್ಟ್ರನಾಯಕರ ವಿಚಾರಧಾರೆ ಕರೀಂಖಾನರ ಮೇಲೆ ಗಾಢ ಪರಿಣಾಮ ಬೀರಿದವು. ಜವಾಹರಲಾಲ ನೆಹರು ಅವರು ತಮ್ಮ ಮಗಳಿಗೆ ಬರೆದ ಪತ್ರಗಳಲ್ಲಿ ವ್ಯಕ್ತಪಡಿಸಿದ 'ಭವಿಷ್ಯದ ಭಾರತ'ದ ಬಗ್ಗೆ ವೈಜ್ಞಾನಿಕ ದೃಷ್ಟಿಕೋನ ಹಾಗೂ ವಿದೇಶದ ನೆಲದಲ್ಲಿ ಸುಭಾಸಚಂದ್ರಭೋಸರ ಧೀರೋದಾತ್ತ ಸಾಹಸಗಳು ಕರೀಂಖಾನರ ಮೇಲೆ ಪ್ರಭಾವ ಬೀರಿದವು.

ಈ ಮಹಾನ್ ನಾಯಕರೊಂದಿಗೆ ಸ್ವಾಮಿ ವಿವೇಕಾನಂದ ಮತ್ತು ಶ್ರೀ ಅರವಿಂದರ ವ್ಯಕ್ತಿತ್ವ ಹಾಗೂ ವಿಚಾರಧಾರೆ ಇವರ ಜೀವನಶೈಲಿಯ ಮೇಲೆ ಪ್ರಭಾವ ಬೀರಿತು. ಜೀವನದಲ್ಲಿ ಕಾಲದಿಂದ ಕಾಲಕ್ಕೆ ಸವಾಲುಗಳನ್ನು ಎದುರಿಸುವ ಶಕ್ತಿಯನ್ನು ನೀಡಿತು. ರಾಷ್ಟ್ರೀಯ ಚಳುವಳಿಯನ್ನು ಹತ್ತಿಕ್ಕುವ ಉದ್ದೇಶದಿಂದ ಅಂದಿನ ಬ್ರಿಟಿಷ ಸರ್ಕಾರವು ೧೯೦೫ ರಲ್ಲಿ ಬಂಗಾಲ ಪ್ರಾಂತವನ್ನು ಎರಡು ಭಾಗಗಳನ್ನಾಗಿ ವಿಭಜಿಸುವ ಆಜ್ಞೆ ಹೊರಡಿಸಿತು. ಈ ಆಜ್ಞೆಯನ್ನು ಬಂಗಾಲ ಮಾತ್ರವಲ್ಲದೇ ಇಡೀ ದೇಶವೇ ಒಗ್ಗಟ್ಟಿನಿಂದ ವಿರೋಧಿಸಿತು.

ವಂಗಭಂಗ ಚಳುವಳಿ ಹೀಗೆ ಇನ್ನು ಹತ್ತು ಹಲವು ಚಳುವಳಿಗಳು ಭಾರತದ ರಾಷ್ಟ್ರೀಯ ಜಾಗೃತಿಯ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯವನ್ನು ನಿರ್ಮಿಸದವು. ವಿದೇಶಿ ಬಟ್ಟೆಗಳ ಹೋಳಿ ಮತ್ತು ಸ್ವದೇಶಿ ವಸ್ತುಗಳ ಪುರಸ್ಕಾರ ದೇಶದ ಎಲ್ಲ ಭಾಗಗಳಲ್ಲಿ ಪ್ರತಿಧ್ವನಿಸತೊಡಗಿತು. ಹದಿಹರೆಯದ ತರುಣ ಕರೀಂಖಾನರಿಗೆ ಇದರ ಹುಚ್ಚು ಹಿಡಿಯಲು ತಡವಾಗಲಿಲ್ಲ. ಅತೀ ಬಡ ಕುಟುಂಬದಲ್ಲಿ ಜನಿಸಿ ದಾರಿದ್ರ್ಯ, ಕಷ್ಟ ಕಾರ್ಪಣ್ಯ ಮಾಲಿಕೆಯ ಯುಗವನ್ನೇ ಎದುರಿಸಿ, ಸ್ವಯಂ ಶಕ್ತಿಯಿಂದ ಅಗಾಧ ಕಾರ್ಯ ಮಾಡಿ, ರಾಷ್ಟ್ರನಾಯಕರ ಪಂಕ್ತಿಯಲ್ಲಿ ಕಂಗೊಳಿಸಿದರು. "ಕರೀಂಖಾನರು ಸ್ವಾತಂತ್ರ್ಯ

ಹೋರಾಟಗಾರರು. ಬಹಳ ಹಳೆಯ ದಿನಗಳಿಂದ ಸ್ವಾತಂತ್ರ್ಯಕ್ಕಾಗಿ ದುಡಿದವರು. ಮೈಸೂರಲ್ಲಿ ಜವಾಬ್ದಾರಿಯುತ ಸರಕಾರ ತರಲು ಅವಿರತ ಪ್ರಯತ್ನಿಸಿದರು. ಇದರಿಂದ ನಾಡುನುಡಿಯ ಸೇವೆ ಕೈಕೊಂಡು ದೇಶಾಭಿಮಾನದ ಕೆಚ್ಚು ಮೂಡಿಸಿಕೊಂಡಿರುವ ಇವರದು ನಿಸ್ಪೃಹ ಸೇವಾಮನೋಭಾವ ಎಂಬುದು ವ್ಯಕ್ತವಾಗುವುದು''.

''ಸ್ವಾತಂತ್ರ್ಯ ಭವ್ಯಜೀವನದ ಗಣಿ
ಭುವನಾಕ್ಷ ಸೂರ್ಯನ ಪ್ರಭೆಯು
ಜನನ್ಮೋಹತ್ಯ ಚಂದ್ರರ ತೇಜಸ್ಸು
ಚಲುವ ತಾರೆಗಳ ಮಿರುಗು ಹೇಗೆ ಸೇರುತ್ತವೋ
ಹಾಗೆ ಸ್ವಾಭಿಮಾನವುಳ್ಳ ಆತ್ಮಾತ್ಮನ ಹೃದಯದಾವೇಗಾ''

ಇಂತಹ ಹಾಡುಗಳ ಮೂಲಕ ಜನರಲ್ಲಿ ಸ್ವಾತಂತ್ರ್ಯದ ಬಗ್ಗೆ ಜಾಗೃತಿ ಮೂಡಿಸುತ್ತಿದ್ದರು.

ಸ್ವಾತಂತ್ರ್ಯದ ಬಗ್ಗೆ ತಮ್ಮ ಮನೋವಿಚಾರಗಳನ್ನು ಕರೀಂಖಾನರು ಈ ರೀತಿ ಯಾವಾಗಲೂ ಹೇಳುತ್ತಿದ್ದರು,

ಅಪನೀ ಆಝಾದಿ ಕೋ ಹಮ್ ಭುಲಾ ನಹೀ ಸಕತೇ ।
ಸಿರ ಕಟಾ ಸಕತೇ ಹೈ, ಲೇಕಿನ ಝುಕಾ ನಹೀ ಸಕತೇ ।

''ಹೈಸ್ಕೂಲ ಮೊದಲನೇ ತರಗತಿಯಲ್ಲಿ ಓದುತ್ತಾ ಇದ್ದಾಗ ಹೆಡ್ ಮಾಸ್ತು 'ದಿ ಹಿಂದು'' ಪತ್ರಿಕೆ ತಂದು ಅದರಲ್ಲಿ ಅಂದಿಗೆ ನಡೆಯುವ ಘಟನೆಗಳೆಲ್ಲಾ ಓದಿ ಹೇಳೋವ್ರು. ಆಗ ಗಾಂಧಿ ೀಜಿಯವರ ವ್ಯಕ್ತಿತ್ವ ಆಕರ್ಷಣೀಯವಾಯ್ತು. ನಾನು ಇವರನ್ನು ಯಾಕೆ ಹಿಂಬಾಲಿಸಬಾರ್ದು ಅನ್ನೋ ಮನಸ್ಸಾಗಿತ್ತು. ಅದು ಬೆಳಿತಾನೂ ಬಂತು. ಪರಿಸರನೂ ಅದಕ್ಕೆ ಅನುಕೂಲವಾಗಿತ್ತು. ಇಷ್ಟ ಮಿತ್ರರೂ ಕೂಡ ಅದಕ್ಕೆ ಸಹಾಯಕರಾದ್ರು. ನಾನು ರಾಷ್ಟ್ರಧ್ವಜ ಹಿಡ್ಕೊಂಡು ಪ್ರಭಾತ ಪೇರಿ ನಡೆಸ್ತಾ ಸ್ವಾತಂತ್ರ್ಯ ಗೀತೆಗಳನ್ನು ಹಾಡುತ್ತಾ ಹೋಗ್ತಾ ಇದ್ದೆ. ಇದರ ಬಗ್ಗೆ ಒಂದು ವರದಿಯನ್ನು ೧೯೪೨ ಅಕ್ಟೋಬರನಲ್ಲಿ 'ತಾಯ್ನಾಡು' ಪತ್ರಿಕೆ ಪ್ರಕಟಿಸಿದೆ. ಹೀಗೆ ಪ್ರಭಾತ ಪೇರಿಗಳಲ್ಲಿ ಭಾಗವಹಿಸ್ತಾನೇ ಇದ್ದೆ. ಆ ಆಕಾಂಕ್ಷೆಯು ಬೆಳೀತಾ ಬಂತು. ಪರಿಣಾಮ ಸ್ವಾತಂತ್ರ್ಯ ಬರುವವರೆಗೂ ಎಲ್ಲರೂ ತ್ಯಾಗಿಗಳಾಗಿಯೇ ಇದ್ರು. ನಾನು ಐದು ಸಲ ಜೈಲಿಗೆ ಹೋಗಿದ್ದೇನೆ ಎನ್ನುವಲ್ಲಿ ಇವರು ಒಬ್ಬ ಅಪ್ರತಿಮ ಭಾರತೀಯನಾಗಿ ಸ್ವಾತಂತ್ರ್ಯ ಚಳುವಳಿಯಲ್ಲಿ ಮತ್ತು ಕರ್ನಾಟಕ ಏಕೀಕರಣದಲ್ಲಿ ಜಾತ್ಯತೀತವ್ಯಕ್ತಿಯಾಗಿ ತೊಡಗಿಸಿಕೊಂಡವರು ಎಂಬುದು ಸ್ಪಷ್ಟವಾಗುತ್ತದೆ.

ಗಾಂಧೀಜಿಯವರು ನಂದಿ ಬೆಟ್ಟದಲ್ಲಿ ತಂಗಿದ್ದಾಗ ಅವರೊಂದಿಗೆ ಇದ್ದು ಕರೀಂಖಾನ್‌ರು ತಮ್ಮ ಜ್ಞಾನಾನುಭವವನ್ನು ಹೆಚ್ಚಿಸಿಕೊಂಡರು. ಗಾಂಧೀಜಿಯವರ ಒಡನಾಟದ ಕುರಿತು ಕೇಳಿದಾಗ ''ಗಾಂಧೀಜಿಯವರು ನುಡಿದಂತೆ ನಡೆಯೋ ಮನುಷ್ಯ. ಅವರ ಜೀವನವೇ ನಮಗೊಂದು ಪಾಠ. ಅವರು ಬೆಂಗಳೂರಿಗೆ ಬರುವಾಗ ರೈಲಿನ ಮೂರನೇ ದರ್ಜೆಯಲ್ಲಿ ಪ್ರಯಾಣ ಮಾಡಿಯೇ ಬಂದರು. ಇಲ್ಲಿ ಉಳಿದದ್ದು ಹರಿಜನರ ಗುಡಿಸಲಿನಲ್ಲಿಯೇ, ಬೆಳಿಗ್ಗೆ ಎದ್ದೊಡನೆಯೇ ಪೊರಕೆ ತೆಗೆದುಕೊಂಡು ಗುಡಿಸುತ್ತಿದ್ದರು. ಅವರಿಗೆ ಖಾದಿ ಮೇಲೆ ಬಹಳ ಪ್ರೀತಿ. ಪ್ರತಿದಿನ ಅನೇಕರು ಬಂದು ಗಾಂಧೀಜಿಯವರಲ್ಲಿ ಪ್ರಶ್ನೆ ಕೇಳ್ತಿದ್ರು, ಕೋಮು ಗಲಭೆಯಂತಹ ಸಮಸ್ಯೆಗಳಿಂದ ಹಿಡಿದು ಅತೀ ಸಾಮಾನ್ಯ ಪ್ರಶ್ನೆಗಳೂ ಮಹತ್ವದಾಗಿರುತ್ತಿದ್ದವು. ಒಮ್ಮೆ ಒಬ್ಬ ಶ್ರೀಮಂತ ವೃದ್ಧೆ ತನ್ನ ಸೊಸೆಗೆ ಬಹಳ ವರ್ಷಗಳ ನಂತರ ಗಂಡು ಮಗುವಾಗಿದೆ ಎಂದೂ, ಮಗುವಿಗೆ ಯಾವ ಹೆಸರು ಇಡಬೇಕೆಂದು

ಕೇಳಿದರು, ಆಗ ಗಾಂಧೀಜಿಯವರು ಸಮಾಧಾನದಿಂದ ಆಕೆಯ ಮತ್ತು ಯಜಮಾನರ ಎರಡು ವಂಶದವರ ಕಡೆಯ ಹಿರಿಯರ ಹೆಸರು ಕೇಳಿ, ಒಂದು ಹೆಸರನ್ನು ಸೂಚಿಸಿದರು. ಈ ಘಟನೆ ಹೇಳುತ್ತಿರುವ ಉದ್ದೇಶವೆಂದರೆ ಎಂತಹ ವಿಚಾರವನ್ನಾದರೂ ಗಾಂಧೀಜಿಯವರು ಅಲಕ್ಷಿಸುತ್ತಿರಲಿಲ್ಲ'' ಎನ್ನುವಲ್ಲಿ ಎಲ್ಲರಲ್ಲೂ ಒಂದಾಗಿ ಭೇದ ಭಾವವನ್ನು ಎಣಿಸದೇ ಇರುವ ವ್ಯಕ್ತಿತ್ವ ಕರೀಂಖಾನರನ್ನು ಗಾಂಧೀಜಿ ಕಡೆಗೆ ಸೆಳೆಯಿತು ಎನ್ನುವುದು ಸ್ಪಷ್ಟ.

ಸಕಲೇಶಪುರ ಖಾನ್ ಸಾಹೇಬ್ ಕರೀಂಖಾನ್ ತಮ್ಮ ಎಳೆ ಹರೆಯದ ದಿನಗಳಲ್ಲಿ ಕನ್ನಡ ಜನಪದ ಗೀತೆಗಳ ಅಪೂರ್ವ ಸಾಹಿತ್ಯ ಮತ್ತು ಸಂಗೀತಕ್ಕೆ ಮಾರುಹೋದವರಾಗಿದ್ದರು. ಆ ಮೂಲಕ ಜಾನಪದ ಮಾಧುರ್ಯದ ಪ್ರಚಾರಕ್ಕೆ, ಸಂಗ್ರಹಕ್ಕೆ ತೊಡಗಿ ಚಿಕ್ಕ ಪ್ರಾಯದಲ್ಲಿ ಮನೆಬಿಟ್ಟು ಹೊರಟವರು. ಈ ಎಲ್ಲ ಪ್ರಿಯಕಾಯಕಗಳ ಜೊತೆಯಲ್ಲಿ ಮಹಾತ್ಮಾ ಗಾಂಧಿಯವರ ಅನುಯಾಯಿಯಾಗಿ ಸ್ವಾತಂತ್ರ್ಯ ಚಳುವಳಿಯಲ್ಲಿ ಜಾತ್ಯತೀತ ಹೋರಾಟದಲ್ಲಿ ನಿರಂತರವಾಗಿ ತಮ್ಮನ್ನು ರಾಷ್ಟ್ರೋದ್ಧಾರಕ್ಕೆ ತೊಡಗಿಸಿಕೊಂಡರು. ಹಳ್ಳಿಯ ಸಂಸ್ಕೃತಿ ಮತ್ತು ಸಾಹಿತ್ಯ ಇವರನ್ನು ಕೈ ಬೀಸಿ ಕರೆದುದರಿಂದ ಅದನ್ನು ಸಂಗ್ರಹಿಸುತ್ತ, ಹಾಡುತ್ತ, ಹಳ್ಳಿ ಹಳ್ಳಿ ಸುತ್ತಿದರು. ಭಾರತ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಕರೀಂಖಾನರಂತಹ ಕಂಚಿನ ಕಂಠದ ಗಾಯಕರೊಬ್ಬರು ಬೇಕಾಗಿದ್ದರು. ಅದ್ಭುತ ಕಂಠ ಸಿರಿ ನಿರರ್ಗಳವಾಗಿ ಹರಿವ ತಮ್ಮ ವಾಗ್ಝರಿಯಿಂದ ಜನರನ್ನು ಹುರಿದುಂಬಿಸುವ ಶಕ್ತಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬಳಕೆಗೊಂಡಿತ್ತು. ಸ್ವಾತಂತ್ರ್ಯ ಚಳುವಳಿಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡು, ದೇಶ ಭಕ್ತಿಯ ಸಂದೇಶ ಹರಡುತ್ತ, ಕಾಲ್ನಡಿಗೆಯಲ್ಲಿ ಊರೂರು ತಿರುಗಿದರು.

ಕರೀಂಖಾನರು ಜನಪದ ಗೀತೆಗಳ ಗಾಯನ, ಅಪ್ರತಿಮ ವಾಗ್ಮಿತೆಯಿಂದ ಗಾಂಧೀಜಿಯವರ ವಿಚಾರಗಳನ್ನು ಕುರಿತಂತೆ ಉಪನ್ಯಾಸಗಳನ್ನು ಏರ್ಪಡಿಸುತ್ತಿದ್ದರು. ಸಭೆಗಳಲ್ಲಿ ಹಾಡುತ್ತಿದ್ದ ರಾಷ್ಟ್ರಭಕ್ತಿ ಪ್ರಧಾನವಾದ ಜಾನಪದ ಗೀತೆಗಳಲ್ಲಿ ಇದು ಒಂದಾಗಿತ್ತು.

''ಶರಣು ಶರಣುವಯ್ಯ ಗಣ ನಾಯ್ಕ
ನಮ್ಮ ಕರುಣದಿಂದಲಿ ಕಾಯೋ ಗಣ ನಾಯ್ಕ''

''ಸ್ವಾತಂತ್ರ್ಯ ಚಳುವಳಿಯಲ್ಲಿ ಬಹುಜನರನ್ನು ಒಲಿಸಿಕೊಳ್ಳಲು ಈ ಎಲ್ಲ ಹಾಡುಗಳನ್ನು ಹಾಡಬೇಕಾಗುತ್ತಿತ್ತು. ಜನ ಸ್ವಾತಂತ್ರ್ಯಕ್ಕಾಗಿ ಹಾತೊರೆಯುತ್ತಿದ್ದಾಗ, ಹೋರಾಟದಲ್ಲಿ ಅವರು ಭಾಗವಹಿಸುತ್ತಿದ್ದಾಗ ಸ್ನೇಹ ಸೌಹಾರ್ದಕ್ಕಾಗಿ ಅವರ ಜೊತೆಯಲ್ಲಿ ನಾನೂ ಕೂಡ ವಿನೀತನಾಗಿ ಹೋರಾಡಬೇಕಾದ ಸಂದರ್ಭ ಬಂದಾಗ, ಜನರನ್ನು ಒಲಿಸಿಕೊಳ್ಳಲು ಜಾನಪದ ಗೀತೆಗಳನ್ನು ಹಾಡುತ್ತಿದ್ದೆ.'' ಇಂತಹ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡ ಕಾರಣ ಕರೀಂಖಾನರಿಗೆ ಜೀವನೋಪಾಯ ಕಠಿಣವಾಯಿತು. ಇವರು ಸಕಲೇಶಪುರದ ತಮ್ಮ ಬಟ್ಟೆ ಅಂಗಡಿಯಿಂದ ರಾಷ್ಟ್ರ ಧ್ವಜವನ್ನು ತಯಾರಿಸಿ ಹಂಚುವ ಗುಪ್ತ ಕೆಲಸದ ಚಟುವಟಿಕೆಗಳ ಪರಿಣಾಮವನ್ನು ಇವರ ಕುಟುಂಬದವರು ಅನುಭವಿಸಬೇಕಾಯಿತು, ಇವರು 'ಕ್ವಿಟ್ ಇಂಡಿಯಾ' ಚಳುವಳಿಯಲ್ಲಿ ಭಾಗವಹಿಸಿದ್ದ ನೆಪವೊಡ್ಡಿ, ಬ್ರಿಟಿಷ ಅಧಿಕಾರಿಯೊಬ್ಬ ಖಾನ ಅವರ ಅಣ್ಣ ನಡೆಸುತ್ತಿದ್ದ ಜವಳಿ ಅಂಗಡಿಯ ಲಾಯಸನ್ಸ ರದ್ದುಗೊಳಿಸಿದರು. ಆಗ ಕರೀಂಖಾನರು ತನ್ನಿಂದ ಮನೆಯವರಿಗೆ ತೊಂದರೆಯಾಗಬಾರದೆಂದು ಮನೆಯಿಂದ ದೂರ ಸರಿದರು. ಹೊಟ್ಟೆಪಾಡಿಗಾಗಿ, ಜನಪದ ಗೀತೆಗಳನ್ನು ಸಂಗ್ರಹಿಸುತ್ತ ಅವುಗಳನ್ನು ಅಚ್ಚು ಹಾಕಿಸಿ ಮಾರಿದರು. ಈ ವೇಳೆಯಲ್ಲಿ ಇವರು ರಂಗಭೂಮಿಯತ್ತಲೂ ಆಕರ್ಷಿತರಾದರು.

ಕಾಂಗ್ರೆಸ್ ಪ್ರಚಾರಕ್ಕಾಗಿ ನಾನು ಅನುಸರಿಸುತ್ತಿದ್ದ ವಿಧಾನವೆಂದರೆ- ''ರಸ್ತೆಯ ಪಕ್ಕದಲ್ಲಿ ನಿಂತು ಜಾನಪದ ಗೀತೆಗಳನ್ನು ಹಾಡುವುದು, ಕೇಳಲು ಬಂದು ಸೇರಿದ ಜನರನ್ನು ಕಾಂಗ್ರೆಸಿನ ಸದಸ್ಯರನ್ನಾಗಿ ಮಾಡುವುದು, ಇದನ್ನು - ಟಿ. ಸಿದ್ಧಲಿಂಗಯ್ಯನವರು ತಮ್ಮ ಸನ್ಮಾನ ಗ್ರಂಥದಲ್ಲಿ ಅಂಕಿಸಿದ್ದಾರೆ ಎನ್ನುವ ಅವರ ಮಾತಲ್ಲಿ ಸ್ವಾತಂತ್ರ್ಯಕ್ಕಾಗಿ ಮತಭೇದವಿಲ್ಲದೇ ಹೋರಾಟ ನಡೆಸಿದ ವಿಶಿಷ್ಟ ಭಾರತೀಯ ಚೇತನಗಳಲ್ಲಿ ಕರೀಂಖಾನರು ಒಬ್ಬರಾಗಿದ್ದರು. ಖಾದಿ ಬಿಳಿ ಟೋಪಿ, ಖಾದಿ ಬಿಳಿ ಜುಬ್ಬ, ಖಾದಿ ಬಿಳಿ ಪಾಯಜಾಮ ಈ ಉಡುಪುಗಳನ್ನೇ ಕರೀಂಖಾನರು ಧರಿಸಿ, ಗಾಂಧೀಜಿಯ ತತ್ವಗಳಿಗೆ ಮಾರುಹೋದದ್ದು ಅವರ ಅದ್ಭುತ ಶಕ್ತಿಯಿಂದಲೇ ಎಂದರೆ ತಪ್ಪಾಗಲಾರದು. ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಂಬಂಧಪಟ್ಟ ಎಲ್ಲ ಸಭೆಗಳಲ್ಲಿ ಭಾಗವಹಿಸುತ್ತಿದ್ದುದಲ್ಲದೇ ಲಾವಣಿಗಳನ್ನು ಹಾಡುತ್ತ ಜನಜಾಗೃತಿ ಮಾಡುತ್ತಿದ್ದರು.

೧೯೪೦-೪೧ರ ಅವಧಿಯಲ್ಲಿ ಧಾರವಾಡದ 'ಲೋಕಮಿತ್ರ' ಪತ್ರಿಕೆಯ ಉಪಸಂಪಾದಕರಾಗಿ ಅಂದಿನ ಚಳುವಳಿಯ, ಸಾಮಾಜಿಕ ಸ್ಥಿತಿ-ಗತಿಗಳ ಬಗ್ಗೆ, ಜನರಿಗೆ ಅರಿವು ಮೂಡಿಸತೊಡಗಿದರು. ಇವರದು ಉತ್ಕೃಷ್ಟವಾದ ಭಾಷೆಯಾದುದರಿಂದ ಕರೀಂಖಾನರ ಬಾಷಾ ಮೋಡಿಗೆ ತಲೆದೂಗದವರೇ ಇರಲಿಲ್ಲ. ಸ್ವದೇಶಿ ಪುರಸ್ಕಾರ ಮತ್ತು ವಿದೇಶಿ ಬಹಿಷ್ಕಾರಗಳ ಕುರಿತು ಕರೀಂಖಾನ ಸಾರ್ವಜನಿಕ ಸ್ಥಳಗಳಲ್ಲಿ ಭಾಷಣ ಮಾಡಲಾರಂಭಿಸಿದರು. ಸಂತೆ, ಜಾತ್ರೆಗಳು ಸೇರುವಲ್ಲೆಲ್ಲ ಇವರು ಹಾಜರಾಗುತ್ತಿದ್ದರು. ಜನಸೇರಿದೊಡನೆಯೇ ರಾಷ್ಟ್ರೀಯ ಜಾಗೃತಿಯ ಭಾಷಣ, ಹಾಡು. ಪೊಲೀಸರು ಬಂದೊಡನೆಯೇ ಮತ್ತೊಂದು ಸ್ಥಳಕ್ಕೆ ಓಡಿ ಹೋಗುತ್ತಿದ್ದರು. ಹೀಗೆ ಭಾರತಾಂಬೆಗೆ ತಮ್ಮ ಋಣವನ್ನು ಅರ್ಪಿಸತೊಡಗಿದರು. ಭಾರತವನ್ನು ಬ್ರಿಟೀಷರ ದಾಸ್ಯದಿಂದ ಮುಕ್ತಗೊಳಿಸುವ ಪ್ರತಿಜ್ಞೆ. ದೇಶದೆಲ್ಲೆಡೆ ಸ್ವಾತಂತ್ರ್ಯ ಹೋರಾಟದ ಕಹಳೆ ಮೊಳಗಿತ್ತು. ಗಾಂಧೀಜಿಯವರ ಖಾದಿ ಪ್ರೇಮ ಕರೀಂಖಾನರಲ್ಲಿ ಹೊಸ ಹುಮ್ಮಸ್ಸು ತುಂಬಿತು. ಒಮ್ಮೆ ಗಾಂಧೀಜಿಯವರು ನಂದಿ ಗಿರಿಧಾಮದಲ್ಲಿದ್ದಾಗ ಕರೀಂಖಾನರು ಸುಮಾರು ಒಂದು ತಿಂಗಳು ಗಾಂಧೀಜಿ ಯವರೊಡನೆ ಚಳುವಳಿಯಲ್ಲಿ ಭಾಗವಹಿಸುವ ಸುಯೋಗ ಲಭಿಸಿತು.

''ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ಈಗಿನ ಸಿನೆಮಾ ನಾಯಕರ ಸ್ಥಾನವನ್ನು ಆಗಿನ ರಾಷ್ಟ್ರನಾಯಕರು ತುಂಬಿಕೊಂಡಿದ್ದರು. ಆ ರಾಷ್ಟ್ರನಾಯಕರು, ಅವರ ಕಲ್ಯಾಣ ಗುಣಗಳು ನನಗೆ ಅತ್ಯಂತ ಪ್ರಿಯವಾದದ್ದು, ಆದರ್ಶನೀಯವಾದವು, ಅನುಕರಣೀಯವಾದವುಗಳಾಗಿದ್ದವು. ಆದ್ದರಿಂದ ಸಹಜವಾಗಿ ನನ್ನ ಒಲವು ಚಳುವಳಿಯ ಕಡೆಗೆ ಹರಿಯಿತು ಎನ್ನುವ ಮಾತಲ್ಲಿ ದೇಶ ಮಾತೆಯಲ್ಲಿಟ್ಟ ಅಚಲವಾದ ಭಕ್ತಿ ವ್ಯಕ್ತವಾಗುತ್ತದೆ. ಚಳುವಳಿಯಲ್ಲಿ ಕರೀಂಖಾನರು ಯಾವುದೇ ಆಸೆಯಿಂದ ಪ್ರಭಾವಿತ ರಾದವರಾಗಿರಲಿಲ್ಲ. ಪಂಜೆ ಮಂಗೇಶರಾಯರನ್ನು ನೆನೆಯುವ ಇವರು ಪಂಜೆ ಮಂಗೇಶರಾಯರ ಹಾಡನ್ನು ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಹಾಡಿದ ವಿಚಾರ ಮೆಲುಕು ಹಾಕುತ್ತಾರೆ. ''ನಾವೆಂಥ ಮನುಜರು ಹೇಳಿ, ಸ್ವಾತಂತ್ರ್ಯ ವಿಲ್ಲದವರು ನೀವಾರು ಎಂದ ಕ್ಷಣಕ್ಕೆ ಬಲಹೀನರೆನ್ನುವರು.'' ಎಂಬ ಹಾಡುಗಳಿಂದ ಜನರ ರಾಷ್ಟ್ರಾಭಿಮಾನವನ್ನು ಹೆಚ್ಚಿಸಿದರು. ''ಭಗಿನಿ ಚರಕವಿದೆ ನಮ್ಮ ಜೀವನ.....'' ಎಂಬ ಹಾಡನ್ನು ನೆನಪಿಸಿಕೊಳ್ಳುತ್ತಾರೆ. ''ಹಿರಿಯರ ವಚನ, ಹರಿ ವಚನ ಕೇಳಲು ಬರುವರು ಲೋಕಜನ'' ಇಂಥ ಹಾಡುಗಳು ಜನರಲ್ಲಿ ಭಕ್ತಿ ಮತ್ತು ಶಕ್ತಿಗಳನ್ನು ತುಂಬುತ್ತಿದ್ದವು.

ಕರೀಂಖಾನರು ಬದುಕಿನಲ್ಲಿ ನಡೆದುಬಂದ ದಾರಿಯ ಕಡೆಗೆ ಹಿನ್ನೋಟ ಬೀರುವ ಪ್ರಯತ್ನ ಮಾಡಲಿಲ್ಲವೆಂದೆನಿಸುತ್ತದೆ. ಏಕೆಂದರೆ ಅವರು ನಡೆದ ದಾರಿಯಲ್ಲಿ ಸಾಕಷ್ಟು ಏರು ತಗ್ಗುಗಳು, ಕಲ್ಲು ಮುಳ್ಳುಗಳು ತುಂಬಿದ್ದವು. ಅವರ ಜೀವನ ಯಾವತ್ತೂ ಹೂವಿನ ಹಾಸಿಗೆಯಾಗಿರಲಿಲ್ಲ. ಅವರ ಶಾಲಾ ಜೀವನದ ದಿನಗಳಿಂದ ಆರಂಭಿಸಿ ಮಹಾತ್ಮಾ ಗಾಂಧೀಜಿ ನೀಡಿದ 'ಮಾಡು ಇಲ್ಲವೇ ಮಡಿ' ಕರೆಗೆ ಓಗೊಟ್ಟು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ ದಿನಗಳವರೆಗೂ, ಅವರ ಜೀವನ ಮುಳ್ಳಿನ ಹಾಸಿಗೆಯಾಗಿತ್ತು. ಸ್ವಾತಂತ್ರ್ಯ ಪ್ರೇಮದಿಂದ ಪ್ರಚೋದಿತರಾಗಿ ಅನೇಕ ಯುವಕರು, 'ಕಾಂಗ್ರೆಸ್ ಜಿಂದಾಬಾದ್', 'ಇನ್‌ಕಿಲಾಬ್ ಜಿಂದಾಬಾದ್', 'ಭಾರತ ಮಾತಾ ಕೀ ಜೈ' ಎಂಬ ಘೋಷಣೆಗಳನ್ನು ಕೂಗಿ ಹೇಳುವುದು ಅಂದು ದೊಡ್ಡ ಅಪರಾಧವೆನಿಸುತ್ತಿತ್ತು. ಇದರಿಂದ ಕುಪಿತಗೊಂಡ ಬ್ರಿಟಿಷರು ತಮ್ಮ ಕೋವಿಯ ಗುಂಡನ್ನು ಭಾರತೀಯರ ಜೀವ ತೆಗೆಯಲುಬಳಸುತ್ತಿದ್ದರು.

''ನಾನೊಬ್ಬ ಸತ್ಯಾಗ್ರಹಿಯಾಗಲು ಗಾಂಧೀಜಿಯ ವ್ಯಕ್ತಿತ್ವ ನನ್ನ ಮೇಲೆ ಗಾಢ ಪ್ರಭಾವ ಬೀರಿತು. ನಾನು ಏಳು ಸಲ ಸೆರೆಮನೆಯಲ್ಲಿದ್ದೆ, ಬೆಂಗಳೂರು ಸೆಂಟ್ರಲ್ ಜೈಲು, ಹಾಸನ ಜೈಲು, ಚೆನ್ನರಾಯ ಪಟ್ಟಣ ಜೈಲುಗಳಲ್ಲಿ ರಾಜಕೀಯ ಕೈದಿಯಾಗಿ ತುರಂಗವಾಸ ಅನುಭವಿಸಬೇಕಾಯಿತು. ಆ ದಿನಗಳಲ್ಲಿ ಬದುಕಿನ ಬಗ್ಗೆ ಒಂದು ಸಂಶೋಧನಾತ್ಮಕ ಪ್ರಬಂಧ ರಚಿಸಿ, ಡಾಕ್ಟರೇಟ್ ಪಡೆಯುವಷ್ಟು ಅನುಭವಗಳು ನನ್ನ ಪಾಲಿಗೆ ಲಭಿಸಿತು.'' ತಾವು ಪಟ್ಟ ಕಷ್ಟಗಳನ್ನು ಬಿಚ್ಚಿಡುವರು. ''ಜೈಲಿನಲ್ಲಿ ಬ್ರಿಟಿಷ ಅಧಿಕಾರಿಗಳು ಭಾರತೀಯರಿಗೆ ಕಿರುಕುಳ ಕೊಡಲೆಂದು ಭಾರತೀಯ ಅಧಿಕಾರಿಗಳನ್ನು ನೇಮಿಸಿಕೊಳ್ಳುತ್ತಿದ್ದರು. ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕೆಂಬ ಉದ್ದೇಶ ಅವರದು. ತಿಕಡಿ ಎಂಬ ಶಿಕ್ಷೆಕೊಡುತ್ತಿದ್ದರು. ಈ ಶಿಕ್ಷೆಯ ಲಕ್ಷಣವೆಂದರೆ ಬಟ್ಟೆಯನ್ನೆಲ್ಲ ತೆಗೆದು ಒದ್ದೆ ಬಟ್ಟೆ ಮೈ ಮೇಲೆ ಹಾಕಿ, ಬೆತ್ತಕ್ಕೆ ದಾರದ ಸಹಾಯದಿಂದ ಸೀಸದ ಗುಂಡು ಕಟ್ಟುತ್ತಿದ್ದರು, ಅದರಿಂದ, ಆರೇಟು, ಹನ್ನೆರಡೇಟು ಹೊಡೆದಾಗ ರಕ್ತ ಬರೋದು, ರಕ್ತ ಬರುತ್ತಿತ್ತು ಎಂದು 'ಲೋಶನ್' ಹಾಕುತ್ತಿದ್ದರು. ಅದನ್ನು ನಮ್ಮ ಅಧಿಕಾರಿಗಳೇ ಬ್ರಿಟಿಷರ ಆಜ್ಞಾಪಾಲಕರಾಗಿ ಮಾಡುತ್ತಿದ್ದರು. ಇದರಿಂದ ಭಾರತೀಯರಿಂದಲೇ ಭಾರತೀಯರನ್ನು ಶಿಕ್ಷಿಸುವ ಕುತಂತ್ರ ಬ್ರಿಟೀಷರದ್ದಾಗಿತ್ತು'' ಎಂಬುದು ತಿಳಿಯುತ್ತದೆ. ಇವರು ಎಷ್ಟೋ ಸಾರಿ ಜೈಲಿನಿಂದ ಬಿಡುಗಡೆಯಾದ ಮೇಲೆ ಮನೆಗೆ ಹೋಗಬಾರದೆಂದು ತೀರ್ಮಾನಿಸಿಕೊಂಡರು. ಕಾರಾಗೃಹದಿಂದ ಬಿಡುಗಡೆಗೊಂಡ ಮೇಲೆ ಇವರ ಜೀವನ ಕಷ್ಟವಾಯಿತು. ಜೀವನಕ್ಕಾಗಿ ಬೊಂಬಾಯಿಗೆ ಹೋಗಿ ರಾಯಲ್ ಇಂಡಿಯನ್ ನೇವಿಯಲ್ಲಿ ವಾಯರಲೆಸ್ ಟೆಲಿಗ್ರಾಫರ್ ಆಗಿ ಕೆಲಸಕ್ಕೆ ಸೇರಿಕೊಂಡೆ. ಇದೆಲ್ಲ ತಾತ್ಕಾಲಿಕವಾಗಿತ್ತು. ಇಲ್ಲಿ ಬಹುತೇಕ ಬ್ರಿಟಿಷ್ ಅಧಿಕಾರಿಗಳೇ ಇದ್ದರು. ಇಲ್ಲಿ ಭಾರತೀಯ ಅಧಿಕಾರಿಗಳು ಬ್ರಿಟಿಷ್ ಅಧಿಕಾರಿಗಳ ಆಜ್ಞೆ ಪಾಲಿಸಿದರೆ ಅವರನ್ನು ಬಹಳ ಪ್ರೀತಿಯಿಂದ ಕಾಣುತ್ತಿದ್ದರು. ಎಲ್ಲೆಲ್ಲಿಂದಲೋ ಊರು, ಮನೆಯನ್ನು ಬಿಟ್ಟು ಇಲ್ಲಿ ಬಂದು ಸೇರಿದ್ದ ಉದ್ಯೋಗಿಗಳಿಗೆ ಮಿಲಿಟರಿ ಬ್ಯಾರಕ್ಕುಗಳಲ್ಲಿಯೇ ವಾಸ. ಪ್ರತಿದಿನ ಸಂಜೆ ಬ್ರಿಟಿಷ್ ಅಧಿಕಾರಿಯೊಬ್ಬ ಬ್ಯಾರಕ್ಕುಗಳ ಮುಂದೆ ಬಂದು 'ಎನಿ ರಿಕ್ವೆಸ್ಟ್' ಎಂದು ವಿಚಾರಿಸುತ್ತಿದ್ದ, ಆವಾಗ ನಾನು ಊರಲ್ಲಿ ನನ್ನ ಮನೆಯವರಿಗೆ ಸರಕಾರದಿಂದ ತೊಂದರೆ ಇದೆ, ದಯವಿಟ್ಟು ಅವರಿಗೆ ರಕ್ಷಣೆ ಕೊಡಿ ಎಂದು ಕೇಳಿಕೊಂಡೆ. ಕೂಡಲೇ ಆ ಅಧಿಕಾರಿ ಅದಕ್ಕೆ ಸ್ಪಂದಿಸದೇ ಇವನು ಟೆರರಿಸ್ಟ ಇದ್ದ ವ್ಯಕ್ತಿ ಎಂದು ಬಗೆದರು, ಉಗ್ರ ಶಿಕ್ಷೆಯಾಯಿತು. ಇವೆಲ್ಲ ತಾತ್ಕಾಲಿಕವಾಗಿದ್ದವು'' ಎಂಬ ಮಾತಲ್ಲಿ ಕರೀಂಖಾನರು ಗುಪ್ತಚರರ ಚಟುವಟಿಕೆ ಕಾರ್ಯದಲ್ಲಿ ಮಗ್ನರಾಗಿದ್ದ ಕುರುಹನ್ನು

ತಿಳಿಸುತ್ತದೆ. ಭಾರತೀಯರೆಲ್ಲರನ್ನು ಸಂಶಯಾಸ್ಪದವಾಗಿ ನೋಡುತ್ತಿದ್ದ ಬ್ರಿಟಿಷರು ಭಾರತೀಯರ ಕೈಯಲ್ಲಿ ಸಂಪೂರ್ಣ ಜವಾಬ್ದಾರಿಯನ್ನು ಕೊಡುತ್ತಿರಲಿಲ್ಲ. ಕರೀಂಖಾನರೂ ಕೂಡ ಪೋಲೀಸ ಚಟುವಟಿಕೆಗಳಿಗೆ ಹೆದರುತ್ತಿರಲಿಲ್ಲ. ಅವರೇ ಹೇಳಿದಂತೆ ''ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ ನನಗೆ ಬ್ರಿಟಿಷ್ ಅಧಿಕಾರಿಯೊರ್ವ ನೀಡುವ ಚಿತ್ರಹಿಂಸೆಗಳು ಏನೇನೂ ಕಷ್ಟ-ನೋವಾಗಲಿಲ್ಲ. ಏನು ಹೊಡೆದಾನು? ಕೊಂದಾನು ಅಷ್ಟೇ?'' ಎಂಬ ಮಾತಲ್ಲಿ ಕರೀಂಖಾನರು ತಮ್ಮ ಜೀವದ ಹಂಗು ತೊರೆದು ಸ್ವಾತಂತ್ರ್ಯಕ್ಕಾಗಿ ಹೋರಾಡಿದರು ಎಂಬುದು ಸ್ಪಷ್ಟವಾಗುತ್ತದೆ.

'ರಾಯಲ್ ಇಂಡಿಯನ್ ನೇವಿ' ಎಂಬ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ಕರೀಂಖಾನ್ ಒಂದು ವರ್ಷದ ವರೆಗೆ ಏನೂ ತೊಂದರೆಗೊಳಗಾಗದೇ ಉಳಿದುಕೊಂಡರು. ಇವರ ಚಟುವಟಿಕೆಗಳೆಲ್ಲ ಭಾರತದ ಸ್ವಾತಂತ್ರ್ಯದ ಕಡೆಗೆ ಎಂಬುದು ಸೂಕ್ಷ್ಮ ಮತಿಗಳಾದ ಕೆಂಪುಮೂರ್ತಿಯವರಿಗೆ ತಿಳಿಯಲು, ಬಹಳ ಸಮಯ ಹಿಡಿಯಲಿಲ್ಲ. ಅಷ್ಟೇ ಅಲ್ಲ, ಸಕಲೇಶಪುರದ ಪೋಲೀಸ ಇಲಾಖೆಯಿಂದ ಕರೀಂಖಾನರು ಕಾಂಗ್ರೆಸ್ ಚಳುವಳಿಯಲ್ಲಿದ್ದ ವಿಚಾರ ನೌಕಾದಳದ ಅಧಿಕಾರಿಗಳಿಗೆ ತಿಳಿಯಿತು. ಕೆಲವೇ ದಿನಗಳಲ್ಲಿ ಕರೀಂಖಾನ ಕೆಲಸ ಕಳೆದುಕೊಳ್ಳಬೇಕಾಯಿತು. ಆದರೂ ಈ ಸಂಸ್ಥೆಯವರು ನಕ್ಷತ್ರ ಪದಕ ಮತ್ತು ಅರ್ಹತಾ ಪತ್ರವನ್ನು ನೀಡಿದರು ಎಂದು ಕರೀಂಖಾನರು ಹೇಳುತ್ತಾರೆ.

''೧೯೪೨ ರಲ್ಲಿ ಭಾರತ ಬಿಟ್ಟುತೊಲಗಿ ಚಳುವಳಿಯಲ್ಲಿ ತರ್ಕಕ್ಕಿಂತ ಅಂತರ್ವಾಣಿಯಿಂದ ಪ್ರೇರಣೆ ಪಡೆದು ಸ್ವಾತಂತ್ರ್ಯದ ಗುರಿ ಸಾಧಿಸಲು, ಯತ್ನ ನಡೆಸಲಾಗಿತ್ತು. ಜನಾಂದೋಲನ ೧೯೨೦-೨೧ರ ಅಸಹಕಾರ ಚಳುವಳಿ, ೧೯೨೭ರಲ್ಲಿ ಬಂದ ಸೈಮನ್ ಆಯೋಗದಲ್ಲಿ ಪ್ರತಿಭಟನೆ ನಡೆದ ಚಳುವಳಿ, ೧೯೩೦-೩೩ ಕರನಿರಾಕರಣೆ ಹಾಗೂ ಉಪ್ಪಿನ ಸತ್ಯಾಗ್ರಹ ಈ ಮೂರು ಸಂದರ್ಭಗಳಲ್ಲೂ ಅತ್ಯಂತ ಬಿರುಸಾಗಿದ್ದ ಪ್ರದೇಶಗಳಲ್ಲಿ ಬ್ರಿಟಿಷ್ ಆಳ್ವಿಕೆಯಲ್ಲಿದ್ದ ಕನ್ನಡ ಪ್ರದೇಶಗಳೂ ಸಹ ಸೇರುತ್ತವೆ. ೧೯೪೨ರ ಚಳುವಳಿಯನ್ನು ಮುಂದೆ ಇಡೀ ಕರ್ನಾಟಕಕ್ಕೆ ಅನ್ವಯಿಸುವಂತೆ ಮಾಡಿತು.'' ಜಾತ್ಯತೀತವಾಗಿ ನಡೆದ ಈ ಚಳುವಳಿಯು ಭವ್ಯ ಭಾರತದ ಸಮೃದ್ಧಿಯ ಸಂಕೇತವಾಗಿತ್ತು. ಕರೀಂಖಾನರ ಮನದಾಳದಲ್ಲಿ ಇವೆಲ್ಲ ಪ್ರೇರಣೆಗಳು ಸುಪ್ತಗತಿಯಲ್ಲಿದ್ದು, ಆಮೇಲೆ ಕ್ರಮವಾಗಿ ಪ್ರಜ್ವಲಿಸತೊಡಗಿದವು.

''ತಾಯಿಯಿಲ್ಲದ ಮೇಲೆ ಇರಬಾರದೀ ಜನ್ಮ
ಹೋಗ್ಬೇಕು ಹೊಳೆಯ ಕರೆಗಾಗಿ। ತಾಯಮ್ಮ
ಬೀಳ್ಬೇಕು ಗಂಗೆಯ ಹೆಸರ್ಹೇಳಿ''

ಇಂಥ ಹಾಡುಗಳು ಜನರ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದು, ಸ್ವಾತಂತ್ರ್ಯಕ್ಕೆ ಪ್ರೇರೇಪಿಸಿದವು. ''ನೀವು ಇನ್ನೊಂದೆರಡು ಹಾಡಿದರೆ ನಾನು ಅತ್ತೇ ಬಿಡುತ್ತಿದ್ದೆ'' ಎಂದು ಮಾಸ್ತಿಯವರು ಹೇಳಿದ ಮಾತು ಕರೀಂಖಾನರ ಹಾಡಿಗೆ ವಿಶಿಷ್ಟ ಶಕ್ತಿಯಿರುತ್ತಿತ್ತು ಎಂಬುದನ್ನು ತಿಳಿಸುತ್ತದೆ. ಇವರು ಜನ್ಮಭೂಮಿಯ ಕುರಿತು ಹಾಡುತ್ತಿದ್ದ ಜನಪದ ಗೀತೆಗಳಿಂದ ಜನರು ಸ್ವಾತಂತ್ರ್ಯ ಚಳುವಳಿಯ ಪ್ರಚಾರಕರಾಗಿ ಸೇರಿಕೊಂಡರು. ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಕಾಂಗ್ರೆಸ್ಸಿನ ಚಳುವಳಿಯಲ್ಲಿ ಭಾಗವಹಿಸಿ ಜೈಲು ಸೇರಿದ ಸಂಧರ್ಭದಲ್ಲಿ ಅಲ್ಲಿದ್ದ ಜೊತೆಯ ಚಳುವಳಿಗಾರರೆಲ್ಲ ಇವರ ಹಾಡಿಗಾಗಿ ಮುಗಿ ಬೀಳುತ್ತಿದ್ದರು. ಲಾವಣಿ ರಚಿಸುವ ಚಾಕಚಕ್ಯತೆ ಹೊಂದಿದ ಕರೀಂಖಾನರು ಕೂಡಲೇ ಲಾವಣಿಯೊಂದನ್ನು ರಚಿಸಿ ಆ ಕ್ಷಣದಲ್ಲೇ ಹಾಡಿದ್ದು ನೆನಪಿಸಿಕೊಳ್ಳುತ್ತಾರೆ.

''ಇದು ವೀರಭೂಮಿ, ಇದು ವೀರಭೂಮಿ
ಸ್ವಾತಂತ್ರ್ಯ ಸಮರ ಭೂಮಿ
ಅಭಿಮಾನತನದ ಕಿತ್ತೂರ ರಜನದ
ಕೆಚ್ಚೆದೆಯ ಭಟರ ಭೂಮಿ''

ಕರೀಂಖಾನರ ಸ್ವಾತಂತ್ರ್ಯ ವಿಚಾರ ವಿಶಾಲಾರ್ಥದ್ದಾಗಿತ್ತು. ಅವರು ಒಂದು ಕಡೆ ಸ್ವಾತಂತ್ರ್ಯದ ಬಗ್ಗೆ ಹೇಳುತ್ತ ''ರಾಷ್ಟ್ರಘಾತುಕನು ನಿರ್ಲಜ್ಜನೂ, ಮೃಗ ಸ್ವಭಾವದವನೂ, ಪರಮ ನೀಚನೂ, ಧನಕ್ಕಾಗಿ ಪದವಿಗಾಗಿ, ಕೀರ್ತಿಗಾಗಿ, ಐಚ್ಛಿಕ ವಸ್ತುವಿನ ಗಳಿಮೆಗಾಗಿ, ಧರ್ಮವನ್ನು ನೀತಿಯನ್ನು, ಸ್ವಾತಂತ್ರ್ಯವನ್ನು ತ್ಯಜಿಸಿ ಪಾರತಂತ್ರ್ಯಕ್ಕೆ ಶರಣು ಹೋಗುತ್ತಾನೆ. ಆದರೆ ಸ್ವಾಭಿಮಾನವುಳ್ಳ ಸತ್ಯಾತ್ಮನು, ವಿಪತ್ ಪರಂಪರೆಗಳಿಂದ ಹೃದಯ ವಿಚ್ಛಿದ್ರಿತವಾಗಿರಲಿ; ಕಷ್ಟ ಜೀವನದಿಂದ ಶಾಂತಾತ್ಮವು ಕಳವಳಗೊಂಡಿರಲಿ, ದೇಶವೇ ಮುನಿದೆದ್ದು ತನ್ನ ಮೇಲೇರಿ ಬರಲಿ; ಖಡ್ಗ ಶಲ್ಯಗಳ ತೀಕ್ಷ್ಣ ಅಪಘಾತಗಳಿಂದ ದೇಹವೆಲ್ಲ ಜರ್ಜರಿತವಾಗಿ ಹೋಗಲಿ; ತನ್ನ ದೇಹವು ಮಾರಣಕಾರಕ ಶೂಲದಡಿಯಲ್ಲಿ ತಳ್ಳಲ್ಪಡುತ್ತಿರಲಿ; ಆದರೂ ಸ್ವಾತಂತ್ರ್ಯದ ಪವಿತ್ರಗೀತೆಗಳನ್ನು ಹಾಡುತ್ತಲೇ ಹೋಗುವನು. ಸ್ವಾತಂತ್ರ್ಯ ಸನ್ಮಾರ್ಗವನ್ನು ತುಳಿಯುತ್ತಲೇ ಸಾಗವನು. ಪರಮಾತ್ಮ ಪಾರತಂತ್ರ್ಯಕ್ಕೆ ಮಣಿಯುವ ದೇಶದ್ರೋಹಿಯ ಮುಖವನ್ನು ಅಮವಾಸ್ಯೆಯ ಕತ್ತಲೆಯಿಂದ ಮರೆ ಮಾಡು. ಏಕೆಂದರೆ ಆತನ ಅಸಹ್ಯ ಸ್ವರೂಪವನ್ನು ಸ್ವಾತಂತ್ರ್ಯ ಪ್ರೇಮಿಗಳು ನೋಡದಿರಲಿ. ಆತನ ನಾಲಿಗೆಯನ್ನು ಬುಡಸಹಿತ ಕಿತ್ತು ಅಗ್ನಿಕುಂಡದಲ್ಲಿ ಬಿಸಾಡು. ಏಕೆಂದರೆ ಆತನ ರಾಷ್ಟ್ರಘಾತುಕ ವಚನವನ್ನು ಸ್ವಾತಂತ್ರ್ಯಪ್ರೇಮಿಗಳು ಕೇಳದಿರಲಿ. ಸ್ವಾತಂತ್ರ್ಯ ಸತ್ ಪಥದಲ್ಲಿ ಹೋರಾಡಿ ಮಡಿಯುವ ವೀರ ಪುರಷನ ಕಪೋಲಗಳನ್ನು ದೇವ ಕನ್ನಿಕೆಯರು ತಮ್ಮ ಸುವಾಸಿತ ಕುಸುಮಾಧರಗಳಿಂದ ಚುಂಬಿಸುವರು. ಪ್ರೇಮಭರದಿಂದ ಆತನನ್ನು ಅಪ್ಪಿಕೊಳ್ಳುವರು. ಆದರೆ ಪಾರತಂತ್ರ್ಯಕ್ಕೆ ವಶವಾಗಿ ಸ್ವಾತಂತ್ರ್ಯ ಪ್ರೇಮಿಗಳಿಗೆ ಕಂಟಕವಾಗುವ ಪಾಪಾತ್ಮನ ಶಿರವನ್ನು ಭೂತ, ಪ್ರೇತ, ಪಿಶಾಚಿಗಳು ತಮ್ಮ ಪಾದಗಳಿಂದ ತುಳಿಯುವರು. ಸ್ವಾತಂತ್ರ್ಯವನ್ನು ಕಳೆದುಕೊಂಡ ಹೀನ ರಾಷ್ಟ್ರವು ವಿಶ್ವಚಿತ್ತದಿಂದ ಅಳಿಸಲ್ಪಡಲಿ. ಅಲ್ಲಿಯ ಭೂಮಿಯು ತನ್ನ ಬೃಹತ್ ವದನವನ್ನು ತೆರೆದು ಜನರನ್ನೆಲ್ಲ ಒಮ್ಮೆ ನುಂಗಿ ಬಿಡಲಿ, ಪರಮಾತ್ಮನ ಪೂತ್ಕಾರದಿಂದ ಆ ಪ್ರದೇಶವೆಲ್ಲವೂ ಬೆಂದು ಭಸ್ಮಿತವಾಗಿ ಹೋಗಲಿ, ಆಲೋಕ ನಿಂದಿತ ದೇಶವು ಕ್ಷಣಾರ್ಧದಲ್ಲಿ ಸಿಡಿದು ಸಾಗರದ ತಳದಲ್ಲಿ ಸೇರಿ ಹೋಗಲಿ, ಲೋಕ ರಕ್ಷಕನಾದ ದಯಾಘನ ದುಃಖ ಸಂಕಟಗಳಿಂದ ವ್ಯಾಪ್ತವಾಗಲಿ, ಮತ್ರ್ಯಲೋಕದಲ್ಲಿ ಮಾನವರಿಗೆ ಅಲ್ಪಾಯುಷ್ಯವನ್ನು ಕರುಣಿಸು. ಆದರೆ ಆಯುಷ್ಯವಿದ್ದಷ್ಟು ಕಾಲ ಸ್ವಾತಂತ್ರ್ಯವನ್ನು ಅನುಗ್ರಹಿಸು.'' ಕರೀಂಖಾನರು ಸ್ವಾತಂತ್ರ್ಯದ ಬೆಲೆಯನ್ನು ಅರಿತುಕೊಂಡವರಾಗಿದ್ದರು. ಸ್ವಾತಂತ್ರ್ಯಗಳಿಸುವುದೊಂದೇ ಅಲ್ಲ, ಉಳಿಸುವುದೂ ಕೂಡಾ ಮಹತ್ವದ ವಿಷಯವೇ ಆಗಿದೆ ಎಂಬುದು ಇವರ ಮಾತಲ್ಲಿ ಸ್ಪಷ್ಟವಾಗುತ್ತದೆ.

ಟಿ.ಸಿದ್ಧಲಿಂಗಯ್ಯ ಮೈಸೂರು ಪ್ರದೇಶದ ಕಾಂಗ್ರೆಸ್ಸಿನ ಅಧ್ಯಕ್ಷರು ೧೯೭೫ರಲ್ಲಿ ತಾವು ಬರೆದಂತಹ 'ನನ್ನ ಸ್ಮರಣೆ' ಈ ರೀತಿಯಾಗಿ ಮುಂದುವರೆಸುತ್ತಾರೆ.'' ಏನಿದು-ನೋವಿನ ಕಥೆ ನಾನು ಸಿಚಿತ್ ಆಜರ ಅಲಿ, ಕರೀಂಖಾನ್, ಎ.ಝುಡ್ ಶರೀಫ್ ಮತ್ತು ಹುಸೇನ್ ಇವರಿಗೆ ವಂದನೆಗಳನ್ನು ಸಲ್ಲಿಸುತ್ತೇನೆ. ಇವರು ಈವತ್ತಿಗೂ ಸುದೈವದಿಂದ ನಮ್ಮೊಂದಿಗೆ ಇದ್ದಾರೆ.ಇವರ ಮನಸ್ಸಿನ ಅಂತರಾಳದಲ್ಲಿ ಯಾವ ಕಹಿ ಭಾವನೆಗಳಿಲ್ಲ, ಇವರಿಗೆ ಎಲ್ಲರೂ ಗೌರವವನ್ನು ನೀಡುತ್ತಾರೆ.'' ಎನ್ನುವ

ಸಿದ್ದಲಿಂಗಯ್ಯನವರ ಮಾತಲ್ಲಿ ಕರೀಂಖಾನ್‌ರು ಪ್ರಾಮಾಣಿಕತೆಯ ಆಗರವಾಗಿದ್ದರು ಎಂಬುದು ತಿಳಿದುಬರುತ್ತದೆ.

೧೯೩೨-೩೩ರಲ್ಲಿಯೇ ಗಾಂಧೀಜಿಯವರ ತತ್ವಗಳಿಗೆ ಮಾರುಹೋಗಿ, ಗಾಂಧೀಜಿಯವರೇ ನಿರ್ಮಿಸಿದ ಸೇವಾದಳವನ್ನು ಸೇರಿಕೊಂಡರು. ೧೯೩೭ರಲ್ಲಿ ಟಿ. ಸಿದ್ದಲಿಂಗಯ್ಯ, ಎಂ.ಎನ್. ಜೋಯಿಸ್, ಟಿ.ಸುಬ್ರಮಣ್ಯ, ರಜ್ಜಿ ಮತ್ತಿತರ ಮಹಾನ ವ್ಯಕ್ತಿಗಳೊಂದಿಗೆ ಚಳುವಳಿಯ ದಿನ ಕಳೆಯುವಂತಾದದ್ದು ಮರೆಯಲಾರದಂತಹ ಸಂಗತಿ. ''ಕರೀಂಖಾನರು ಕರ್ನಾಟಕದ ತುಂಬೆಲ್ಲ ಮಾಡಿದ ಭಾಷಣ ಪರಿಣಾಮಕಾರಿಯಾಗಿತ್ತು. ಕಾಂಗ್ರೆಸ್‌ನ್ನು ಜನಪ್ರಿಯಗೊಳಿಸುವಲ್ಲಿ ಇವರು ಸಫಲರಾದರು. ಸ್ವಾತಂತ್ರ್ಯ ಚಳುವಳಿಯನ್ನು ಬಲಯುತಗೊಳಿಸಿದವು. ಇವರ ಭಾಷಣದ ಪ್ರಭಾವದಿಂದಲೇ. ಸಾವಿರಾರು ಯುವಕರು ಆಕರ್ಷಿತರಾದರು. ಬ್ರಿಟಿಷ ಸರ್ವಾಧಿಕಾರವನ್ನು ಆ ಮೂಲಕವಾಗಿ ಅಲುಗಾಡಿಸುಲ್ಲಿ ಯಶಸ್ವಿಯಾದರು.

ಚಳುವಳಿಯ ಸಮಯದಲ್ಲಿ ಇವರನ್ನು ಚಿಕ್ಕಮಗಳೂರಿನ ಆಜಾದ್ ಮೈದಾನದಲ್ಲಿ ಬಂಧಿಸಲಾಯಿತು. ಏಕೆಂದರೆ ಇವರು ಜನಜಂಗುಳಿಯನ್ನು ಉದ್ದೇಶಿಸಿ, ಬ್ರಿಟೀಷರ ವಿರುದ್ಧ ಸೆಣಸಾಡಲು ಪ್ರಚೋದಿಸಿದರು. ಇವರನ್ನು ಚಿಕ್ಕಮಗಳೂರಿನಲ್ಲಿ ರಾಜಕೀಯ ಕೈದಿಯಾಗಿ ಇಡಲಾಗಿತ್ತು. ಕರೀಂಖಾನರೇ ಹೇಳುವಂತೆ ''ಚಿಕ್ಕಮಗಳೂರು ಸೆರೆಮನೆಯು ಸ್ವಾತಂತ್ರ್ಯ ಯೋಧರಿಂದ ಕಿಕ್ಕಿರಿಯಲ್ಪಟ್ಟಿತ್ತು.'' ಜನರು ಸ್ವಾತಂತ್ರ್ಯಗಾಗಿ ಚಡಪಡಿಸಿದರು.

ಕರೀಂಖಾನರು ಚಿಕ್ಕಮಗಳೂರು ಜೈಲಿನಲ್ಲಿ ಇದ್ದಾಗ ಕೆ.ಟಿ. ಭಾಷ್ಯಂ, ಟಿ. ಸಿದ್ಧಲಿಂಗಯ್ಯ, ಸಾಹುಕಾರ ಚೆನ್ನಯ್ಯ, ಬಂಡಿಗೌಡ, ನರಸಿಪುರ ಸೂರ್ಯನಾರಾಯಣ ಶೆಟ್ಟಿ, ಮಾಧವರಾವ್, ಎ.ಜಿ.ರಾಮಚಂದ್ರರಾವ್, ಎಚ್. ಸಿದ್ಧಯ್ಯ ಮುಂತಾದವರೊಂದಿಗೆ ಸಂಪರ್ಕ ಹೊಂದುವಂತಾಗಿ ಜನತೆಯನ್ನು ಜಾಗೃತಿಗೊಳಿಸುವಲ್ಲಿ ಸಹಾಯಕಾರಿಯಾಯಿತು. ಈ ಪ್ರಭಾವದಿಂದ ಪ್ರಕೃತಿದತ್ತ ಶಕ್ತಿಗಳಲ್ಲಿ ಶ್ರೇಷ್ಠ ಶಕ್ತಿಯಾದ 'ತರುಣ ಶಕ್ತಿ'ಯು ಜಾಗೃತಗೊಂಡಿತು. ಬ್ರಿಟಿಷರ ದಾಸ್ಯದ ಸಮಯದಲ್ಲಿ ಭಾರತೀಯರಿಗೆಲ್ಲರಿಗೆ ಸ್ವಾತಂತ್ರ್ಯವೇ ಏಕೈಕ ಗುರಿಯಾಗಿತ್ತು. ದೇಶ ಸ್ವತಂತ್ರವಾಗಬೇಕು. ಪರಕೀಯರ ದಬ್ಬಾಳಿಕೆಯಿಂದ ಮುಕ್ತಿ ಪಡೆದಾದ ಮೇಲೆ ಎಲ್ಲವೂ ಉತ್ತಮವಾಗುತ್ತದೆ. ಶುದ್ಧವಾಗುತ್ತದೆ, ಏಕೆಂದರೆ ನಮ್ಮವರದ್ದೇ ಆಡಳಿತವಾಗುತ್ತದೆ, ಎಂಬುವುದು ನಮ್ಮವರ ಪರಿಕಲ್ಪನೆಯಾಗಿತ್ತು.

ನಮ್ಮ ರಾಜ್ಯದವರೇ ಆಗಿದ್ದ ಕೆ.ಸಿ. ರೆಡ್ಡಿ, ಕೆ.ಟಿ. ಭಾಷ್ಯಂ, ಪಿ. ಬಾಲಸುಬ್ರಹ್ಮಣ್ಯ, ಎ.ಜಿ.ರಾಮಚಂದ್ರರಾವ್, ಟಿ. ಸಿದ್ಧಲಿಂಗಯ್ಯ ಮುಂತಾದವರು ಆಂದೋಲನದ ಮುಂಚೂಣಿಯಲ್ಲಿದ್ದು ಚಾಲನೆ ನೀಡಿದರು. ''ಗಾಂಧೀಜಿಯವರ ಲೇಖನಗಳು 'ಯಂಗ್ ಇಂಡಿಯಾ' - ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದವು. ಬ್ರಿಟೀಷರನ್ನು ಕುರಿತು ಬರೆದಿದ್ದ ಒಂದು ಲೇಖನ ಕರೀಂಖಾನರ ಮೇಲೆ ಪರಿಣಾಮ ಬೀರುವಂತಾಯಿತು. ಗಾಂಧೀಜಿ ಅಭಿಪ್ರಾಯ, ಅವರ ಜೀವನಕ್ರಮ ಸಮಗ್ರ ಭಾರತದ ಜನರ ವಿಚಾರವನ್ನು ಬದಲಿಸುವಂತಿತ್ತು. ಸೇವಾದಳ ಮುಂತಾದವುಗಳ ಮೂಲಕ ಯುವಕರು ಮಹಾತ್ಮರ ವಾಹಿನಿಯಲ್ಲಿ ಸೇರಿಕೊಂಡರು. ಹೋರಾಟ, ಅಹಿಂಸಾ ಮಾರ್ಗದಲ್ಲಿ ಸಾಗುವುದೇ ಹೊರತು ಸೈನ್ಯದ ಮೂಲಕ ಅಲ್ಲ, ಎಂದು ಅವರು ಪ್ರತಿಪಾದಿಸುತ್ತ ಸಾಗಿದರು. ಅವರು ರೈಲುಗಳಲ್ಲಿ ಮೂರನೇ ದರ್ಜೆಯ ಪ್ರಯಾಣಿಕರಾಗಿ ಮಾತ್ರ ಓಡಾಡುತ್ತಿದ್ದರು.'' ಮಂದಗಾಮಿಯ ಗುಂಪಿನವರಾದ ಕರೀಂಖಾನರ ಪ್ರತಿಯೊಂದು ವಿಚಾರವು

ಆದರ್ಶಪ್ರಾಯವಾಗಿದ್ದವು. ಅದಕ್ಕಾಗಿ ತಮ್ಮ ಇಡೀ ಬದುಕಿನಲ್ಲಿ ಗಾಂಧೀವಾದಿಯಾಗಿ ಉಳಿದುಬಿಟ್ಟರು. ಗಾಂಧೀಜೀಯವರ ಪ್ರಭಾವದಿಂದ ೧೯೪೦ಕ್ಕಿಂತ ಮೊದಲೇ ಕೋಮುಗಲಭೆ ಹತ್ತಿಕ್ಕಲು ಪ್ರಯತ್ನಿಸಿದ್ದರು. ಹಿಂದೂ ಮುಸ್ಲಿಂ ಐಕ್ಯಮತದ ಬಗ್ಗೆ ಉಪನ್ಯಾಸ ಕೊಡುತ್ತಿದ್ದರು. ''ಗಾಂಧಿಜೀಯವರು, ಗೌತಮ ಬುದ್ಧನ ನಂತರ ಈ ಜಗತ್ತು ಕಂಡ ಅತೀ ಶ್ರೇಷ್ಠ ಮಾನವ.'' ಗಾಂಧೀಜೀಯವರ ನಿರ್ಭಯವಾದ, ಸ್ವತಂತ್ರ ಮನೋಭಾವದ ಚಿಂತನೆಗೆ ಕರೀಂಖಾನರು ಮಾರುಹೋಗಿದ್ದರು.

ಅಲಹಾಬಾದಿನಲ್ಲಿ ಜರುಗಿದ ಘಟನೆ, ೧೯೧೯ರಲ್ಲಿ ಜಲಿಯನ್ ವಾಲಾಬಾಗ್ ಹತ್ಯಾಕಾಂಡದಿಂದ ಗಾಂಧೀಜಿ ಮೊದಲುಗೊಂಡ ಸ್ವಾತಂತ್ರ್ಯ ಹೋರಾಟಗಾರರು 'ಖಿಲಾಫತ್' ಚಳುವಳಿ ಆರಂಭಿಸಿದರು. ಈ ಸಂದರ್ಭಗಳೇ ಕರೀಂಖಾನರಲ್ಲಿ ಎಲ್ಲರಿಗಾಗಿ ಬಾಳಬೇಕೆಂಬ ಹಂಬಲ ಹೆಚ್ಚಾಗಿ ಚಳುವಳಿಯಲ್ಲಿ ದುಮುಕಿದರು. ದೇಶವನ್ನು ಹೇಗೆ ಸ್ವತಂತ್ರಗೊಳಿಸುವುದು ಎಂಬ ವಿಚಾರದಲ್ಲಿಯೇ ಇವರು ಇರುತ್ತಿದ್ದರು. ಫಿರಂಗಿಯ ಧ್ವನಿ ಕೇಳಲು ಅವರು ಬಯಸುತ್ತಿರಲಿಲ್ಲ, ನಮ್ಮ ಸ್ವತಂತ್ರ ದೇಶದ ಧ್ವಜ ಹಾರುವುದನ್ನು ನೋಡಲು ಬಯಸುತ್ತಿದ್ದರು. ಅದರಲ್ಲಿಯೇ ತಮ್ಮ ಜೀವನವನ್ನು ಕಳೆದರು. ಇವರ ಉತ್ಸಾಹ ಭರಿತ ಗೀತೆಗಳನ್ನು ಕೇಳಿ ಬ್ರಿಟಿಷರು ತಲ್ಲಣಿಸುತ್ತಿದ್ದರು. ಚಿಕ್ಕಮಗಳೂರು, ಅರಸಿಕೆರೆ, ಹಾಸನ, ಕೃಷ್ಣರಾಜಪುರ, ಬೆಂಗಳೂರು ಸೆಂಟ್ರಲ್ ಜೈಲು ಸೇರುವ ಸಮಯಕ್ಕಾಗಲೇ ಕರೀಂಖಾನರಿಗೆ ೪೦ ವರ್ಷಗಳು ಸಂದುಹೋಗಿದ್ದವು. ಜಾತ್ಯತೀತವಾಗಿ ಹೋರಾಡಿದ ಮುಸ್ಲಿಂ ಯುವಕ ಕರೀಂಖಾನರಲ್ಲಿ ತಾವೆಲ್ಲ ಹಿಂದುಸ್ಥಾನಿಗಳು ಎಂಬ ಭಾವವಿತ್ತೇ ಹೊರತು, ಬೇರೇನೂ ಇರಲಿಲ್ಲ. ದೇಶಪ್ರೇಮ ಗೀತೆಗಳು ಜನಮನವನ್ನು ಸೂರೆಗೊಳ್ಳುತ್ತಿದ್ದ ಕಾಲದಲ್ಲಿ ಚಳುವಳಿಯ ಕಾವು ಏರುತ್ತಿತ್ತು. ಕರೀಂಖಾನರ ಈ ಜಾಗೃತಿಯ ಸುಳಿವು ತಿಳಿಯಬೇಕೆಂದು ಪೋಲೀಸರು ಕರೀಂಖಾನರನ್ನು ಹುಡುಕಾಡಲು ಪ್ರಾರಂಭಿಸಿದರು. ಅವರು ಜನರಲ್ಲಿ ಜಾಗೃತಿ ಮೂಡಿಸಲು ಚಳುವಳಿ ಬಿಸಿ ತಣ್ಣಗಾಗಬಾರದೆಂದು, ಈ ಕರ್ನಾಟಕವನ್ನು ಉಪಾಯವಾಗಿ ಸುತ್ತಬೇಕೆಂದು, ಸಕಲೇಶಪುರವನ್ನು ಬಿಟ್ಟು ಚಿಕ್ಕಮಗಳೂರಿಗೆ ಬಂದಾಗ ಆಜಾದ್ ಮೈದಾನದಲ್ಲಿ ಇವರ ಭಾಷಣವನ್ನು ಕೇಳಲು ೧೫ ರಿಂದ ೨೦ ಸಾವಿರ ಜನ ಸೇರಿದರು. ಕಾಫಿ ಪ್ಲಾಂಟೇಶನನಲ್ಲಿ ಕೆಲಸಮಾಡುವ ಕೆಲಸಗಾರರು, ಬಡವರು, ಬಲ್ಲಿದರೆನ್ನದೇ ಜನ ಜಮಾಯಿಸಿದ್ದರು. ಭಾಷಣ ಮಾಡುವ ವಿಷಯ ಪೊಲೀಸಿನವರಿಗೆ ತಿಳಿಯಲಾಗಿ ಕರೀಂಖಾನರು ಅಲ್ಲಿಂದ ಮುಂದೆ ಹೋಗುವರಾಗಿ ತಿಳಿಸುತ್ತಿರುವಾಗಲೇ ಸರಕಾರದಿಂದ ವಾರಂಟ ಬಂದಿತು. ಭಾಷಣ ಮಾಡುವ ಸಮಯದಲ್ಲಿ ಶ್ರೀ ಕೃಷ್ಣಸ್ವಾಮಿರಾವ್ ಅಡ್ವೋಕೇಟ್ ಸಭೆಯಲ್ಲಿ ಕರೀಂಖಾನರನ್ನು ಅಪ್ಪಿಕೊಂಡು ಇವರ ಮಾತನ್ನು ಸಮರ್ಥಿಸಿದರು. ಆ ಕೂಡಲೇ ಪೊಲೀಸನವರು ಕರೀಂಖಾನರನ್ನು ಅರೆಸ್ಟ ಮಾಡಲು ಮುಂದಾದರು. ಆದರೆ ಬಿಳಿಯರ ಬಿಗಿ ಮುಷ್ಠಿಯಲ್ಲಿ ಬಳಲಿದ್ದ ದೇಶದ ಬಿಡುಗಡೆಗೆ ಹೊರಟ ಮಹಾಪೂರದಲ್ಲಿ ಪಾಲ್ಗೊಂಡ ಕರೀಂಖಾನರನ್ನು ಎಸ್.ಐ.ಚೆನ್ನಾಗಿ ಬಲ್ಲವರಾಗಿದ್ದರು. ಸರಕಾರದ ಆಜ್ಞೆ ಇದು ಎಂಬ ಕಾರಣಕ್ಕಾಗಿ ಕರೀಂಖಾನರನ್ನು ಅರೆಸ್ಟ್ ಮಾಡಬೇಕಾಯಿತು, ಎಂದು ತನ್ನ ಅಸಹಾಯಕತೆಯನ್ನು ತೋಡಿಕೊಂಡರು. ಅಂದು ಚಳುವಳಿಯಲ್ಲಿ ಭಾಗವಹಿಸಿದ ಪ್ರತಿಯೊಬ್ಬರೂ ಸ್ವಾರ್ಥದ ವಿಚಾರ ಮಾಡಿರಲಿಲ್ಲ, ಸ್ವಾತಂತ್ರ್ಯವೊಂದೇ ಅವರ ಗುರಿಯಾಗಿತ್ತು. ಅನೇಕ ಮಂದಿ ಮನೆಮಠ ಕಳೆದುಕೊಂಡು ಹುತಾತ್ಮರಾದರು. ಅಂದಿನ ಜನತೆಗೆ ಎಚ್ಚರಗೊಳ್ಳಲು ಬೇಕಾದ ರಾಷ್ಟ್ರಾಭಿಮಾನದ ಚೈತನ್ಯ ತುಂಬಲು ಕರೀಂಖಾನರು ಅಹರ್ನಿಶಿ ದುಡಿಯಬೇಕಾಯಿತು. ''ಅದಕ್ಕಾಗಿ ಇವರು ೧೯೩೭-೧೯೪೨ ಮತ್ತು ೧೯೪೭ ರಲ್ಲಿ ಜೈಲುವಾಸ ಅನುಭವಿಸಬೇಕಾಯಿತು.''

ಅಖಂಡ ಬ್ರಹ್ಮಚಾರಿಯಾಗಿಯೇ ಕರೀಂಖಾನರು ಉಳಿದರು. ಮದುವೆಗೆ ಮನೆಯವರ ಒತ್ತಡವಿತ್ತು, ಆದರೆ ಕರೀಂಖಾನರು ಒಪ್ಪಲಿಲ್ಲ. ''ನಾವೇ ಈ ಗೌರವ ಮರೆತ ಗುಲಾಮರು. ನಾನು ಮದುವೆಯಾಗಿ ನನ್ನ ಮಕ್ಕಳು ಗುಲಾಮರಾಗಬಾರದು, ಮದುವೆಯಾಗುವದಕ್ಕಿಂತ ದೇಶ ಸೇವೆ ಮುಖ್ಯ. ಇದೇ ಸೇವೆ ಮಾಡ್ತಾ ಲೋಕ ಬಿಡೋವರ್ಗೂ ಇರ್ತೇನೆ'' ಎಂದು ಮನೆಯವರಿಗೆ ಜವಾಬು ಕೊಟ್ಟಿದ್ದರು. ಕರೀಂಖಾನರಿಗೆ ಬ್ರಿಟಿಷ್ ಆಳ್ವಿಕೆ ಹೇಸಿಗೆಯನ್ನು ಹುಟ್ಟಿಸಿತ್ತು ಎಂದು, ದೇಶಕ್ಕಾಗಿ ಪ್ರಾಣಾರ್ಪಣೆಗೂ ಸಿದ್ಧ ವಿದ್ದ ಅವರ ಮಾತೇ ಸಾಕ್ಷಿಯಾಗಿ ನಿಲ್ಲುತ್ತದೆ. ಹೀಗೆ ಇಂಥ ಹಲವು ಮಹನೀಯರ ಶತ ಪ್ರಯತ್ನದಿಂದ ಭಾರತ ಸ್ವಾತಂತ್ರ್ಯವಾಯಿತು. ಇವರ ಘನ ಕೆಲಸಕ್ಕೆ ಭಾರತದ ಅನೇಕ ಸಂಘ-ಸಂಸ್ಥೆಗಳು ಗೌರವಿಸಿದವು.

## ರಾಜಕೀಯ ರಂಗ

ಭಾರತದ ಸ್ವಾತಂತ್ರ್ಯ ಮತ್ತು ಕರ್ನಾಟಕದ ಏಕೀಕರಣದ ನಂತರ ರಾಜಕೀಯ ಕಲುಷಿತವಾಯಿತು. ರಾಜಕಾರಣಿಗಳ ಸ್ವಾರ್ಥ, ಲಾಲಸೆ, ಸ್ವಜನ ಪಕ್ಷಪಾತಗಳು ಅತಿಯಾಗತೊಡಗಿದಾಗ, ಸುಂದರ ಭವ್ಯ ಭಾರತದ ಕನಸು ಕಂಡಿದ್ದ ಕರೀಂಖಾನ್ ರಾಜಕೀಯದಿಂದ ಹಿಂದೆ ಸರಿದರು. ಯಾರಿಗೆ ಸ್ವಾತಂತ್ರ್ಯ ಹೋರಾಟದ ಗಳಿಕೆಯ ಅರ್ಥ ಗೊತ್ತಿಲ್ಲವೋ ಅವರಿಂದ ಸ್ವಾತಂತ್ರ್ಯದ ರಕ್ಷಣೆ ಸಾಧ್ಯವಿಲ್ಲ, ಎಂದು ಕರೀಂಖಾನರು ತೀರ್ಮಾನಿಸುವಂತಾಯಿತು. ''ಅಂದಿನ ರಾಜಕೀಯ ಅಂದರೆ ಸ್ವಾತಂತ್ರ್ಯ ಹೋರಾಟವೇ ಮುಖ್ಯ ಗುರಿಯಾಗಿತ್ತು. ಸ್ವಾತಂತ್ರ್ಯ ಪಡೆಯೋದೆ ಮುಖ್ಯ ಗುರಿಯಾಗಿತ್ತು. ಆ ಕಾರಣದಿಂದ ಇತರ ವಿಚಾರಗಳು ಹೆಚ್ಚಾಗಿ ಬರುತ್ತಿರಲಿಲ್ಲ. ಅಂದಿನ ರಾಷ್ಟ್ರನಾಯಕರಿಗೆ ರಾಷ್ಟ್ರಾಭಿಮಾನದ ಹಸಿವಿತ್ತು. ಯಾವ ತ್ಯಾಗಕ್ಕೂ ಸಿದ್ಧರಿದ್ದರು ಅವರ ವಿಚಾರಗಳು ಸ್ವಾಭಿಮಾನಿಗಳಾದವರನ್ನು ಎಚ್ಚರಿಸುತ್ತಿದ್ದವು. ಆದರೆ ಇಂದಿನ ರಾಷ್ಟ್ರನಾಯಕ ಎನಿಸಿಕೊಳ್ಳುವವರು ಸ್ವಾರ್ಥಕ್ಕೆ ಬೇಳೆ ಬೇಯಿಸಿಕೊಳ್ಳುವವರೇ ಆಗಿದ್ದಾರೆ'' ಎಂಬುದು ಕರೀಂಖಾನರ ವಿಚಾರವಾಗಿದೆ.

ಸ್ವಾತಂತ್ರ್ಯದ ನಂತರದ ದಿನಗಳು ಜನಸಾಮಾನ್ಯರ ನಿರೀಕ್ಷೆಯಂತಾಗಲಿಲ್ಲ. ಜನ ನಿತ್ಯವೂ ಸಂಕಷ್ಟದಲ್ಲಿಯೇ ತೊಳಲಾಡುತ್ತಿದ್ದಾರೆ. ವಸತಿ ಮತ್ತ ಆಹಾರ ಸಮಸ್ಯೆಗಳು ಜನಸಾಮಾನ್ಯರನ್ನು ಹಿಂಡಿ ಹಿಪ್ಪೆಮಾಡುತ್ತಿವೆ. ಚುನಾಯಿತ ಸರಕಾರಗಳು ಜನರ ಇಷ್ಟಾನಿಷ್ಟಗಳಿಗೆ ಸ್ಪಂದಿಸದೆ ರೂಪಿಸುವ ನೀತಿಯಿಂದಾಗಿಯೇ ಇಂಥ ಸಮಸ್ಯೆಗಳು ತಲೆದೋರಿವೆ ಎನ್ನುವುದು ಕರೀಂಖಾನರ ವಿಚಾರ. ''ಸ್ವಾತಂತ್ರ್ಯ ನಂತರದ ವಿಪರ್ಯಾಸವೆಂದರೆ ಕಾಂಗ್ರೆಸ್ಸಿನವರ ಜತೆ ಸೇರಿ ಹೋರಾಡಿದ ನಾಲ್ವರು ಮುಸ್ಲಿಂರನ್ನು ಹಿಂದಕ್ಕೆ ದೂಡಿ, ಕಾಂಗ್ರೆಸ್ಸಿಗರು ಭಾರತೀಯ ಮುಸ್ಲಿಂಲೀಗಿನವರನ್ನು ಆಲಂಗಿಸಿಕೊಂಡರು. ಆದರಾತಿಥ್ಯಗಳಿಲ್ಲದಿದ್ದರೂ ನಾನು ೧೯೫೨ ರಲ್ಲಿ ನಡೆದ ಪ್ರಥಮ ಚುನಾವಣೆಯಲ್ಲಿ ಕಾಂಗ್ರೆಸ್ ಹುರಿಯಾಳುಗಳ ಪರವಾಗಿ ಪಾದಚಾರಿಯಾಗಿ ಹಳ್ಳಿಹಳ್ಳಿಗಳಲ್ಲಿ ಸಂಚರಿಸಿ, ಪ್ರಚಾರಕಾರ್ಯ ನಡೆಸಿದೆನು. ಪ್ರತಿಫಲ ಶೂನ್ಯ. ಎಲ್ಲರೂ ಸ್ವಹಿತದ ಕಡೆಗೆ ಕಾರ್ಯ ತತ್ಪರರಾದರೇ ಹೊರತು ದೇಶದ ಉನ್ನತಿ ಬೇಡವಾಗಿತ್ತು.''

ದೇಶಕ್ಕೆ ಸ್ವಾತಂತ್ರ್ಯ ದೊರೆತ ನಂತರದ ಕೋಮು ಗಲಭೆಗೆ ನೊಂದುಕೊಂಡ ಡಾ. ಕರೀಂಖಾನರು ಮಾನವತಾವಾದಿಗಳಾಗಿ ಹಿಂದೂ ಮುಸ್ಲಿಂರಲ್ಲಿ ಭಾವೈಕ್ಯ ಮೂಡಿಸುವಲ್ಲಿ ತೀವ್ರತರ ಹೋರಾಟ ನಡೆಸಿದರು. ತಮ್ಮ ವಿಚಾರಪೂರಿತ ಲೇಖನಗಳಿಂದ ಹರಿತವಾದ ಭಾಷಣಗಳಿಂದ, ಪರಿಣಾಮಕಾರಿ ಹಾಡುಗಾರಿಕೆಯಿಂದ ಮೇಲಾಗಿ ನಡೆ-ನುಡಿಗಳ ಸುಂದರ ಸಮನ್ವಯದಿಂದ ಶ್ರೀ ಕರೀಂಖಾನರು ಜನತೆಯ ಕಲ್ಯಾಣಕ್ಕಾಗಿ ಹಗಳಿರುಳೂ ದುಡಿದರು. ನಾಡು,

ನುಡಿಯ ಸೇವೆ ಕೈಕೊಂಡು, ದೇಶಾಭಿಮಾನದ ಹುಚ್ಚು ಮೂಡಿಸಿಕೊಂಡಿರುವ ಶ್ರೀ ಕರೀಂಖಾನರದು ನಿಸ್ಪೃಹ ಸೇವಾ ಮನೋಭಾವ. ಇವರ ಸೇವೆ ಅಂದಿನಿಂದ ಇಂದಿಗೂ ಗುರುತಿಸಲ್ಪಟ್ಟಿಲ್ಲವೆಂದರೆ ತಪ್ಪಾಗಲಾರದು.

ರಾಷ್ಟ್ರೀಯವಾದವನ್ನು ಪೂರ್ತಿ ಬದುಕಲ್ಲಿ ಅಳವಡಿಸಿಕೊಂಡ ಕರೀಂಖಾನರನ್ನು ಸ್ವಾತಂತ್ರ್ಯ ಕಾಲದಲ್ಲಿ ಹಾಡುಗಾರಿಕೆಗೆ, ಮತ್ತು ಮಾತುಗಾರಿಕೆಗೆ, ಬಳಸಿಕೊಂಡ ಸ್ವಾರ್ಥಿಗಳು ಇವರನ್ನು ತೆರೆಯ ಮರೆಗೆ ಸರಿಸಿ ತಾವು ಭಾಷಣ ಮಾಡಿ, ಅಧಿಕಾರಕ್ಕೆ ಬಂದು ಕರೀಂಖಾನರನ್ನು ತುಳಿದು ಬಿಟ್ಟರು. ವೈಯಕ್ತಿಕ ಕಾರಣಕ್ಕಾಗಿ ಇವರನ್ನು ಬಳಸಿಕೊಂಡರು. ಹಾಡಿಸಿಕೊಂಡರು ದೂರಸರಿಸಿದರು.'' ಕರೀಂಖಾನರಲ್ಲಿ ಅಗಾಧವಾದ ಜ್ಞಾನ ಸಂಪತ್ತಿತ್ತು. ಅದರ ದುರುಪಯೋಗವನ್ನು ಸ್ವಾರ್ಥಿಗಳೆಲ್ಲ ಕೂಡಿ ಬಳಸಿಕೊಂಡರು. ಕರೀಂಖಾನರ ಬದುಕಲ್ಲಿ ರಾಜಕೀಯ ಅಸಮಾನತೆ, ಸಿನೇಮಾ ಅಸಮಾನತೆ, ಜಾನಪದ ಅಸಮಾನತೆ ಅಂದರೆ ಇವರ ಎಲ್ಲ ಕೌಶಲ್ಯವನ್ನು ಅನೇಕರು ತಮ್ಮದೆಂಬಂತೆ ಬಳಸಿಕೊಂಡು ಲಾಭ ಪಡೆದುಕೊಂಡರು. ಕರೀಂಖಾನರು ಕೆಲಸ ಮಾಡಿದ್ದು, ಪ್ರಶಸ್ತಿಗಲ್ಲ, ಕೀರ್ತಿಗಲ್ಲ, ಹಣಕ್ಕಾಗಿ ಅಲ್ಲ, ಸ್ಥಾನಮಾನಕ್ಕಾಗಿ ಅಲ್ಲ, ಅವರು ತಾವೆಂದೂ ಉದ್ಧಾರಕ ಎಂದುಕೊಂಡಿಲ್ಲ, ಫೋಟೋ, ಟಿ.ವಿ. ಮಾಧ್ಯಮದಲ್ಲಿ ಪ್ರಚಾರ ಪಡೆಯಬೇಕೆಂಬ ಆಸೆ ಇರಲಿಲ್ಲ. ಇವರಿಗೆ ಸಾಮಾಜಿಕ ಭದ್ರತೆ ಕೂಡ ಇರಲಿಲ್ಲ. ಇಂಥ ಮಹಮದೀಯ ಕನ್ನಡ ಸೇವೆ, ಈ ದೇಶದ ಸೇವೆ ಮಾಡಿದ್ದು ವಿಶಿಷ್ಟವಾದದ್ದು. 'ವಿಹಿತವಾದ, ಉಚಿತವಾದ ನೂರಾರು ಬಗೆಯಿಂದ ಸಂಪಾದಿಸು, ನೂರಾರು ಕೈಗಳಿಂದ ಸಂಗ್ರಹಿಸು, ಆದರೆ ಅದೆಲ್ಲವನ್ನು ಸಾವಿರಾರು ಕೈಗಳಿಂದ ವಿತರಿಸು, ಬದುಕಿನ ಬವಣೆಯಲ್ಲಿ ಬಳಲಿದವರಿಗೆಲ್ಲ ನೀಡು, ನೀಡಲು ಪಡೆ, ಪಡೆದದ್ದನ್ನೆಲ್ಲ ನೀಡು' ಎನ್ನುವ ಮಾತಂತೆ ಕರೀಂಖಾನರು ಸ್ವಾತಂತ್ರ್ಯ ಗಳಿಸಿ ಆದ ನಂತರ ಮತ್ತಷ್ಟು ಬಡತನದ ಕೂಪದಲ್ಲಿ ಬಿದ್ದುಬಿಟ್ಟರು.

ಇವರು ಮನಸ್ಸು ಮಾಡಿದರೆ ಶಾಸಕರು, ಮಂತ್ರಿಗಳಾಗಿ ವಿಜೃಂಭಿಸಬಹುದಾಗಿತ್ತು. ಈ ಜಾಣತನ ತೋರಿಸಿಕೊಳ್ಳಲಿಲ್ಲ, ಗಾಂಧೀಜಿಯ ಜೊತೆ ಜವಾಹರ ಲಾಲ ನೆಹರು ಇದ್ದರು. ಅವರೆಲ್ಲ ತಮ್ಮ ಜಾಣತನದಿಂದ ಮುಂದೆ ಬಂದರು. ರಾಜಕೀಯ ಆಸೆ ಇದ್ದವರಿಗೆ ಕೋಮು ಗಲಭೆ ನಡೆಯುತ್ತಿದ್ದರೆ ಸಡಗರ, ಗಾಂಧೀಜಿಯವರು ಸಾಯೋಕ್ಕಿಂತ ಕೆಲವು ದಿನಗಳ ಮುಂಚೆ ಕೋಮು ಗಲಭೆ ಹತ್ತಿಕ್ಕಲು ಒಂದು ಯೋಜನೆಯನ್ನು ಮಾಡೋಣ ಎಂದರೂ, ಅವರ ಶಿಷ್ಯರು ಗಮನಕೊಟ್ಟಿರಲಿಲ್ಲ, ಇವೆಲ್ಲ ನೆನಸಿಕೊಂಡರೆ ಕರೀಂಖಾನರವರಲ್ಲಿ ಸ್ವಾರ್ಥದ ಒಂದಂಶವೂ ಇರಲಿಲ್ಲ, ಸ್ವಾರ್ಥದಿಂದ ದೂರ ಸರಿದರು. ಏಕಾಂಗಿಯಾಗಿಯೇ ಇರೋಣವೆಂದು ತೀರ್ಮಾನ ತೆಗೆದುಕೊಂಡರು, ಸ್ವಾತಂತ್ರ್ಯ ಹೋರಾಟಗಾರರಾಗಿ, ದೇಶ ಸ್ವಾತಂತ್ರ್ಯ ಪಡೆದು ಆನಂದಿಸಬೇಕಾದ ನಮಗೆ, ಸ್ವಾತಂತ್ರ್ಯ ಭಾರತ ಏನಾಗಿ ಎತ್ತ ಸಾಗಿದೆ ? ಎಂಬುದನ್ನು ಕಳೆದ ೫೩ ವರ್ಷಗಳಿಂದ ನೋಡುತ್ತ ಕುಳಿತ್ತಿರುವ ಪೂಜ್ಯರಿಗೆ ಆಶಾವಾದಿಯಾಗಿರಲು ಅವಕಾಶವಿಲ್ಲದಷ್ಟು ಆತಂಕ ಕಾಣುತ್ತಿದೆ.

ಸ್ವಾತಂತ್ರ್ಯ ಪ್ರಾಪ್ತವಾದ ಮೇಲೆ ಗಾಂಧೀಜಿಯವರ ಕಲ್ಪನೆಯ ಭಾರತ ರೂಪಗೊಳ್ಳಲಿಲ್ಲ. ಸ್ವಾತಂತ್ರ್ಯ ಸಿಕ್ಕುವವರೆಗೆ ಮಾತ್ರ ಗಾಂಧೀಜಿಯವರ ಮುಖಂಡತ್ವ ಆಗಿನ ನಾಯಕ ವರ್ಗಕ್ಕೆ ಪ್ರಸ್ತುತ ವೆನಿಸಿತು. ಏಕೆಂದರೆ ಮಹಾತ್ಮರು ಶ್ರೀ ಸಾಮಾನ್ಯರ ನಾಯಕರಾಗಿದ್ದರು. ಆದ್ದರಿಂದ ಅವರ ಬೆಂಬಲ ಅನಿವಾರ್ಯವಾಗಿತ್ತು. ಸ್ವಾತಂತ್ರ್ಯಕ್ಕೆ ಸೇರಿದ ಮೇಲೆ ಗಾಂಧೀಜಿಯವರು ನದಿಯನ್ನು ದಾಟಿಸಿದ ಅಂಬಿಗರಾದರು ಎಂದರೆ ತಪ್ಪಾಗಲಾರದು. ಗಾಂಧೀಜಿಯ ಕಲ್ಪನೆಯ ಭಾರತ ರೂಪುಗೊಳ್ಳಲಿಲ್ಲ,

ಎಂದು ಹೇಳಬೇಕಾಗುತ್ತದೆ. ಕಾರಣವು ಸ್ಪಷ್ಟವಾಗಿದೆ. ಸ್ವಾತಂತ್ರ್ಯ ಸಂಪಾದನೆ ಆಗುವವರೆಗೆ ಗಾಂಧೀಜಿಯವರ ಬೆಂಬಲ, ವಿಶ್ವಾಸಗಳು ಬೇಕಾಗಿದ್ದವು, ಆದರೆ ಅಭಿವೃದ್ಧಿ ಕಾರ್ಯಕ್ರಮ ರೂಪಿಸುವಲ್ಲಿ ಅಲ್ಲ. ''ಗಾಂಧೀಜಿಯವರ ಆಶೋತ್ತರ ಇಲ್ಲಿ ಕಳಚಿ ಬಿದ್ದವು ಎನ್ನುವುದು ಕರೀಂಖಾನರ ನೋವಿನ ಮಾತಾಗಿದೆ. ಕಾಲಕಳೆದಂತೆ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಸರ್ವಸ್ವವನ್ನು ದೇಶಕ್ಕಾಗಿ ತ್ಯಾಗ ಮಾಡಿದ ಹುತಾತ್ಮರ ನೆನಪುಗಳೆಲ್ಲ ಮರೆಯಾಗಿ, ಅಧಿಕಾರಕ್ಕಾಗಿ ಮುಂದಾಳತ್ವ ವಹಿಸುವ ಸೋಗು ಹಾಕಿದ ಜನ ದೇಶವನ್ನು ಆಳುವ ಹುನ್ನಾರ ನಡೆಸಿ, ಸ್ವಾರ್ಥ ಪೂರೈಕೆಯ ಬೆನ್ನು ಹತ್ತಿದರು ಎಂಬುದು ಕರೀಂಖಾನರ ದುಃಖವಾಗಿದೆ.

**ಸೇವಾದಳ :**

ಮಾನ್ಯ ಶ್ರೀ ಕೆಂಗಲ್ ಹನುಮಂತಯ್ಯನವರು ಮುಖ್ಯಮಂತ್ರಿಗಳಾಗಿದ್ದಾಗ 'ಸೇವಾದಳ'ದ ಸಂಘಟನೆಗಾಗಿ ರಾಜ್ಯಾದ್ಯಂತ ಪ್ರವಾಸಮಾಡಲು ಕರೀಂಖಾನರನ್ನು ಆರಿಸಲಾಯಿತು. ಕರೀಂಖಾನರವರದು ದೊಡ್ಡ ಕುಟುಂಬ, ಕುಟುಂಬದವರಿಗೆ ಸಹಾಯ ಮಾಡಲು ಸ್ವಲ್ಪ ಹಣಕಾಸಿನ ಸಂಪಾದನೆಯು ಆಗಬಹುದೆಂದು ಕರೀಂಖಾನರು ಪ್ರವಾಸಕ್ಕೆ ಒಪ್ಪಿದರು. ತಿಂಗಳಿಗೆ ಪ್ರವಾಸ-ಊಟ- ತಿಂಡಿ-ವಸತಿ ಹೀಗೆ ಎಲ್ಲಾ ಭತ್ಯೆಗಳು ಸೇರಿ ೩೦೦ ರೂಪಾಯಿ ಕೊಡತಕ್ಕದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. ತೀರ್ಮಾನಿಸಿದ ಸಮಿತಿಯಲ್ಲಿ ಮಾನ್ಯ ಮಾಲೆಚೆನ್ನ ಬಸಪ್ಪ, ಡಾ. ಹರ್ಡಿಕರ, ಟಿ.ಸಿದ್ಧಲಿಂಗಯ್ಯ, ಹಾರ್ನಳ್ಳಿ ರಾಮಸ್ವಾಮಿಯವರಂಥ ಹಿರಿಯರೆಲ್ಲರೂ ಇದ್ದರೆಂಬುದು ಇಲ್ಲಿ ಗಮನಿಸಬೇಕಾದ ಅಂಶ. ವರ್ಷಪೂರ್ತಿ ಪ್ರವಾಸ ಮಾಡಿ, ವರ್ಷದ ಪ್ರವಾಸ ಭತ್ಯೆಯನ್ನು ನೀಡುವಂತೆ ಕೇಳಿದಾಗ, ಅಲ್ಲಿದ್ದ ನಾಯಕರು ಬಹುಶಃ ತಿಂಗಳಿಗೆ ೩೦೦ ಅಲ್ಲ ಅಂತ ಕಾಣುತ್ತೇ ೨೦೦ ರೂ. ಇರಬಹುದು ಎಂದರಂತೆ. ಅದಕ್ಕೆ ಖಾನರೂ ಆಗಲಿ ಅಷ್ಟೇ ಕೊಡಿ ಎಂದರಂತೆ. ಮತ್ತೊಬ್ಬರು ಅಲ್ಲ ಅಂತ ಕಾಣುತ್ತದೆ ೧೦೦ ಇರಬೇಕು ನೋಡಿ, ಆಯ್ತು ಅಷ್ಟೆ ಕೊಡಿ ಎಂದರಂತೆ. ಕಡೆಗೆ ಹಾಗೂ ಹೀಗೂ ಎಳೆದಾಡಿ, ಇಡೀ ವರ್ಷಕ್ಕೆ ಕೇವಲ ೩೦೦ ರೂ. ನೀಡಿ ಇಷ್ಟೇ ನಿಗದಿಯಾಗಿದ್ದ ಹಣ ಎಂದರಂತೆ, ಕರೀಂಖಾನರು ಅಂದೇ ಅಲ್ಲಿದ್ದ ಚೀಟಿಯಲ್ಲಿ ''ಇನ್ನೆಂದೂ ನಾನು ನಿಮ್ಮ ಕಛೇರಿಗೆ ಬರಲಾರೆ, ಇದೇ ನಾನಿಟ್ಟ ಆಣೆ ಪ್ರಮಾಣ'' ಎಂದು ಬರೆದು ಕಣ್ಣೀರು ಸುರಿಸುತ್ತಾ ವಾಪಸ ಬಂದರಂತೆ'' ಹೀಗೆ ಎಲ್ಲೆಲ್ಲೂ 'ಖಾನ್' ಸಾಹೇಬರಿಗೆ ಸಿಕ್ಕಿದ್ದು ನಿರಾಶೆ ಮಾತ್ರ.

ಎರಡನೆಯ ಚುನಾವಣೆಯಾದ ಮೇಲೆ ಕರೀಂಖಾನರು ಈ ಹೊಲಸು ರಾಜಕೀಯದಿಂದ ದೂರಸರಿದರು. ಸಾಮಾಜಿಕ ಸೇವೆಯೇ ಇವರ ಮೂಲ ಉದ್ದೇಶವಾಗಿತ್ತು. ಇವರಿಗೆ ರಾಜಕೀಯ ವ್ಯಕ್ತಿಯಾಗಿ ಮೆಚ್ಚುಗೆಯಾದವರಲ್ಲಿ ಗಾಂಧೀಜಿಯೊಬ್ಬರು. ನಿಸ್ವಾರ್ಥ ಬದುಕನ್ನು ಸಾರಿ ಹೇಳಿದ ಗಾಂಧೀಜಿಯ ರಾಜಕೀಯ-ಸ್ವಾತಂತ್ರ್ಯದ ನಂತರ ಸ್ವಾರ್ಥ ರಾಜಕೀಯವಾಗಿ, ಅಧಿಕಾರಕ್ಕಾಗಿ, ಹಣಕ್ಕಾಗಿ ಅಧಿಕಾರದ ಸೂತ್ರ ಹಿಡಿಯಲಾರಂಭಿಸಿದರು. ಇಂದಿನ ರಾಜಕೀಯದಲ್ಲಿ 'ದಿಢೀರ್ ರಾಜಕಾರಣಿ'ಗಳನ್ನೇ ಕಾಣುತ್ತಿದ್ದೇವೆ. ಇದು ರಾಷ್ಟ್ರಕ್ಕೆ ಒಳ್ಳೆಯದಲ್ಲ. ಇದಕ್ಕೆ ಆಯಾ ರಾಜಕೀಯ ಪಕ್ಷಗಳೇ ಕಾರಣ. ಪಕ್ಷದ ಕಾರ್ಯಕರ್ತರನ್ನು ಬೆಳೆಸುವ, ತಿದ್ದುವ ಕೆಲಸ ಪಕ್ಷದ್ದು, ಹಂತಹಂತವಾಗಿ ಸ್ಥಾನಗಳನ್ನು ನೀಡುತ್ತ ಬಂದಾಗ ದಿಢೀರ್ ರಾಜಕಾರಣಿಗಳು ಕಂಡುಬರುವುದಿಲ್ಲ.

''ನಿಜ ಪ್ರಜಾಪ್ರಭುತ್ವದಲ್ಲಿ ಅನುವಂಶೀಯತೆಯ ರಾಜಕೀಯವಿರಬಾರದು ಎಂಬ ಸಿದ್ಧಾಂತದ ಮೇಲೆ ತೋಟಿ, ತಳವಾರ, ಪಟೇಲ, ಶ್ಯಾನುಭೋಗರುಗಳನ್ನು ತೆಗೆದು ಹಾಕಲಾಯಿತು. ಹಾಗೆ ತೆಗೆದುಹಾಕುವ ನೀತಿ ಮಾಡಿದ ರಾಜಕಾರಣಿಗಳೇ, ಅದೇ ಪರಂಪರೆಗೆ ದಾರಿ

ಮಾಡಿಕೊಂಡಿದ್ದಾರೆ. ಗಂಡನನ್ನು ಕಳೆದುಕೊಂಡು ದುಃಖಿತಪ್ತಳಾದ ಹೆಂಡತಿಯನ್ನು ರಾಜಕೀಯಕ್ಕಿಳಿಸಿ, ಅನುಕಂಪ ಅಲೆಯನ್ನು ಎಬ್ಬಿಸುವ 'ಕೀಳು ರಾಜಕೀಯ'ವನ್ನು ಎಲ್ಲ ಪಕ್ಷಗಳೂ ಮಾಡುತ್ತಿವೆ. ಅಂದಾಗ ಮಾತಾಡಿ ಏನು ಪ್ರಯೋಜನ ?'' ಎಂದು ಕರೀಂಖಾನ್ ನುಡಿಯುವ ಮಾತು ರಾಜಕೀಯ ದುರಾಚಾರಕ್ಕೆ ಹಿಡಿದ ಕನ್ನಡಿಯಾಗಿದೆ. ಅರ್ಹತೆಯ ಮೇಲೆ, ವ್ಯಕ್ತಿಯ ಸಾಮರ್ಥ್ಯದ ಮೇಲೆ, ರಾಜಕೀಯ ವ್ಯಕ್ತಿಯಾಗಿ ದೇಶೋದ್ಧಾರ ಕೆಲಸದಲ್ಲಿ ನಿಸ್ವಾರ್ಥದಿಂದ ತೊಡಗಿಕೊಳ್ಳಬೇಕೆಂಬುದಾಗಿದೆ.

''ದೇಶದ ರಾಜಕೀಯದಲ್ಲಿ ನಿಷ್ಠ ರಾಜಕಾರಣಿಗಳು ಬಹಳ ಮಟ್ಟಿಗೆ ಇಲ್ಲದಂತಾಗುತ್ತಿರುವದರಿಂದ ಮೌಲ್ಯದ ರಾಜಕಾರಣ ಕಷ್ಟ. ಅದಕ್ಕಾಗಿ ವಿದ್ಯೆ ಬೇಕು, ಅವಿದ್ಯಾವಂತರಿಂದ ತುಂಬಿರೋ ಈ ದೇಶದಲ್ಲಿ ಒಳ್ಳೆಯದು ಬೇಕು. ಅಂದರೆ ಸರ್ವಾಧಿಕಾರಬೇಕು. ದುರಾಶಾಪೀಡಿತರನ್ನು ಬಡಿದು ಶಾಂತಿ ನೆಲೆಗೊಳಿಸೋದಕ್ಕೋಸ್ಕರ ಸರ್ವಾಧಿಕಾರ ಒಂದೇ ಇದಕ್ಕೆ ದಿವ್ಯ ಔಷಧಿ ಹೊರತೂ ಈ ಪ್ರಜಾಪ್ರಭುತ್ವ ರೀತಿಯಲ್ಲಿ ಈಗಿನ ಆಡಳಿತ ಕ್ರಮದಲ್ಲಿ ಏನೂ ಮಾಡೋದಕ್ಕಾಗಲ್ಲ'' ಎನ್ನುವ ಕರೀಂಖಾನರ ಮಾತಲ್ಲಿ ಸತ್ಯ ಅಡಗಿದೆ. ಇಂದು ಚುನಾವಣೆಗಳು ಕೋಟಿ, ಕೋಟಿ ವೆಚ್ಚದ ಮೇಲೆ ನಡೆಯುತ್ತಿವೆ. ಹೋರಾಟ, ಕೊಲೆ, ಸುಲಿಗೆ ನಡೆದರೆ ನೆಮ್ಮದಿ ಕಾಣಲಿಕ್ಕೆ ಸಾಧ್ಯವೇ ಇಲ್ಲ. ಈಗ ರಾಜಕೀಯ ಹಳ್ಳಿ ಹಳ್ಳಿಗೂ ವಿಸ್ತಾರ ಆಗಿದೆ. ಹಳ್ಳಿಗಳ ಜನಜೀವನ ಸಾಕಪ್ಪಾ ಅನ್ನಿಸುವ ಮಟ್ಟಿಗೆ ರಾಜಕಾರಣಿಗಳೂ ತಂದಿಟ್ಟುಬಿಟ್ಟಿದ್ದಾರೆ. ದೇಶವೇ ಹಾಳಾಗಲಿ, ಮೂರುಕಾಸಿಗೆ ಬೇಕಾದರೆ ಮಾರಿ ಬಿಡುತ್ತಾರೆ. ತಮ್ಮ ಜೇಬನ್ನು ತುಂಬಿಸಿಕೊಳ್ಳುತ್ತಾರೆ. ಎನ್ನುವ ನೋವು ಕರೀಂಖಾನರ ಮಾತಿನಿಂದ ವ್ಯಕ್ತವಾಗುತ್ತದೆ. ನಮ್ಮಲ್ಲಿ ನಿಸ್ವಾರ್ಥಭಾವಗಳು ವ್ಯಕ್ತಗೊಂಡರೆ ಒಗ್ಗಟ್ಟಾಗಿ ದೇಶದ ಒಳಿತಿಗಾಗಿ ಶ್ರಮಿಸಬಹುದು. ಜಪಾನ, ಜರ್ಮನಿಯಂತಹ ಧೂಳಾಗಿದ್ದ ರಾಷ್ಟ್ರಗಳು ಆ ಧೂಳಿನ ಮಧ್ಯದಲ್ಲಿ ಪುನಃ ಎದ್ದು ಜಗತ್ತಿಗೇ ಸಾಲಕೊಡೋ ಮಟ್ಟಕ್ಕೆ ಬಂದಿವೆ. ನಾವೆಲ್ಲ ಅದನ್ನು ನೋಡಿ ಕಲಿಯಬೇಕಾಗಿದೆ. ನಮ್ಮಲ್ಲಿಯ ಸಂಕುಚಿತ ಮನೋಭಾವಗಳು ಹೊರಟರೆ ''ನಿನ್ನ ನೋವು ನನ್ನ ನೋವು ತನ್ನಂತೆ ಪರರ ಬಗೆದೊಡ ಕೈಲಾಸ ಬಿನ್ನಾಣ ವಕ್ಕು'' ಅನ್ನುವ ಸರ್ವಜ್ಞನ ನುಡಿಯಂತೆ ಮತ್ತೊಬ್ಬರ ಸಂತೋಷದಲ್ಲಿ ನಮ್ಮ ಸಂತೋಷ ಕಾಣಬೇಕು. ಮತ್ತೊಬ್ಬರ ಸುಖದಲ್ಲಿ ನಾವು ಸುಖ ಕಾಣಬೇಕು. ಅಂಥ ವಿಶಾಲ ಮನೋಭಾವ ಬೆಳೆಸಿಕೊಳ್ಳಬೇಕು. ಇವುಗಳನ್ನು ಭಾವಿಪ್ರಜೆಗಳಾದ ಮಕ್ಕಳಲ್ಲಿಯೂ ಈ ಭಾವನೆ ಬಿತ್ತಬೇಕು. ಈ ರೀತಿ ನಾವು ಪ್ರಯತ್ನಿಸಿದರೆ, ಬುದ್ಧಿ ಜೀವಿಗಳೆನಿಸಿಕೊಂಡವರು ಈ ದೇಶದ ಪ್ರಗತಿಯ ಬಗ್ಗೆ ಕಾಳಜಿ ವಹಿಸಿದರೆ, ಆದರ್ಶ ರಾಷ್ಟ್ರವನ್ನು ಕಟ್ಟಬಹುದೆಂಬ ಧೋರಣೆ ಕರೀಂಖಾರನರದ್ದು.

''ಬ್ರಿಟಿಷರ ದಾಸ್ಯದ ಸಮಯದಲ್ಲಿ ಭಾರತೀಯರೆಲ್ಲರಿಗೆ ಸ್ವಾತಂತ್ರ್ಯವೇ ಏಕೈಕ ಗುರಿಯಾಗಿತ್ತು. ಸ್ವಾತಂತ್ರ್ಯಗಳಿಸಿದ ಬಳಿಕ ನಮ್ಮ ಏಳಿಗೆ ನಮ್ಮಿಂದ ಅಷ್ಟೇ ಆಗಬೇಕು ತಾನೇ ? ಹಾಗಾಗಲಿಲ್ಲ. ಜನತೆ ಸರಿಯಾದ ದಿಕ್ಕಿನಲ್ಲಿ ಯೋಚಿಸಿ, ಯಾವುದೇ ಆಮಿಷಗಳಿಗೆ ಬಲಿಯಾಗದಿದ್ದರೆ ಸ್ಥಿರ ಸರಕಾರ ಬರುವುದರಲ್ಲಿ ಸಂಶಯವಿಲ್ಲ'' ಎಂಬುದು ಕರೀಂಖಾನರ ನಿಲುವು. ''ಶ್ರೀಮಂತಿಕೆಯ ಕನಸೇ ಎಲ್ಲ ಹಗರಣಗಳಿಗೆ ಮೂಲ, ಅಧಿಕಾರ, ಹಣ ಇರುವಾಗ ವೈಭವದ ಜೀವನ, ಮುಂದೆಯೂ ಅದನ್ನೇ ಅನುಭವಿಸುವ ದುರಾಲೋಚನೆ ಮೂಡುತ್ತದೆ. ಇದರಿಂದ ಹಗರಣಗಳು ನಡೆಯುತ್ತವೆ. ಯುವ ಜನತೆ ಈ ನಿಟ್ಟಿನಲ್ಲಿ ಗಂಭೀರವಾಗಿ ಚಿಂತಿಸಬೇಕು. ಜನತೆ ಸರಿಯಾದ ದಿಕ್ಕಿನಲ್ಲಿ ಯೋಚಿಸಿ, ಮುನ್ನಡೆದರೆ ದೇಶ ಮತ್ತೆ ಎದ್ದು ನಿಲ್ಲಲು ಸಾಧ್ಯ'' ವೆಂದು ನುಡಿವರು. ಕರೀಂಖಾನರು ಮನನೊಂದು ಮಾತನಾಡುವ ವಿಷಯವೆಂದರೆ ರಾಜ್ಯದ ಮುಖ್ಯಮಂತ್ರಿಗಳಾದ ಕೆಂಗಲ್ ಹನುಮಂತಯ್ಯ ಇವರೆಲ್ಲ

ಒಂದೇ ಜೈಲಿನಲ್ಲಿ ಇದ್ದುಕೊಂಡ ಸಂದರ್ಭ, ಆದರೆ ಮುಂದೆ ಇವರೆಲ್ಲ ಮುಖ್ಯಮಂತ್ರಿಸ್ಥಾನವನ್ನು ಏರಿ ದರ್ಬಾರು ಮಾಡುವಾಗ ಕರೀಂಖಾನರನ್ನು ಯಾರು ಮಾತನಾಡಿಸಲೇ ಇಲ್ಲ. ಆದರೆ ಹನುಮಂತಯ್ಯನವರು ಮುಖ್ಯಮಂತ್ರಿಸ್ಥಾನ ಕಳೆದುಕೊಂಡ ಮೇಲೆ ಕರೀಂಖಾನರನ್ನು ನೆನೆದುಕೊಂಡು ಹೇಳಿ ಕಳಿಸಿದಾಗ ಇವರು ''ಅಧಿಕಾರ ಕಳೆದುಕೊಂಡಿರುವ ಅವರಿಗೇಕೆ ತೊಂದರೆ'' ಎಂದು ಅಲ್ಲಿಗೆ ಹೋಗಲು ಇಷ್ಟಪಡಲಿಲ್ಲ. ಇದರಿಂದ ಅಧಿಕಾರ ಶಾಶ್ವತವಲ್ಲ ಮಾನವತ್ವವೊಂದೇ ಶಾಶ್ವತವಾದದ್ದು ಎಂಬುದು ಕರೀಂಖಾನ್‌ರ ಸ್ಪಷ್ಟ ವಿಚಾರವಾಗಿತ್ತು. ಒಪ್ಪೊತ್ತಿನ ಊಟಕ್ಕೂ ಪೇಚಾಡುವ ಸ್ಥಿತಿ ಬಂದರೂ ಕೆಲವೇ ಮಂದಿ ಸ್ವಾರ್ಥಿಗಳಿಂದ ತಮ್ಮ ಮುಗ್ಧತೆಯ ದುರುಪಯೋಗ ಸತತವಾಗಿ ನಡೆದಾಗ, ಅದನ್ನು ಸಹಿಸಿಕೊಳ್ಳಲಾಗದ ತಮ್ಮ ಮೃದು ಹೃದಯ ಕನ್ನಡ ನೆಲವನ್ನೇ ತೊರೆದು ಹೋಗುವಂತೆ ಮಾಡಿದರೂ, ತಾವು ನಂಬಿಕೊಂಡಿದ್ದು ಆಶ್ರಯ ಪಡೆದಿದ್ದು ಕನ್ನಡಮ್ಮನಲ್ಲಿಯೇ, ''ಎಲ್ಲೇ ಇರು, ಹೇಗೇ ಇರು ಎಂದೆಂದಿಗೂ ನೀ ಕನ್ನಡಿಗನಾಗಿರು'' ಎಂಬ ಮಾತನ್ನು ಅಕ್ಷರಶಃ ಪಾಲಿಸಿದ ಕನ್ನಡ ಕುವರರು ಕರೀಂಖಾನ್. ಏಕೀಕರಣದ ನಂತರ ಕರ್ನಾಟಕದ ರಾಜಕೀಯದಿಂದ ಕರೀಂಖಾನ್ ದೂರಸರಿದರು. ರಾಜಕಾರಣಿಗಳಲ್ಲಿ ಬೇರುಬಿಟ್ಟಿರುವ ಸ್ವಾರ್ಥ ಲಾಲಸೆ, ಸ್ವಜನ ಪಕ್ಷಪಾತಗಳು ವಿಸ್ತಾರವಾಗಿ ಹರಡತೊಡಗಿದಾಗ, ಕರೀಂಖಾನರಂತಹ ದೇಶಪ್ರೇಮಿಗಳು ಮರೆಯಲ್ಲೇ ಹಣ್ಣಾಗಬೇಕಾಯಿತು. ಇಡೀ ಶತಮಾನವನ್ನುಂಡ ಕರೀಂಖಾನ್ ಈ ದೇಶದ ಬಗೆಗೆ ಏನು ಹೇಳುತ್ತಾರೆ ಎಂಬುದು ಬಹಳ ಮುಖ್ಯ. ಅಂಥ ಪ್ರಶ್ನೆಗಳನ್ನು ಹಾಕಿದಾಗ ನಗೆ ಮುಖದ ಮೇಲಿನ ಸುಕ್ಕುಗಳು ಬಿಗಿಯಾಗುತ್ತವೆ. ಕಾಂತಿಯುಕ್ತ ಕಣ್ಣುಗಳು ಆಕಾಶವನ್ನು ದಿಟ್ಟಿಸುತ್ತವೆ. ಮೌನ ಆವರಿಸುತ್ತದೆ. ಮೌನ ಮುರಿದು ಒಂದೆರಡು ಮಾತನ್ನು ಹೇಳುತ್ತಾರೆ. ''ಯಾರ ಸುಖಕ್ಕಾಗಿ ನಾವು ಬ್ರಿಟಿಷರನ್ನು ಓಡಿಸಿದೆವೋ ? ಈ ಜನರನ್ನು ಅರ್ಥ ಮಾಡಿಕೊಳ್ಳದ ಈ ಸ್ವಾರ್ಥಿಗಳು ಪಾಪಿಗಳು ಮರೆಯಲಿ ಎಂದೆ ? ನಾವು ತಪ್ಪು ಮಾಡಿ ಬಿಟ್ಟೆವು. ಕಡೆಗೆ ಆ ಬ್ರಿಟೀಷರ ಕಾಲದಲ್ಲಿ ಇದ್ದ ಶಿಸ್ತಾದರೂ ಈ ದೇಶಕ್ಕೆ ಇಲ್ಲದೇ ಹೋಯಿತಲ್ಲಾ'' ಎಂದು ದುಗುಡದಿಂದ ಹೇಳಿ ನಿಟ್ಟುಸಿರುಗೈಯ್ಯುತ್ತಾರೆ.

ಶಾಂತ ಸ್ವಾಭಿಮಾನಿಯಾದ ಕರೀಂಖಾನರಿಗೆ ಸ್ವಾತಂತ್ರ್ಯ ಹೋರಾಟದ ಫಲವಾಗಿ ಚಿಕ್ಕ ಸೂರು ಸಿಗಲಿಲ್ಲ. ವಿಪರ್ಯಾಸವೆಂದರೆ ಕರೀಂಖಾನರು ಶಿಫಾರಸು ಮಾಡಿದ ಯೋಧರಿಗೆ ಆ ವೇತನ ದಕ್ಕಿದ್ದು ವಿಶೇಷ ಸಂಗತಿಯಾಯಿತು. ಕೊನೆಗೆ ಇಲ್ಲಿಯೂ ರಾಜಕೀಯ ನಡೆದು ಕರೀಂಖಾನರು ಮಂಜೂರು ಆದ ಹಣವನ್ನು ತಿರಸ್ಕರಿಸಿ ತಾನು ದೇಶ ಸೇವೆ ಮಾಡಿದ್ದೇ ಹೊರತೂ, ಹಣದಾಸೆಗಲ್ಲವೆಂದೂ ಹೇಳಿದರು. ಇಲ್ಲಿ ಜೈಲಿಗೆ ಹೋಗದೆ ಸ್ವಾತಂತ್ರ್ಯ ಹೋರಾಟಗಾರರೆಂದು ಹಣ ಪಡೆಯುವವರ ಎದುರಿಗೆ ಇವರ ವ್ಯಕ್ತಿತ್ವ ದೊಡ್ಡದೆನಿಸುತ್ತದೆ. ಹಿರಿಯ ಸ್ವಾತಂತ್ರ್ಯ ಯೋಧರಾಗಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರೀಯವಾಗಿ ತೊಡಗಿಕೊಂಡ ಇವರಿಗೆ, ಸ್ವಾತಂತ್ರ್ಯ ನಂತರ ಭಾರತದ ಸ್ಥಿತಿಗತಿಯ ಬಗ್ಗೆ ಸಂತಾಪವಿದೆ. ಅದಕ್ಕಾಗಿಯೇ ಸ್ವಾತಂತ್ರ್ಯ ಯೋಧರ ಪಿಂಚಣಿಯನ್ನು ತಿರಸ್ಕರಿಸಿದರು.

ರಾಜಕೀಯ ರಾಷ್ಟ್ರನಿರ್ಮಾಣದ ಮಾನದಂಡ. ರಾಜಕಾರಣಿ ಪರಿಶುದ್ಧನಾಗಿದ್ದರೆ, ರಾಷ್ಟ್ರ ಬೆಳೆದೀತು, ಉಳಿದೀತು. ಪರಿಶುದ್ಧ ರಾಜಕಾರಣಿಗಳನ್ನು ಬೆಳೆಸಬೇಕೆಂದು ಕರೀಂಖಾನರು ಪ್ರಯತ್ನಪಟ್ಟರು. ಹಣಕ್ಕೆ ಮಾರುಹೋದ ರಾಜಕಾರಣಿಗಳು ದೇಶವನ್ನು ಅರಾಜಕತೆಯೆಡೆಗೆ ಕೊಂಡೊಯ್ದರು. ರಾಜಕೀಯದಲ್ಲಿ ಮುಂದೆ ಜಾತೀಯತೆ ಮತ್ತು ಕೋಮುವಾದತ್ವ ರಾಜಕೀಯದಲ್ಲಿ ಸೇರಿಕೊಂಡಿದ್ದರಿಂದ ಕರೀಂಖಾನರು ರಾಜಕೀಯವನ್ನು ತೊರೆಯುವ ಸಂಕಲ್ಪ

ಮಾಡಿದರು. ೧೯೫೨ರಲ್ಲಿ ಇವರು ಹಳ್ಳಿ ಹಳ್ಳಿಗಳಿಗೆ ಭೇಟ್ಟಿನೀಡಿ ಸಾರ್ವತ್ರಿಕ ಚುನಾವಣೆಯ ಪ್ರಚಾರ ಕಾರ್ಯದಲ್ಲಿ ಮಗ್ನರಾದರು. ಮುಂದೆ ಎರಡು ವರ್ಷಗಳ ನಂತರ ಕಾಂಗ್ರೆಸ್ಸನ್ನು ತೊರೆದರು.

ಕರೀಂಖಾನರ ಜೊತೆ ನಿಕಟ ಸಂಪರ್ಕ ವಿಟ್ಟುಕೊಂಡ ಮೊದಲ ಮುಖ್ಯಮಂತ್ರಿ ಕೆ.ಸಿ. ರೆಡ್ಡಿ ಇವರು ಚಿಕ್ಕಮಗಳೂರಿಂದ ಆರಿಸಿ ಬಂದವರಾಗಿದ್ದರು. ಅನಂತರ, ಹನುಮಂತಯ್ಯ, ಕಡಿದಾಳ ಮಂಜಪ್ಪ, ಭೀಮಪ್ಪ ನಾಯಕ, ಟಿ, ಸಿದ್ಧಲಿಂಗಯ್ಯ ಇವರೆಲ್ಲ ಕರೀಂಖಾನರ ನಿಕಟವರ್ತಿಗಳಾಗಿ ಬಾಳಿದವರು. ಕರೀಂಖಾನರು ಹೇಳುವಂತೆ ''ಕೊಂಡಾಡೋಜನ ಹುಟ್ಟಿಕೊಂಡ್ರು, ಕೊಂಡಾಡಿ, ಕೊಂಡಾಡಿ ಚುನಾವಣೆಯಲ್ಲಿ ಕೆಲಸ ಮಾಡಿದವರ ಕೈ ಬಿಟ್ಟರು'' ಎನ್ನುವ ಇವರ ಮಾತಲ್ಲಿ ನಿರಾಶೆಯಿದೆ. ಲಾಭ ಬಂದಾಕ್ಷಣ ಕರೀಂಖಾನರನ್ನು ನೆನಪಿಸುವವರು ಇರಲೇ ಇಲ್ಲ.

ಕರೀಂಖಾನರ ಸಮಗ್ರ ಜೀವನ ಅಂದರೆ ಪರಿಪಕ್ವಗೊಂಡದ್ದು ಅವರು ರಾಜಕೀಯವಾಗಿ ಬಹಳೇ ಮೋಸ ಹೋಗಿದ್ದಾರೆ. ಅವುಗಳನ್ನು ಅವರು ನಿರ್ಲಿಪ್ತ ದೃಷ್ಟಿಯಿಂದ ಕಂಡರು. ಅವರು ಯಾವುದೇ ಕಹಿ ನೆನಪು ಬೆಳೆಸಿಕೊಳ್ಳಲಿಲ್ಲ. ಇವರಿಗೆ ಅನ್ಯಾಯ ಬೇಕಾದಷ್ಟು ಆಗಿದೆ. ಆದರೂ ಯಾವುದನ್ನೂ ನೊಂದುಕೊಂಡು ಹೇಳುವುದಿಲ್ಲ. ಮನಸ್ಸಲ್ಲಿ ನೋವು ಅನುಭವಿಸಿದರೆ ಆ ನೋವು ಮಾತಲ್ಲೂ ಗೊತ್ತಾಗುತ್ತದೆ. ಆದರೆ ಇವರು ಯಾವುದೇ ನೋವು ಕೂಡ ವ್ಯಕ್ತಪಡಿಸುವದಿಲ್ಲ. ಇವರ ವಿಶಾಲ ಮನೋಭಾವಕ್ಕೆ ಸರಿಸಾಟಿ ಯಾವುದೂ ಇಲ್ಲವೆಂಬುದು ವೇದ್ಯವಾಗುತ್ತದೆ. ಮುಗ್ಧರೂ, ಪ್ರಾಮಾಣಿಕರೂ ಸೇವಾವೃತ್ತಿಗಳೂ ರಾಜಕೀಯ ಧುರೀಣರಿಗೆ ಅಸ್ಪೃಶ್ಯರಾಗಿಯೇ ಕಾಣುತ್ತಾರೆ. ಡಾ||ಕರೀಂಖಾನರೂ ಇದಕ್ಕೆ ಹೊರತಾಗಿರಲಿಲ್ಲ. ''ಬಾಳೆಲೆಯ ಹಾಸುಂಡು ಬೀಸಿ ಒಗೆದಾಂಗ'' ಎಂಬಂತೆ ಚುನಾವಣೆ ಬಂದಾಗಲೆಲ್ಲ ಅವರನ್ನು ಅವರ ಭೋರ್ಗರೆವ ಭಾಷಣವನ್ನು, ವಿಚಾರಧಾರೆಯನ್ನು ಬಾಳೆಲೆಯಂತೆ ಬಳಸಿ ಒಗೆದದ್ದು ಕಣ್ಣಮುಂದಿನ ಸತ್ಯ. ಕರೀಂಖಾನರು ಸಹಜ ಜೀವನವನ್ನು ಇಷ್ಟಪಟ್ಟರೇ ಹೊರತೂ ವೈಭವದ ಜೀವನಕ್ಕೆ ಎಂದೂ ಕೈ ಚಾಚಲಿಲ್ಲ, ಹಂಬಲಿಸಲಿಲ್ಲವೆಂಬುದು ಗಮನಾರ್ಹ ಸಂಗತಿ.

ಕರೀಂಖಾನರ ಮನೋವೇದನೆಯನ್ನು ಅವರ ಒಂದು ಗೀತೆಯಲ್ಲಿ ಕಾಣಬಹುದು. ''ಬರಲಿರುವ ನಾಳೆ ತರಲಿರುವುದೇನೋ ಬಲ್ಲವರು ಯಾರೂ ಇಲ್ಲ! ಬದುಕೆಲ್ಲ ಏರು ಪೇರಾಯಿತಲ್ಲಾ ಆ ಮರ್ಮ ವಿಧಿಯೇ ಬಲ್ಲ!! ಎಂಬ ಗೀತೆಯಲ್ಲಿ ಭವಿಷ್ಯದ ಬದುಕು ಅಷ್ಟೊಂದು ಸುಲಭವಾಗಿ ಸರಳವಾಗಿ ನಡೆಯಲಾರದು ಎಂಬ ತಾತ್ವಿಕತೆಯನ್ನು ಸೂಕ್ಷ್ಮವಾಗಿ ತಿಳಿಸಿದಂತಿದೆ.

ಸ್ವಾತಂತ್ರ್ಯ ಹೋರಾಟದ ಫಲವಾಗಿ ಕೇಂದ್ರ ರಾಜ್ಯ ಸರಕಾರದಿಂದ ಬಂದ ಉಡುಗೊರೆ ಏನೂ ಇಲ್ಲ. ಮಹಾಸ್ವಾಭಿಮಾನಿಯಾದ ಕರೀಂಖಾನರು ರಾಷ್ಟ್ರಾಧ್ಯಕ್ಷರಿಂದ ಆಹ್ವಾನ ಬಂದರೂ ಅವರ ಭೇಟ್ಟಿಗೆ ಹೋಗಲಿಲ್ಲ. ಯಾರ ಭಟ್ಟಂಗಿಯಾಗಲು ಇಚ್ಛಿಸದ ಕರೀಂಖಾನ, ಮೈಸೂರ ಮಹಾರಾಜರ ಅರಮನೆಯಲ್ಲಿ ವಿಶೇಷ ಅತಿಥಿಯಾಗಿರಬೇಕೆಂದು ಮಹಾರಾಜರಿಂದಲೇ ಬಂದ ಆಹ್ವಾನವನ್ನು ಅಂಗೀಕರಿಸಲಿಲ್ಲ. ಸ್ವಾತಂತ್ರ್ಯ ನಂತರದ ಅಧಿಕಾರಕ್ಕಾಗಿ ಆಸೆ ಪಡಲಿಲ್ಲ. ಬಹುಶಃ ಅಧಿಕಾರದ ಆಸೆ ಪಟ್ಟಿದ್ದರೆ 'ಆತ್ಮಶ್ರೀ' ಮಾಯವಾದ ರಾಜಕಾರಣದಲ್ಲಿ ಬಹುದೊಡ್ಡ ನಕ್ಷತ್ರವಾಗಿ ಮಿಂಚುತ್ತಿದ್ದರೇನೋ?

**ಕರ್ನಾಟಕ ಏಕೀಕರಣ :**

ಭಾಷಿಕ ಪ್ರಕ್ರಿಯೆಗಳು ಬೀರುವ ಪರಿಣಾಮಗಳು ಬಹಳ ಗಮನಾರ್ಹವಾದವು. ಮರಾಠಿ. ಬಂಗಾಳಿ, ಗುಜರಾತಿ, ತಮಿಳು, ತೆಲುಗು, ಉರ್ದು, ಮಲೆಯಾಳ, ಇಂಗ್ಲೀಷ ಭಾಷೆಗಳು ಒಂದಲ್ಲ

ಒಂದು ಭೌಗೋಳಿಕ ಪರಿಸರದಲ್ಲಿ ಪ್ರಧಾನ ಪಾತ್ರವಹಿಸುತ್ತಿದ್ದವು. ಇದರಿಂದ ಕನ್ನಡಿಗರಿಗೆ ತಮ್ಮ ಭಾಷೆ ಬಿಟ್ಟು ಬೇರೆ ಭಾಷೆಯೊಂದಿಗೆ ವ್ಯವಹರಿಸುವುದು ಸಹನೀಯವಾದ ಸಂಗತಿಯಾಗಿರಲಿಲ್ಲ. ಗ್ರಂಥಸ್ಥ ಕನ್ನಡ ಭಾಷೆಯು ಭಿನ್ನತೆಯಿಂದ ಕೂಡಿತ್ತು. ಇದರಿಂದ ರಾಜಕೀಯವಾಗಿ ಕನ್ನಡದಲ್ಲಿ ವ್ಯವಹರಿಸುವುದು ಕಷ್ಟವಾಯಿತು. ಇಂಥ ಹತ್ತು ಹಲವು ಸಮಸ್ಯೆಗಳಿಂದ ಕನ್ನಡಿಗರಿಗೆ ಸಮಸ್ಯೆ ಉಂಟಾಯಿತು. ಈ ತುಡಿತ ಒತ್ತಡಗಳೇ ಏಕೀಕರಣ ಚಿಂತನೆಯ ಹಂಬಲ ಹಾಗೂ ಚಾಲನೆಗೆ ಕಾರಣವಾಯಿತು. ''ಕೋರ್ಟು- ಕಛೇರಿ, ವ್ಯಾಪಾರ-ವಾಣಿಜ್ಯ, ಉನ್ನತ ಶಿಕ್ಷಣ, ಉದ್ಯೋಗ, ಸರಕಾರದೊಂದಿಗಿನ ವ್ಯವಹಾರ ಇತ್ಯಾದಿ ಆಶಯಗಳಿಗೆ ಬಹಳ ದೂರವನ್ನು ಕ್ರಮಿಸಬೇಕಾಗಿದ್ದ ಸ್ಥಿತಿ ಅಂದಿನ ಕನ್ನಡಿಗರಿಗಿತ್ತು. ವಿಭಿನ್ನ ಆಡಳಿತ ಘಟಕಗಳ ಕೇಂದ್ರ ಸ್ಥಳಗಳು ಮದ್ರಾಸ್, ಹೈದ್ರಾಬಾದ್, ಮುಂಬೈ ನಗರಗಳಲ್ಲಿ ಅಡಕವಾಗಿದ್ದವು. ರೈತರು, ವ್ಯಾಪಾರಿಗಳು ಇಂಥ ಕನ್ನಡವಿಲ್ಲದ ನಗರಗಳಲ್ಲಿ ವ್ಯವಹರಿಸಲು ಅಸಮರ್ಥರಾಗಿ ನಷ್ಟವನ್ನು ಅನುಭವಿಸುತ್ತಿದ್ದುದ್ದೇ ಹೆಚ್ಚು. ಹೀಗಾಗಿ ವಿಕೇಂದ್ರಿಕರಣದ ಮಾದರಿಯ ಆಡಳಿತವನ್ನು ಬಯಸುವುದು ಸಹಜವಾಗಿತ್ತು. ಅದು ಸಾಧ್ಯವಾಗುವುದು ಏಕೀಕರಣದಿಂದಲೇ ಎಂಬ ಅರಿವು ಜಾಗೃತವಾಯಿತು. ಆ ಮೂಲಕ ಚಟುವಟಿಕೆಗಳು, ಚಳುವಳಿಗಳು ಆರಂಭವಾದವು.''

ಭಾರತ ಸ್ವಾತಂತ್ರ್ಯ, ಕರ್ನಾಟಕ ಏಕೀಕರಣ ಇವು ಕಳೆದ ಶತಮಾನದ ಕನ್ನಡಿಗರ ಜೀವನದಲ್ಲಿ ಸಂಭವಿಸಿದ ಎರಡು ಮಹತ್ವದ ಸಂದರ್ಭಗಳು. ೧೯೫೬ಕ್ಕೆ ಮೊದಲು ಭಾರತ ಭೂಪಟದಲ್ಲಿ 'ಕರ್ನಾಟಕ' ಹೆಸರಿನ ರಾಜ್ಯವೇ ಇರಲಿಲ್ಲ. ಮಾಯವಾಗಿದ್ದ ಅದು ಮೂಡಿ ಬರಲು ನಡೆಸಿದ ಹೋರಾಟ, ಅದರ ಹಿಂದಿರುವ ಸೋಲು ಗೆಲುವುಗಳ ಕಥೆ, ವ್ಯಥೆಯ ಸಂದರ್ಭ ವೈಶಿಷ್ಟ್ಯಪೂರ್ಣವಾದದ್ದು. ಅಖಂಡ ಕರ್ನಾಟಕ ಅದು ಖಂಡವಾಗುತ್ತ ಬಂದು, ಮತ್ತೆ ಅಖಂಡವಾದಾಗಿನಿಂದ ಹೀಗೆ ಮೂರು ಆಯಾಮಗಳ ವಿಷಯದ ಹಿಂದೆ ಬಹಳೇ ಶ್ರಮದಾಯಕ ಕೆಲಸಗಳಿವೆ. ರಾಜ್ಯವೆನ್ನುವುದು ಅನೇಕ ಜಾತಿ, ಸಂಸ್ಕೃತಿ, ಭೌತಿಕ ಸಂಸ್ಕೃತಿಗಳ ಮಹಾಸಂಗಮ. ಹೀಗಾಗಿ ಕರ್ನಾಟಕ ರಾಜ್ಯದ ಏಕೀಕರಣದ ಬಗೆಗೆ ಹೇಳುವಾಗ ಅದರ ಪ್ರಾಕೃತಿಕ ಸ್ವರೂಪ ಸಂಪತ್ತು, ರಾಜಕೀಯ ವಿಭಾಗಗಳ ವಿಸ್ತಾರ-ಸಂಕೋಚ, ಸಾಂಸ್ಕೃತಿಕ ಸಾಧನೆ-ಸೋಲುಗಳೆಲ್ಲ ವಿವೇಚನೆಗೆ ಒಳಪಡಬೇಕಾಗುತ್ತದೆ.

''ಏಕೀಕರಣದ ಪ್ರಶ್ನೆ ಕೇವಲ ರಾಜಕೀಯವಾಗಿರಲಿಲ್ಲ, ಸಾಂಸ್ಕೃತಿಕವಾಗಿಯೂ ಇತ್ತು. ಆದ್ದರಿಂದಲೇ ಕುವೆಂಪು ಅಂಥ ಕವಿಗಳು ಏಕೀಕರಣವನ್ನು ಬಯಸಿ 'ಜೈ ಭಾರತ ಜನನಿಯ ತನುಜಾತೆ' ಎಂದು ಹಾಡಿದರು; ಅ.ನ.ಕೃಷ್ಣರಾಯರಂಥವರು ಲೇಖನ ಬರೆದರು, ಆಲೂರು ವೆಂಕಟರಾವ್ ಅವರಂಥ ಆಧ್ಯಾತ್ಮ ಜೀವಿಗಳು ಪ್ರಾರ್ಥಿಸಿದರು; ಮುದವೀಡು ಕೃಷ್ಣರಾಯರಂಥ ಧುರೀಣರು ಘರ್ಜಿಸಿದರು,'' ಕರೀಂಖಾನರಂಥವರು ಕರ್ನಾಟಕದ ಏಕೀಖರಣಕ್ಕಾಗಿ ಹಂಬಲಿಸಿದರು, ಇವರೆಲ್ಲರ ಆಶಯಗಳು ಕನ್ನಡಿಗರ ಕನಸನ್ನು ಈಡೇರಿಸಿದವು.

೧೯೨೪ರಲ್ಲೇ ಬೆಂಗಳೂರಿನಲ್ಲಿ ಅಸ್ತಿತ್ವಕ್ಕೆ ಬಂದಿದ್ದ ಕರ್ನಾಟಕ ಏಕೀಕರಣ ಸಂಘದ ಅಧ್ಯಕ್ಷರಾಗಿದ್ದವರು ಬೆನಗಲ್ ರಾಮರಾಯರು. ಅದರ ಕಾರ್ಯದರ್ಶಿಗಳಾಗಿದ್ದ ಬಿ.ಶಿವಮೂರ್ತಿಶಾಸ್ತ್ರಿಗಳು ಅನೇಕ ಲೇಖನಗಳ ಮೂಲಕ ಮೈಸೂರು ಅರಸರನ್ನು ಮಹಾರಾಜರಾದಿಯಾಗಿ ಮೈಸೂರು ಸಂಸ್ಥಾನ ಸಹಿತ ಕರ್ನಾಟಕದ ಏಕೀಕರಣಕ್ಕೆ ವಾದಿಸಿದರು. ಜನರಿಗೆ ತಿಳುವಳಿಕೆ ನೀಡಿದರು. ಅದಕ್ಕಿಂತ ಹೆಚ್ಚಾಗಿ, ಕರ್ನಾಟಕದ ಮೂಲೆ ಮೂಲೆಯನ್ನು ತಮ್ಮ

ಹರಿಕಥೆಗಳ ಮೂಲಕ ತಲುಪಿದ ಬಿ.ಶಿವಮೂರ್ತಿ ಶಾಸ್ತ್ರಿಗಳು, ಜನಪದ ಸಾಹಿತ್ಯದ ಮೂಲಕ ಜನಜಾಗೃತಗೊಳಿಸಿದ ಎಸ್.ಕೆ. ಕರೀಂಖಾನರಂಥವರು ತಮ್ಮ ವಾಗ್ಝರಿಯಿಂದ ಕರ್ನಾಟಕ ಏಕೀಕರಣದ ಪರವಾಗಿ ಜನತೆಯನ್ನು ಸಿದ್ಧಗೊಳಿಸಿದರು. ಭಾರತ ಸ್ವಾತಂತ್ರ್ಯ ಚಳುವಳಿ ಮತ್ತು ಕರ್ನಾಟಕ ಏಕೀಕರಣ ಚಳುವಳಿಗಳು ಜಾತ್ಯಾತೀತ ಮನೋಭಾವನೆಯಿಂದಲೇ ಬಹಳ ಮುಖ್ಯವಾದವು.

೩೦-೧೧-೧೯೪೭ರ 'ಹರಿಜನ' ಪತ್ರಿಕೆಯಲ್ಲಿ ಮಹಾತ್ಮಾ ಗಾಂಧೀಜಿಯವರು ಭಾಷಾನುಗುಣ ಪ್ರಾಂತ ರಚನೆಗೆ ಇನ್ನು ತಡಮಾಡಬಾರದೆಂದು ಕರೆನೀಡಿದರು. ಆದ್ದರಿಂದ ಕರ್ನಾಟಕ ಏಕೀಕರಣ ಚಳುವಳಿಗೆ ಮತ್ತಷ್ಟು ಬಲ ದೊರೆಯಿತು. ಒಂದು ಕಡೆ ಏಕೈಕ ಪ್ರಭುತ್ವದ ಮಹಾಕರ್ನಾಟಕ ರಾಷ್ಟ್ರ ಸ್ಥಾಪನೆಗೆ ಕನ್ನಡಿಗರ ಅಭಿಮಾನ ಶೂನ್ಯತೆಯೇ ಕಾರಣ ಎಂಬ ಅಭಿಪ್ರಾಯಗಳೂ ಪ್ರಕಟವಾದವು. ೧೩-೦೫-೧೯೪೮ರಂದು 'ವಿಶಾಲ ಕರ್ನಾಟಕ' ಪತ್ರಿಕೆಯು ಪ್ರಕಟಿಸಿದ ಕರ್ನಾಟಕ ಏಕೀಕರಣದ ವಿಳಂಬಕ್ಕೂ ಪರಪ್ರಭುತ್ವವನ್ನು ನಾವು ದೂರಿಕೊಂಡಿದ್ದೆವು. ಆದರೆ ಈಗ ಪರರ ಆವಾಂತರಕ್ಕಿಂತ ನಮ್ಮ ನಮ್ಮೊಳಗಿನ ಅಭಿಪ್ರಾಯಾಂತರಗಳೇ ಏಕೀಕರಣದ ಹಾದಿಯಲ್ಲಿರುವ ನಿಜವಾದ ಬಂಡೆಗಲ್ಲು ಎಂದು ನಮಗೆ ಅನಿಸಲಿಕ್ಕೆ ಬೇಕು, ನಾವು ಮೈಸೂರಿನವರು, ನಾವು ಉತ್ತರ ಕರ್ನಾಟಕದವರು, ನಾವು ಮಂಗಳೂರಿನವರು, ಎಂಬ ಭಾವ ನಮ್ಮಲ್ಲಿ ಹೆಚ್ಚಿದೆಯೇ ಹೊರತು ನಾವು ಕರ್ನಾಟಕದವರು ಎಂಬ ಭಾವವಿಲ್ಲ, ಎಲ್ಲಿಯವರೆಗೆ ನಮ್ಮ ಜನರಲ್ಲಿ ನಾವು ಕರ್ನಾಟಕದವರು ಎಂಬ ಭಾವದ ಅಭಾವವಿರುವುದೋ ಅಲ್ಲಿಯವರೆಗೆ ನಾವು ಕರ್ನಾಟಕವನ್ನು ಒಂದುಗೂಡಿಸಲಾರೆವು ಎಂಬ ಅಭಿಪ್ರಾಯದಬಗೆಗೆ 'ಕನ್ನಡ ನುಡಿ' ೧೮-೦೬-೧೯೪೮ ಸಂಚಿಕೆಯಲ್ಲಿ ತಿ.ತಾ. ಶರ್ಮರು ವಿಶ್ಲೇಷಣೆ ಮಾಡಿದ್ದಾರೆ' ಇಂಥ ಭೇದ ಭಾವಕ್ಕೆ ಎಲ್ಲರೂ ಕಾರಣರು ಎಂದು ಸ್ಪಷ್ಟಪಡಿಸಿದ್ದಾರೆ. ಒಗ್ಗಟ್ಟಿನ ಮನೋಭಾವನೆಗಳಿಲ್ಲದೆ ಹೋರಾಟ ಬಹುಪ್ರಯಾಸದ ಕೆಲಸವೆಂದು ತಿಳಿದಿದ್ದರೂ ಕೆಲವು ಕುಹಕಿಗಳ ಮೊಂಡು ತೀರ್ಮಾನದಿಂದ ಇಂಥ ಪರಸ್ಥಿತಿ ನಿರ್ಮಾಣವಾಗುವುದು ಸಹಜವೇ ಸರಿ. ಕರ್ನಾಟಕದ ಎಲ್ಲಾ ಭಾಗಗಳ ಜನತೆಯಲ್ಲಿ ಒಂದೇ ಅಭಿಪ್ರಾಯವನ್ನು ಮೂಡಿಸುವ ಮತ್ತು ಅವರ ಅಭಿಪ್ರಾಯಗಳನ್ನು ತಿಳಿಸುವ ಪ್ರಯತ್ನವಾಗಿ ಕರ್ನಾಟಕದ ಎಲ್ಲ ಭಾಗಗಳಲ್ಲಿ ಸಂಚರಿಸಿದರು. ಕೆ.ಬಿ. ಜಿನರಾಜ ಹೆಗಡೆ, ಕೆ.ಆರ್. ಕಾರಂತ, ಮಾಸ್ತಿ ವೆಂಕಟೇಶ ಅಯ್ಯಂಗಾರ, ಬಿ. ಶಿವಮೂರ್ತಿಶಾಸ್ತ್ರೀ, ಎಸ್.ಕೆ. ಕರೀಂಖಾನ್ ಅವರುಗಳು ೨೫-೦೫-೧೯೪೮ ರಿಂದ ೨೮-೦೫-೧೯೪೮ ಹೊಸೂರು ಡೆಂಕಣಿಕೋಟೆ, ಕೆಲಮಂಗಲ, ಕೃಷ್ಣಗಿರಿ, ಧರ್ಮಪುರಿ, ಗೋವೆ, ಚೆಟ್ಟಿಪಾಳ್ಯ, ಸತ್ಯಮಂಗಲ ಮತ್ತು ಕೊಳ್ಳೆಗಾಲ ಪ್ರದೇಶಗಳಲ್ಲಿಕರ್ನಾಟಕ ಏಕೀಕರಣ ಮಹಾಸಮಿತಿಯ ಪರವಾಗಿ ಸಂಚಾರ ಮಾಡಿ ಸಾರ್ವಜನಿಕ ಭಾಷಣಗಳ ಮೂಲಕ ಆ ಭಾಗಗಳ ಕನ್ನಡಿಗರಿಗೆ ಕರ್ನಾಟಕ ಏಕೀಕರಣದ ಅಗತ್ಯತೆಯನ್ನು ಮನಗಾಣಿಸಿದರು.

ಕರ್ನಾಟಕದ ಅಪ್ಪಟ ಕುವರ ಕರೀಂಖಾನರ ಪ್ರಕಾರ 'ಮೈಸೂರು ಹೆಸರಿಗೆ ಮಾತ್ರ ಕನ್ನಡ ರಾಜ್ಯ' ಏಕೆಂದರೆ ಜನತೆಯ ಶಿಕ್ಷಣದ ಭಾಷೆ ಕನ್ನಡವಾಗಿರಲಿಲ್ಲ, ಕನ್ನಡ ಬಾರದ ಮಂತ್ರಿಗಳು, ನ್ಯಾಯಾಧೀಶರು, ಅಧಿಕಾರಿಗಳು ಮೈಸೂರಿನಲ್ಲಿ ಹೆಚ್ಚು ಪ್ರಭಾವಶಾಲಿಗಳಾಗಿದ್ದರು. ಕರ್ನಾಟಕದ ಪ್ರಾಂತ ರಚನೆಗೆ ಮರಾಠೀ, ತೆಲಗು, ತಮಿಳು ಮತ್ತು ಗುಜರಾತಿ, ಜನರ ಒಲವು ಇರುವುದಿಲ್ಲವೆನ್ನುವುದು ಎಲ್ಲರಿಗೂ ತಿಳಿದಿತ್ತು. ಅಂತೆಯೇ ಹೊಟ್ಟೆಪಾಡಿಗಾಗಿ ಕರ್ನಾಟಕಕ್ಕೆ ಬಂದು

ನೆಲೆಸಿರುವ ಅನ್ಯಭಾಷಿಕರು ಕರ್ನಾಟಕ ಪ್ರಾಂತ ರಚನೆಯನ್ನು ವಿರೋಧಿಸುವುದು ನಿರೀಕ್ಷಿತವಾಗಿತ್ತು. ಅದನ್ನೆಲ್ಲ ಗಮನಿಸಿ ಕರೀಂಖಾನರು ಒಂದು ತಾತ್ಪೂರ್ತಿಕ ನಿಯೋಜನೆಯನ್ನು ಸೂಚಿಸಿದ್ದರು.

ಮೈಸೂರು ಕಾಂಗ್ರೆಸ ಮತ್ತು ಕರ್ನಾಟಕ ಏಕೀಕರಣ ಸಂಘದ ಅಧ್ಯಕ್ಷರಾದ ಸಿದ್ಧಲಿಂಗಯ್ಯನವರು ಮೈಸೂರು ಸಂಸ್ಥಾನವನ್ನು ಒಳಗೊಂಡ ಕರ್ನಾಟಕ ಪ್ರಾಂತರಚನೆಗೆ ಬೆಂಬಲಿಸಿದರು. ಹನುಮಂತಯ್ಯ, ನಿಜಲಿಂಗಪ್ಪ, ಶಿವಮೂರ್ತಿಶಾಸ್ತ್ರೀಯವರೊಡನೆ ಕರೀಂಖಾನರು ಕರ್ನಾಟಕ ಏಕೀಕರಣದ ಸಂದೇಶ ಹೊತ್ತು ಬೆಂಗಳೂರಿನಿಂದ ಹುಬ್ಬಳ್ಳಿಯವರೆಗೆ ಪಾದಯಾತ್ರೆ ಮಾಡಿರುವುದು ಮನನೀಯವಾದದ್ದು.

ಭಾಷಾವಾರು ಪ್ರಾಂತ್ಯ, ಕರ್ನಾಟಕದ ಏಕೀಕರಣದ ಕೂಗು ಎಲ್ಲೆಲ್ಲೂ ಕೇಳಿ ಬರುತ್ತಿತ್ತು. ೧೯೪೭ರ ನಂತರ ಏಕೀಕರಣ ಚಳುವಳಿ ಜೋರಾಯಿತು. ಬ್ರಿಟಿಷರಿಗೂ, ಭಾರತೀಯರಾದ ನಮಗೂ ಪ್ರಾಂತ್ಯಗಳ ರಚನೆಯ ವಿಚಾರದಲ್ಲಿ ಬಹಳ ವ್ಯತ್ಯಾಸವಿತ್ತು. ಆಗ ನಾಡಿನ ಮೂಲೆ ಮೂಲೆಗಳಿಗೂ ಸಂಚರಿಸಬೇಕಾದ ಸಮಯದಲ್ಲಿ ಕರೀಂಖಾನರಿಗೆ ಖರ್ಚಿಗಾಗಿ ಹಣವಿರಲಿಲ್ಲ. ಖರ್ಚಿಗಾಗಿ ತಾವು ಸಂಗ್ರಹಿಸಿದ ಕನ್ನಡ ಜನಪದ ಗೀತೆಗಳನ್ನು ಅಚ್ಚು ಹಾಕಿಸಿ ಮಾರಿದ್ದು ಇದೆ. ಜನಪದ ಹಾಡುಗಳು ಸಾಮಾನ್ಯ ಜನರ ಸುಖ-ದುಃಖಗಳನ್ನು ಪ್ರತಿಬಿಂಬಿಸುತ್ತಿದ್ದವು.

> ತಾಯಿ ಇಲ್ಲದ ಮೇಲೆ ಇರಲಾರದು ಜನ್ಮ
> ಹೋಗ್ಬೇಕು ಹೊಳೆಯ ಕರೆಗಾಗಿ
> ತಾಯವ್ವ ಬಾಳ್ಬೇಕು ಗಂಗೆಯ ಹೆಸರೇಳಿ''

ಇದನ್ನು ಕರೀಂಖಾನರು ಹಾಡಿದಾಗ ಸಭೆಯ ಅನೇಕರು ಕಣ್ಣೀರು ಹಾಕಿದ್ದುಂಟು. ಇದರಿಂದ ನಾಡಿನ ಅಭಿಮಾನ ಹೆಚ್ಚಾಗಿ, 'ಹಾಡಿನ ಕರೀಂಭಾಯಿ' ಎಂಬ ಬಿರುದಿಗೆ ಪಾತ್ರರಾದರು.

"೧೯೫೧ರಲ್ಲಿ ಬೆಂಗಳೂರಿಗೆ ಆಗಮಿಸಿದ್ದ ಡಾ. ರಾಜೇಂದ್ರ ಪ್ರಸಾದ, ಡಾ. ಟಂಡನ, ಜಿ.ವಿ. ಪಂತ ಮೊದಲಾದ ರಾಷ್ಟ್ರೀಯ ನಾಯಕರುಗಳಿಗೆ ಬಿ. ಶಿವಮೂರ್ತಿಶಾಸ್ತ್ರಿಗಳ ನಿಯೋಗ ಮನವಿ ದೂರುಗಳನ್ನು ಸಲ್ಲಿಸುವ ಕಾರ್ಯದಲ್ಲಿ ತೊಡಗಿತ್ತು. ಆಂಧ್ರದವರು ಸಹ ಕಾಂಗ್ರೆಸ್ಸಿನಿಂದ ಬೇಸತ್ತು ಭಿನ್ನವಾದ ಚಳುವಳಿಯಲ್ಲಿ ತೀವ್ರತೆ ಪಡೆಯುತ್ತಿದ್ದರು. ಇದು ಕನ್ನಡಿಗರ ಗಮನ ಸೆಳೆಯುವಂತಾಗಿತ್ತು ಪರಿಣಾಮವಾಗಿ ಗಡಿ ಪ್ರದೇಶಗಳಲ್ಲಿನ ಕನ್ನಡ ಜಾಗೃತಿ ಕೆಲಸಗಳು ತೀವ್ರವಾದವು. ಈ ಹಿನ್ನೆಲೆಯಲ್ಲಿ ಬಿ.ಎಮ್.ಶ್ರೀ, ಬೆನಗಲ ರಾಮರಾವ್, ಜಿನರಾಜ ಹೆಗಡೆ, ಮಾಸ್ತಿ, ಶಿವಮೂರ್ತಿಶಾಸ್ತ್ರಿ ಎಸ್.ಕೆ. ಕರೀಂಖಾನ್, ಎಮ್.ಎಸ್. ಸರ್ದಾರ, ಆರ್. ನಾಗನಗೌಡ, ದೇವುಡು, ಕರಮರಕರ್, ಎಸ್.ವಿ. ಕೃಷ್ಣ ಮೂರ್ತಿರಾವ್, ದಿವಾಕರ್. ಎಸ್. ನಿಜಲಿಂಗಪ್ಪ ಎಸ್.ಆರ್. ಕಂಠಿ, ಜತ್ತಿ, ಜಿ.ವಿ. ಹಳ್ಳಿಕೇರಿ, ಫ.ಗು. ಹಳಕಟ್ಟಿ, ಹರ್ಡೇಕರ ಮಂಜಪ್ಪ ಎಸ್.ಎಸ್. ಬಸವಾನಾಳ, ಪಂಜೆ ಮಂಗೇಶರಾವ್, ಮುಳಿಯ ತಿಮ್ಮಪ್ಪಯ್ಯ, ಗೋವಿಂದ ಪೈ, ರಾಮಕೃಷ್ಣಕಾರಂತ, ಎಮ್.ಎಚ್. ಕೃಷ್ಣ ಮೊದಲಾದವರು ತಮ್ಮ ಕ್ಷೇತ್ರಗಳಲ್ಲಿ ಏಕೀಕರಣಕ್ಕಾಗಿ ಶ್ರಮಿಸುತ್ತಿದ್ದರು." ಭಾರತಕ್ಕೆ ಸ್ವಾತಂತ್ರ್ಯ ದಕ್ಕಿದರೂ ಸಹ, ಕರ್ನಾಟಕ ಒಂದು ರಾಜ್ಯವಾಗಿ ರೂಪುಗೊಂಡಿರಲಿಲ್ಲ. ಹಂಚಿ ಹೋಗಿದ್ದ ಮೈಸೂರು ರಾಜ್ಯದ ಗಡಿಗಾಗಿ ಕಿತ್ತಾಟ ನಡೆಯುತ್ತಿತ್ತು. ಕನ್ನಡದ 'ಔರಸ ಪುತ್ರ' ಕರೀಂಖಾನರು, ಕನ್ನಡಿಗರು ಒಂದೆಂಬ ಭಾವನೆ ಮೂಡಿಸುವಲ್ಲಿ ಸಫಲರಾದರು, ಏಕೀಕರಣ ಸಮಯದಲ್ಲಿ ಕರೀಂಖಾನರು ಕೈಕಟ್ಟಿ ಕೂಡಲಿಲ್ಲವೆಂಬುದನ್ನು ಅನೇಕ ನಿದರ್ಶನಗಳು ದೃಢಪಡಿಸುತ್ತವೆ.

ಬ್ರಿಟಿಷರ ತೆಕ್ಕೆಯಿಂದ ಮುಕ್ತಗೊಂಡ ಭಾರತ ಸಮಗ್ರವಾಗಿ ರೂಪುಗೊಂಡಿತ್ತು. ಆದರೇನು ಕರ್ನಾಟಕ ಒಂದು ರಾಜ್ಯವಾಗಿ ರೂಪುಗೊಂಡಿರಲಿಲ್ಲ. ಹಳೇಮೈಸೂರು ಹೊಸ ಮೈಸೂರೆಂಬ ಪ್ರಾಂತೀಯ ಭಾವನೆಯಿಂದ ಕಚ್ಚಾಡುತ್ತಿರುವುದನ್ನು ಉಪಯೋಗಿಸಿಕೊಂಡು, ಉತ್ತರದ ಅನೇಕ ಕನ್ನಡ ಭಾಗಗಳನ್ನು ತನ್ನದಾಗಿಸಿಕೊಳ್ಳಲು ಮರಾಠೀ ಮತ್ತು ತೆಲುಗರು ಕಾಯ್ದಿದ್ದರು. ಕರೀಂಖಾನರು ಈ ವಿಷಯ ತಿಳಿಸಲು ರಾಜ್ಯಾಭಿಮಾನ ಹುಟ್ಟಿಸಲು ಕನ್ನಡ ಜನರಿರುವ ಮೂಲೆ ಮೂಲೆಯನ್ನು ಹಲವು ಬಾರಿ ಸಂಚರಿಸುವ ಪ್ರಸಂಗ ಉದ್ಭವಿಸಿತು. 'ಕುರಿ ಹಿಂಡಿನಲ್ಲಿದ್ದ ಹುಲಿಮರಿಗೆ ಸ್ವಯಂ ಜ್ಞಾನವುಂಟಾಗಲು ವೇಳೆ ಹಿಡಿಯುವಂತೆ' ಕನ್ನಡಿಗರಿಗೆ ತಮ್ಮ ಭಾಷೆ ಕನ್ನಡವೆಂದು ತಿಳಿಯಲು ಹತ್ತಾರು ವರ್ಷಗಳೇ ಹತ್ತಿದವು. ಹೀಗೆ ಕನ್ನಡ ಕರ್ನಾಟಕ ಎಂಬ ಅರಿವು ಮೂಡಿಸುವಲ್ಲಿ ಕರೀಂಖಾನರ ಅವಿರತ ಪ್ರಯತ್ನ ಫಲ ನೀಡಿತು. "ವಿಶಾಲ ಕರ್ನಾಟಕ ಆಗಬೇಕೆಂದು ಎಲ್ಲರೂ ಬಯಸುತ್ತಿದ್ದರು. "ಆಗ ವಿಶೇಷವಾಗಿ ನಾನು ಹೈದರಾಬಾದ ಕರ್ನಾಟಕ ಸಂಚಾರ ಮಾಡುವಾಗ ನನ್ನ ಜೊತೆ ಶಿವಮೂರ್ತಿ ಶಾಸ್ತ್ರಿಗಳು ಇದ್ದರು. ಜನ ಬಹಳ ಗೌರವದಿಂದ ಸ್ವಾಗತಿಸುತ್ತಿದ್ದರು" ಎಂಬಲ್ಲಿ ನಾಡಿನಾಭಿಮಾನಿಗರ ಆಹ್ವಾನ ಮೆಚ್ಚುವಂಥದಾಗಿತ್ತು.

ಏಕೀಕರಣದ ಸಂದರ್ಭದಲ್ಲಿ ಕರೀಂಖಾನರು ಮತ್ತೆ ಜೈಲುವಾಸ ಅನುಭವಿಸಬೇಕಾಯಿತು. ಆದರೇನಂತೆ ಕರೀಂಖಾನ ಮತ್ತು ಇವರ ಸಂಗಡಿಗರ ಹೆಬ್ಬಯಕೆ ಈಡೇರುವಂತಾಯಿತು. ಕರ್ನಾಟಕ ರಾಜ್ಯ ವಿಶಾಲ ಮೈಸೂರಾಗಿ ೧೯೫೬ ನವೆಂಬರ ೧ ರಂದು ಸಂಸ್ಥಾಪನೆಗೊಂಡಿತು. ೧-೧೧-೫೬ ರಂದು ಕನ್ನಡಿಗರು ಒಂದಾಗಿ ತಮ್ಮದೇ ಆದ ರಾಜ್ಯವನ್ನು ಪಡೆದದ್ದು ಪ್ರಮುಖ ಐತಿಹಾಸಿಕ ಘಟನೆಯಾಗಿದೆ. ಕರ್ನಾಟಕ ಏಕೀಕರಣ ಸಂದರ್ಭದಲ್ಲಿ ಆಗಲೇ ಐವತ್ತು ಮೀರಿದ ಕರೀಂಖಾನ ಬ್ರಹ್ಮಚಾರಿಯಾಗಿಯೇ ಉಳಿದು ತಮ್ಮನ್ನು ಸಂಪೂರ್ಣವಾಗಿ ಈ ಮಣ್ಣಿಗೆ ಅರ್ಪಿಸಿಕೊಂಡರು.

"ಜಾತ್ಯತೀತವಾಗಿ ಸ್ವಾತಂತ್ರ್ಯ ಸಮರದಲ್ಲಿ ಸೇರಿಕೊಂಡರು, ಸಾಹಿತ್ಯದ ಮೇಲೆ ಆಸಕ್ತಿ ಇರುವುದರಿಂದ ಕರ್ನಾಟಕ ಏಕೀಕರಣಕ್ಕಾಗಿ ದುಡಿದರು ಹಾಗಾಗಿ ಮುಸ್ಲಿಂ ಮುಸ್ಲಿಮೇತರರು ಎಂಬ ಭೇದ ಅವರಲ್ಲಿ ಬರಲಿಲ್ಲ. ಇವರನ್ನು ಸಹಜವಾಗಿ ಜನರು ಗೌರವಿಸಿದರು" ಎಂಬ ಕಾಳೇಗೌಡರ ಮಾತಲ್ಲಿ ಕನ್ನಡ ಜನ ಇವರನ್ನು ಅನ್ಯರೆಂದು ಗುರುತಿಸಲಾರದಷ್ಟು ಆಳವಾಗಿ ಈ ಮಣ್ಣ ಕಣದಲ್ಲಿ ಸೇರಿ ಹೋಗಿದ್ದರು. ಕವಿ ಸಂತ ಶಿಶುನಾಳ ಶರೀಫರಂತೆ ಜಾತ್ಯತೀತ ನಿಲುವನ್ನು ಮೀರಿ ನಿಂತವರು ಇವರು. ಇವರಲ್ಲಿ ದೊಡ್ಡತನವಿತ್ತೇ ಹೊರತು ಸಂಕುಚಿತ ಭಾವನೆ ಇರಲೇ ಇಲ್ಲ ಇವರು ಅಜಾತ ಶತ್ರುಗಳಾಗಿ ಈ ಮಣ್ಣಲ್ಲಿ ಉಸಿರು ಕಂಡವರು. ಮುಸ್ಲಿಂ ಆಗಿ ಕನ್ನಡವನ್ನು ಕಲಿತು ಕನ್ನಡ ಮೂಲಕ ಜನರನ್ನು ಕಂಡರು ಎಂಬುದು ಬಹು ಮುಖ್ಯ ವಿಚಾರ. ಇವರ ದೊಡ್ಡ ಗುಣವೆಂದರೆ ಸಾಂಸ್ಕೃತಿಕ ವ್ಯಕ್ತಿಯಾಗಿ ಬೆಳೆದದ್ದು. ತನ್ನ ಮನೆಗಿಂತ ಹೆಚ್ಚಾಗಿ ದೇಶದ ಸಂಸ್ಕೃತಿ ದೊಡ್ಡದು ಎಂಬ ಮನೋಭಾವನೆ ಹೊಂದಿದವರಾಗಿದ್ದರು. ಕರೀಂಖಾನರನ್ನು ಅವರ ಜಾತಿಯವರಿಗಿಂತ ಬೇರೆಯ ಜಾತಿಯವರೇ ಹೆಚ್ಚಾಗಿ ನೋಡಿಕೊಂಡರು," ಇವರ ಪ್ರಾಜ್ವಲ ಮನಸ್ಸು ಸರ್ವ ಜನರ ಸುಖವನ್ನು ಬಯಸುತ್ತಿತ್ತು.

ಕರ್ನಾಟಕ ಏಕೀಕರಣ ಹೋರಾಟದ ಸಂದರ್ಭದಲ್ಲಿ ಕರೀಂಖಾನರಲ್ಲಿ ಪ್ರೇರಣೆ ನೀಡಿದವರಲ್ಲಿ ಸಿದ್ದಯ್ಯ ಪುರಾಣಿಕರೂ ಒಬ್ಬರಾಗಿದ್ದರು. "ನಾನು ದೆಹಲಿಯಲ್ಲಿ ಅಜಾದರನ್ನು ಕಂಡು ಕರ್ನಾಟಕದ ಏಕೀಕರಣದ ವಿಷಯದಲ್ಲಿ ಆಗುತ್ತಿರುವ ತೊಡಕುಗಳನ್ನು ವಿವರಿಸಿದೆ. ಅವರು ಮೈಸೂರಿನ ಜನರ ಒಳ್ಳೆಯ ತನವನ್ನು ಮೆಚ್ಚಿದ್ದರು. ಅಜಾದರು ಆಗಿನ ಆಂಧ್ರದ ಮುಖ್ಯಮಂತ್ರಿ ಸಂಜೀವರೆಡ್ಡಿ ಅವರನ್ನು ಕರೆಸಿದರು. 'ಕರೆ ಕಳುಹಿಸಿರುವುದು ಏಕೆಂದು ಗೊತ್ತು. ಆಂಧ್ರದ ಒಂದು ಇಂಚು ಭೂಮಿಯನ್ನು

ಬಿಡುವುದಿಲ್ಲ' ಎಂದು ರಾಜಧಾನಿ ಕರ್ನೂಲಿನಿಂದ ಹೊರಟ ಸಂಜೀವ ರೆಡ್ಡಿ ಅವರ ಮುಂದೆ, ಆಚಾರ್ಯರು ನಿಮಗೆ ತೆಲಂಗಾಣಬೇಕಾದರೆ ಬಳ್ಳಾರಿ ಮತ್ತು ಬೀದರನ್ನು ಬಿಟ್ಟುಕೊಡಿ, ಇಲ್ಲವಾದರೆ ತೆಲಂಗಾಣವನ್ನು ಪ್ರತ್ಯೇಕ ರಾಜ್ಯ ಮಾಡುತ್ತೇವೆ ಎಂಬ ಸೂಚನೆ ಇಟ್ಟರು. ಆಲೂರು, ಅದವಾನಿ ಮತ್ತು ರಾಯದುರ್ಗ ತಾಲೂಕುಗಳು ತಮಗೇ ಬೇಕೆಂದು ಸಂಜೀವರೆಡ್ಡಿ ಕೇಳಿದರು. ಸಿದ್ಧಗಂಗೆಯ ಸ್ವಾಮಿಗಳು ಆ ಮೊದಲು ಹಂಪಿ, ಬಸವಕಲ್ಯಾಣಗಳಿಲ್ಲದ ಕರ್ನಾಟಕ ನಿರ್ಮಾಣವಾಗುತ್ತಿದೆ ಎಂದು ನೊಂದು ಹೇಳಿದ್ದರು. ಒಮ್ಮೆ ಕೊಳ್ಳೆಗಾಲದ ಕಡೆ ಪ್ರವಾಸ ಮಾಡುವಾಗ, ಪ್ರಾಥಮಿಕ ಶಾಲೆಯಲ್ಲಿ ಕನ್ನಡಪರ ಭಾಷಣ ಮಾಡುವ ಸಂದರ್ಭವೊದಗಿದಾಗ ಕೀಡಿಗೇಡಿಗಳ ಕಲ್ಲೇಟಿಗೆ ತುತ್ತಾಗಬೇಕಾಯಿತು. ''ಬಳ್ಳಾರಿಯಲ್ಲಿ ಏಕೀಕರಣಕ್ಕೆ ಮೊದಲು ಒಂದು ಉಪಚುನಾವಣೆ ನಡೆಯಿತು. ಆಗ ತೆಲಗು ಪರವಾಗಿ ಒಬ್ಬ ಅಭ್ಯರ್ಥಿ ಮತ್ತು ಕನ್ನಡದ ಪರವಾಗಿ ಒಬ್ಬ ಅಭ್ಯರ್ಥಿ ನಿಂತಿದ್ದರು. ಆ ಚುನಾವಣೆ ಕರ್ನಾಟಕ ಅಥವಾ ಆಂಧ್ರಪರ ಅಭಿಪ್ರಾಯಗಳಿಗೆ ತೀರ್ಮಾನ ಎಂದು ಭಾವಿಸಲಾಗಿತ್ತು. ಹರಪ್ಪನಳ್ಳಿಯ ಹಯತ್ ಸಾಹೇಬರನ್ನು ಕಂಡ ಕರೀಂಖಾನರು ಕನ್ನಡ ಪರ ಮತ ಚಲಾಯಿಸುವಂತೆ ಕೋರಿಕೊಂಡರು. ಅಷ್ಟೇ ಅಲ್ಲದೇ ಬಳ್ಳಾರಿಯಲ್ಲಿ ಮುನಿಸಿಪಲ್ ಪ್ರೆಸಿಡೆಂಟ್ ಆಗಿದ್ದ ಅಬ್ದುಲ ರಜಾಕ್ ಸಾಹೇಬರು, ಕರೀಂಖಾನರ ವಿನಂತಿಯ ಮೇರೆಗೆ ಕನ್ನಡ ಪರವಾಗಿ ಕೆಲಸ ಮಾಡಿದರು. ಕನ್ನಡಿಗರ ಪರವಾಗಿ ನಿಂತಿದ್ದ ಅಭ್ಯರ್ಥಿಗೆ ಗೆಲುವಾಯಿತು.'' ಬೀದರ್ ಭಾಗದಲ್ಲಿ ಏಕೀಕರಣದ ಬಗೆಗೆ ಯಾವ ರೀತಿಯ ಅಭಿಪ್ರಾಯವಿತ್ತು ? ಎಂಬ ಪ್ರಶ್ನೆಗೆ ಕರೀಂಖಾನರು ಉತ್ತರಿಸುವಂತೆ, ಎಲ್ಲರಿಗೂ ಕರ್ನಾಟಕಕ್ಕೆ ಸೇರಬೇಕೆಂಬ ಆಸೆ ಇತ್ತು. ಆ ಭಾಗದಲ್ಲಿ ಕರ್ನಾಟಕದ ಪರ ಕೆಲಸ ಮಾಡುತ್ತಿದ್ದ ಹಲವರಲ್ಲಿ ಪ್ರಭುರಾವ್ ಕಂಬಳಿವಾಲೆ ಅವರು ಒಬ್ಬರು ಎನ್ನುವ ಮಾತಲ್ಲಿ ಜನರಲ್ಲಿ ಕರ್ನಾಟಕಕ್ಕೆ ಹೆಚ್ಚಿನ ಪ್ರಾಧಾನ್ಯತೆ ಇತ್ತು ಎಂಬುದು ತಿಳಿಯುತ್ತದೆ.

ಕರೀಂಖಾನರು ಬಳ್ಳಾರಿಯ ಒಂದು ಘಟನೆಯನ್ನು ಈ ಸಂದರ್ಭದಲ್ಲಿ ನೆನೆಸುತ್ತಾರೆ. ''ಬಳ್ಳಾರಿಯಲ್ಲಿ ಸಮಾರಂಭದ ಸಲುವಾಗಿ ದೊಡ್ಡ ಪೆಂಡಾಲ ಹಾಕಿದಾಗ, ಆಂಧ್ರದವರು ಪೆಂಡಲ್ ಮೇಲೆ ಆ್ಯಸಿಡ್ ಹಾಕಿ ಬೆಂಕಿ ಹಚ್ಚಿದರು. ಆ ವೇಳೆಯಲ್ಲಿ ಕಾವಲಿದ್ದ ರಂಜಾನಿ (ರಂಜಾನ್ ಸಾಬ್) ಎಂಬುವವನ ಮೇಲೆ ಆ್ಯಸಿಡ್ ಬಿತ್ತು, ಅಂಥದ್ದರಲ್ಲೂ ಅವರನ್ನು ಹಿಡಿಯಲು ಅವನು ಓಡಿದ, ಸಿಗಲಿಲ್ಲ. ದುಷ್ಕರ್ಮಿಗಳ ಆ್ಯಸಿಡ್ ಬಲ್ಬಿನಿಂದಾಗಿ ಏಕೀಕರಣಕ್ಕೆ ಅವರು ಬಲಿಯಾದರು. ಅವನ ಕುಟುಂಬಕ್ಕಾಗಿ ನಿಧಿ ಎತ್ತಿದರು. ಒಟ್ಟು ಎಪ್ಪತ್ತೆರಡು ರೂಪಾಯಿ ಆಯಿತು'' ಎಂಬ ಮಾತು ಕನ್ನಡ ನಾಡಿಗಾಗಿ, ಕರ್ನಾಟಕ ಏಕೀಕರಣಕ್ಕಾಗಿ ದೇಹತ್ಯಾಗಕ್ಕೂ ಸಿದ್ಧರಿರುವ ಮುಸ್ಲಿಂಬಾಂಧವರ ನೆನಪಾಗದೇ ಇರದು.

ಕರೀಂಖಾನರು ತಮ್ಮ ಕುಲಬಾಂಧವರಿಗೆ ಅನೇಕ ಸಲ ಹೇಳಿದ್ದಾರೆ. ''ಈ ನೆಲದಲ್ಲಿ ಹುಟ್ಟಿದವರಿಗೆಲ್ಲ ಕನ್ನಡಿಗರೆಂಬ ಅಭಿಮಾನವಿರಬೇಕು. ಯಾವ ದೇಶ, ಯಾವ ಊರು ಎಂಬ ಪ್ರಶ್ನೆ ಮುಖ್ಯ ಅಲ್ಲ, ಈ ನೆಲದಲ್ಲಿ ಹುಟ್ಟಿ ಅನ್ನವನ್ನು ತಿನ್ನುತ್ತಿದ್ದೀರಾ, ಈ ನೆಲದ ನೀರನ್ನು ಕುಡಿಯುತ್ತಿದ್ದೀರಾ, ಈ ನೆಲದ ಗಾಳಿ ಉಸಿರಾಡುತ್ತಿದ್ದೀರಾ'', ಈ ಹಿನ್ನೆಲೆಯಲ್ಲಿ, ಕನ್ನಡ ಹೋರಾಟದ ಮೊಟ್ಟಮೊದಲ ಕರೆಯನ್ನು ಮುಸಲ್ಮಾನ ಬಾಂಧವರಿಗೆ ಕೊಟ್ಟವರು ಅಂದರೆ ಕರೀಂಖಾನವರು ಮಾತ್ರ. ಇವರಂತೆ ''ಹಮಾನಖಾನ ಅಂತಾ ಒಬ್ಬರು ಇದ್ರು, ಅವರು ಬೆಂಗಳೂರು ಖಜಾನೆಯಲ್ಲಿ ಉದ್ಯೋಗಿಯಾಗಿ ಕೆಲಸ ಮಾಡುತ್ತಿದ್ದರು, ಕನ್ನಡಕ್ಕಾಗಿ ಯಾವ ತ್ಯಾಗಕ್ಕೂ ಸಿದ್ಧವಿದ್ದ ವ್ಯಕ್ತಿಯಾಗಿದ್ದರು, ತನ್ನ ಮಕ್ಕಳನ್ನು ಬೆಂಗಳೂರಿನ ಕನ್ನಡ ಶಾಲೆಗೆ ಸೇರಿದ್ದರು. ಅವರಿಗೆ 'ಕನ್ನಡ ಕಟ್ಟಾಳು' ಎಂಬ ಬಿರುದು ಕೊಟ್ಟಿದ್ದರು. ಗೋಕಾಕ ಚಳುವಳಿಯಲ್ಲಿ ಭಾಗವಹಿಸಿದ ಇವರು ಕಿಡಿಗೇಡಿಗಳ ಕಲ್ಲು ಹೊಡೆತಕ್ಕೆ ತುತ್ತಾಗಿ ಕಿವಿಯಲ್ಲಿ

ರಕ್ತ ಸೋರುವಂತಾಯಿತು. ಇಂಥವರ ಕನ್ನಡಾಭಿಮಾನ ಮರೆಯಲು ಸಾಧ್ಯವಾಗದು. ಇಂಥ ಕನ್ನಡಾಭಿಮಾನವನ್ನು ಬೆಳೆಸಿದವರು ಕರೀಂಖಾನ ಸಾಹೇಬರು.''

ಕನ್ನಡ ನಾಡು ನುಡಿಯ ಮೇಲೆ ಇವರಿಗಿರುವ ಅಭಿಮಾನ ಅಪಾರ. ಹರಿದು ಹಂಚಿ ಹೋಗಿದ್ದ ಕನ್ನಡ ಮಾತನಾಡುವ ಜನ ಒಂದಾಗಬೇಕೆಂಬ ಹಿರಿಯ ಹಂಬಲದಿಂದ ಇವರು ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಪ್ರಮುಖ ಪಾತ್ರವಹಿಸಿದರು. ಏಕೀಕೃತ ಕರ್ನಾಟಕ ಅಸ್ತಿತ್ವಕ್ಕೆ ಬಂದ ಮೇಲೆ ಇವರಿಗಾದ ಆನಂದ ಅಪಾರ.

**ಚಿತ್ರರಂಗ :**

''ಕರೀಂಖಾನ್'' ಒಂದು ಕಾಲದಲ್ಲಿ ಮಿಂಚಿನ ಹೆಸರು, ೬೦ರ ದಶಕದಿಂದ ಇಂದಿನವರೆಗಿನ ಚಲನಚಿತ್ರರಂಗದ ಹೆಮ್ಮೆಯ ಹೆಸರು. ಸುಮಾರು ೨೦೦ಕ್ಕೂ ಹೆಚ್ಚು ಚಿತ್ರಗೀತೆಗಳನ್ನು ರಚಿಸಿರುವ ೨೫ಕ್ಕೂ ಹೆಚ್ಚು ಚಿತ್ರಗಳಿಗೆ ಕಥೆ, ಸಂಭಾಷಣೆ, ಗೀತೆ ಬರೆದಿರುವ ಕರೀಂಖಾನ್ ಇಂದಿಗೂ ಸಹ ತಾವು ನಂಬಿದ, ತಮ್ಮನ್ನು ಇಂದಿಗೂ ಕೈ ಹಿಡಿದು ನಡೆಸುತ್ತಿರುವ ಸಾಹಿತ್ಯದೊಂದಿಗೆ ಬದುಕಿದ್ದಾರೆ. "ಚಲನಚಿತ್ರ ಸಾಹಿತ್ಯಕ್ಕೆ ಘನತೆ, ಗಾಂಭೀರ್ಯ ತಂದುಕೊಟ್ಟ ಈ ಹಿರಿಯ ಬರಹಗಾರರ ಚಿತ್ರಗೀತೆಗಳು ತುಂಬಾ ಪರಿಣಾಮಕಾರಿಯಾಗಿವೆ." ಚಲನಚಿತ್ರರಂಗವನ್ನು ಪ್ರವೇಶಿಸಿ ಇವರು ಮಾಡಿದ ಸಾಧನೆ ಮಹೋನ್ನತವಾದದ್ದು. ಇವರು ಕನ್ನಡ ಸಂಸ್ಕೃತಿಯ ಪ್ರತೀಕ, ಕನ್ನಡ ನಾಡಿನ ಬಹುದೊಡ್ಡ ಸಂಪತ್ತು. ಕಲಾತಪಸ್ವಿಯಾಗಿ ದುಡಿಯುತ್ತ ತಮ್ಮ ವ್ಯಕ್ತಿಗತವಾದ ಬದುಕನ್ನೇ ಮರೆತುಬಿಟ್ಟರು. ಬದುಕಿನಲ್ಲಿ ಏಕಾಂಗಿಯಾಗಿ ಉಳಿದಿರುವ ಇವರು, ಸಮಸ್ತ ಕನ್ನಡಿಗರಿಗೆ ಬಂಧುಗಳಾಗಿ ವಿಶ್ವಕುಟುಂಬಿಗಳಾಗಿ ಜಾತಿಮತಗಳ ಎಲ್ಲೆಯನ್ನು ಮೀರಿ ಶ್ರೇಷ್ಠ ಮಾನವತಾವಾದಿಗಳಾಗಿ ಮೆರೆದಿದ್ದಾರೆ. ಇಂಥ ಒಂದು ಅದ್ಭುತವಾದ ಚಿತ್ರರಂಗಕ್ಕೆ ಕರೀಂಖಾನ್ ಪ್ರವೇಶಿಸಿದ್ದು ಒಂದು ಯೋಗಾಯೋಗ ಹಾಗೂ ಬೆಳ್ಳಿತೆರೆಯ ಭಾಗ್ಯವೆನ್ನಬೇಕು.

ಕರೀಂಖಾನರು ತಮಗೆ ಸಿನೇಮಾ ಕ್ಷೇತ್ರದಲ್ಲಿ ಒಲವು ಮೂಡಲು ಕಾರಣ ತಿಳಿಸುತ್ತ "ರಾಜಕೀಯದಲ್ಲಿ ಸ್ವಾರ್ಥತೆ ಮನೆಮಾಡಿಕೊಂಡಿದ್ದರಿಂದ ರಾಜಕೀಯವನ್ನು ತೊರೆದು ಮದ್ರಾಸಿಗೆ ಹೋಗಿ ಚಿತ್ರರಂಗದಲ್ಲಿ ತೊಡಗಿದೆ" ಎಂದಿರುವ ಮಾತಿನಲ್ಲಿ ದೇಶದ ಉತ್ತಮ ಭವಿಷ್ಯಕ್ಕಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿ, ತಮ್ಮ ಮಹೋನ್ನತ ಸೇವೆ ಸಲ್ಲಿಸಿದ ಕರೀಂಖಾನರು ಸ್ವಾತಂತ್ರ್ಯಾನಂತರ ರಾಜಕೀಯ ಕ್ಷೇತ್ರದಲ್ಲಿ ಮನೆಮಾಡಿಕೊಂಡಿರುವ ಅಪ್ರಾಮಾಣಿಕತೆ, ಅನ್ಯಾಯ ಮುಂತಾದವುಗಳಿಂದ ದೂರಸರಿದಿರುವುದು ತಿಳಿಯುತ್ತದೆ.

ಇನ್ನೊಂದು ಕಾರಣವನ್ನು ತಿಳಿಸುತ್ತಾ "ನನಗೆ ಜಾನಪದ ಸಾಹಿತ್ಯ ಅನ್ನ ಕೊಡ್ತಾ ಇತ್ತು. ಸಣ್ಣ ಸಣ್ಣ ಹೊತ್ತಿಗೆಗಳನ್ನು ಮುದ್ರಣ ಮಾಡಿ ಅಲ್ಲಲ್ಲೇ ಹಾಡಿ, ಮಾರಟ ಮಾಡ್ತಾ ಇದ್ದೆ. ನನ್ನ ಪುಸ್ತಕಗಳನ್ನು ತಿಪಟೂರಿನ ಕಪಟಿ ಪ್ರಕಾಶಕನೊಬ್ಬ ತನ್ನ ಹೆಸರು ಹಾಕಿಕೊಂಡು ಮುದ್ರಿಸಿ ಮಾರಾಟ ಮಾಡಿ ಕುಬೇರನಾದ. ಅವನ

ವಿರುದ್ಧ ಕೋರ್ಟು, ಕಛೇರಿ ಅಂತ ಹೋರಾಡೋ ಸಾಮರ್ಥ್ಯ ನನ್ನಲ್ಲಿರಲಿಲ್ಲ, ಆವಗ ಇವೆಲ್ಲ ಬಿಟ್ಟು ಮದ್ರಾಸ್ ಕಡೆಗೆ ಹೊರಟೆ" ಎನ್ನುವ ಮಾತಿನಲ್ಲಿ ಕರೀಂಖಾನರು ಸೇವೆಗೈದ ಎಲ್ಲ ಕ್ಷೇತ್ರಗಳಲ್ಲೂ ಅನ್ಯಾಯವನ್ನು ಅನುಭವಿಸಿದರು ಎನ್ನುವುದು ವೇದ್ಯವಾಗುತ್ತದೆ. ಇನ್ನು ಮುಂದೆ ಸಿನಿಮಾ ಕ್ಷೇತ್ರದಲ್ಲಾದರೂ ನೆಲೆನಿಲ್ಲ ಬಹುದೆಂದು ಸಿನಿಮಾ ಕ್ಷೇತ್ರದತ್ತ ಒಲವು ಬೆಳೆಸಿಕೊಂಡರು.

ತಾವು ಸಿನಿಮಾ ಕ್ಷೇತ್ರಕ್ಕೆ ಹೋಗಲು ಕಾರಣವನ್ನು ಈ ರೀತಿ ತಿಳಿಸುತ್ತಾರೆ. "ನನ್ನ ಹತ್ತಿರ 'ಸ್ವರ್ಣಕಾಳಿಂಗ' ಅಂತ ಒಂದು ಕಥೆಯಿತ್ತು. ಪರಮೇಶ್ವರನ ಜಟೆಯಲ್ಲಿರುವ ಸರ್ಪಕ್ಕೆ ಸ್ವರ್ಣಕಾಳಿಂಗ ಎಂದು ಕರಿತಾರೆ, ಅದರ ಕಥೆ ಜಾನಪದ ಸಾಹಿತ್ಯದಲ್ಲಿ ಬರುತ್ತದೆ. ಆ ಕಥೆಯನ್ನು 'ಸ್ವರ್ಣಗೌರಿ' ಎಂದು ಹೆಸರಿಟ್ಟು ಸಿನಿಮಾ ಮಾಡಿದ್ರು, ಅದಕ್ಕಾಗಿ ಅವ್ರು ನನ್ನನ್ನು ಸಿನೆಮಾಲ್ಯಾಂಡಿಗೆ ಕರ್‍ಕೊಂಡ್ಹೋದ್ರು" ಹೀಗೆ ಒತ್ತಡದಲ್ಲಿ ಸಿಲುಕಿದ ಕರೀಂಖಾನರು ತಮ್ಮ ಪ್ರತಿಭೆಯನ್ನು ಸಿನಿಮಾಕ್ಷೇತ್ರಕ್ಕೆ ಧಾರೆಯೆರೆದರು.

ಕರೀಂಖಾನರ ಚಿತ್ರರಂಗದ ಸೇವೆಯನ್ನು ತಿಳಿಸಿದ ಸದರ್ನ್ ಸ್ಪೀಕರ್ "ಕರೀಂಖಾನರು ೧೯೫೬ ರಿಂದ ೬೬ರವರೆಗೆ ಚಿತ್ರರಂಗದಲ್ಲಿ ಸೇವೆ ಸಲ್ಲಿಸಿದರು. ಇವರ ೧೨ಚಿತ್ರಗಳು ತೆರೆಕಂಡಿವೆ" "ಕಥೆ, ಕಾದಂಬರಿ, ಚಲನಚಿತ್ರಕ್ಕೆ ಸೇರಿಕೊಳ್ಳಲು ಸ್ವಯಂಪ್ರೇರಣೆಯ ಜೊತೆಗೆ ಕೃಷ್ಣದೇವರಾಯ ಎನ್ನುವವರು ಸಿನಿಮಾಕ್ಷೇತ್ರಕ್ಕೆ ಹೋಗಲು ಉತ್ತೇಜಿಸಿದರು" ಎಂದು ಕರೀಂಖಾನರು ಹೇಳಿರುವ ಈ ಮಾತು ಮೇಧಾಶಕ್ತಿಯಿರುವ ಮಹಾನ್ ವ್ಯಕ್ತಿಯ ಮಾತಿಗೆ ಬೆಲೆಕೊಟ್ಟು ಈ ಕ್ಷೇತ್ರದ ಕಡೆ ಪಯಣಿಸಿದ ಸಂಗತಿ ಮನದಟ್ಟಾಗುತ್ತದೆ.

"೧೯೫೬ ರಲ್ಲಿ ರಾಜಕೀಯವನ್ನು ತೊರೆದ ಕರೀಂಖಾನರು ಚಿತ್ರರಂಗ ಉದ್ಯಮವನ್ನು ಪ್ರವೇಶಿಸಿದವರು. ಆಗ ಕನ್ನಡ ಚಿತ್ರೋದ್ಯಮವು ಮದ್ರಾಸಿನಲ್ಲಿ ನೆಲೆಸಲ್ಪಟ್ಟಿತ್ತು. ಅವರು ಚಿತ್ರರಂಗದಲ್ಲಿ ಸ್ಥಿರವಾದ ನೆಲೆಯನ್ನು ಹೊಂದಬೇಕಾದರೆ ಸತತವಾಗಿ ೫ ವರ್ಷಗಳ ಕಾಲ ಪರಿಶ್ರಮ ಪಟ್ಟರು. ಇವರು ಕಾರ್ಯನಿರ್ವಹಿಸಿದ ಚಿತ್ರಗಳೆಂದರೆ, 'ಸ್ವರ್ಣಗೌರಿ', ಗಂಗೆಗೌರಿ', ಸತಿ ಸುರಭಿ', 'ಶಿವಲಿಂಗ ಸಾಕ್ಷಿ' ಎಂಬ ಚಿತ್ರಗಳು ಇವರಿಗೆ ರಾಜ್ಯ ಸರ್ಕಾರದಿಂದ 'ಒಳ್ಳೆಯ ಬರಹಗಾರ' ಎಂಬ ಪ್ರಶಸ್ತಿಯನ್ನು ೧೯೬೩ ರಲ್ಲಿ ತಂದುಕೊಟ್ಟವು. ಚಿತ್ರೋದ್ಯಮದಲ್ಲಿಯ ರಾಜಕೀಯವು ಇವರನ್ನು ಪುನಃ ಬೆಂಗಳೂರಿಗೆ ಬರುವಂತೆ ಮಾಡಿತು. ೧೯೫೬ ರಿಂದ ೧೯೬೬ ರ ವರೆಗೆ ಮದ್ರಾಸಿನ ಚಿತ್ರೋದ್ಯಮದಲ್ಲಿ ಸಲ್ಲಿಸಿದ ಸೇವೆ ಇವರ ಚಿತ್ರೋದ್ಯಮ ಜೀವನಕ್ಕೆ ಬುನಾದಿಯಾಯಿತು. ಇಲ್ಲಿಯವರೆಗೆ ಕರೀಂಖಾನರು ಚಲನಚಿತ್ರಗಳಲ್ಲಿ ಕೆಲಸ ಮಾಡಿದ್ದರೂ ಕೂಡಾ ಸುಮಾರು ೧ ಡಜನ್‌ಗಳಷ್ಟು ಚಿತ್ರಗಳು ಮಾತ್ರ ತೆರೆಕಂಡಿವೆ" ಎನ್ನುವಲ್ಲಿ ಕರೀಂಖಾನರು ಸಿನೆಮಾ ಕ್ಷೇತ್ರದಲ್ಲಿ ಉತ್ತಮ ಸೇವೆ ಸಲ್ಲಿಸಿದರು ಎಂಬುದು ವ್ಯಕ್ತವಾಗುತ್ತದೆ.

ವಸ್ತು, ರೂಪ, ಪ್ರಯೋಗಗಳಿಂದ ಸಿನಿಮಾ ಪ್ರಕಾರದ ಆಯಾಮಗಳ ಮಹತ್ವವನ್ನು

ತೋರಿ, ಅದಕ್ಕೆ ಶ್ರೇಷ್ಠ ಸ್ಥಾನವನ್ನು ಕಲ್ಪಿಸಿದರು. ಸಮಕಾಲೀನ ಬದುಕಿನ ಸಂಕೀರ್ಣತೆಯನ್ನು ಪರಂಪರೆಯ ಮೌಲ್ಯಗಳೊಂದಿಗೆ ಇಟ್ಟು ಅನುಭವ ಮತ್ತು ಅರ್ಥಸ್ತರಗಳನ್ನು ಸಿನಿಮಾಗಳ ಮೂಲಕವೇ ವಿಸ್ತರಿಸಿದ ಕೀರ್ತಿಗೆ ಪಾತ್ರರಾದವರು ಕರೀಂಖಾನರು.

"ಎಚ್.ಎಮ್.ಕೆ. ಮೂರ್ತಿಯವರ 'ದೊಂಬರ ಕೃಷ್ಣ' ಮತ್ತು 'ರಾಜೇಶ್ವರಿ' ಇವರ ಇತ್ತೀಚೆಗೆ ತೆರೆಕಂಡ ಚಿತ್ರಗಳು. ಈ ಎರಡೂ ಚಿತ್ರಗಳೂ ಅದ್ದೂರಿಯಿಂದ ನಡೆದು ಬಾಕ್ಸ್ ಕಛೇರಿಗೆ ಹೆಚ್ಚು ಹಣವನ್ನು ನೀಡಿದವು. ತದನಂತರ ಇವರು ಮತ್ತೊಂದು ಚಿತ್ರದಲ್ಲಿ ಕೆಲಸ ನಿರ್ವಹಿಸುತ್ತಿದ್ದರು. ಆ ಚಿತ್ರ 'ಶ್ರೀ ಕೃಷ್ಣ ಲೀಲಾ' ಇದಕ್ಕೆ ಇವರು ಕಥೆ, ಚಿತ್ರಕಥೆ, ಸಂಭಾಷಣೆ, ಗೀತೆಗಳನ್ನು ಬರೆದಿದ್ದಾರೆ. ಇವರು ಸಂಗೀತ ಸಂಯೋಜಿಸುವುದರಲ್ಲಿಯೂ ಕೂಡಾ ಪರಿಣತಿಯನ್ನು ಪಡೆದಿದ್ದಾರೆ." ಇದರಿಂದ 'ರಾಜೇಶ್ವರಿ' ಮತ್ತು 'ದೊಂಬರ ಕೃಷ್ಣ'ಗಳು ಹೆಚ್ಚು ಪ್ರೇಕ್ಷಕರನ್ನು ಆಕರ್ಷಿಸುವುದರೊಂದಿಗೆ ಹಣಗಳಿಕೆಯಲ್ಲಿ ಹೆಚ್ಚಿನ ಅವಕಾಶವನ್ನು ನಿರ್ಮಾಪಕರಿಗೆ ತಂದುಕೊಟ್ಟವು, ಹಾಗೂ ಕಥೆ, ಸಂಭಾಷಣೆ, ಗೀತೆ ರಚನೆಗಾಗಿ ಕರೀಂಖಾನರ ಕೀರ್ತಿಯು ಪ್ರಜ್ವಲಿಸಿ, ಕರೀಂಖಾನರು ಕನ್ನಡ ಜನತೆಯ ಹೃದಯದಲ್ಲಿ ಅಚ್ಚಳಿಯದೇ ಉಳಿಯುವಂತಾಯಿತು. 'ರಾಜೇಶ್ವರಿ', 'ದೊಂಬರ ಕೃಷ್ಣ', ಸೂಪರ ನೋವಾ ೪೫೯' ಇವು ಮಕ್ಕಳ ಚಿತ್ರಕಥೆಗಳಾಗಿದ್ದು, ಜನಮನವನ್ನು ಸೂರೆಗೊಂಡವು.

ಕರೀಂಖಾನರು ಸಾಹಿತ್ಯ ನೀಡಿದ ಚಿತ್ರಗಳೆಂದರೆ 'ಸ್ವರ್ಣಗೌರಿ', ಬೇವು ಬೆಲ್ಲ', 'ಗಂಗೆ ಗೌರಿ', 'ದೊಂಬರ ಕೃಷ್ಣ', 'ಪ್ರೇಮಾನುರಾಗ', 'ಜೀವನ ತರಂಗ', 'ದೇವರ ತೀರ್ಪು', 'ಸೂಪರ್ ನೋವಾ ೪೫೯', 'ಬೆಂಗಳೂರು ರಾತ್ರಿಯಲಿ', 'ದೇವಮಾನವ', 'ಚಂದ್ರಕುಮಾರ', 'ಯವ್ವನದ ಅನುಭವ', 'ರಾಜಮಹಾರಾಜ', 'ಯಾರು ಹಿತವರು', 'ರಾಜೇಶ್ವರಿ', 'ಭಕ್ತ ಕನಕದಾಸ', 'ಪತಿತ ಪಾವನೆ', 'ಕಾರಣಿಕ ಶಿಶು' ಮುಂತಾದವುಗಳು ಈ ಎಲ್ಲ ಸಿನಿಮಾಗಳು, ಪೌರಣಿಕ ಮತ್ತು ಸಾಮಾಜಿಕ ಚಿತ್ರಗಳಾಗಿ ಪ್ರಚಾರವನ್ನು ಪಡೆದುಕೊಂಡವು.

'ಭಕ್ತ ಕನಕದಾಸ' ಚಿತ್ರಕಥೆಗೆ ಸಂಭಾಷಣೆ ರಚನೆಯಲ್ಲಿ ವೈ.ಆರ್. ಸ್ವಾಮಿ ಜೊತೆ ಸಹಭಾಗಿ, ವೆಂಕಟರಾಜು ಜೊತೆಗೂಡಿ ಸಂಗೀತ ನಿರ್ದೇಶನದಲ್ಲೂ ಮಹತ್ವದ ಪಾತ್ರ. 'ಸ್ವರ್ಣಗೌರಿ' ಕರೀಂಖಾನರಿಗೆ ಕೀರ್ತಿ ತಂದ ಚಿತ್ರ. ಸಾಹಿತ್ಯ, ಗೀತೆ, ಸಂಭಾಷಣೆ, ರಚಿಸಿದ ಈ ಚಿತ್ರ ಅವರಿಗೆ ಪ್ರಶಸ್ತಿ, ಗೌರವ ತಂದಿತು. ಸಿನಿಮಾರಂಗದ ವ್ಯವಹಾರಗಳಿಗೆ ಬೇಸತ್ತು ಹತ್ತು ವರ್ಷಗಳ ಬಳಿಕ ಬೆಂಗಳೂರಿಗೆ ಮರುಪ್ರಯಾಣ, ಆದರೂ ಬಿಡಿಸಿಕೊಳ್ಳಲಾಗದ ಸಿನೆಮಾ ನಂಟು, ಸಂಭಾಷಣೆ, ಗೀತೆ ಬರೆಸಿಕೊಂಡರೂ ಸಂಭಾವನೆ ನೀಡದವರೆಷ್ಟೋ ಮಂದಿ" ಎನ್ನುವ 'ಸುಧಾ' ವಾರಪತ್ರಿಕೆಯ ವಿವರಣೆಯನ್ನು ಗಮನಿಸಿದಾಗ ಸಿನಿಮಾಕ್ಷೇತ್ರದಲ್ಲೂ ಕರೀಂಖಾನರು ಶೋಷಣೆಗೊಳಗಾದರು ಎನ್ನುವುದು ವ್ಯಕ್ತವಾಗುತ್ತದೆ.

ಅರವತ್ತರ ದಶಕದಲ್ಲಿ ಕರೀಂಖಾನರು ಚಿತ್ರರಂಗ ಪ್ರವೇಶಿಸಿದ ಸಂದರ್ಭದಲ್ಲಿ

ಕನ್ನಡ ಚಿತ್ರಗೀತೆ ಹಾಗೂ ಚಿತ್ರಸಾಹಿತ್ಯಕ್ಕೆ ಹೊಸದೊಂದು ಹಾದಿಯನ್ನೇ ನಿರ್ಮಿಸಿದ ಹುಣಸೂರು ಕೃಷ್ಣಮೂರ್ತಿ, ಚಿ. ಸದಾಶಿವಯ್ಯ, ಕು. ರಾ. ಸೀತಾರಾಮಶಾಸ್ತ್ರಿ, ಜಿ. ವಿ. ಅಯ್ಯರ್, ಕಣಗಾಲ್ ಪ್ರಭಾಕರ್ ಶಾಸ್ತ್ರಿ, ಎಮ್. ನರೇಂದ್ರಬಾಬು, ಸೋರಟ್ ಅಶ್ವತ್ಥರ 'ರಾಜ ದರ್ಬಾರು' ನಡೆಯುತ್ತಿತ್ತು. ಈ ಸಂದರ್ಭದಲ್ಲಿ ಚಿತ್ರರಂಗಕ್ಕೆ ಬಂದ ಕರೀಂಖಾನ್ ಯಾರೊಬ್ಬರ ಬಗೆಗೂ ತಲೆಕೆಡಿಸಿಕೊಳ್ಳದೇ, ತಮ್ಮ ಪಾಡಿಗೆ ತಾವು ಬರೆಯಲು ಕೂತರು. ಇವರು ಹಾಡು ಸಂಭಾಷಣೆ ಬರೆದ ಮೊದಲ ಚಿತ್ರವೇ ರಾಷ್ಟ್ರಪ್ರಶಸ್ತಿ ಪಡೆಯಿತು. ಅಷ್ಟೇ ಅಲ್ಲ ಕನ್ನಡ ಚಿತ್ರರಂಗದಲ್ಲಿ ಹೊಸ ಅಲೆಯನ್ನೇ ಎಬ್ಬಿಸಿತು. ಆ ಚಿತ್ರ 'ಸ್ವರ್ಣಗೌರಿ' ಕರೀಂಖಾನರು ಈ ಚಿತ್ರಕ್ಕಾಗಿ ಬರೆದ 'ನಟವರ ಗಂಗಾಧರಾ ಉಮಾಶಂಕರಾ.....', 'ಈ ಲೀಲಾ ವಿನೋದ ವಿಹಾರ......', 'ಬಾರೇ ನೀ ಚೆಲುವೆ......' ಮುಂತಾದ ಹಾಡುಗಳು ತುಂಬಾ ಜನಪ್ರಿಯವಾದವು. 'ಸ್ವರ್ಣಗೌರಿ' ಚಿತ್ರ ಭರ್ಜರಿ ಯಶಸ್ಸು ಕಂಡಿದ್ದೇ ತಡ ಕರೀಂಖಾನರು ದಿಢೀರ್ ಖ್ಯಾತಿಗೆ ಬಂದರು. ಒಂದರ ಹಿಂದೊಂದರಂತೆ ಎಂಟು ಚಿತ್ರಗಳಿಗೆ ಹಾಡು, ಸಂಭಾಷಣೆ ಬರೆಯಲು ಸಹಿ ಹಾಕಿದರು. ಇವರು ರಚಿಸಿದ ಸಾಹಿತ್ಯ ಸಮಾಜದ ನೈಜತೆಯನ್ನು ಪ್ರತಿಬಿಂಬಿಸುತ್ತಿತ್ತು. ಇದನ್ನು ಗಮನಿಸಿದ ಪ್ರತಿಭಾವಂತ ನಿರ್ದೇಶಕರಿಗೆ ಸಮಾಜದ ವಾಸ್ತವಿಕತೆಗಳನ್ನು ಪ್ರತಿಬಿಂಬಿಸುವಂಥ ಚಿತ್ರಗಳನ್ನು ತೆಗೆಯಲು ಧೈರ್ಯವನ್ನು ದೊರಕಿಸಿಕೊಟ್ಟಿತು.

ವಿಪರ್ಯಾಸವೆಂದರೆ ಈ ಸಮಯದಲ್ಲಿ ಕರೀಂಖಾನ್ ಕಾಣದ ಕೈವಾಡಕ್ಕೆ ಚಿತ್ರರಂಗದ ವಿಚಿತ್ರ ರಾಜಕೀಯಕ್ಕೆ ಬಲಿಯಾದರು. ಶಂಕರ್‌ಸಿಂಗ್‌ರವರ ಚಿತ್ರಕ್ಕೆ ಸಂಭಾಷಣೆ ಬರೆದರೂ ಇವರಿಗೆ ಹೆಸರು ಬರಲಿಲ್ಲ. "ಮೂರನೆಯವರ ಮೂಲಕ ಬಿ. ಆರ್. ಪಂತುಲುರವರ 'ಗಂಗೆಗೌರಿ' ಚಿತ್ರಕ್ಕೆ ಕಥೆ, ಚಿತ್ರಕಥೆ, ಸಂಭಾಷಣೆ, ಹಾಡುಗಳನ್ನು ಬರೆದು ಕಳಿಸಿದರೂ ಹೆಸರು ಬೇರೆಯವರ ಪಾಲಾಯಿತು." ಇವೆಲ್ಲದರಿಂದ ಬೇಸತ್ತ ಕರೀಂಖಾನ್, ಬಂದಷ್ಟೇ ಬೇಗ ಚಿತ್ರರಂಗದಿಂದ ದೂರವಾದರು. ಇಷ್ಟಾಗಿಯೂ ಚಿತ್ರರಂಗ ಇವರನ್ನು ಸಂಪೂರ್ಣವಾಗಿ ಬಿಡಲಿಲ್ಲ. ಆಗೊಮ್ಮೆ, ಈಗೊಮ್ಮೆ ಕೆಲವರು ಇವರಿಂದ ಹಾಡುಗಳನ್ನು ಬರೆಸಿದರು. "ನಾಡಿನ ಉದ್ದಗಲಕ್ಕೂ ಲಕ್ಷಾಂತರ ಅಭಿಮಾನಿಗಳನ್ನು ಹೊಂದಿರುವ ಈ ಅಜ್ಜ, ಸರಿಸುಮಾರು ೨೮ ವರ್ಷಗಳ ಸುದೀರ್ಘ ಅವಧಿಯವರೆಗೆ ಬಸವನಗುಡಿಯ ದ್ವಾರಕಾ ಹೋಟೇಲಿನ ಬಾಡಿಗೆ ಕೋಣೆಯೊಂದರಲ್ಲಿ ಉಳಿದುಬಿಟ್ಟರು. ಈ ಅಜ್ಜನ ವಾತ್ಸಲ್ಯವನ್ನೇ, ಸ್ನೇಹಪರತೆಯನ್ನೇ ದುರುಪಯೋಗ ಮಾಡಿಕೊಂಡವರು ಬಹಳ ಮಂದಿ. ಆದರೆ ಈ ಅಜ್ಜ ಈಗಲೂ ಯಾರನ್ನೂ ಟೀಕಿಸುವುದಿಲ್ಲ." ಹೀಗಾಗಿ ಎಲೆಮರೆಯ ಕಾಯಿಯಂತೆ ಉಳಿದುಬಿಟ್ಟರು. ಇದರಿಂದ ಚಲನಚಿತ್ರ ಕ್ಷೇತ್ರಕ್ಕೆ ಭರಿಸಲಾರದ ನಷ್ಟವುಂಟಾಗಿದೆ. ನೀತಿ, ಮೌಲ್ಯ, ಚಾರಿತ್ರಿಕತೆ, ಪ್ರಾಮಾಣಿಕತೆಗಳನ್ನು ಬಿಂಬಿಸುವ ಇವರ ಪ್ರೌಢಸಾಹಿತ್ಯದ ಮೂಲಕ ಚಿತ್ರರಂಗವನ್ನು ಇನ್ನೂ ಶ್ರೀಮಂತ ಗೊಳಿಸಬಹುದಿತ್ತು. ಅಂಥ ಆದರ್ಶವನ್ನು ಪ್ರತಿಪಾದಿಸುವ ಇವರ ಚಲನಚಿತ್ರ

ಸಾಹಿತ್ಯ ಪ್ರಸ್ತುತ ಸಮಾಜಕ್ಕೆ ಅನಿವಾರ್ಯವೂ ಅವಶ್ಯಕವೂ ಆಗಿತ್ತು. ಇಂಥ ಮಹಾನ್ ಪ್ರತಿಭೆಗೆ ಸೂಕ್ತ ಪ್ರೋತ್ಸಾಹ ಸಿಗಲಿಲ್ಲ, ಎಂಬುದು ದುರದೃಷ್ಟದ ಸಂಗತಿಯಾಗಿದೆ.

ಕರೀಂಖಾನರು ಮದ್ರಾಸನಲ್ಲಿದ್ದಾಗಲೇ ನಿರ್ದೇಶಕ ಕಾಮೇಶ್ವರರಾವ್ ಅವರಿಗಾಗಿ 'ಕೃಷ್ಣಲೀಲಾ', ಸಿನಿಮಾಕ್ಕೆ ಚಿತ್ರಕಥೆ, ಸಂಭಾಷಣೆ, ಹಾಡುಗಳ್ನು ಬರೆದಿದ್ದರು. ಆದರೆ ಚಿತ್ರ ತಯಾರಾಗಲಿಲ್ಲ. ಅದನ್ನು ಹೇಗಾದರೂ ಪುಸ್ತಕ ರೂಪದಲ್ಲಿ ಪ್ರಕಟಿಸುವ ಇಚ್ಛೆಯಾಯಿತು. ಕರೀಂಖಾನರ ಮಾನಸ ಪುತ್ರರೆಂದು ಹೇಳಿಕೊಳ್ಳುವ ಕಿಕ್ಕೇರಿ ಕೃಷ್ಣಮೂರ್ತಿ ತಾವೇ ಮುಂದಾಗಿ 'ಕೃಷ್ಣಲೀಲಾ' ಪುಸ್ತಕ ಪ್ರಕಟಿಸಿ ಮೈಸೂರಿನಲ್ಲಿ ಫೆಬ್ರುವರಿ ೧ ರಂದು ಬಿಡುಗಡೆ ಸಮಾರಂಭವನ್ನು ನಡೆಸಿದರು. ಈ ಸಮಾರಂಭಕ್ಕೆ ಕನ್ನಡ ಸಂಸ್ಕೃತಿ ಇಲಾಖೆಯ ನಿರ್ದೇಶಕರು ಆಗಮಿಸಿದ್ದರು. 'ಶ್ರೀ ಕೃಷ್ಣ ಲೀಲಾ' ಪ್ರಸಿದ್ಧ ಪೌರಣಿಕ ಕಥೆಯಾಗಿದ್ದು, ಸಿನೆಮಾರೂಪದಲ್ಲಿ ಬಂದಿದ್ದರೆ ಹೆಚ್ಚು ಪರಿಣಾಮ ಕಾರಿಯಾಗಿರುತ್ತಿತ್ತು. ಸ್ವತಃ ಕರೀಂಖಾನರೇ ಆರ್ಥಿಕವಾಗಿ ಸಬಲರಾಗಿದ್ದರೆ, ಚಿತ್ರ ನಿರ್ಮಾಣ ಮಾಡುತ್ತಿದ್ದರು. ಇವರ ಆರ್ಥಿಕ ದುಃಸ್ಥಿತಿಯ ಕಾರಣದಿಂದ ಹಾಗೂ ಕೇಳಿ ಪಡೆಯದ ಜಾಯಮಾನದವರಾದ್ದರಿಂದ ವಿಶಿಷ್ಟವಾದ ಇವರ ಪ್ರತಿಭೆ ಅಲ್ಲಿಯೇ ಕಮರಿ ಹೋದಂತಾಯಿತು.

ಛಾಯಾಗ್ರಾಹಕ ನಿರ್ದೇಶಕ ಸಿರಿಗಂಧ ಶ್ರೀನಿವಾಸಮೂರ್ತಿ ಕರೀಂಖಾನರ ಹಲವಾರು ವರ್ಷಗಳ ಒಡನಾಡಿ ಯಾಗಿದ್ದು ಕರೀಂಖಾನರ ಹಲವು ಚಿತ್ರಗಳಲ್ಲಿ ಕೆಲಸ ನಿರ್ವಹಿಸಿದವರಾಗಿದ್ದಾರೆ. ಇವರು ಒಂದು ಕಡೆ ಹೇಳುವಂತೆ "ಕರೀಂಖಾನರನ್ನು ಒಂದು ವ್ಯವಸ್ಥಿತ ಜಾಲವೇ ಮುಂದೆ ಬಾರದಂತೆ ತಡೆಯುವಲ್ಲಿ ಪ್ರಯತ್ನಿಸಿತು. ಇದಕ್ಕೆಲ್ಲ ಇವರಲ್ಲಿರುವ ಅಗಾಧ ಜ್ಞಾನವೇ ಕಾರಣವಾಯಿತು. ಯಾವುದರಲ್ಲಿಯೂ ಕರೀಂಖಾನರಿಗೆ ಪ್ರೋತ್ಸಾಹ ಕೊಡದೇ ಇವರನ್ನು ಮೂಲೆಗುಂಪಾಗುವಂತೆ ಮಾಡಿದರು" ಎಂದು ಕರೀಂಖಾನರ ಬಗ್ಗೆ ಅನುಕಂಪ ಸೂಚಿಸುತ್ತಾರೆ.

ಕನ್ನಡ ಚಿತ್ರೋದ್ಯಮವನ್ನು ಉದ್ದೇಶಿಸಿ ಮಾತನಾಡುತ್ತ "೧೯೩೦ ರ ಈಚೆ ಕನ್ನಡ ಚಿತ್ರೋದ್ಯಮವನ್ನು ನಿರ್ಮಿಸಲು ಶ್ರಮಪಟ್ಟ ಕರೀಂಖಾನರು ಇಂದು ಒಂದು ಹೊತ್ತಿನ ಊಟಕ್ಕಾಗಿ ಪರದಾಡುವ ಸಮಯ ಇದಾಗಿದೆ" ಎಂದು ಕರೀಂಖಾನರ ಇಂದಿನ ದುಃಸ್ಥಿತಿಯನ್ನು ವಿವರಿಸಲಾಗಿದೆ. 'ಹಸುವಿನ ಹಾಲು ಕರೆದುಕೊಂಡು, ಹಸಿದಾಗ ಯಾರೂ ಹುಲ್ಲು ಹಾಕಲಿಲ್ಲ' ಎನ್ನುವ ಮಾತು ಕರೀಂಖಾನರಿಗೆ ಅನ್ವಯವಾಗುತ್ತದೆ. ಚಲನಚಿತ್ರ ಜಗತ್ತಿನಲ್ಲಿ ತಮ್ಮನ್ನು ತೊಡಗಿಸಿಕೊಂಡ ಕರೀಂಖಾನರ ಚಲನಚಿತ್ರ ಮಾಯಾಲೋಕದಲ್ಲಿ ತಮ್ಮದೇ ಪ್ರತಿಬಿಂಬ ಮೂಡಿಸುವುದಕ್ಕೋಸ್ಕರ ಮದ್ರಾಸಿಗೆ ಪ್ರಯಾಣ ಬೆಳೆಸಿದರು.

ಕರೀಂಖಾನರು ಹಲವಾರು ಕನ್ನಡ ಪೌರಾಣಿಕ ಮತ್ತು ಸಾಮಾಜಿಕ ಚಿತ್ರಗಳಿಗೆ ಬರೆದ ಸಂಭಾಷಣೆ ಮತ್ತು ಹಾಡುಗಳು ಸಿನೆಮಾ ಜಗತ್ತಿನಲ್ಲಿ ಹೊಸ ಚೈತನ್ಯವನ್ನು ಮೂಡಿಸಿದವು. ಭಕ್ತಿಪ್ರದಾನವಾದ ಗೀತೆಗಳು, ರಸಭರಿತವಾದ ಹಾಡುಗಳು ಕನ್ನಡಿಗರ

ಹೃದಯವನ್ನು ತಟ್ಟುವಂಥ ಸಾಹಿತ್ಯವನ್ನು ಕರೀಂಖಾನರು ಕೊಟ್ಟಿರುವುದು ಅಭೂತಪೂರ್ವವಾದ ಸಾಧನೆಯಾಗಿದೆ. ಸುಮಾರು ಕಾಲು ಶತಮಾನದವರೆಗೆ ಇವರು ಕನ್ನಡ ಚಿತ್ರರಂಗಕ್ಕೆ ಕಥೆಗಳನ್ನು, ಹಾಡುಗಳನ್ನು, ಸಂಭಾಷಣೆಗಳನ್ನು ಬರೆದರು. ಇವರು ಬರೆದ ಹಾಡುಗಳು ಬಾಲಮುರಳಿ ಕೃಷ್ಣ, ಪಿ. ಬಿ. ಶ್ರೀನಿವಾಸ, ಪಿ. ಸುಶೀಲಾ, ಎಲ್.ಆರ್. ಈಶ್ವರಿ, ಎಸ್. ಜಾನಕಿಯವರಂಥ ಶ್ರೇಷ್ಠ ಗಾಯಕರಿಂದ ಹಾಡಲ್ಪಟ್ಟವು. ಚಿತ್ರರಂಗದ ಖ್ಯಾತ ನಟ ನಟಿಯರಾದ ಬಿ. ಸರೋಜಾದೇವಿ, ಕೃಷ್ಣಕುಮಾರಿ, ಲೀಲಾವತಿ, ಭಾರತಿ, ರಮಾದೇವಿ, ಜಯಶ್ರೀ, ಡಾ. ರಾಜಕುಮಾರ, ಉದಯ್ ಕುಮಾರ, ನರಸಿಂಹರಾಜು, ಸುಂದರಕೃಷ್ಣ ಅರಸ್, ಶ್ರೀನಾಥ್, ಅಶ್ವಥ ಕೆ. ಎಸ್. ರಾಜಾಶಂಕರ್. ಬಾಲಕೃಷ್ಣ, ಮುಸರಿ ಕೃಷ್ಣಮೂರ್ತಿ, ವಜ್ರಮುನಿ ಮುಂತಾದವರು ಇವರು ಸಾಹಿತ್ಯವೊದಗಿಸಿದ ಸಿನೇಮಾಗಳಲ್ಲಿ ನಟಿಸಿ ಸಿನೆಮಾ ಖ್ಯಾತಿಗೆ ಕಾರಣರಾಗಿದ್ದಾರೆ.

ಡಿ. ಆರ್. ನಾಯ್ಡು, ವೈ.ಆರ್. ಸ್ವಾಮಿ, ಪಿ.ಎಸ್. ದಿವಾಕರ್, ಜಿ.ಎಸ್. ನಾರಾಯಣ್, ಸಿ.ಪಿ. ಜಂಬುಲಿಂಗಂ, ಎಸ್.ಆರ್. ಶಿವರಾಂ. ಶ್ರೀ ಪೊನ್ನುಸ್ವಾಮಿ, ಬಿ.ಆರ್. ಪಂತುಲು, ಚೆಲುವಕುಮಾರ್, ಶ್ರೀ ಕಾಮೇಶ್ವರ, ಎಚ್.ಎಮ್. ಕೆ. ಮೂರ್ತಿ, ಶಂಕರ್‌ಸಿಂಗ್, ವಾಲಿಯವರಂಥ ನಿರ್ದೇಶಕರ ನಿರ್ಮಾಪಕರೊಡನೆ ಕೆಲಸ ಮಾಡಿದ ಅನುಭವ ಕರೀಂಖಾನರಿಗಿತ್ತು.

ಛಾಯಾಗ್ರಾಹಕರಾಗಿ ಕರೀಂಖಾನರೊಡನೆ ಕೆಲಸ ಮಾಡಿದ ಸಿರಿಗಂಧ ಶ್ರೀನಿವಾಸ ಮೂರ್ತಿಯವರು ರಾಜೇಶ್ವರಿ ಸಿನೆಮಾ ಮಾಡುವಾಗ ಹೇಳಿದ ಮಾತು ಹೀಗಿದೆ. "ಕಥೆ, ಚಿತ್ರಕಥೆ, ಸಂಭಾಷಣೆ, ಹಾಡು ಕರೀಂಖಾನರು ಬರೆಯತ್ತಿದ್ದರು. ಪರಿಕಲ್ಪನೆ, ಕಲಾವಿದರ ಆಯ್ಕೆ ಕರೀಂಖಾನರದ್ದೇ ಇರುತ್ತಿತ್ತು. ಸಿನೆಮಾದಲ್ಲಿ ಮುಕ್ಕಾಲುಪಾಲು ಕೆಲಸ ಇವರದೇ. ಯಾಕೆಂದರೆ ಕರೀಂಖಾನರು ಪಳಗಿದವರಾಗಿದ್ದರು, ಇದೊಂದು ಮಕ್ಕಳ ಚಿತ್ರ" ಎನ್ನುವಲ್ಲಿ ಕರೀಂಖಾನರು ಕೇವಲ ಚಿತ್ರ ಸಾಹಿತಿಯಾಗಿರದೇ ಅನೇಕ ಚಿತ್ರಗಳಲ್ಲಿ ಚಿತ್ರದ ಒಡಲಾಳದ ಎಲ್ಲ ವಿಚಾರಗಳನ್ನು ನಿರ್ದೇಶಕ, ನಿರ್ಮಾಪಕ ಹಾಗೂ ಸಂಗೀತ ನಿರ್ದೇಶಕರಿಗೆ ಮಾರ್ಗದರ್ಶನ ನೀಡುವುದರ ಮೂಲಕ ಸಿನಿಮಾ ಖ್ಯಾತಿಗೆ ಕಾರಣರಾಗಿದ್ದರು.

### ಚಿತ್ರಕಥೆ, ಸಂಭಾಷಣೆ ಮತ್ತು ಚಿತ್ರಗೀತೆಗಳನ್ನು ಒದಗಿಸಿದ ಸಿನಿಮಾಗಳು

**ಸ್ವರ್ಣಗೌರಿ :** ಇದೊಂದು ಪೌರಾಣಿಕ ಕಥಾವಸ್ತುವುಳ್ಳ ಚಿತ್ರ, ಜಾನಪದ ಸಾಹಿತ್ಯದಲ್ಲಿ ಬರುವಂಥ ಕಾಳಿಂಗನ ಸುತ್ತ ಹೆಣೆದಿರುವ ಕಥೆ.

**ರಾಜೇಶ್ವರಿ :** ಇದೊಂದು ಸಾಮಾಜಿಕ ಮಕ್ಕಳ ಚಿತ್ರ. ಈ ಚಿತ್ರಕಥೆಯು ನಿಜ ಜೀವನದಲ್ಲಿ ನಡೆದ ಘಟನೆಯನ್ನು ಪ್ರತಿಬಿಂಬಿಸುತ್ತದೆ. ಹಲವು ವರ್ಷಗಳ ಹಿಂದೆ ಬೆಂಗಳೂರು ಸಮೀಪವೇ ಮಕ್ಕಳ ಬಲಿದಾನವನ್ನು ತಡೆಗಟ್ಟಿದ ಘಟನೆಯನ್ನು ಪ್ರತಿಬಿಂಬಿಸುತ್ತದೆ.

**ದೊಂಬರ ಕೃಷ್ಣ** : ಇದು ಇವರ ಮತ್ತೊಂದು ಮಕ್ಕಳ ಚಿತ್ರ, ದೊಂಬರ ಜೀವನದ ಪ್ರತಿಬಿಂಬ ಸಾರುವ ಈ ಚಿತ್ರದಲ್ಲಿ ದೊಂಬರ ಮಕ್ಕಳು ವಿವಿಧ ದೈಹಿಕ ಕಸರತ್ತುಗಳನ್ನು ಮಾಡಿ ಹಣಗಳಿಸಿ ಹೊಟ್ಟೆತುಂಬಿಕೊಳ್ಳುವ ವಿಚಾರವಿದೆ.

**ಸೂಪರ ನೋವಾ ೪೫೯** : ಇದೊಂದು ಮಕ್ಕಳ ಕುತೂಹಲವನ್ನು ಕೆರಳಿಸುವ ಚಿತ್ರವಾಗಿದ್ದು, ಗ್ರಹಗಳ ಕುರಿತಾಗಿ ಇದೆ. ಧೂಮಕೇತುಗಳು ಪೃಥ್ವಿಯ ಸಮೀಪದಿಂದ ಹಾಯ್ದು ಹೋಗುವಾಗ ಅವುಗಳಿಂದ ತ್ಯಜಿಸಲ್ಪಟ್ಟ ತ್ಯಾಜ್ಯಗಳು ಮುತ್ತು ರತ್ನಗಳಾಗಿ ಭೂಮಿಯ ಮೇಲೆ ಹರಡುವುದನ್ನು ಕಂಡು ಹಿಡಿಯಲು ನಡೆಸಿದ ಮಕ್ಕಳ ಸಾಹಸ ಚಿತ್ರ ಇದಾಗಿದೆ.

**ಗಂಗೆ ಗೌರಿ** : ೧೯೫೭ರಲ್ಲಿ ಗಂಗೆಗೌರಿ ಎಂಬ ಪೌರಾಣಿಕ ಚಿತ್ರಕಥೆಗೆ ಸಂಭಾಷಣೆ ಮತ್ತು ಗೀತೆಗಳನ್ನು ನೀಡಿದರು.

**ದೇವಮಾನವ** : ಇದೊಂದು ಸಾಮಾಜಿಕ ಚಿತ್ರ ಇದನ್ನು ಡಾ. ರಾಜಕುಮಾರ್ ಸಲುವಾಗಿ ನಿರ್ಮಿಸಿದ ಚಿತ್ರವೆಂದು ಕರೀಂಖಾನರು ಒಂದು ಕಡೆ ಹೇಳಿದ್ದಾರೆ.

**ಜೀವನ ತರಂಗ** : ಇದೊಂದು ಸಾಮಾಜಿಕ ಚಿತ್ರ

**ಚಂದ್ರಕುಮಾರ** : ಇದೊಂದು ಜಾನಪದ ಕಥೆಯನ್ನೊಳಗೊಂಡ ಚಿತ್ರವಾಗಿದೆ.

**ಬೇವುಬೆಲ್ಲ** : ಸಾಮಾಜಿಕ ಚಿತ್ರವಾಗಿದೆ. ಹಳ್ಳಿ ಮಾತಿನ ಸೊಗಡಿನಲ್ಲಿ ಭಾಷಾ ವೈಖರಿಯನ್ನು ನಿರೂಪಿಸಿದ್ದಾರೆ.

**ಬೆಂಗಳೂರು ರಾತ್ರಿಯಲ್ಲಿ** : ಇದೊಂದು ಸಾಮಾಜಿಕ ಚಿತ್ರ.

**ಯೌವ್ವನದ ಅನುಭವ** : ಇದು ಸಾಮಾಜಿಕ ಚಿತ್ರ.

**ಪತಿತಪಾವನೆ** : ಇದು ಸಾಮಾಜಿಕ ಚಿತ್ರವಾಗಿದ್ದು, ಈ ಪ್ರಸಿದ್ಧ ಚಿತ್ರವನ್ನು ಕನ್ನಡ ಅಷ್ಟೇ ಅಲ್ಲ, ಮರಾಠಿಯಲ್ಲಿಯೂ ಕೂಡಾ ಭಾಷಾಂತರಿಸಿದರು.

**ಯಾರು ಹಿತವರು** : ಇದು ಸಾಮಾಜಿಕ ಸಿನೆಮಾ ಆಗಿದ್ದು ಬೆಂಗಳೂರಿನಲ್ಲಿ ನಿರ್ಮಾಣಗೊಂಡಿತು.

**ಶ್ರೀ ಕೃಷ್ಣ ಲೀಲಾ** : ಇದೊಂದು ಪೌರಾಣಿಕ ವಿಷಯಗಳನ್ನೊಳಗೊಂಡ ಚಿತ್ರವಾಗಿ ತೆರೆಕಾಣಲು ಸಿದ್ಧವಾಗಿತ್ತು. ಕಾರಣಾಂತರಗಳಿಂದ ಚಿತ್ರವಾಗಿ ಮಾರ್ಪಡದೇ ನಾಟಕರೂಪವಾಗಿ ಹೊರಬಂತು.

'ಪತಿತಪಾವನ' ಚಿತ್ರಕ್ಕಾಗಿ ಗೀತೆಗಳನ್ನು ರಚಿಸಲು ಮತ್ತು ಚಿತ್ರರಂಗದಲ್ಲಿ ಕಾಣಿಸಿಕೊಂಡ ಎಸ್.ಕೆ. ಕರೀಂಖಾನರವರ ಬದುಕಿನ ರೀತಿಯನ್ನು ಅರಿಯಲು ಪ್ರಜಾವಾಣಿ ದಿನಪತ್ರಿಕೆ ಅವರನ್ನು ಭೆಟ್ಟಿ ಮಾಡಿದಾಗ ಕಂಡದ್ದು ಆರೈಕೆ ಮಾಡುವವರೇ ಇಲ್ಲದೇ ಕುಸಿಯುತ್ತಿರುವ ಬೃಹದಾಕಾರದ ಮರವೊಂದನ್ನು" ಎನ್ನುವ ಮಾತಿನಲ್ಲಿ

ಕನ್ನಡದ ಏಳ್ಗೆಗಾಗಿ ಅಹರ್ನಿಶಿ ದುಡಿಮೆ ಮಾಡಿದ ಕರೀಂಖಾನರು ದಿವ್ಯ ನಿರ್ಲಕ್ಷ್ಯಕ್ಕೆ ಒಳಗಾಗಿದ್ದರು ಎಂಬ ವಿಷಯ ವಿಷಾದದ ಸಂಗತಿಯಾಗಿದೆ. "ಆದರೆ ಸಿನೆಮಾ ಜಗತ್ತು ಕರೀಂಖಾನ ಅಂಥವರಿಗಲ್ಲ, ಇಲ್ಲಿಯೂ ಕರೀಂಖಾನರ ಪಾಲಿಗೆ ದುರ್ದಿನಗಳೇ ತುಂಬಿಕೊಂಡವು. ಕರೀಂಖಾನರ ಅನಿವಾರ್ಯ ಸ್ಥಿತಿಯನ್ನು ಅರಿತುಕೊಂಡಿದ್ದ ಕೆಲವು ಖದೀಮ ನಿರ್ಮಾಪಕರು ಊಟ ಕೊಡಿಸಿ, ಹಾಡು ಬರೆಸಿಕೊಂಡು, ಕಾಟಾಚಾರಕ್ಕೆ ಒಂದಿಷ್ಟು ಹಣವನ್ನು ಕೊಟ್ಟು ಕಳಿಸುತ್ತಿದ್ದರು. ಅವರು ಕೊಟ್ಟಷ್ಟನ್ನು ಪಡೆದು ಸುಮ್ಮನಾಗುತ್ತಿದ್ದರು. ಇವರ ಕಥೆಗಳನ್ನು ಕದ್ದವರೆಷ್ಟು ಜನವೋ? ಇವರ ಹೆಸರಿನ ಸಂಭಾಷಣೆಗಳನ್ನು ಮತ್ತು ಗೀತೆಗಳನ್ನು ತಮ್ಮದು ಎಂದವರು ಎಷ್ಟು ಜನವೋ? ಅಂತೂ ೧೦ ವರ್ಷಗಳ ಆ ಶೋಷಣೆಯ ಬದುಕನ್ನು ತಾಳ್ಮೆಯಿಂದ ಕಳೆದ ಕರೀಂಖಾನ್ ರೋಸಿ ಬೆಂಗಳೂರಿನ ಕಡೆಗೆ ಮುಖ ಮಾಡಿದರು" ಎನ್ನುವ ಮಾತಿನಲ್ಲಿ ಕರೀಂಖಾನರು ಎಡಬಿಡದೇ ಶೋಷಣೆಗೊಳಗಾಗಿದ್ದರು ಎಂಬುದು ವಿಧಿತವಾಗುತ್ತದೆ.

ಕರೀಂಖಾನರ ಬಹುಮುಖ ಪ್ರತಿಭೆಯನ್ನು ವ್ಯಕ್ತಪಡಿಸಿದ ಮಾ. ಹಿರಣ್ಣಯ್ಯನವರ ಮಾತಿನಂತೆ "ಕರೀಂಖಾನ್ ಅವರೆಷ್ಟು ಬರೆದಿದ್ದಾರೆ? ಅವರು ಬಹಳ ಬರೀಲಿಲ್ಲ, ಇಷ್ಟೇ ಬರ್ದಿರೋದು, ಇವತ್ತಿನ ಇಷ್ಟೂ ಕೂಡ ಅಷ್ಟನ್ನು ಇನ್ನೂ ಮೀರಿಸೋಕ್ಕೆ ಆಗಿಲ್ಲ, ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಇವತ್ತು ಬ್ರಹ್ಮಾಂಡದಷ್ಟು ಕಸ ಬಿದ್ದಿದೆ. ಆವತ್ತಿನ ಒಂದೇ ಒಂದು ತೊಟ್ಟು ರಸಕ್ಕೆ ಈ ಕಸ ಸಮವಾಗಿಲ್ಲ, ಕಸ ಕಸವೇ, ರಸ ರಸವೇ" ಈ ಮಾತಿನಲ್ಲಿ ಕರೀಂಖಾನರು ಅಪಾರ ಪ್ರತಿಭೆಯುಳ್ಳವರು ಎನ್ನುವುದು ಸ್ಪಷ್ಟವಾಗುತ್ತದೆ. ನಿಸರ್ಗ ರಮಣೀಯ ತಾಣವಾದ ಸಕಲೇಶಪುರದ ಹಸಿರ ಸಿರಿಯನ್ನು ಕ್ಯಾಮರಾ ಮೂಲಕ ನಾಡಿನ ಜನತೆ ಸವಿಯುವಂತೆ ನಿರ್ಮಾಪಕರಿಗೆ ಪ್ರೇರಣೆ ನೀಡಿದರು.

ಕರೀಂಖಾನರು ಮೊದಲು ಮನಸ್ಸು ಮಾಡಿದ್ದು ಪೌರಾಣಿಕ, ಜಾನಪದ ಅಂಶಗಳಿರುವ ಚಿತ್ರಗಳು ಎರಡನೆಯದಾಗಿ ಆಧುನಿಕ ಜೀವನದಲ್ಲಿ ಸಿಲುಕಿರುವ ಯುವಜನರ ಕಥೆಯನ್ನು ಕೇಂದ್ರವಾಗುಳ್ಳ ಚಿತ್ರಗಳು. ಹೇಳುವ ರೀತಿ, ವೇಗ, ಸಂವಿಧಾನ, ಭಾಷಾ ಸೌಂದರ್ಯ ಎಲ್ಲಾ ನಿತ್ಯನೂತನ, ಇವರ ಚಿತ್ರಗಳಲ್ಲಿ ಹೆಚ್ಚು ಗೀತೆಗಳಿವೆ ಎಂದು ಆಪಾದಿಸಲಾಗಿದ್ದೂ ಇದೆ. ಆದರೆ ಅಂದು ನಾಟಕಗಳೆಲ್ಲವೂ ಹೆಚ್ಚಾಗಿ ಗೀತೆಗಳಿಂದಲೇ ತಮ್ಮ ಪರಿಚಯ ರಂಗದ ಮೇಲೆ ಹೇಳಿಕೊಳ್ಳುತ್ತಿದ್ದವು. ಆದ್ದರಿಂದ ಕರೀಂಖಾನರು ಚಿತ್ರಸಾಹಿತ್ಯ ನೀಡುವ ಸಮಯಕ್ಕೆ ಹೆಚ್ಚು ಹೆಚ್ಚು ಗೀತೆಗಳನ್ನು ಪ್ರೇಕ್ಷಕರು ಅಪೇಕ್ಷಿಸುತ್ತಿದ್ದರು.

**ಚಿತ್ರರಂಗದ ಕುರಿತ ಕರೀಂಖಾನರ ಅನಿಸಿಕೆ :**

ಅಂದಿನ ಚಿತ್ರರಂಗದ ಕುರಿತು ಕರೀಂಖಾನರು ಹೇಳುತ್ತಾ – "ಚಿತ್ರ ನಿರ್ಮಾಪಕರು ಸರ್ಕಾರದವರು ಇರುತ್ತಿರಲಿಲ್ಲ, ಸ್ವತಂತ್ರರಾಗಿರುವವರೂ ನಿರ್ಮಾಪಕರಾಗಿರುತ್ತಿದ್ದರು.

ಒಬ್ಬರಿಗೆ ಅವಕಾಶ ಕೊಡಬೇಕು, ಕೊಡಬಾರದು ಎಂಬುದು ಅವರಿಚ್ಛೆಯಾಗಿತ್ತು, ಅವ್ರ್ ದುಡ್ಡ್ ನೋಡಿ, ಸರ್ಕಾರದಿಂದ ಚಿತ್ರ ತಯಾರಾಗೋದು ಒಂದು ವರ್ಗ, ಆದರೆ ನಿರ್ಮಾಪಕರೇ ಹೆಚ್ಚಿನ ಚಿತ್ರಗಳನ್ನು ಸ್ವತಂತ್ರವಾಗಿ ತಯಾರಿಸುತ್ತಿದ್ದರು. ಇವತ್ತಿಗೂ ಹಾಗೇ ಅವರು ತಮಗೆ ಬೇಕಾದವರಿಗೆ ಅವಕಾಶ ನೀಡುತ್ತಾರೆ.

ನಕ್ಷತ್ರಲೋಕ ಪತ್ರಿಕೆ ಕರೀಂಖಾನರನ್ನು ಸಂದರ್ಶಿಸಿ ಸಿನಿಮಾ ಕ್ಷೇತ್ರದ ಬಗ್ಗೆ ಕೇಳಿದಾಗ ಕರೀಂಖಾನರು "ಕನ್ನಡ ಚಿತ್ರರಂಗದಲ್ಲಿ ವ್ಯಕ್ತಿಪೂಜೆಯೇ ಅಧಿಕ, ಪ್ರೇಕ್ಷಕರು ಭೋಗ ವಿಲಾಸಿಗಳು, ಮನರಂಜನೆ ಎಂಬ ಕಾಮದಲ್ಲಿ ಮುಳುಗಿದ್ದಾರೆ. ಚಿತ್ರರಂಗ ಇಂಥವರ ಅಭಿರುಚಿಗೆ ಹೊಂದಿಕೊಂಡು ಬಿಟ್ಟಿದೆ. ಈ ಕಾರಣದಿಂದಲೇ ಹೊಸ ಪೀಳಿಗೆಯಲ್ಲಿ ಶ್ರೇಷ್ಠ ಕಲಾವಿದರು ಬರುವುದು ಸಾಧ್ಯವಾಗಿಲ್ಲ." ಇದು ಹೆಸರಾಂತ ಬರಹಗಾರ, ಕವಿ, ಕರೀಂಖಾನರ ಮಾತು. ಇವರು ಸಚ್ಚಾರಿತ್ರ್ಯವುಳ್ಳ, ಆದರ್ಶವುಳ್ಳ ವಿಚಾರದ ಕಡೆಗೆ ಗಮನ ಹರಿಸಿದ್ದರಿಂದ ಇಂದು ಧನ ಮೋಹಕ್ಕಾಗಿ ತಯಾರಿಸುವ ಕೀಳುಮಟ್ಟದ ಚಿತ್ರಗಳನ್ನು ಕಂಡು ಇವರು ಹೇಸಿಹೋಗಿದ್ದಾರೆ.

ಚಿತ್ರರಂಗದಿಂದ ಹೆಚ್ಚಿನದು ಪ್ರಾಪ್ತವಾಯಿತೆಂದು ಹೇಳಲಾರೆ. 'ಸ್ವರ್ಣಗೌರಿ' ಚಿತ್ರ ಚೆನ್ನಾಗಿ ನಡೀತು. ಅದಕ್ಕೆ ಕಥೆ, ಸಂಭಾಷಣೆ, ಹಾಡು ಬರೆದವನು ನಾನು, ಇವೆಲ್ಲಕ್ಕೂ ಸೇರಿ ಒಂದೊಂದು ಸಾವಿರ ರೂಪಾಯಿಗಳಿಗಿಂತ ಹೆಚ್ಚು ಸಿಗಲಿಲ್ಲ. ಊಟ, ತಿಂಡಿ ಎಲ್ಲ ನನ್ನದೇ ಖರ್ಚು, ನನ್ನನ್ನು ಅಪಮಾನಿಸಿದ ಪ್ರಸಂಗಗಳೂ ಇವೆ. ನಾನದನ್ನೆಲ್ಲ ಈಗ ಹೇಳೋದಿಲ್ಲ, ಹೇಳಿ ಏನಾಗಬೇಕಿದೆ? ನನ್ನ ಕೈಲಾದ್ದು ಮಾಡಿದ್ದೇನೆ" ಎನ್ನುವಲ್ಲಿ ತಮ್ಮ ಅಂತರಾಳದ ವಿಷಯವನ್ನು ಹೊರಹಾಕುತ್ತಾರೆ. ಇಂದಿನ ಕನ್ನಡ ಚಿತ್ರರಂಗದ ಬಗ್ಗೆ ಕೇಳಿದಾಗ ಕರೀಂಖಾನರು– "ಏನಿದೆ ಹೇಳಲು? ಭೋಗ ವಿಲಾಸ ಪ್ರೇಕ್ಷಕರು ಬದಲಾಗಬೇಕು, ಮೇಲು ಕೀಳು ಭಾವನೆ ತೊಲಗಬೇಕು. ಕನ್ನಡ ತಾಯಿಗೆ, ಕನ್ನಡ ಕಲಾದೇವಿಗಾಗಿ ದುಡಿಯುತ್ತಿರುವ ಪ್ರತಿಯೊಬ್ಬರಿಗೂ ಉತ್ತೇಜನ ಸಿಗಬೇಕು.

ಕರೀಂಖಾನರು ಚಿತ್ರರಂಗದ ಸಮಗ್ರ ವಿಚಾರವನ್ನೂ ಇಲ್ಲಿ ಮನದಟ್ಟು ಆಗುವಂತೆ ವಿವರಿಸಿರುತ್ತಾರೆ. ಇದರಿಂದ ಸಿನಿಮಾ ಕ್ಷೇತ್ರದ ಅಮೂಲಾಗ್ರ ವಿಷಯಗಳು ಇವರಿಗೆ ತಿಳಿದಿತ್ತು ಎನ್ನುವುದು ವೇದ್ಯ. ಈ ವಿಚಾರಗಳನ್ನು ಗಮನಿಸಿದಾಗ ಕರೀಂಖಾನರಂಥವರು ಎಷ್ಟೇ ಪ್ರಭಾವಿತವಾದ ಸಂಭಾಷಣೆ, ಗೀತರಚನೆಗಳನ್ನು ಮಾಡಿದರೂ ಕೂಡಾ, ಚಿತ್ರನಿರ್ಮಾಪಕರಿಗೆ ಹಣವೇ ಮುಖ್ಯವಾದ್ದರಿಂದ ಕರೀಂಖಾನರು ಚಾರಿತ್ರ್ಯವಂತ ಸಾಹಿತ್ಯ ಒದಗಿಸಿದವರಾಗಿದ್ದರೂ ಕೂಡಾ ಈ ರಂಗದಲ್ಲಿ ಮುಂದುವರಿಯಲು ವಂಚಿತರಾದರು. ನಕ್ಷತ್ರಲೋಕ ಪತ್ರಿಕೆಯಲ್ಲಿ ಪ್ರಭಾಕರಶಾಸ್ತ್ರಿಗಳು ಕರೀಂಖಾನರಂಥ ಶ್ರೇಷ್ಠ ಬರಹಗಾರರ ಕುರಿತು ಹೇಳುತ್ತಾ – "ಕರೀಂಖಾನರಂಥವರು ಸಿನೆಮಾ ಕ್ಷೇತ್ರಕ್ಕೆ ಬರಲೇಬಾರದಿತ್ತು ಎಂದರು. ಇದು ಇನ್ನೂ ಹಲವರ ಅನಿಸಿಕೆ. ಅಂದರೆ ಈ ಕ್ಷೇತ್ರಕ್ಕಿಂತ ಬೇರೆಡೆ ಬೆಳಗಬಲ್ಲ ಪಾಂಡಿತ್ಯ

ಅವರಲ್ಲಿತ್ತು" ಈ ಮಾತಲ್ಲಿ ಕರೀಂಖಾನರ ಬಗ್ಗೆ ಎಂಥ ಅಳುವಿದೆ ಎಂಬ ಸತ್ಯ ಗೋಚರಿಸುವದು. ಇವರ ಮುಗ್ಧತೆಯ ದುರುಪಯೋಗ ಮಾಡಿಕೊಂಡ ಅನೇಕ ಚಿತ್ರನಿರ್ಮಾಪಕರು, ಚಿತ್ರನಟರು, ಸಾಹಿತಿಗಳು ಕರೀಂಖಾನರನ್ನು ನಿರ್ಲಕ್ಷಿಸಿ ತಾವು ಜನಪ್ರಿಯತೆ ಮತ್ತು ಹಣವನ್ನು ಗಳಿಸಿಕೊಂಡರು.

**ಚಿತ್ರರಂಗದಿಂದ ಕರೀಂಖಾನರ ನಿರ್ಗಮನ :**

ಕರೀಂಖಾನರು ಕನ್ನಡ ಚಿತ್ರೋದ್ಯಮವನ್ನು ಬಂಗಾರದ ಮೊಟ್ಟೆಯನ್ನಿಡುವ ಕೋಳಿಗೆ ಹೋಲಿಸಿದ್ದಾರೆ. ಅದಕ್ಕಾಗಿಯೇ ಪ್ರತಿಯೊಬ್ಬ ಕನ್ನಡ ಚಿತ್ರರಂಗವನ್ನು ಪ್ರವೇಶಿಸಲು ಇಚ್ಛಿಸುತ್ತಾನೆ. ಯಾವನೋ ಒಬ್ಬ ಈ ಉದ್ಯಮದಲ್ಲಿ ಏನೋ ಆಗಬಹುದು. ಅವನಿಗೆ ಯಾವ ಅರ್ಹತೆಗಳೂ ಬೇಕೆಂಬ ನಿಯಮಾವಳಿಗಳಾಗಲಿ ಬೇಕಾಗಿಲ್ಲ. ಚಿತ್ರೋದ್ಯಮದ ಜ್ಞಾನವಿಲ್ಲದವನೂ ಕೂಡ ನಿರ್ದೇಶಕನು, ಬರಹಗಾರ ಅಥವಾ ಇನ್ನೇನಾದರೂ ಆಗಬಹುದು ಎಂಬುದು ಕರೀಂಖಾನರ ಅಭಿಪ್ರಾಯವಾಗಿದೆ. ಆದರ್ಶ, ಭ್ರಮೆಗಳನ್ನು ಬೆನ್ನುಹತ್ತಿದವರಾರು ಪ್ರತ್ಯಕ್ಷ ಬದುಕಿನಲ್ಲಿ ಯಶಸ್ವಿ ಎನಿಸುವುದು ಕಷ್ಟ ವಾಸ್ತವಿಕತೆಯೊಂದೇ ಇಡೀ ಮಾನವ ಬದುಕಿಗೆ ಭದ್ರಬುನಾದಿ; ಬದುಕಿನುದ್ದಕ್ಕೂ ನೋವಿನ ರುಚಿ ಕಂಡವರು ಕರೀಂಖಾನರು. ಸಿನೆಮಾ ಜಗತ್ತಿನ ಕೆಲವರ್ಗ 'ಮುಖವಾಡ' ಸೋಗಿನ ಮುಸುಕಿನಲ್ಲಿ ಬದುಕುತ್ತಿರುವಾಗ ಸಿನೆಮಾ ಬದುಕಿಗೆ ಹತ್ತಿರವಾಗಲು ವಾಸ್ತವಿಕವಾಗಲು ಹೇಗೆ ಸಾಧ್ಯ? ಆದ್ದರಿಂದ ಆದರ್ಶತನವನ್ನು ಎತ್ತಿ ಹಿಡಿದ ಕರೀಂಖಾನರಿಗೆ ಚಿತ್ರರಂಗದಲ್ಲಿ ಬಹಳ ದಿನ ಉಳಿಯಲಾಗಲಿಲ್ಲ. ಒಂದು ದಶಕಗಳ ಕಾಲ ಕರೀಂಖಾನರ ವಿದ್ವತ್ತನ್ನು ದೋಚಿದ ಚಲನಚಿತ್ರ ಜಗತ್ತಿನ ಶೋಷಣೆಯಿಂದ ರೋಸಿದ್ದ ಕರೀಂಖಾನರು ಮದ್ರಾಸ್‌ನಿಂದ ಬೆಂಗಳೂರಿಗೆ ಪಯಣಿಸಿದರು.

ಹೀಗೆ ಸಿನೆಮಾ ಕ್ಷೇತ್ರದಲ್ಲಿ ಉತ್ತಮ ಗೀತ ರಚನೆ, ಸಂಭಾಷಣೆ, ಚಿತ್ರಕಥೆ ಗಳನ್ನು ನೀಡಿದ್ದರಿಂದ ಚಲನಚಿತ್ರರಂಗದಲ್ಲಿ ಹಲವು ಪ್ರಶಸ್ತಿಗಳನ್ನು ಪಡೆದ ಇವರು ಶ್ರೇಷ್ಠರು. ಚಿತ್ರರಂಗದಲ್ಲಿ ಇವರ ಅಪೂರ್ವ ಸೇವೆಯನ್ನು ಕನ್ನಡದ ಜನ ಮರೆಯಲಾರದಂಥದ್ದು. ಕರೀಂಖಾನರು ಹಲವು ಚಿತ್ರಗಳಿಗೆ ಸಂಭಾಷಣೆ, ಕಥೆ, ಗೀತರಚನೆ ಮಾಡಿದ್ದರಾದರೂ ಅವೆಲ್ಲ ಉಪಲಬ್ಧವಾಗಿಲ್ಲ, ಉಪಲಬ್ಧವಿರುವ 'ಸ್ವರ್ಣಗೌರಿ' ಹಾಗೂ ಬೇವುಬೆಲ್ಲ' ಈ ಎರಡು ಚಿತ್ರಗಳ ಬಗ್ಗೆ ಇಲ್ಲಿ ಉಲ್ಲೇಖಿಸಲಾಗಿದೆ.

**'ಸ್ವರ್ಣಗೌರಿ'**

ಇದೊಂದು ಪೌರಾಣಿಕ ಚಿತ್ರಕಥೆಯಾಗಿದೆ. ಕರೀಂಖಾನರು ಜಾನಪದ ಗೀತೆಗಳ ಸಂಗ್ರಹ ಕಾರ್ಯದಲ್ಲಿ ತೊಡಗಿರುವ ಸಮಯದಲ್ಲಿ ದೊರೆತ ಮೂಲಕಥೆ 'ಸ್ವರ್ಣಕಾಳಿಂಗ' ಎಂಬ ಶೀರ್ಷಿಕೆಯ ಕಥೆಯನ್ನು 'ಸ್ವರ್ಣಗೌರಿ' ಎಂಬ ಶೀರ್ಷಿಕೆಯಡಿಯಲ್ಲಿ ಚಲನಚಿತ್ರವಾಗಿ ಮಾರ್ಪಡಿಸಿದರು. ಈ ಚಲನಚಿತ್ರಕ್ಕೆ

ಕಥೆಗಾರರಾಗಿ, ಸಂಭಾಷಣೆಗಾರರಾಗಿ, ಗೀತರಚನೆಕಾರರಾಗಿ ಕಾರ್ಯನಿರ್ವಹಿಸಿ ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ಈ ಚಿತ್ರಕ್ಕೆ ರಾಷ್ಟ್ರಪ್ರಶಸ್ತಿ ಬಂದಿದೆ. ಇದರಲ್ಲಿ ಬರುವ ದೇವ–ದೇವತೆಗಳ ಸಂಬಂಧಗಳ ಅಂಶ ಪ್ರಕಟಗೊಂಡಿದೆ.

ಈ ಸಿನೇಮಾ ೧೯೬೩ರಲ್ಲಿ ತೆರೆ ಕಂಡಿತು. ಶ್ಯಾಮ್‌ಪ್ರಸಾದ ಮೂವೀಸ್‌ನವರು ತಯಾರಿಸಿರುವ ಈ ಚಲನಚಿತ್ರದಲ್ಲಿ ಮೇರು ಕಲಾವಿದರಾದ ಡಾ. ರಾಜಕುಮಾರ, ಉದಯಕುಮಾರ, ನರಸಿಂಹರಾಜು, ಅಶ್ವಥ, ಕೃಷ್ಣಕುಮಾರಿ, ಲಕ್ಷ್ಮೀದೇವಿ, ರಮಾದೇವಿ ಮುಂತಾದವರು ನಟಿಸಿದ್ದಾರೆ. ವೈ.ಆರ್. ಸ್ವಾಮಿ ನಿರ್ದೇಶನದ ಈ ಚಲನಚಿತ್ರದಲ್ಲಿ ಕಥೆ, ಸಂಭಾಷಣೆ ಮತ್ತು ಗೀತೆಗಳನ್ನು ಎಸ್.ಕೆ. ಕರೀಂಖಾನರು ರಚಿಸಿರುತ್ತಾರೆ. ಗಾಯಕರಾಗಿ ಎಸ್. ಜಾನಕಿ, ಪಿ. ಸುಶೀಲಾ, ಪಿ.ಬಿ. ಶ್ರೀನಿವಾಸ್, ಚಿತ್ತರಂಜನ್ ಇವರು ತಮ್ಮ ಮಧುರ ಕಂಠಶ್ರೀಯನ್ನು ನೀಡಿರುತ್ತಾರೆ.

**ಬೇವುಬೆಲ್ಲ :**

ಇದೊಂದು ಸಾಮಾಜಿಕ ಚಿತ್ರಕಥೆಯಾಗಿದೆ. ಶ್ರೀ ಭಾರ್ಗವ ಪ್ರೊಡಕ್ಷನ್ ರವರು ೧೯೬೨ ರಲ್ಲಿ ನಿರ್ಮಾಣಮಾಡಿರುವ ಈ ಚಿತ್ರಕಥೆಗೆ ಸಂಭಾಷಣೆ ಮತ್ತು ಗೀತೆಗಳನ್ನು ಕರೀಂಖಾನರು ಅತಿ ಉತ್ಕೃಷ್ಟಶೈಲಿಯಲ್ಲಿ ನೀಡಿರುತ್ತಾರೆ. ಹಳ್ಳಿ ಮಾತಿನ ಸೊಗಡಿನಲ್ಲಿ ಜಾನಪದ ಗೀತೆಯ ಪ್ರಾರಂಭದೊಂದಿಗೆ ಚಿತ್ರ ಪ್ರಾರಂಭವಾಗುತ್ತದೆ. ಪಾತ್ರವರ್ಗದಲ್ಲಿ ಉದಯಕುಮಾರ, ರಾಜಾಶಂಕರ, ಲೀಲಾವತಿ, ರಾಜಶ್ರೀ, ಜಯಶ್ರೀ, ವಸಂತಿ, ಪಾಪಮ್ಮ ಮುಂತಾದ ಕಲಾವಿದರಿದ್ದಾರೆ. ಹಿನ್ನೆಲೆ ಗಾಯಕರಾಗಿ ಪಿ. ಬಿ. ಶ್ರೀನಿವಾಸ್, ಎಸ್. ಜಾನಕಿ, ಬೆಂಗಳೂರು ಲತಾ, ಮಾಧವ ಪೆದ್ದಿ ಸತ್ಯಮ್ ಮುಂತಾದವರು ಕರೀಂಖಾನರು ರಚಿಸಿದ ಗೀತೆಗಳನ್ನು ಸೊಗಸಾಗಿ ಹಾಡಿ ಸಿನೇಮಾ ಖ್ಯಾತಿಗೆ ಕಾರಣರಾಗಿದ್ದಾರೆ. ಹಾಡಿಗೆ ಸಂಗೀತವನ್ನು ಪಿ.ಎಸ್. ದಿವಾಕರ್ ಸೊಗಸಾಗಿ ಸಂಯೋಜಿಸಿದ್ದಾರೆ. ನಿರ್ದೇಶನ ಜಿ.ಎಸ್. ನಾರಾಯಣ ನಿರ್ಮಾಪಕ ಟಿ.ಎಸ್. ಗೋಪಾಲಕೃಷ್ಣ ಅಯ್ಯರ್ ಇವರ ಸಹಕಾರದೊಂದಿಗೆ ಬೇವು–ಬೆಲ್ಲ ಚಲನಚಿತ್ರ ತೆರೆಕಂಡಿತು.

**ಸಂಭಾಷಣೆ :**

ಗೀತರಚನೆ ಮತ್ತು ಭಾಷಾಪ್ರಭುತ್ವದಲ್ಲಿ ಪ್ರಖ್ಯಾತರೆನಿಸಿದ ಕರೀಂಖಾನರು 'ಬೇವು ಬೆಲ್ಲ' ಚಿತ್ರಕ್ಕೆ ಅತ್ಯುತ್ತಮ ಸಂಭಾಷಣೆ ಮತ್ತು ಗೀತರಚನೆ ನೀಡಿದ್ದಾರೆ. ಐವತ್ತು ಅರವತ್ತರ ದಶಕದಲ್ಲಿ ನಿರ್ಮಾಣವಾದ ಚಿತ್ರಗಳು ಪೌರಾಣಿಕವಿರಲಿ, ಸಾಮಾಜಿಕವಿರಲಿ ಎಲ್ಲ ಕ್ಷೇತ್ರದಲ್ಲೂ ಅಪೂರ್ವ ಪ್ರತಿಭೆಯನ್ನು ಹೊಂದಿರುವಂಥ ಕರೀಂಖಾನರು ಚಿತ್ರನಿರ್ಮಾಣಕಾರರಿಗೆ ಬಂಗಾರದ ಮೊಟ್ಟೆಯಿಡುವ ಕೋಳಿಯಾಗಿದ್ದರು. ಐವತ್ತು ಅರವತ್ತರ ದಶಕದಲ್ಲಿ ಇವರು ಸಾಹಿತ್ಯ ನೀಡಿದ ಚಿತ್ರಗಳು ಇಂದಿಗೂ ನಾವೀನ್ಯತೆಯನ್ನು ಉಳಿಸಿಕೊಂಡಿವೆ. ಇವರು ನೀಡಿರುವ ಸಂಭಾಷಣೆ ಹಾಗೂ ಹಾಡುಗಳು

ಕುಟುಂಬದವರೆಲ್ಲರೂ ನೋಡಲರ್ಹವಾದ ಆದರ್ಶನೀತಿ, ಮೌಲ್ಯಗಳನ್ನು ಪ್ರತಿಪಾದಿಸುವಂಥವುಗಳಾಗಿವೆ.

**ಹಾಸ್ಯ :**

ಕರೀಂಖಾನರ ಚಿತ್ರಕಥೆಗಳಲ್ಲಿ ಹಾಸ್ಯ ಪ್ರಸಂಗಗಳು ಹಾಸುಹೊಕ್ಕಾಗಿವೆ. ವಸ್ತು ನಿರ್ವಹಣೆಯ ಒಂದು ಭಾಗವಾಗಿ ಇವರ ನಿರ್ವಹಣೆ ಅಚ್ಚುಕಟ್ಟಿನದು. ಸಾಮಾಜಿಕವಾದ ಅಸಮತೆ ಕಂಡಾಗ ಅಸಹನೆ ರೋಷಗಳು ವ್ಯಂಗ್ಯದಲ್ಲಿ ಧ್ವನಿತವಾಗುತ್ತವೆ. ಈ ಕಟಕಿಯ ಖಾರಕ್ಷಾರಗಳು ಚಿತ್ರಕಥೆಯ ಉದ್ದೇಶಕ್ಕೆ ತಕ್ಕಂತೆ ಅಭಿವ್ಯಕ್ತವಾಗುತ್ತವೆ. ಇಂಥ ಹಾಸ್ಯ ಪ್ರಸಂಗಗಳು ಕುತೂಹಲವನ್ನು ಕೆರಳಿಸಿ, ಪ್ರೇಕ್ಷಕರಿಗೆ ಆಸಕ್ತಿ ಹೆಚ್ಚಿಸುತ್ತವೆ. ಸ್ವರ್ಣಗೌರಿ ಚಿತ್ರದಲ್ಲಿ ಬೆಪ್ಪನಂತೆ ಪಾತ್ರವಹಿಸಿದ ಗಣಪತಿ ಭೋಮತಿಯನ್ನು ಪ್ರೀತಿಸುವ ಪ್ರಸಂಗ ಪ್ರೇಕ್ಷಕರಿಗೆ ಹಾಸ್ಯದ ರಸದೌತಣವನ್ನು ನೀಡುತ್ತದೆ.

ಕರೀಂಖಾನರು ಸಾಹಿತ್ಯದಲ್ಲಿ ಹಾಸ್ಯವನ್ನು ಹೇಳುವ ರೀತಿ ಸೊಗಸಾಗಿದೆ. ಕೌಟುಂಬಿಕ, ಸರಸ ಸನ್ನಿವೇಶಗಳಿಗೆ ಹಾಸ್ಯದ ಲೇಪನವನ್ನು ಸವರಿ ಕರೀಂಖಾನರು ಮಧುರ ವಾತಾವರಣವನ್ನು ನಿರ್ಮಿಸಬಲ್ಲರು. ಕಟಕಿ, ವ್ಯಂಗ್ಯ, ಲೇವಡಿ, ಗೇಲಿ, ಅಪಹಾಸ್ಯ, ಬಿಸಿಗೆ ದೂರವಾಗಿ ಎಳೆಬಿಸಿಲಿನಂತೆ ಮನೋಹರವೂ, ಅಪ್ಯಾಯಮಾನವೂ ಆಗುವಂತೆ ಮಾಡಿ ಮುದನೀಡುವಂತೆ ತಿಳಿಹಾಸ್ಯದ ಕಚಗುಳಿಯನ್ನು 'ಸ್ವರ್ಣಗೌರಿ'ಯಲ್ಲಿ ಗಣಪತಿ ಮತ್ತು ಭೋಮತಿಯರ ಪಾತ್ರದಲ್ಲಿ 'ಬೇವುಬೆಲ್ಲ'ದಲ್ಲಿ ಪುಟ್ಟರಂಗಯ್ಯ ಮತ್ತು ಮೇಸ್ತ್ರಿ ಮರಿರಂಗಯ್ಯರ ಸಂದರ್ಭದಲ್ಲಿ ತಂದಿದ್ದಾರೆ. ಮಿನುಗುವ ಈ ಹಾಸ್ಯದ ಮಿಂಚಿನಲ್ಲಿ ಇಡೀ ಸಿನೇಮಾವು ಯಶಸ್ವಿಯಾಗಲು ಪ್ರೇರಣೆ ನೀಡುತ್ತದೆ.

ಕರೀಂಖಾನರ ಹಾಸ್ಯ ಬಹಳ ನಾಜೂಕಿನದ್ದು, ನಯದ್ದು ಅಲ್ಲ, ಆದರೆ ಒರಟೂ ಅಲ್ಲ, ಮೈಚಳಿ ಬಿಟ್ಟು ಬಿಡಿಸುವ ಹಾಸ್ಯ ಅದು. ಸಾಮಾಜಿಕ ವಿಚಾರಗಳಲ್ಲಿ ವಿಲಕ್ಷಣವಾದುದೆಲ್ಲವೂ ಅವರ ಹಾಸ್ಯದ ಮೊನೆಗೆ ಈಡಾಗುತ್ತದೆ. ತಮ್ಮ ಬಗ್ಗೆಯೇ ಹಾಸ್ಯ ಮಾಡಿಕೊಳ್ಳುವ ಶಕ್ತಿಯಿರುವುದರಿಂದ ಹಾಸ್ಯ ಎಲ್ಲಿಯೂ ಅವರಲ್ಲಿ ಅನಪೇಕ್ಷಿತವಾಗದು. ಲವಲವಿಕೆ, ನೆಮ್ಮದಿಗಳು ತುಂಬಿ ತುಳುಕುತ್ತಿರುವ ಹಾಸ್ಯ ಒಂದೆಡೆ, ಹಾಗಿಲ್ಲದೆಡೆ ವ್ಯಂಗ್ಯ, ಆದರೆ ಎಲ್ಲಿಯೂ ಕಳಪೆಯಿಲ್ಲ.

**ಭಾಷಾ ಶೈಲಿ :**

ಆಡುನುಡಿಯ ಸಮರ್ಥ ಬಳಕೆಯಿಂದ ಸೊಗಡು ಬೀರುವ ಕರೀಂಖಾನರ ಭಾಷೆ ಮೊದಲ ಸುತ್ತಿನಲ್ಲೇ ನಮಗೆ ಆಕರ್ಷಕವಾಗಿ ಕಾಣುವುದು ನಿಜ. ಇದರ ಮೂಲಕ ಹೊರಹೊಮ್ಮುವ ಘಟನೆಗಳ ಒಳಸಂಬಂಧಗಳಿಂದ ಹೊರಡುವ ಧ್ವನಿಗೂ,

ಹೊರಡಿಸುತ್ತಿರುವ ವ್ಯಕ್ತಿಗೂ, ಬಳಸಿರುವ ಭಾಷೆಗೂ ಬಿರುಕುಗಳಿಲ್ಲದೆ ಇರುವುದರಿಂದ, ಅವಿನಾಭಾವ ಸಂಬಂಧ ಸ್ಥಾಪಿತವಾಗಿರುವುದರಿಂದ ಸಾಹಿತ್ಯಿಕ ಮಹತ್ವದ ಭದ್ರನೆಲಗಟ್ಟು ನೆಲೆಸಿದೆ. ಪಾಂಡಿತ್ಯದ ಒಣಪ್ರದರ್ಶನ ಕರೀಂಖಾನರಲ್ಲಿ ಇರಲಿಲ್ಲ. ಆದರೆ ಬೆರಗುಗೊಳಿಸುವ ಮೋಹಕ ಬರಹಗಳಲ್ಲಿ ಕರೀಂಖಾನರು ಸಿದ್ಧಹಸ್ತರಾಗಿದ್ದರು.

ಸಿನೆಮಾ ಚಿತ್ರೀಕರಣಗೊಂಡ ಕಾಲವನ್ನು ಗಮನಿಸಿದರೆ ಕರೀಂಖಾನರು ಸಾಹಿತ್ಯದಲ್ಲಿ ವ್ಯಾಕರಣವನ್ನು ಬಳಸಿಕೊಂಡಿರುವುದು ಅಚ್ಚರಿಯ ಸಂಗತಿಯಾಗುತ್ತದೆ. ಸಂವಹನವೊಂದೇ ಕರೀಂಖಾನರ ಉದ್ದೇಶವಾಗಿರಲಿಲ್ಲ. ಅವರಲ್ಲಿ ಭಾಷಾ ಸಂಬಂಧಿಯಾದ ಯಾವ ಸಂಕೋಚಗಳೂ ಇರಲಿಲ್ಲ. ಕರೀಂಖಾನರು ಭಾಷೆಯಲ್ಲಿ ಸಂಸ್ಕೃತವನ್ನು ಹೆಚ್ಚಾಗಿ ಬಳಸಿಕೊಂಡಿರುವುದು ಅವರ ಭಾಷಾ ಪ್ರಭುತ್ವಕ್ಕೆ ಹಿಡಿದ ಕನ್ನಡಿಯಾಗಿದೆ. ಉದಾ : 'ಓಂ ಸರ್ವಮೃತ್ಯು ನಿವಾರಣಿಯೇ ನಮಃ', 'ಮನೋಭೀಷ್ಟೆ ಸಿಧ್ಯಸ್ತು', 'ಶುಭಸ್ಯ ಶೀಘ್ರಂ', 'ದೀರ್ಘ ಸುಮಂಗಲಿ ಭವ', 'ಇಷ್ಟ ಕಾಮ್ಯಾರ್ಥಿ ಸಿದ್ಧಿರಸ್ತು' ಈ ಸಾಲುಗಳು ಸಾಕ್ಷಿಯಾಗಿವೆ. ಸಂಸ್ಕೃತವನ್ನು ಹೆಚ್ಚಾಗಿ ಬಳಸಲು ಕಾರಣವನ್ನು ಅವರು ಹೀಗೆ ಹೇಳುತ್ತಾರೆ. "ಮದ್ರಾಸನಲ್ಲಿರುವಾಗ ಚಲನಚಿತ್ರಗಳಿಗೆ ಸಾಹಿತ್ಯ, ಗೀತೆಗಳನ್ನು ಹೊಂದಿಸುವಾಗ. ಅವರಲ್ಲಿ ಹೆಚ್ಚಿನ ನಿರ್ಮಾಪಕರು ತೆಲಗಿನವರು, ಆಂಧ್ರದಲ್ಲಿ ಸಂಸ್ಕೃತ ಭಾಷೆ ಭೂಯಿಷ್ಠ. ಆದ್ದರಿಂದ ಅವರಿಗೆ ನಾವು ಸಂಸ್ಕೃತ ಶಬ್ಧಗಳನ್ನು ಹೆಚ್ಚಾಗಿ ಬಳಸಬೇಕಾಗಿ ಬಂತು. ಮೇಲಾಗಿ ಸಂಸ್ಕೃತ ಮೃದು ಮಧುರವಾದ ಭಾಷೆ, ಅದರ ಕಡೆ ಒಲವು ಇರಬೇಕಾದದ್ದು ಅವಶ್ಯಕ. ಎಲ್ಲ ಭಾಷೆಗಳಲ್ಲಿಯೂ ಸಂಸ್ಕೃತ ಭಾಷೆಯು ಮಾಧುರ್ಯವನ್ನು ಹೆಚ್ಚು ಮಾಡುತ್ತದೆ. ಕನ್ನಡ ಮಾಧುರ್ಯವನ್ನು ಹೆಚ್ಚು ಮಾಡುವುದಕ್ಕೋಸ್ಕರ ಸಂಸ್ಕೃತ ಶಬ್ಧಗಳನ್ನು ಹೆಚ್ಚು ಬಳಸಬೇಕಾಗಿ ಬಂತು."

ಕರೀಂಖಾನರ ವೈಶಿಷ್ಟ್ಯಪೂರ್ಣವಾದ ಗದ್ಯ ಮತ್ತು ಪದ್ಯಗಳ ಸಾಧನೆ ಈ ಚಲನಚಿತ್ರಗಳ ಸಿದ್ಧಿಯ ಒಂದು ಮುಖ್ಯ ಭಾಗವೆಂಬುದು ನಿಸ್ಸಂದೇಹದ ಮಾತು. ಅವರು ಕಥೆ ಹಾಗೂ ಸಂಭಾಷಣೆಗಳಲ್ಲಿ ನಿರೂಪಣಾಶೈಲಿ, ವರ್ಣನಾ ವೈಖರಿ, ಸಂಯೋಜನಾ ಕಾರ್ಯಗಳು ಅದ್ಭುತವಾದವುಗಳು. ಕರೀಂಖಾನರು ಭಾಷಾ ಪ್ರೌಢಿಮೆಯಲ್ಲಿ ಪ್ರಭುತ್ವವನ್ನು ಸಾಧಿಸಲು ಹೊಂದಿರುವ ಅಪರಿಮಿತ ಶಬ್ಧ ಸಂಪತ್ತೇ ಕಾರಣ. ಉದಾ : ವನರಾಣಿ, ಕಲಾವಾಣಿ, ಚಿಂತಾಮಣಿ ಇಂಥ ಹಲವು ನಿದರ್ಶನಗಳನ್ನು ಕರೀಂಖಾನರ ಸಾಹಿತ್ಯ ಮತ್ತು ಗೀತೆ ರಚನೆಯಲ್ಲಿ ಕಾಣಬಹುದು. ಇವರ ಭಾಷೆ ಎಲ್ಲೂ ನಿರಸವಾಗಿರದೇ ರಸಾತ್ಮಕವಾಗಿರುತ್ತದೆ. ಚಿತ್ರಕಥೆಯ ಮಧ್ಯದಲ್ಲಿ ಸೂಕ್ತ ಸನ್ನಿವೇಶಗಳನ್ನು ಸಂಯೋಜಿಸಿರುವುದು ಚಿತ್ರದ ಯಶಸ್ಸಿಗೆ ಕಾರಣವಾಗಿದೆ.

ಸಿನೇಮಾ ಸಾಹಿತಿಯಾಗಿ ಚಲನಚಿತ್ರದ ಎಲ್ಲಾ ಆಯಾಮಗಳನ್ನು ಅರ್ಥಮಾಡಿಕೊಂಡು ಅದಕ್ಕೊಂದು ಗಾಂಭೀರ್ಯ, ಘನತೆ ಹಾಗೂ ಸಾಂಸ್ಕೃತಿಕವಾದ ಪರಪ್ರೇಕ್ಷ್ಯವನ್ನು ಒದಗಿಸಿಕೊಟ್ಟವರು ಡಾ. ಎಸ್.ಕೆ. ಕರೀಂಖಾನರು. ಸಿನಿಮಾ

ರಂಗದಲ್ಲಿ ಅಹರ್ನಿಶಿ ದುಡಿದು ಅದನ್ನೇ ತಮ್ಮ ಉದರ ಪೋಷಣೆಯ ಮಾರ್ಗವಾಗಿಸಿಕೊಂಡರು. ಕರೀಂಖಾನರ ಸತ್ಯಸಂಧತೆ, ಪ್ರತಿಭೆ, ಪಾಂಡಿತ್ಯ, ಘನತೆ ಬಹುಜನ ನಿರ್ಮಾಪಕರಿಗೆ, ನಾಯಕ ನಟರಿಗೆ ಪಥ್ಯವಾಗಲಿಲ್ಲ. ಅಂಥವರು ಅವರಿಗೆ ಕೆಲವು ಚಿತ್ರದ ಸಂಭಾಷಣೆ, ಗೀತರಚನೆಯ ಅವಕಾಶ ಕರೀಂಖಾನರನ್ನು ಹುಡುಕಿಕೊಂಡು ಬಂದರೂ, ಅದು ಅವರಿಗೆ ದಕ್ಕದಂತೆ ನೋಡಿಕೊಂಡರು. ಹಲವು ಏಳುಬೀಳುಗಳ ನಡುವೆಯೂ ಡಾ. ಕರೀಂಖಾನ್ ಚಲನಚಿತ್ರರಂಗದ ಸದಾಹೊಳೆಯುವ ಹೊಳಪುಳ್ಳ ನಕ್ಷತ್ರ ಎಂದರೆ ಅದು ಅತಿಶಯೋಕ್ತಿಯಲ್ಲ.

**ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಅಧ್ಯಕ್ಷ :**

ಭಾರತೀಯ ಸಂಸ್ಕೃತಿಯಲ್ಲಿ ಕರೀಂಖಾನರಿಗೆ ಅಪರಿಮಿತ ವಿಶ್ವಾಸವಿದೆ. ಸಮಾಜ ಪರಿಷ್ಕರಣದಲ್ಲಿ ಅವರದು ಅಮಿತವಾದ ಆಸಕ್ತಿ. ಇವರು ನಾಡುನುಡಿಗಳನ್ನು ಪ್ರೀತಿಸಿದರು. ಆ ಕಾಲದ ಸಾಮಾಜಿಕ ಹಾಗೂ ಜಾನಪದ ವಿಚಾರಗಳನ್ನು ಬೆರಗುಗೊಳಿಸುವಂತೆ ಚಿತ್ರಿಸಿದ್ದಾರೆ. ಆ ಕಾಲದ ಪರಿಸರವನ್ನು ಇವರು ಅದರ ಎಲ್ಲ ಗೊಂದಲಗಳೊಡನೆಯೇ ಸೆರೆ ಹಿಡಿದವರು. ಅಂದಿನ ವರ್ತಮಾನದ ಸಾಂಸ್ಕೃತಿಕ ನೆಲೆಬೆಲೆಗಳೇನು ಎಂಬುದನ್ನು ಕರೀಂಖಾನರು ವ್ಯಕ್ತಪಡಿಸುವ ರೀತಿ ಮಹತ್ವಪೂರ್ಣವಾದದ್ದು.

ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟೀಷರಿಂದಲೇ ಅಧ್ಯಯನಕ್ಕೆ ಒಳಗಾದ ಗ್ರಾಮೀಣ ಪರಿಸರ, ಕಲೆ, ನಂಬಿಕೆ, ಐತಿಹ್ಯ, ಪುರಾಣಗಳು ನಿಧಾನಕ್ಕೆ ಬ್ರಿಟೀಷರ ವಿರುದ್ಧದ ಹೋರಾಟದ ದೇಶೀ ಸಂಸ್ಕೃತಿಯ ನೆಲೆಗಳಾಗಿ ಪರಿವರ್ತಿತವಾದಾಗ ಗ್ರಾಮೀಣ ಪುರಾಣಗಳು, ಪರಿಸರದ ಕಲೆ ಸಾಹಿತ್ಯ, ಐತಿಹ್ಯ, ಜಾನಪದ ಎಂಬ ಹೆಸರಿನಲ್ಲಿ ಪುನರ್ನವೀಕರಣಗೊಂಡು ಸಂಸ್ಕೃತಿಯ ಭಾಗವೆಂದು ಗುರುತಿಸಲ್ಪಟ್ಟವು. ಇವುಗಳ ಅಂತರಂಗದಲ್ಲಿರುವ ಸಾಮೂಹಿಕ ಆಶೋತ್ತರಗಳು ಸಮಷ್ಠಿಹಿತ ಚಿಂತನೆಯ ನೆಲೆಗಳ ವ್ಯಷ್ಠಿಚಿಂತನೆಯ ನೆಲೆ, ಸಾಧನೆಗಳಿಗೆ ಸವಾಲಾದವು. ದೇಶಕ್ಕೆ ಸ್ವಾತಂತ್ರ್ಯ ದೊರೆತಾಗ ದಕ್ಕಿದ ಪ್ರಜಾಪ್ರಭುತ್ವದ ಆಶಯಗಳ ಸಮಷ್ಠಿ ನೆಲೆ ಜಾನಪದದಲ್ಲಿರವುದರ ಕಡೆ ಗಮನಹರಿಸಲಾಯಿತು. ಜಾನಪದದಲ್ಲಿ ಸೃಜನಾತ್ಮಕ ನೆಲೆಯ ಇತಿಹಾಸಕ್ಕೆ ಮಾನವ ಶಾಸ್ತ್ರಕ್ಕೆ, ಭಾಷಾಶಾಸ್ತ್ರಕ್ಕೆ, ಜಾನಪದದ ಅಧ್ಯಯನದಿಂದ ಹೊಸ ದೃಷ್ಟಿಕೋನವೊಂದು ಪ್ರಾಪ್ತವಾಯಿತು. ಹೀಗಾಗಿ ಜಾನಪದದ ಬಗ್ಗೆ ಕರ್ನಾಟಕದ ಮೂಲೆಮೂಲೆಗಳಿಂದ ಅಧ್ಯಯನಾಸಕ್ತಿ ಮೂಡತೊಡಗಿದಾಗ ಅದನ್ನೊಂದು ಪ್ರತ್ಯೇಕ ಕ್ಷೇತ್ರವನ್ನಾಗಿ ಪರಿಗಣಿಸುವುದು ಸರ್ಕಾರಕ್ಕೆ ಅನಿವಾರ್ಯವಾಯಿತು. ಜಾನಪದಕ್ಕೆ ಪ್ರತ್ಯೇಕ ಅಕಾಡೆಮಿ ಬೇಕು ಎಂದು ಸರ್ಕಾರ ಕಾರ್ಯಪ್ರವೃತ್ತವಾಗುವಲ್ಲಿ ಸಫಲತೆ ಕಂಡಿತು ಸಾಹಿತ್ಯ, ಸಂಗೀತ, ನೃತ್ಯಗಳು, ಒಬ್ಬ ವ್ಯಕ್ತಿಯ ಸ್ವತ್ತಾದರೆ, ಜಾನಪದ, ಸಮಷ್ಠಿಯ ಸ್ವತ್ತು. ಸಾಹಿತಿಯ ಕೃತಿಗಳು ಪ್ರಕಟವಾದಾಗ ಅದಕ್ಕೆ ಬಹುಮಾನ ಬರಬಹುದು. ಸಂಗೀತಗಾರ ದೊಡ್ಡ ದೊಡ್ಡ ಕಛೇರಿಗಳನ್ನು ನಡೆಸಿ ಗೌರವಕ್ಕೆ ಪಾತ್ರನಾಗಬಹುದು. ಹಾಗೆಯೇ

ನೃತ್ಯ ಕಲಾವಿದ ತನ್ನ ನೃತ್ಯ ಪ್ರದರ್ಶನ ಏರ್ಪಡಿಸಿ ಸನ್ಮಾನಿತನಾಗಬಹುದು. ಆದರೆ ಇಂಥ ಯಾವ ಸೌಭಾಗ್ಯದ ಅವಕಾಶವಿಲ್ಲದ ಜಾನಪದ ಕವಿ ಕಲಾವಿದರನ್ನು ಗುರುತಿಸಿ ಗೌರವಿಸುವ ಕಾರ್ಯ ಇಂದು ಅವಶ್ಯವಾಗಿ ಕಂಡಿತು. ಇವರ ಸಾಹಿತ್ಯವನ್ನು ಸಂಗ್ರಹಣೆ ಮಾಡಿ ಹೊಸ ಸಂಶೋಧನೆಗೆ ದಾರಿ ಮಾಡಿಕೊಡಬೇಕಾಗಿದೆ. ಮೂಲೆ ಗುಂಪಾಗುತ್ತಿರುವ ಕಲೆಗಳಿಗೆ ಪುನಶ್ಚೇತನ ನೀಡಬೇಕಾಗಿದೆ.

"ಇಂಥ ಸಂದರ್ಭದಲ್ಲಿ ಜಾನಪದದ ಸರ್ವಾಂಗೀಣ ಅಭಿವೃದ್ಧಿಗೆ ಒಂದು ಪ್ರತ್ಯೇಕ ಅಕಾಡೆಮಿ ಬೇಕೇ ಬೇಕಿತ್ತು. ಸನ್ನಿವೇಶದ ಒತ್ತಡಗಳಿಂದ ವಿದ್ವಾಂಸರು ಕಲಾವಿದರು ಒತ್ತಾಯದಿಂದ ಕರ್ನಾಟಕ ಸರ್ಕಾರ ಈ ದಿಶೆಯಲ್ಲಿ ಇಡೀ ದೇಶಕ್ಕೆ ಮಾದರಿಯಾಗುವಂತ ಕರ್ನಾಟಕ ಜಾನಪದ ಮತ್ತು ಯಕ್ಷಗಾನದ ಹೆಸರಿನಲ್ಲಿ ಮೂರನೇ ನವೆಂಬರ್ ಸಾವಿರದ ಒಂಬೈನೂರ ಎಂಬತ್ತರಂದು (ಆದೇಶ ಸಂಖ್ಯೆ ಇ.ಡಿ. ೧೬೧-ಎಂ.ಎಸ್.ಎ. ೭೭ ದಿನಾಂಕ ೩-೧೧-೧೯೮೦) ಪ್ರತ್ಯೇಕ ಅಕಾಡೆಮಿಯನ್ನು ಅಸ್ತಿತ್ವಕ್ಕೆ ತಂದಿತು. ಅದರ ಅಧ್ಯಕ್ಷರಾಗಿ ಎಚ್.ಎಲ್.ನಾಗೇಗೌಡರನ್ನೂ, ಎಸ್.ಕೆ. ಕರೀಂಖಾನ್‌ರನ್ನೂ ಸೇರಿದಂತೆ ಹಲವಾರು ವಿದ್ವಾಂಸರನ್ನೂ, ಕಲಾವಿದರನ್ನೂ ಸದಸ್ಯರನ್ನಾಗಿ ನೇಮಿಸಲಾಯಿತು. ಆದರೆ ಕರೀಂಖಾನರು ಅದೇಕೊ ಅಕಾಡೆಮಿಗೆ ಬರಲು ಒಪ್ಪಲೇ ಇಲ್ಲ. ನನ್ನಂತ ತಿರುಕನಿಗೆ ಇದೆಲ್ಲಾ ಯಾಕೆ ಎಂದು ಸುಮ್ಮನಿದ್ದು ಬಿಟ್ಟರು." ನಂತರ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಮೂರನೇ ಅವಧಿಗೆ ಸುಪ್ರಸಿದ್ಧ ಗಾಯಕರೂ, ಸಾಹಿತಿಗಳೂ, ಸ್ವಾತಂತ್ರ್ಯ ಹೋರಾಟಗಾರರೂ ಹಾಗೂ ಜಾನಪದ ಗೀತೆ ಸಂಗ್ರಹ ಮಾಡಿ ಅನುಭವ ಪಡೆದಿದ್ದ ಡಾ. ಎಸ್.ಕೆ. ಕರೀಂಖಾನರನ್ನು ೧೯೮೭ ರಿಂದ ೧೯೯೦ ರವರೆಗೆ ಕರ್ನಾಟಕ ಸರಕಾರ ಅಧ್ಯಕ್ಷರನ್ನಾಗಿ ಹಾಗೂ ಅನುಭವಿ ಕಲಾವಿದರನ್ನು ಮತ್ತು ವಿಸ್ವಾಂಸರನ್ನು ಸದಸ್ಯರನ್ನಾಗಿ ನಾಮಕರಣ ಮಾಡಿ ಆದೇಶ ಹೊರಡಿಸಿತು.

"ಇಲ್ಲಪ್ಪ ನನಗ್ಯಾಕೆ ಬೇಕಾಗಿದೆ ನನಗೆ ಇವೆಲ್ಲ ಬೇಕಾಗಿಲ್ಲ" ಎಂದು ತಿರಸ್ಕರಿಸಿದರು. ಕರೀಂಖಾನರವರ ಗೊಂದಲವನ್ನು ತಿಳಿಯಾಗಿಸಿದ ಹಿ.ಚಿ. ಬೋರಲಿಂಗಯ್ಯ, ಕಾಳೇಗೌಡ ನಾಗವಾರ ಛಾಯಾಗ್ರಾಹಕ ಶ್ರೀನಿವಾಸಮೂರ್ತಿಯವರು "ಈಗ ಸರ್ಕಾರಕ್ಕೂ ಒಂದು ಮರ್ಯಾದೆ ಪ್ರಶ್ನೆ, ಅಕಾಡೆಮಿಗೂ ಮರ್ಯಾದೆ ಪ್ರಶ್ನೆ; ಯಾರೋಒಬ್ಬರು ವಾಚಕರ ವಾಣಿಯಲ್ಲಿ ನಿಮ್ಮನ್ನು ಟೀಕಿಸಿ ಪತ್ರ ಬರೆದ್ರು ಅಂತ ಹೇಳಿ ನಿಮಗೆ ಜಾನಪದ ಕ್ಷೇತ್ರದಲ್ಲಿ ಇರತಕ್ಕಂತ ಹೆಸರು ಮತ್ತು ಸಮಾಜದಲ್ಲಿ ಇರತಕ್ಕಂತ ಹೆಸರೇ ದೊಡ್ಡದು. ನಾವು ಕಿರಿಯರು ಎಂದು ಒತ್ತಾಯ ಮಾಡ್ತೀವಿ ಎಂದೆನಿಸಿದರೆ ತಪ್ಪಾಗಿ ಭಾವಿಸಬೇಡಿ" ಎಂದು ಅಕಾಡೆಮಿಯಲ್ಲಿಯ ಅಧ್ಯಕ್ಷರ ಕೆಲಸ, ಸಮಿತಿಯಲ್ಲಿರುವ ಸುಮಾರು ಇಪ್ಪತ್ನಾಲ್ಕು ಸದಸ್ಯರ ಕೆಲಸ, ರಿಜಿಸ್ಟ್ರಾರ್‌ರ ಕೆಲಸ ಹೀಗೆ ಅಕಾಡೆಮಿಗೆ ಸಂಬಂಧಿಸಿದ ಎಲ್ಲ ವಿವರಗಳನ್ನು ನೀಡಿದ ಮೇಲೆ "ನೋಡಿಪ್ಪಾ ನೀವು ರಿಜಿಸ್ಟ್ರಾರ್ ಒಂದು ಕೇಳ್ತಾ ಇದ್ದೀರಿ, ಆದರೆ ಒಂದು ಮಾತು

ಕೊಟ್ರೆ ಬರ್‍ತಿನಿ ನಾನು ಅಧ್ಯಕ್ಷನಾಗಿರುವವರೆಗೆ ನನ್ನ ಮೇಲೆ ಒಂದು ಸಣ್ಣ ಹಣಕಾಸಿನ ಅವ್ಯವಹಾರದ ಆರೋಪ ಬರದೇ ಇರುವ ಹಾಗೆ ನೀವು ನೋಡಿಕೊಳ್ಳುವಿರಿ ಹಾಗೂ ನಡೆದುಕೊಳ್ಳಲು ಬದ್ಧರಾಗ್ತಿರಾ! ಎಂಬುದಾದರೆ ನಾನು ಬರ್‍ತಿನಿ" ಎಂದು ತಮ್ಮ ದೂರದರ್ಶಿತ್ವ ವಿಚಾರವನ್ನು ಮುಂದಿಟ್ಟು ಅಧ್ಯಕ್ಷ ಪದವಿಗೆ ಒಪ್ಪಿಕೊಂಡರು. ಇದರಿಂದ ಅಂದಿನ ಮುಖ್ಯಮಂತ್ರಿ ಶ್ರೀ ರಾಮಕೃಷ್ಣ ಹೆಗಡೆ ಹಾಗೂ ಕನ್ನಡ ಸಂಸ್ಕೃತಿ ಸಚಿವ ಶ್ರೀ ಎಂ.ಪಿ. ಪ್ರಕಾಶ ತುಂಬಾ ಸಂತೋಷಪಟ್ಟರು.

"ಆನೆ ನೀರಾಟದಲ್ಲಿ ಮೀನ ಕಂಡಂಜುವುದೇ", ಹೀನ ಮಾನವನ ಬಿರುನುಡಿಗೆ ತತ್ವಜ್ಞಾನಿಯಂಜುವನೇ? ಸರ್ವಜ್ಞ" ಎನ್ನುವಂತೆ ಅಲ್ಪರು ಆಡುವ ಮಾತು ಜ್ಞಾನಿಯ ಮೇಲೆ ಪ್ರಭಾವ ಬೀರದು ಎಂಬಂತೆ ಕರೀಂಖಾನರು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಸಿಂಹಾಸನವನ್ನೇರಿದರು.

ಅಕಾಡೆಮಿಯ ಶಿಷ್ಟಾಚಾರದಂತೆ ಕರೀಂಖಾನವರ ಅಧ್ಯಕ್ಷತೆಯಲ್ಲಿ ಒಂದು ಮಹತ್ವಪೂರ್ಣ ಸಭೆ ನಡೆಯಿತು. ಕರೀಂಖಾನವರು ಅಧ್ಯಕ್ಷೀಯ ಭಾಷಣದಲ್ಲಿ ತಮ್ಮ ಅಂತರಂಗದ ತುಡಿತವನ್ನೂ ತಮಗೆ ಜಾನಪದಲ್ಲಿರುವ ಅಮಿತವಾದ ಆಸಕ್ತಿಯನ್ನು ಹೊರಹಾಕಿದರು. ಮೊದಲ ಸಭೆಯಲ್ಲಿ ಇವರಿಗೆ ಬಹಳ ಭರವಸೆ ಬಂದಿತ್ತು. ಇವರ ಅಧಿಕಾರ ಅವಧಿಯಲ್ಲಿ ಜಾನಪದ ಮನಸ್ಸಿನ ಒಂದು ಪಡೆಯೇ ಇತ್ತು. ಇವರೆಲ್ಲ ಜಾನಪದದಲ್ಲಿ ತುಂಬಾ ಚೆನ್ನಾಗಿ ಕೆಲಸ ಮಾಡಿದವರು. ಅಧ್ಯಕ್ಷರಾದ ಕರೀಂಖಾನರು ಇವರೆಲ್ಲರನ್ನು ನೋಡಿ ಸ್ಫೂರ್ತಿಗೊಂಡು ಸಂತೋಷ ಪಟ್ಟರು. "ತಮ್ಮ ಮೂರು ವರ್ಷದ ಅಕಾಡೆಮಿಯ ಅಧ್ಯಕ್ಷಾವಧಿಯಲ್ಲಿ ಇವರಷ್ಟು ಕ್ಷೇತ್ರ ಕಾರ್ಯಕ್ಕೆ ಸುತ್ತಾಡಿದವರು ಮತ್ತೊಬ್ಬರಿಲ್ಲ. ಕರೀಂಖಾನರು ತಮ್ಮ ಅವಧಿಯಲ್ಲಿ ಸಂಪೂರ್ಣವಾಗಿ ತನುಮನಗಳೊಂದಿಗೆ ಅರ್ಪಿಸಿಕೊಂಡಿದ್ದರು." ಸರಕಾರ ಇವರ ಕಾಲದಲ್ಲಿ ಹೆಚ್ಚಾದ ಹಣವನ್ನು ಬಿಡುಗಡೆ ಮಾಡಿದ್ದು ನಿಜ, ಆದರೆ ಕರೀಂಖಾನರು ಹಮ್ಮಿಕೊಂಡ ವಿಶಿಷ್ಟಕಾರ್ಯ ಯೋಜನೆಗೆ ಮಂಜೂರು ಮಾಡಿದ ಹಣ ಒಂದು ಪೈಸೆಯೂ ಉಳಿಯದೇ ಅಕಾಡೆಮಿಯ ಅಭಿವೃದ್ಧಿಗೆ ಸಂಪೂರ್ಣವಾಗಿ ವಿನಿಯೋಗವಾಯಿತು. ಇವರು ನಿಜವಾಗಿ ಜಾನಪದ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸಲು ಸ್ಫೂರ್ತಿಯನ್ನು ಪಡೆದು, ಜಾನಪದ ಭೀಷ್ಮ ಎಂದೇ ಪ್ರಚಾರವನ್ನು ಪಡೆದವರು. ಇವರ ಅವಧಿಯಲ್ಲಿ ಜಾನಪದ ಕ್ಷೇತ್ರದಲ್ಲಿ ವಿಶಿಷ್ಟ ಅನುಭವವನ್ನು ಹೊಂದಿದ ವಿದ್ವಾಂಸರು ಸದಸ್ಯರಾಗಿ ಕರೀಂಖಾನರ ಅವಧಿಯಲ್ಲಿ ಸ್ಫೂರ್ತಿದಾಯಕವಾದ ಕೆಲಸವನ್ನು ಕೈಗೊಂಡರು.

ಜಾನಪದ ಅಕಾಡೆಮಿಯ ಅಧ್ಯಕ್ಷಸ್ಥಾನ ಯಾವುದೇ ರೀತಿಯ ಆರ್ಥಿಕ ಲಾಭದಾಯಿಕವಲ್ಲದ ಗೌರವ ಹುದ್ದೆ. ಕರೀಂಖಾನರು ಅಧ್ಯಕ್ಷರಾಗಿ ನೇಮಕಗೊಳ್ಳುತ್ತಲೇ ಮತ್ತೆ ತಮ್ಮ ಗತಕಾಲದ ಜಾನಪದದ ಮಣ್ಣಿನ ಗ್ರಾಮೀಣ ಜನತೆಯ ಸಂಸ್ಕೃತಿಗೆ ಕರ್ನಾಟಕದ ಕಲಾಚಾರಕ್ಕೆ ಅರ್ಪಿಸಿಕೊಂಡು ಇಳಿವಯಸ್ಸಿನಲ್ಲೂ ಸಹ ವಿನೂತನ ಕ್ರಾಂತಿಕಾರಿ ಯೋಜನೆಗಳನ್ನು ಹಮ್ಮಿಕೊಂಡರು. "ಅಪೂರ್ವ ಕಾರ್ಯಸಿದ್ಧಿಯ ಕಲಾತಪಸ್ವಿ ಶ್ರೀ ಕರೀಂಖಾನರು ತಮ್ಮ ೮೩ನೇ ವಯಸ್ಸಿನಲ್ಲಿ ಜಾನಪದ ಅಕಾಡೆಮಿಯ

ಅಧ್ಯಕ್ಷರಾಗಿ ನೇಮಕಗೊಂಡು ಎಲ್ಲರನ್ನು ಬೆರಗು ಗೊಳಿಸುವಂತೆ ಕೆಲಸ ಮಾಡಿದರು" ಎಂದು ಅವರ ಸಹೋದರನಾದ ಗಫಾರ್ ಖಾನ್‌ರವರ ಮಾತು ಸತ್ಯವಾದದು. ಏಕೆಂದರೆ ಕರೀಂಖಾನರು ನಿಜವಾಗಿಯೂ ಜಾನಪದ ಕಲಾಆರಾಧಕರೂ, ಕಲಾಪ್ರೇಮಿಗಳೂ, ತಪಸ್ವಿಗಳು ಆಗಿದ್ದರು.

ಜಾನಪದ ಅಕಾಡೆಮಿಯ ಅಧ್ಯಕ್ಷ ಪದವಿಯನ್ನು ಅಲಂಕರಿಸಿದ ಹೊಸತರಲ್ಲಿ ಕರೀಂಖಾನರೇ ಒಂದು ಕಡೆ ಹೇಳಿದ ಮಾತೆಂದರೆ "ಈ ಅಧ್ಯಕ್ಷಸ್ಥಾನ ಕರಡಿಯ ಕೈಗೆ ಸಿಕ್ಕ ಹಾಗಿದೆ. ಅದು ಕಚಗುಳಿಯನ್ನು ನೀಡುತ್ತದೆ. ನೋವನ್ನು ಉಂಟುಮಾಡುತ್ತದೆ. ಅದಕ್ಕಾಗಿ ಅಧ್ಯಕ್ಷಸ್ಥಾನಕ್ಕಾಗಿ ಪ್ರಯತ್ನ ಪಡಲೇ ಇಲ್ಲ, ಆಸೆ ಇಟ್ಟುಕೊಂಡು ಹಂಬಲಿಸಲೂ ಇಲ್ಲ, ಈ ಪದವಿಯು ಬಯಸದೇ ಬಂದ ಭಾಗ್ಯ" ಎನ್ನುವ ಅವರ ಮಾತಲ್ಲಿ ಯಾವ ಕಾಲಕ್ಕೂ ಯಾವ ಹುದ್ದೆಯನ್ನು ಅವರು ನಿರೀಕ್ಷಿಸಿರಲಿಲ್ಲ. ಅವರ ಯೋಗ್ಯತೆಗೆ ಅವರ ಕಲಂಕರಹಿತ ನಿಸ್ವಾರ್ಥ ಸೇವೆಗೆ ಜಾನಪದಲ್ಲಿನ ಅಪಾರ ಶ್ರದ್ಧೆಗೆ ಒಲಿದು ಬಂದ ಪದವಿ ಅದಾಗಿತ್ತು.

ಅಧ್ಯಕ್ಷಸ್ಥಾನವನ್ನು ಅಲಂಕರಿಸಿದಂತಹ ಕರೀಂಖಾನರ ಮುಂದೆ ತಮ್ಮದೇ ಆದ ಸಂಕಲ್ಪಗಳಿದ್ದವು. ತಮ್ಮದೇ ಆದ ಧೃಡ ನಿರ್ಧಾರಗಳಿದ್ದವು, ಹತ್ತು ಹಲವಾರು ಯೋಜನೆಗಳಿದ್ದವು ಅಲ್ಲದೆ ಸರ್ವಸದಸ್ಯರ ಪ್ರೋತ್ಸಾಹವೂ ಇತ್ತು.

**ಕರೀಂಖಾನರು ರೂಪಿಸಿದ ಯೋಜನೆಗಳು :**

- ಪುರಾತನ ಕಲೆಗಳನ್ನು ಸುಭದ್ರಗೊಳಿಸಬೇಕು ಮತ್ತು ಪುರಾತನ ಕಲೆಗಳನ್ನು ವಿಡಿಯೋಕ್ಯಾಸೆಟ್ ರೂಪದಲ್ಲಿ ಹಿಡಿದಿಟ್ಟು ಮುಂದಿನ ಜನಾಂಗಕ್ಕೆ ಮೂಲಾಧಾರವಾಗಿಡಬೇಕು.
- ಜಾನಪದ ಕಲಾವಿದರ ವಿವಿಧ ವಿಭಿನ್ನ ವೇಷ ಭೂಷಣಗಳು ಮತ್ತು ಅವರ ವೈವಿಧ್ಯಮಯವಾದ ಹಾಡುಗಾರಿಕೆಯನ್ನು ವಿಡಿಯೋ ಮಾಡಿ ರಕ್ಷಿಸುವುದು.
- ಜಾನಪದದ ರಾಗಧಾಟಿಗಳನ್ನು ಜಾನಪದದ ವಾದ್ಯಗಳನ್ನು ಉಪಯೋಗಿಸಿಯೇ ಹಾಡಿಗೆ ವಿಡಿಯೋ ಕ್ಯಾಸೆಟ್‌ಗಳ ಮುಖೇನವಾಗಿ ಮಾರುಕಟ್ಟೆಗೆ ತಂದು ಜಾನಪದದ ಮೆರುಗನ್ನು ಹೆಚ್ಚಿಸಬೇಕು.
- ಗ್ರಾಮೀಣ ಜನರ ಹೃದಯದಲ್ಲಿ ಹುದುಗಿರುವ ಒಳ್ಳೊಳ್ಳೆ ಜಾನಪದ ಕಥೆಗಳನ್ನು ದೂರದರ್ಶನಕ್ಕೆ ಚಿತ್ರರೂಪದಲ್ಲಿ ನೀಡಿ ಹಳ್ಳಿ ಜನರ ಬದುಕಿನ ವಾಸ್ತವ ಚಿತ್ರಣವನ್ನು ಮೂಡಿಸುವುದು.
- ಪ್ರಾಯೋಜಿತ ಕಾರ್ಯಕ್ರಮವಾಗಿ ಯಕ್ಷಗಾನವನ್ನು ಚಲನಚಿತ್ರದಂತೆ ಎರಡುವರೆಗಂಟೆವರೆಗೆ ಪೂರ್ಣ ಕಥಾಭಾಗ ಮೂಡಿಬರುವಂತೆ ಮಾಡುವುದು.
- ಚಿತ್ರೀಕೃತ ಜಾನಪದ ಕಲೆಗಳನ್ನು ಸುಭದ್ರವಾಗಿ ಮತ್ತು ವ್ಯವಸ್ಥಿತವಾಗಿ ಇಡುವಂತೆ ಮಾಡುವುದು.

- ಕಾರವಾರದಿಂದ ಹಿಡಿದು ಹೆಚ್ಚು ಕಡಿಮೆ ಕೊಡಗಿನವರೆಗೆ ಪಶ್ಚಿಮ ಘಟ್ಟದಲ್ಲಿ ಬರತಕ್ಕಂತಹ ಸುಮಾರು ಹತ್ತಾರು ಬುಡಕಟ್ಟು ಜನಾಂಗದ ಅಧ್ಯಯನ ಮಾಡಲು ಕಾಲ್ನಡಿಗೆಯ ಕಾರ್ಯಕ್ರಮ ಹಮ್ಮಿಕೊಳ್ಳುವುದು.
- ಜಾನಪದ ಕಲೆಗಳ ಹಾಗೂ ಗಿರಿಜನ ಬದುಕಿನ ಸಮಗ್ರ ವಿಡಿಯೋ ಚಿತ್ರೀಕರಣ.
- ಕರ್ನಾಟಕದಾದ್ಯಂತ ಆಚರಿಸಲ್ಪಡುವ ಗ್ರಾಮೀಣ ಹಬ್ಬಗಳ ವಿಡಿಯೋ ಚಿತ್ರೀಕರಣ.
- ಗಡಿನಾಡಿನಲ್ಲಿ ಕನ್ನಡ ಜಾನಪದ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು. ಜಾನಪದ ವೈಜ್ಞಾನಿಕ ಅಧ್ಯಯನ, ಜಾನಪದ ಕಲೆಗಳ ಸಂರಕ್ಷಣೆ ಹಾಗೂ ಕಲಾವಿದರ ಘೋಷಣೆಗೆ ಸಂಬಂಧಿಸಿದಂತೆ ನೂರಾರು ಕಾರ್ಯಕ್ರಮಗಳ ರೂಪರೇಷೆಗಳನ್ನು ಕರೀಂಖಾನರು ತಮ್ಮ ಇಪ್ಪತ್ನಾಲ್ಕು ಸದಸ್ಯರ ತಂಡದ ಮುಂದೆ ಇಟ್ಟಾಗ ಸದಸ್ಯರೆಲ್ಲರೂ ತಮ್ಮ ಸಮ್ಮತಿಯನ್ನು ಸೂಚಿಸಿದರು.

"ಕರೀಂಖಾನರವರಿಗೆ ಸಿನೇಮಾರಂಗದ ನಿಕಟ ಪರಿಚಯವಿದ್ದುದರಿಂದಲೂ ಮೂಲತಃ ಇವರೊಬ್ಬರು ಜಾನಪದಗಾಯಕರಾಗಿದ್ದರಿಂದಲೂ ಅವರು ತಮ್ಮ ಅವಧಿಯಲ್ಲಿ ಪ್ರದರ್ಶನ ಕಲೆಗಳ ವಿಷಯಕ್ಕೆ ಹೆಚ್ಚುಗಮನ ಕೊಟ್ಟರು. ಕಲಾಪ್ರದರ್ಶನಗಳನ್ನೇರ್ಪಡಿಸಿ ಕಲಾವಿದರಲ್ಲಿ ಆತ್ಮವಿಶ್ವಾಸ ತುಂಬಿ, ಕಲೆಗಳನ್ನು ಉಳಿಸುವ ಕೆಲಸವನ್ನು ಕೈಗೊಂಡರು. ಕಲೆಗಳನ್ನು ಉಳಿಸಿ ಬೆಳೆಸುವುದಕ್ಕೆ ಅವುಗಳನ್ನು ಶಾಶ್ವತವಾಗಿ ಮುಂದಿನ ಜನಾಂಗಕ್ಕೆ ಮುಡಿಪಾಗಿಡುವುದಕ್ಕೋಸ್ಕರ ವಿಡಿಯೋ ಚಿತ್ರೀಕರಣ ಮಾಡುವ ಯೋಜನೆ ರೂಪಿಸಿದರು."

ಅಧ್ಯಕ್ಷ ಕರೀಂಖಾನರೊಂದಿಗೆ ಅಂದಿನ ಅಕಾಡೆಮಿಯ ರಿಜಿಸ್ಟ್ರಾರ್ ಆದಂತಹ ಹಿ.ಚಿ. ಬೋರಲಿಂಗಯ್ಯನವರು ಮಲೆನಾಡಿನ ಮೇಘಾನೆ ಪಯಣದ ಸಿಹಿಕಹಿ ಅನುಭವದೊಂದಿಗೆ ಮೇಘಾನೆಯ ಬೆಟ್ಟದ ಪ್ರದೇಶದಲ್ಲಿ ವಾಸಿಸುವ ಕುಣಬಿ, ಗೊಂಡ ಎಂಬ ಜನಾಂಗಗಳ ಸಾಂಸ್ಕೃತಿಕ ಮತ್ತು ಅಲ್ಲಿಯ ಕಲೆಗಳ ಬಗ್ಗೆ ತಮ್ಮ ಪ್ರವಾಸ ಕಥನ 'ಗಿರಿಜನನಾಡಿಗೆ ಪಯಣ' ಎಂಬ ಪುಸ್ತಕದಲ್ಲಿ ಸವಿಸ್ತಾರವಾಗಿ ವಿವರಿಸುತ್ತಾ ಕರೀಂಖಾನರ ಜಾನಪದ ಖಯಾಲಿಯನ್ನು ರಸವತ್ತಾಗಿ ವಿವರಿಸಿದ್ದಾರೆ.

ಈ ಪುಸ್ತಕಗಳಲ್ಲಿ ಒಟ್ಟು ೧೨ ಲೇಖನಗಳಿದ್ದು ಈ ಹೊತ್ತಿಗೆ ಕರೀಂಖಾನರು ಅಧ್ಯಕ್ಷರಾಗಿದ್ದ ಕಾಲದಲ್ಲೇ ಮೂರ್ತ ಪಡೆದಿರುವುದು ಮಹತ್ವದ ಕಾರ್ಯವಾಗಿದೆ. ಸಹ್ಯಾದ್ರಿಯ ದಟ್ಟಕಾಡಿನ ಕಣಿವೆ ಕಂದರಗಳಲ್ಲಿ ಅಜ್ಞಾತವಾಗಿರುವ ಗಿರಿಜನರ ತಾಣತಾಣಕ್ಕೂ ಭೇಟಿ ನೀಡಿ, ಅವರ ಜೀವನ ಸಂಸ್ಕೃತಿ, ಆಚಾರ ವಿಚಾರಗಳ ಬಗ್ಗೆ ನಲವತ್ತು ಗಂಟೆಗೂ ಮಿಕ್ಕಿ ನೋಡುವಷ್ಟು ವಿಡಿಯೋ ಮತ್ತು ವರ್ಣಪಾರದರ್ಶಕಗಳ ಚಿತ್ರಣ ನಡೆಸಿದ್ದಾರೆ. ನಾಡಿನಾದ್ಯಂತ ಮೂಲೆ ಮೂಲೆಗಳಲ್ಲಿ

ಸಂಚರಿಸಿ ಕಲಾಮೇಳ, ವಿಚಾರಗೋಷ್ಠಿಗಳ, ಸಂಕಿರಣಗಳನ್ನು ನಡೆಸಿ ೧೮ರ ತರುಣರನ್ನು ನಾಚಿಸುವಂತೆ ಒಂದೇ ವರ್ಷದಲ್ಲಿ ಎಂಟು ಸಾವಿರ ಕಿ.ಮೀ.ಗಳ ಪಯಣ ಮಾಡಿ ಇಚ್ಛಾಶಕ್ತಿ, ಮನೋಶಕ್ತಿ ಇದ್ದಲ್ಲಿ ಹುದ್ದೆ ಯಾವ ರೀತಿ ಗೌರವ ತಂದುಕೊಡುತ್ತದೆಂದು ಕೃತಿಯಿಂದ ನಿರೂಪಿಸಿದ ಅಪೂರ್ವ ಕಾರ್ಯಸಿದ್ಧಿಯ ಕಲಾತಪಸ್ಸು ಕರೀಂಖಾನರದು.

ಮನಸ್ಸಿದ್ದಲ್ಲಿ ಮಾರ್ಗವಿದೆ ಯಾವ ಹುದ್ದೆ ಯಾದರೇನು ? ಅದನ್ನು ನಿರ್ವಹಿಸುವ ಸಂಕಲ್ಪ ಶಕ್ತಿ ಕರೀಂಖಾನರಲ್ಲಿತ್ತು, ಅಂತೆಯೇ ಇವರು ತಮ್ಮ ವಯೋವೃದ್ಧ ಜೀವನದಲ್ಲಿಯೂ ತರುಣರನ್ನು ನಾಚಿಸುವ ಕೆಲಸ ಕೈಗೆತ್ತಿಕೊಂಡಿದ್ದೇ ಶ್ಲಾಘನೀಯ. ಗಿರಿಜನರು ತಮ್ಮ ದಿನನಿತ್ಯದ ಬದುಕಿಗಾಗಿ ಕಾಲಲ್ಲಿ ಗೆಜ್ಜೆ ಕಟ್ಟಿ, ತಮ್ಮ ಹಾಡಿನ ಲಯಕ್ಕೆ ತಾಳಬದ್ಧವಾಗಿ ಹೆಜ್ಜೆ ಹಾಕುತ್ತ, ಗೆಜ್ಜೆಗಳ ಗಲ್ ಗಲ್ ಶಬ್ದಕ್ಕೆ ಕುಣಿಯುವ ಇವರು ಊರು ಊರುಗಳಲ್ಲಿ ಹೆಜ್ಜೆ ಸವೆಸುತ್ತಾರೆ. ಹೀಗೆ ಊರೂರು ಸುತ್ತಿ ಆಯಾಸಗೊಂಡು ಕಣ್ಣು ಮುಚ್ಚಿದಾಗ ತಮ್ಮ ಮನದಾಳದಲ್ಲಿ ತಾವು ವೀಕ್ಷಿಸಿದ ಊರಿನ, ತಾವು ಹಾದು ಬಂದ ಗುಡ್ಡ, ತಾವು ನೋಡಿದ ಜನಜಾತ್ರೆ, ಎಲ್ಲವೂ ಹಾಡುಗಳಾಗಿ ಮಾರ್ಪಟ್ಟು ಎದೆಯಂತರಾಳದಿಂದ ತೇಲಿ ಬರುತ್ತವೆ. ಹರೆಯದ ಜೋಡಿಗಳು ಗೆಜ್ಜೆ ಕಟ್ಟಿ ಹಾಡಿಗೆ ನೋಟದ ರಂಗು ತೋಡಿಸುತ್ತಾರೆ. ಈ ರಂಗುರಂಗಿನ ಬದುಕನ್ನು ನಗರದ ಮಧ್ಯೆ ಚರ್ಚೆಗೆ ತೆರೆದಿಟ್ಟು ಆ ಸಂಸ್ಕೃತಿಯತ್ತ ಕ್ಷ-ಕಿರಣ ಬೀರಿದ್ದು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾದ ಡಾ. ಎಸ್.ಕೆ. ಕರೀಂಖಾನರು. ಆ ಕಾಲಕ್ಕೆ ಜಾನಪದ ಕಲೆಗಳ ಉಳಿವಿಗಾಗಿ ಹಲವು ರೀತಿಯ ಯೋಜನೆಗಳನ್ನು ತಯಾರಿಸಿದರು. ಇವರ ಅಧಿಕಾರಾವಧಿಯಲ್ಲಿ ಗಿರಿಜನರಿಗಾಗಿಯೇ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. ಇದರಲ್ಲಿ ಮುಖ್ಯವಾದುದು ಗಿರಿಜನರನ್ನು ಒರೆಗೆ ಹಚ್ಚುವ ವಿಚಾರ ಸಂಕಿರಣಗಳು ಹಾಗೂ ಕಲಾಮೇಳಗಳು.

ಪಶ್ಚಿಮಘಟ್ಟಗಳು ಆರಂಭವಾದದ್ದು ಕಾರವಾರದಿಂದ. ಈ ಘಟ್ಟಗಳೇ ಗಿರಿಜನರ ತವರೂರು; ಇಲ್ಲಿ ಗಿರಿಜನರು ತಮ್ಮ ಬದುಕನ್ನು ಸಾಗಿಸುತ್ತಿದ್ದಾರೆ. ಎಷ್ಟೋ ಗಿರಿಜನರು ಇಂದಿಗೂ ಸಹ ನಗರದ ಸರಹದ್ದುಗಳನ್ನು ಕಾಣದೇ ತಮ್ಮ ಬುಡಕಟ್ಟುಗಳಲ್ಲಿಯೇ ಜೀವನ ಸಾಗಿಸುತ್ತಿದ್ದಾರೆ. ಗಿರಿಜನರ ಬದುಕನ್ನು ಅರಿಯುವ ತಿಳಿಯುವ ಸಲುವಾಗಿ ಒಂದು ವಿಚಾರ ಸಂಕೀರ್ಣವನ್ನು ಪಶ್ಚಿಮ ಘಟ್ಟಗಳ ನೆಲೆಯಾದ ಸಾಗರದಲ್ಲಿ ಏರ್ಪಡಿಸುವುದು ಸಮಯೋಚಿತವಾಗಿತ್ತು. ಜಾನಪದ ಅಕಾಡೆಮಿ ಈ ಕಾರ್ಯಕ್ರಮ ನಡೆಸಲು ಮುಂದಾದಾಗ ಅದಕ್ಕೆ ಬೆನ್ನೆಲುಬಾದದ್ದು ಮಲೆನಾಡು ಯಕ್ಷಗಾನ ಮತ್ತು ಜಾನಪದ ಪ್ರತಿಷ್ಠಾನ ತಾಳಗುಪ್ಪ, ಶ್ರೀ ಎನ್. ಹುಚ್ಚಪ್ಪ ಮಾಸ್ತರ್ ಹಾಗೂ ಶ್ರೀ ಬಿ.ಎನ್. ರಾಜಗೋಪಾಲ್ ನೇತೃತ್ವದಲ್ಲಿ ಈ ಪ್ರತಿಷ್ಠಾನ ೧೯೮೧ರಲ್ಲಿ ಪ್ರಾರಂಭವಾಗಿ ಅಂದಿನಿಂದಲೂ ಜಾನಪದ ಮತ್ತು ಯಕ್ಷಗಾನದ ಉಳಿವಿಗಾಗಿ ಹಲವಾರು ರೀತಿಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತ ಬಂದಿದೆ.

ಪಶ್ಚಿಮ ಘಟ್ಟದಲ್ಲಿ ನೆಲೆಸಿರುವ ಗಿರಿಜನರ 'ಹೋಳಿ' ಅತ್ಯಂತ ದೊಡ್ಡ ಆಚರಣೆ. ಅಗಲವಾದ ಬಾಯಿಯ ಮಡಕೆಗೆ ಪ್ರಾಣಿಯ ಚರ್ಮ ಹೊದಿಸಿದ ಗುಮಟೆಯನ್ನು ಸೊಂಟದವರೆಗೂ ಬರುವಂತೆ ಇಳಿಬಿಡುತ್ತಾರೆ. ನೃತ್ಯದಲ್ಲಿ ಸೊಂಟದ ಬಳುಕೇ ಪ್ರಧಾನ, ಕುಣಿಯುವವರ ಕುಣಿತಕ್ಕೆ ಕುಣಿಬಿ ವೃದ್ಧರು ತಮ್ಮ ಭಾಷೆಯಲ್ಲಿ ಹಾಡುಹಾಡುತ್ತಾರೆ. ಮೇಘಾನೆಯ ಕುಣುಬಿ ತಂಡದ, ಕುಡುಬಿ ಕುಣಿತದ ಹಲವು ತುಣುಕುಗಳನ್ನು ಪ್ರದರ್ಶಿಸುತ್ತಿದ್ದರು. ಇಂಥವುಗಳನ್ನೆಲ್ಲಾ ಅತಿ ಸೂಕ್ಷ್ಮ ರೀತಿಯಿಂದ ಸೆರೆಹಿಡಿಯಬೇಕೆಂಬ ಕರೀಂಖಾನರ ಉದ್ದೇಶ ಸಾರ್ಥಕಗೊಂಡಿತು. ಇವರ ಜಾನಪದ ಮನಸ್ಸೇ ಹಾಗೆ; ಡಾ. ಎಚ್.ಜೆ. ಲಕ್ಕಪ್ಪಗೌಡರು ಹೇಳುವಂತೆ "ಕರೀಂಖಾನರು ಕನ್ನಡ ಜನಪದ ಸಮಷ್ಠಿಯ ಆಶೋತ್ತರಗಳ ಕೇಂದ್ರವಾಗುವ ಆಶಯವನ್ನು ಮೂಡಿಸಿದರು. ಅಧ್ಯಕ್ಷರಾದ ಡಾ. ಎಸ್.ಕೆ. ಕರೀಂಖಾನ್ ಜನರ ಮನಸ್ಸನ್ನು ಸಮ್ಮೋಹನಗೊಳಿಸಬಲ್ಲ ಜನಪ್ರೀಯ ಗಾಯಕ. ಸ್ವಾತಂತ್ರ್ಯ ಹೋರಟಗಾರ, ಸಿನಿಮಾ ಸಾಹಿತಿ, ಅಪ್ಪಟ ಗಾಂಧಿವಾದಿಯಾದ ಸರಳ ಹಾಗೂ ಅಪರೂಪದ ವ್ಯಕ್ತಿ. ಇವರು ಸಹಜವಾದ ಗ್ರಾಮಕಲಾ ಪ್ರೇರಣೆಯಿಂದ ಮತ್ತು ಸುದೀರ್ಘ ಕಾಲದ ಹಳ್ಳಿಗಳ ಒಡನಾಟದಿಂದ ಜಾನಪದದ ಬಹುಮುಖ್ಯತೆಯನ್ನು ಕಂಡವರು. ಅದರ ಬಗ್ಗೆ ಅದ್ಭುತ ವ್ಯಾಮೋಹವನ್ನು ಬಳಸಿಕೊಂಡರು. ಇದರಿಂದಾಗಿ ಇವರು ಜಾನಪದ ಹಾಡುಗಳ ಧ್ವನಿಮುದ್ರಣ ಪ್ರಕಟಣೆ, ಕಲಾಮೇಳಗಳು, ಗಿರಿಜನರ ಜೀವನದ ವಿಡಿಯೋ ಚಿತ್ರೀಕರಣ ವಿಚಾರ ಸಂಕಿರ್ಣ ಮುಂತಾದವುಗಳ ಮೂಲಕ ಈ ಜಾನಪದ ತೇರನ್ನು ಮತ್ತಷ್ಟು ಡಾಳಾಗಿ ಸಿಂಗರಿಸಿ ಮುನ್ನಡೆಸಿದರು. ಜನಪದರ ಮನಸ್ಸನ್ನು ತೀವ್ರವಾಗಿ ಆಕರ್ಷಿಸಿದರು" ಎಂಬ ಮಾತಲ್ಲಿ ಕರೀಂಖಾನರು ಕಂಡ ಗ್ರಾಮಗಳ ಸಂಸ್ಕೃತಿಯನ್ನು ಉಳಿಸಲು ಪ್ರಯತ್ನಿಸಿರುವುದು ಸುಲಭವಾದ ಕೆಲಸವಾಗಿರಲಿಲ್ಲ, ಸುದೀರ್ಘವಾದ ಹಳ್ಳಿಗರ ಒಡನಾಟವು ಮಹತ್ವಪೂರ್ಣವಾದದ್ದು.

ಕರ್ನಾಟಕ ಸಹ್ಯಾದ್ರಿಯ ಗಿರಿಕಂದರಗಳಲ್ಲಿ ಹಾಗೂ ಕರಾವಳಿಯ ಉದ್ದಕ್ಕೆ ತಮ್ಮದೇ ಆದ ಜೀವನ ವಿಧಾನಗಳನ್ನು ಅಳವಡಿಸಿಕೊಂಡು ಪ್ರತ್ಯೇಕ ಸಂಸ್ಕೃತಿಯನ್ನೇ ಕಾಪಾಡಿಕೊಂಡು ಬರುತ್ತಿರುವ ಅನೇಕ ಬುಡಕಟ್ಟು ಜನಾಂಗಗಳ ಬಗ್ಗೆ, ಅವರ ಜೀವನ ವಿಧಾನ ಮತ್ತು ಸಂಸ್ಕೃತಿ ಹಾಗೂ ಕಲೆಗಳ ಬಗ್ಗೆ, ಇತ್ತೀಚಿನವರೆಗೆ ಯಾರೂ ಗಮನ ಹರಿಸಿರಲಿಲ್ಲ, ಆದರೆ ಇದೇ ಮೊದಲ ಬಾರಿಗೆ ಅಂದರೆ ಕಳೆದ ಮೂರು ವರ್ಷಗಳಿಂದ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಸಹ್ಯಾದ್ರಿಯ ಒಡಲನ್ನು ಹೊಕ್ಕಿತು. ಉತ್ತರ ಕನ್ನಡದ ಹಾಲಕ್ಕಿಯವರು, ಸಿದ್ಧಿಯರು, ಗೊಂಡರು, ಮುಕ್ರಿಯರು, ಶಿವಮೊಗ್ಗ ಜಿಲ್ಲೆಯ ಹಸಲರು, ಕುಣಬಿಯರು, ದಕ್ಷಿಣ ಕನ್ನಡ ಜಿಲ್ಲೆಯ ಕುಡುಬಿಯರು, ಎರವರು, ಕಾಡುಕುರುಬರು, ಜೇನುಕುರುಬರು ಮತ್ತು ಮೈಸೂರು ಜಿಲ್ಲೆಯ ಸೋಲಿಗರು ಮುಂತದ ಜನಾಂಗಗಳ ಜೀವನ ವಿಧಾನವನ್ನು ಹಾಗೂ ಕಲೆಗಳ ವೈವಿಧ್ಯತೆಯನ್ನು ಅಧ್ಯಯನ ಮಾಡಲು ಅಕಾಡೆಮಿ ಮುಂದಾಯಿತು.

ಈ ಉದ್ದೇಶ ಇಟ್ಟುಕೊಂಡ ಅಕಾಡೆಮಿ ಅನೇಕ ಜನಾಂಗಗಳ ಬಗ್ಗೆ ಸಮಗ್ರವಾದ ವಿಡಿಯೋ ಚಿತ್ರೀಕರಣವನ್ನು ಮಾಡಿತು. ನೂರಾರು ವರ್ಣಪಾರದರ್ಶಿಕೆಗಳನ್ನು ಮತ್ತು ಛಾಯಾ ಚಿತ್ರಗಳನ್ನು ಸಂಗ್ರಹಿಸುವಲ್ಲಿ ಅಧ್ಯಕ್ಷರ ಮಾರ್ಗದರ್ಶನ ಮುಖ್ಯವಾಯಿತು.

**ಗಿರಿಜನರಿಗೆ ಪ್ರಶಸ್ತಿ :**

ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಕಗ್ಗಾಡಿನಲ್ಲಿರುವ ಮತ್ತು ಯಾವುದೋ ಮೂಲೆಯಲ್ಲಿದ್ದ ಕಲಾವಿದರನ್ನು ಹುಡುಕಿ ಪ್ರಶಸ್ತಿಯನ್ನು ನೀಡಲಾಯಿತು. ಕೊಡಗಿನ ಎರವ ಜನಾಂಗದ ಫಣಿ, ಎರವರ ಬೊಳಕ, ಕುಡಿಯರ ಕೆ.ಕೆ. ಜಯ ಮುಂತಾದ ಗಿರಿಜನರು ಪ್ರಶಸ್ತಿಯನ್ನು ಪಡೆದಿದ್ದಾರೆ." ಗಿರಿಜನರನ್ನು ಪ್ರೋತ್ಸಾಹಿಸುವುದಕ್ಕಾಗಿ ವಿಶೇಷ ಗಿರಿಜನ ಪ್ರಶಸ್ತಿಯನ್ನು ಪ್ರತಿಷ್ಠಾಪಿಸಿದ್ದು ಅಕಾಡೆಮಿಯ ಹೆಮ್ಮೆ.

ಕರೀಂಖಾನರು ಅಧ್ಯಕ್ಷರಾದ ಅವಧಿಯಲ್ಲಿ ಜಾನಪದ ಅಕಾಡೆಮಿಗೆ ಒಂದು ಹೊಸ ಚೈತನ್ಯ ತುಂಬಿತ್ತು, ಎಂಬುವುದರಲ್ಲಿ ಎರಡು ಮಾತಿಲ್ಲ. "ಕಾಡಿನಲ್ಲಿ ಯಾವ ನಾಗರಿಕತೆಯ ಸೊಂಕನ್ನು ಅಂಟಿಸಿಕೊಳ್ಳದಂತೆ ಬದುಕುತ್ತಿರುವ ಇಂಥ ಮುಗ್ಧ ಜನಾಂಗಗಳನ್ನು ಹೊರಜಗತ್ತಿಗೆ ಪರಿಚಯ ಮಾಡಿಸುವುದು ನನ್ನ ಗುರಿ" ಎಂದು ಕರೀಂಖಾನರೇ ಒಂದು ಕಡೆ ಹೇಳಿರುವರು. ಮುಂದುವರಿದು ಅವರು "ಕಾಡುಗಳ ಒಡಲಲ್ಲಿ ಬದುಕುತ್ತಿರುವ ಬುಡಕಟ್ಟು ಜನಾಂಗಗಳೇ ಒಂದು ಪುಟ್ಟ ಜಗತ್ತು. ನಾವು ಹಾದುಬಂದ ದಾರಿಯ ಪಳೆಯುಳಿಕೆಯಂತಿರುವ ಈ ಜನಾಂಗವನ್ನು ಕಂಪ್ಯೂಟರ್ ಯುಗಕ್ಕೆ ಧಾವಿಸುತ್ತಿರುವವರಿಗೆ ಪರಿಚಯ ಮಾಡಿಸುವುದು ನಮ್ಮ ಗುರಿ. ಇದು ಒಂದು ರೀತಿಯಲ್ಲಿ ಇಂದಿನ ಮಂದಿಗೆ ನಿನ್ನೆಯ ನೆನಪು ಮಾಡಿಕೊಡುವ ಪ್ರಯತ್ನ. ಮುಗ್ಧ ಗಿರಿಜನರ ಬದುಕನ್ನು ಹಾಗೆ ಅವರ ಪರಿಸರದಲ್ಲಿಯೇ ಚಿತ್ರೀಕರಿಸುವ ವಿಶೇಷ ಯೋಜನೆ ಯಶಸ್ವಿಯಾಗಿದೆ. ಇದು ಮುಂದಿನ ಪೀಳಿಗೆಗೆ ಪುಟ್ಟ ಕಾಣಿಕೆ" ಎನ್ನುತ್ತಾರೆ ಕರೀಂಖಾನರು. ಕಗ್ಗಾಡಿನ ಇಂಥ ಕಲಾವಿದರನ್ನು ಪ್ರೋತ್ಸಾಹಿಸುವ ಸಲುವಾಗಿ ವಿಶೇಷ ಗಿರಿಜನ ಪ್ರಶಸ್ತಿಯನ್ನು ಕೊಡುವುದನ್ನು ಕರೀಂಖಾನರು ಆರಂಭಿಸಿದರು.

ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾಗಿದ್ದಾಗ, ಜನಸಮುದಾಯದ ಅರಿವನ್ನು ಎಚ್ಚರಿಸುವ ಹಲವಾರು ಮೌಖಿಕ ಪರಂಪರೆಯ ಹಾಗೂ ದೃಶ್ಯಸ್ವರೂಪದ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಿದರಲ್ಲದೇ ನಿರ್ಲಕ್ಷ್ಯಕ್ಕೆ ಒಳಪಟ್ಟ ಹಲವಾರು ಮೂಲ ನಿವಾಸಿಗಳ ಸಂಸ್ಕೃತಿಯನ್ನು ವಿಡಿಯೋ ಕ್ಯಾಸೆಟಗಳ ಮೂಲಕ ತೆರೆದಿಟ್ಟು, ಇಲೆಕ್ಟ್ರಾನಿಕ್ ಮಾಧ್ಯಮದ ಮೂಲಕ ಮೂಲ ನಿವಾಸಿಗಳ ಜೀವನವನ್ನು ಬೆಳಕಿಗೆ ತರುವ ಪ್ರಯತ್ನ ಅಕಾಡೆಮಿಯ ಮೂಲಕ ಮಾಡಿದವರಲ್ಲಿ ಇವರೇ ಪ್ರಮುಖರು. ಇವರ ಈ ಕಾರ್ಯಕ್ಕೆ ಹೆಗಲು ನೀಡಿದವರು ರಿಜಿಸ್ಟ್ರಾರ್

ಹಿ.ಚಿ. ಬೋರಲಿಂಗಯ್ಯ ಮತ್ತು ಛಾಯಾಗ್ರಾಹಕ ಶ್ರೀನಿವಾಸಮೂರ್ತಿ ಹೀಗೆ ಕರೀಂಖಾನರು ಹಳೆಯ ಮತ್ತು ಹೊಸ ವಿಚಾರಗಳ ಹಾಗೂ ಸಂಪರ್ಕ ಮಾಧ್ಯಮಗಳ ಒಂದು ಕೊಂಡಿ ಎಂದು ನಾವು ತಿಳಿದುಕೊಳ್ಳಬಹುದು."

ಜಾನಪದ ಅಕಾಡೆಮಿಯ ಅಧ್ಯಕ್ಷರಾಗಿದ್ದಾಗ ಅನೇಕ ಗಣ್ಯವ್ಯಕ್ತಿಗಳನ್ನು ಕಲಾವಿದರನ್ನು ಗೌರವಿಸುವ ಕಾರ್ಯವನ್ನು ಮಾಡಿದ್ದಾರೆ. ಡಾ. ಸುಂಕಾಪುರರಂತಹ ದೊಡ್ಡ ವ್ಯಕ್ತಿಗಳನ್ನು ಕರೆದು ಗೌರವಿಸಿದ್ದಾರೆ. ಹಾಗೆಯೇ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ಕಾಲೇಜಿನ ಪ್ರಾಂಗಣದಲ್ಲಿ ದೊಡ್ಡದಾದ 'ಕರಾವಳಿ ಕರ್ನಾಟಕ'ದ ಎಲ್ಲ ಕಲೆಗಳನ್ನು ಪ್ರದರ್ಶನ ಮಾಡಲು ಅವಕಾಶ ಕಲ್ಪಿಸಿಕೊಟ್ಟರು. ಅಲ್ಲಿರುವ ಗುಮಟೆಪದ, ಬೇರೆ ಬೇರೆ ನೃತ್ಯ ಸನ್ನಿವೇಶಗಳನ್ನು, ಸುಗ್ಗಿ, ನೃತ್ಯವನ್ನು ಎರಡು ದಿವಸ ರಾತ್ರಿ ಹಗಲೆನ್ನದೇ ನಡೆಸಿಕೊಟ್ಟರು. ಈ ಮಹತ್ವಪೂರ್ಣವಾದ ಸಭೆಯ ಕಾರ್ಯಕ್ರಮದಲ್ಲಿ ಅಂದಿನ ಶಾಸಕ ಶ್ರೀ ಎಂ.ಪಿ. ಕರ್ಕಿಯವರು ಡಾ. ಎನ್.ಆರ್. ನಾಯಕರು, ಡಾ. ಸೋಮಶೇಖರ ಇಮ್ರಾಪುರ (ಸದಸ್ಯರು), ಶ್ರೀ ಎಸ್.ವಿ. ಅಯ್ಯನಗೌಡರ್, ಪ್ರೊ. ವಿಲಿಯಂ ಮಾಡ್ತಾ (ಸದಸ್ಯರು), ಪ್ರೊ. ದೇವೇಂದ್ರಕುಮಾರ ಹಕಾರಿ (ಸದಸ್ಯರು) ಹೀಗೆ ಹತ್ತು ಹಲವು ವಿದ್ವಾಂಸರು ಉಪಸ್ಥಿತರಿದ್ದರು. ಇಲ್ಲಿಯ ಸುತ್ತ ಮುತ್ತಲಿನ ಜನರು ಈ ಸಮ್ಮೇಳನಕ್ಕೆ ಬಹಳ ಉತ್ತೇಜನ ನೀಡಿದರು. ಇದರಿಂದ ಕರೀಂಖಾನರು ಒಳ್ಳೆಯ ಸಂಘಟನಾಕಾರರು ಎಂಬುದು ಗಮನಕ್ಕೆ ಬರುತ್ತದೆ.

ಇವರಿಗೆ ಜಾನಪದದಲ್ಲಿ ಇಷ್ಟೊಂದು ಅಗಾಧವಾದ ಜ್ಞಾನ ಮೊದಲಿನಿಂದಲೂ ಇತ್ತು. ಕರೀಂಖಾನರು ಕಥೆ, ಕಾದಂಬರಿ, ನಾಟಕ, ಚಿತ್ರ ಸಾಹಿತ್ಯ, ಪುಸ್ತಕ ರಚನೆಯಲ್ಲೂ ಕೈಯಾಡಿಸಿರುವ ಇವರು ಕಲಾವಿದರ ಒಡನಾಟದಲ್ಲಿ ಮನೆ ಮಠವನ್ನೇ ಮರೆತವರು. ಕಂಸಾಳೆ, ಕಿನ್ನರಿ, ತಂಬೂರಿ ಹಿಡಿದವರ ಹಿಂದೆ ಬಿದ್ದವರು. ಇವರು ಸಾಹಿತ್ಯ ಸಂಗ್ರಹದ ಜೊತೆಗೆ ಕಲಾವಿದರ ಬದುಕು ಹಸನಾಗಲೂ ಪ್ರಯತ್ನಿಸಿದರು. ಆದ್ದರಿಂದ ಜಾನಪದ ಅಧ್ಯಕ್ಷರಾಗಿ ಸಮರ್ಪಕವಾದ ಕೆಲಸಮಾಡಲು ಅಳುಕಲಿಲ್ಲ. ಅನೇಕ ಜಾನಪದ ವಿದ್ವಾಂಸರು ಇವರು ಜಾನಪದ ಅಧ್ಯಕ್ಷರಾಗಿ ಮಾಡಿರುವ ಕೆಲಸವನ್ನು ಶ್ಲಾಘಿಸಿದ್ದಾರೆ. ಜಾನಪದವನ್ನೇ ಉಸಿರಾಗಿಸಿಕೊಂಡ ಇವರು ತಮ್ಮ ತಂಡದ ಜೊತೆಗೆ ಬುಡಕಟ್ಟು ಜನಾಂಗದ ಚಿತ್ರೀಕರಣ ಹಾಡುಗಳ ಸಂಗ್ರಹ ಕಾರ್ಯ ಚೆನ್ನಾಗಿ ಮಾಡಿದರು. ಇವರ ಕಾಲಕ್ಕೆ ಒಳ್ಳೊಳ್ಳೆ ಗ್ರಂಥಗಳು ಕೂಡ ಹೊರಬಂದಿದೆ." ಹೀಗೆ ಜಾನಪದ ಕ್ಷೇತ್ರದಲ್ಲಿ ಬಹುದೊಡ್ಡ ಕೆಲಸ ಮಾಡಿದ್ದಕ್ಕೆ ಇವರಿಗೆ 'ಜಾನಪದಶ್ರೀ' ಪ್ರಶಸ್ತಿ ಬಂದಿತು, ಇದು ಇವರಿಗೆ ಕೊಟ್ಟ ಶ್ರೇಷ್ಠ ಮನ್ನಣೆಯಾಗಿದೆ.

ಕರೀಂಖಾನರು ಅಧ್ಯಕ್ಷರಾದ ಮೇಲೆ ಅವರ ಕೆಲಸವನ್ನು ಮೂರು ಬಗೆಯಾಗಿ ವಿಂಗಡಿಸಿ ಹೇಳಬಹುದು. ೧೯೮೭ ರಿಂದ ೧೯೯೦ ರ ಅವಧಿಯ ಮೊದಲ ವರ್ಷ (೧) ಬುಡಕಟ್ಟು ಜನಾಂಗಗಳ ಸಮಗ್ರ ಬದುಕು ಮತ್ತು ಕಲೆಯ ವಿಡಿಯೋ ಚಿತ್ರೀಕರಣ. (೨) ಎರಡನೇ ವರ್ಷ ಸಾಂಸ್ಕೃತಿಕವಾಗಿ ಅತ್ಯಂತ ಮಹತ್ವವಿರುವ

ಜಾತ್ರೆಗಳ ಬಗ್ಗೆ ವಿಡಿಯೋ ಚಿತ್ರೀಕರಣ ಮಾಡಲು ನಿರ್ಧರಿಸಲಾಯಿತು. (೩) ಕರೀಂಖಾನರ ಅಧ್ಯಕ್ಷತೆಯ ಕೊನೆಯ ವರ್ಷದಲ್ಲಿ ವಿಚಾರ ಸಂಕಿರ್ಣಗಳು, ಕಮ್ಮಟಗಳು, ಕಲಾ ಪ್ರದರ್ಶನಗಳಿಗೆ ಮಹತ್ವ ನೀಡಿರುವುದು ವ್ಯಕ್ತವಾಗುತ್ತದೆ.

'ಜಾನಪದ ಕಲಾರತ್ನ ಮಾಲಿಕೆ', 'ಜನಪದ ಚರ್ಮವಾದ್ಯಗಳು', 'ಕರ್ನಾಟಕ ಜಾತ್ರೆಗಳು' ಮತ್ತು 'ಯಕ್ಷಗಾನ ಬಣ್ಣಗಾರಿಕೆ' ಈ ಪ್ರತಿಯೊಂದು ಕಾರ್ಯಕ್ರಮಗಳು ಒಂದು ತಾಸಿನ ಕ್ಯಾಸೆಟ್‌ಗಳಾಗಿವೆ. ಜನಸಮೂಹದೊಂದಿಗೆ ನಿಕಟ ಸಂಬಂಧ ಮತ್ತು ಜನಪದ ಕಲೆಗಳು ಎಂಬ ಮಾಲಿಕೆಯಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು, ರಾಜ್ಯದಲ್ಲಿಯ ಜಾನಪದ ಸಂಸ್ಕೃತಿಯನ್ನು ಬಿಂಬಿಸುವುದಕ್ಕೋಸ್ಕರ ದೃಶ್ಯ ಸುರುಳಿಗಳನ್ನು ಹೊರತಂದಿದೆ. ಈ ದೃಶ್ಯ ಸುರುಳಿಯಲ್ಲಿ ಪೂಜಾಕುಣಿತ, ಪಟಕುಣಿತ ಮತ್ತು ಡೊಳ್ಳುಕುಣಿತ ಇದಲ್ಲದೆ ಬುಡಕಟ್ಟು ಜನಾಂಗದ ನೃತ್ಯಗಳಾದ ಸುಗ್ಗಿ ಕುಣಿತ, ಹೋಳಿ ಸಿಗ್ಮಾಗಳಂತವುಗಳನ್ನು ದೃಶ್ಯ ಮಾಧ್ಯಮದಲ್ಲಿ ಸೆರೆಹಿಡಿದಿದೆ. ಕರೀಂಖಾನರ ನಿಕಟವರ್ತಿ ಶ್ರೀನಿವಾಸ ಮೂರ್ತಿಯವರು ವಿಡಿಯೋ ಚಿತ್ರೀಕರಣದಲ್ಲಿ ಪರಿಣತರಾಗಿದ್ದು, ಜಾನಪದ ಅನುವಂಶೀಯ ಚಿತ್ರಗಳನ್ನು ಸೆರೆಹಿಡಿಯುವಲ್ಲಿ ಹೆಸರು ಮಾಡಿದ್ದಾರೆ. ಇವರ ಸಹಕಾರವನ್ನು ಕರೀಂಖಾನರು ಅಕಾಡೆಮಿಗೆ ಸಮರ್ಪಕವಾಗಿ ಬಳಸಿಕೊಂಡರು.

ವಿಡಿಯೋ ಚಿತ್ರೀಕರಣದಷ್ಟು ಮಹತ್ವದ ಮಾಧ್ಯಮ ಮತ್ತೊಂದು ಇಲ್ಲ ಎಂಬ ಅಂಶವನ್ನು ಮನಗಂಡ ಕರೀಂಖಾನರು, ಈ ಜಾನಪದ ಕಲೆಗಳ ಉಳಿವಿಗೆ ಇದೊಂದೆ ಉತ್ತಮ ಸಾಧನವೆಂದು ಬಗೆದು, ಈ ದಿಶೆಯಲ್ಲಿ ಮತ್ತಷ್ಟು ಕಾರ್ಯತತ್ಪರರಾದರು. ಮೈಲಾರಲಿಂಗನ ಜಾತ್ರೆ, ಶಿರ್ಸಿ ಮಾರಿಕಾಂಬಾ ಜಾತ್ರೆ, ಚೌಡೇಶ್ವರಿ ಜಾತ್ರೆ, ಅಫ್‌ಜಲ್‌ಪುರ್, ಗುಲಬರ್ಗಾ, ಸಿರಿಜಾತ್ರೆ, ದಕ್ಷಿಣ ಕನ್ನಡ ಜಿಲ್ಲೆ, ದೊಡ್ಡಾಟಗಳ ಜಾತ್ರೆಗಳ ಕ್ಯಾಸೆಟ್ಟುಗಳು, ಸೂತ್ರದ ಗೊಂಬೆಗಳು, ತೊಗಲು ಗೊಂಬೆಗಳು, ಜನಪದ ಆಟಗಳು ಇವು ಜನರನ್ನು ಆಕರ್ಷಿಸಿದ್ದ ಕಲೆಗಳಾಗಿದ್ದವು ಎಂಬುದನ್ನು ಕರೀಂಖಾನರು ಮೊದಲೇ ಅರಿತಿದ್ದರು.

ಪರಿಸರ ಬದುಕಿನೊಂದಿಗೆ ಬೆಸೆದುಕೊಂಡ ಅಂಶ. ಆದ್ದರಿಂದಲೇ ನಾವು ಗಿರಿಜನರ ಬದುಕನ್ನು ಅವರ ದಿನನಿತ್ಯದ ಪರಿಸರದೊಂದಿಗೇ ಚಿತ್ರಿಸಿದ್ದೇವೆ" ಎಂಬ ಮಾತಲ್ಲಿ ಕರೀಂಖಾನರು ಗಿರಿಜನರು ಮತ್ತು ಬಡುಕಟ್ಟು ಜನರ ಜೀವನ ಕ್ರಮವನ್ನು ಅವರ ಸಾಂಸ್ಕೃತಿಕ ಬದುಕನ್ನು ಕಾಣುವಲ್ಲಿ, ಪರಿಸರದ ಚಿತ್ರಣವನ್ನು ಕಲೆಹಾಕುವಲ್ಲಿ ವಹಿಸಿದ ಶ್ರದ್ಧೆ ಅತ್ಯಂತ ಚೇತೋಹಾರಿಯಾದುದು. ಇವರು ಕೊಡಗು, ಸಿದ್ದಾಪುರ, ಸಾಗರ, ನಾಗವಳ್ಳಿ, ಅಂಕೋಲಾ, ಕುಮಟಾ, ಹೊನ್ನಾವರಗಳಲ್ಲಿ ಹಾಲಕ್ಕಿ ಒಕ್ಕಲಿಗರು, ಗೊಂಡರು, ಕುಡುಬಿಯರು, ಮುಕ್ರಿಯರು, ಸಿದ್ಧಿಯರ ಬಗ್ಗೆ ೨೮ ಗಂಟೆಗಳ ಕಾಲ ವಿಡಿಯೋ ಚಿತ್ರೀಕರಣ ಪೂರೈಸಿದರು. ಅಕಾಡೆಮಿ ಇದೇ ರೀತಿ ಹಲವು ದಿಕ್ಕುಗಳಲ್ಲಿ ತನ್ನನ್ನು ಚಾಚಿಕೊಳ್ಳುವಲ್ಲಿ ಇವರು ಮುತುವರ್ಜಿ ವಹಿಸಿದರು. ಇದರಿಂದ ಗಿರಿಜನರ

ಬದುಕಿಗೆ ಭದ್ರಬುನಾದಿ ಹಾಕಿದಂತಾಯಿತು. ಅದಕ್ಕೆ ಅಡಿಪಾಯ ಹಾಕಿದ ಯಶಸ್ಸು ಖಂಡಿತಾ ಕರೀಂಖಾನರವರದ್ದು. ಅಪ್ಪಟ ಜಾನಪದ ಸೊಗಡಿನ ವ್ಯಕ್ತಿತ್ವ ಆದ್ಧರಿಂದ ಕರೀಂಖಾನರಿಗೆ ನಶಿಸುತ್ತಿರುವ ಅನೇಕ ಬಡುಕಟ್ಟುಗಳ ಚಿತ್ರಗಳನ್ನು ಹಿಡಿದಿಡುವ ಸಂಶೋಧನಾ ಭಾವನೆ ಬಂದುದು ಯೋಗ್ಯವಾಯಿತು.

ಗಿರಿಜನರ ಜೀವನದ ಚಿತ್ರಣದ ಹೊಸ ಯೋಜನೆಯು ಕರೀಂಖಾನರಿಂದ ಆರಂಭವಾಯಿತು. ಹಳ್ಳಿಯಲ್ಲಿಯ ಜಾನಪದ ವಾತಾವರಣ ಮಾಯವಾಗುತ್ತಿರುವ ಸಮಯದಲ್ಲಿ ಜಾನಪದ ವಲಸೆ ಹೋಗುವ ಸಮಯದಲ್ಲಿ, ನಗರದ ಕ್ಯಾಸೆಟ್ ಸಂಸ್ಕೃತಿ ಹಳ್ಳಿಯ ಜಾನಪದವನ್ನು ತಿಂದು ಹಾಕುವ ಸಮಯದಲ್ಲಿ ಈ ಕುಣಿತ ಹಾಡುಗಳು ಹಾಳಾಗುವ ಮುಂಚೆಯೇ ಅದನ್ನು ಹೆಕ್ಕಬೇಕು ಎನ್ನುವ ಕರೀಂಖಾನರ ಕಳಕಳಿ ಮರೆಯಲಾರದಂತದ್ದು, ಜಾನಪದ ಕಲೆಗಳಿಗೆ ಉತ್ತೇಜನ, ಜಾನಪದವನ್ನು ಮರೆಯುತ್ತಿರುವವರಿಗೆ ಶಿಕ್ಷಣ, ಜಾನಪದ ಕಲೆಗಾರರಿಗೆ ವಸ್ತ್ರಾಭರಣ, ನಗರದ ಆಸಕ್ತ ಸಂಶೋಧಕರಿಗೆ ಜಾನಪದ ಕ್ಷೇತ್ರಕಾರ್ಯದಲ್ಲಿ ತರಬೇತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು. ಅದರಂತೆ ಕೆಲವೇ ದಿನಗಳಲ್ಲಿ ಅಂಕೋಲಾ, ಮತ್ತು ಅಥಣಿಯಲ್ಲಿ ಜಾನಪದ ಕಲಾಮೇಳ ವ್ಯವಸ್ಥೆ ಮಾಡುವಲ್ಲಿ ಸಫಲತೆ ಕಂಡುಕೊಂಡಿತು.

ಗಿರಿಜನರ ಬದುಕನ್ನು ಚಿತ್ರಿಸುವಲ್ಲಿ ದುರ್ಗಮವಾದ ಕಾಡು, ಕಣಿವೆಗಳಲ್ಲಿ ಅಡ್ಡಾಡುವುದು ಪ್ರಯಾಸದ ಕೆಲಸವೇ ಸರಿ. ಎತ್ತರದ ಪರ್ವತಗಳನ್ನು ಏರಿ ಮುಗಿಲು ಚುಂಬಿಸುವ ಹವ್ಯಾಸ ಹೊಂದಿರುವ 'ದಿ ಅಡ್ವೆಂಚರರ್ಸ್' ಸಾಹಸಿ ಶಾಲೆ ಮತ್ತು ಕರ್ನಾಟಕದ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಎರಡೂ ಸಂಸ್ಥೆಗಳಿಗೆ ಹತ್ತು ವರ್ಷತುಂಬಿದ ನೆನಪಿಗೆ ರಾಷ್ಟ್ರದಲ್ಲಿಯೇ ಪ್ರಥಮಬಾರಿಗೆ ವಿನೂತನ ಕಾಲ್ನಡಿಗೆ ಮೂಲಕ ಬುಡಕಟ್ಟು ಅಧ್ಯಯನ" ಕಾರ್ಯಕ್ರಮವು ಕರೀಂಖಾನರ ಅವಧಿಯಲ್ಲಿ ಹುಟ್ಟಿಕೊಂಡಿತು.

ಎದೆ ನಡುಗಿಡುವ ಡಮ್ಮಡಕ್ಕ ಶಬ್ದ ಹೊಮ್ಮಿಸುವ ಡೊಳ್ಳು ಹೊಸ ಲಯ ಹುಟ್ಟು ಹಾಕುವಾಗ 'ಹಾವೇಲಿಯೇ ಅಸಿಸ್ಯಾ ಅರಿರಾಸಿ ರೇಳಿಯೇ' ಎಂದು ಫಳಫಳ ಮಿಂಚು ಕನ್ನಡಿಲಂಗ ತೊಟ್ಟ ಲಂಬಾಣಿಯರು ಸೊಂಟ ಬಳುಕಿಸುತ್ತಾ ಕೂಗಿ ಕರೆಯುವಾಗ 'ಹೋಯ್ ಹೋಯ್' ಎಂದು ತಲೆಗೆ ಸಿಂಗಾರ ಮಾಡಿಕೊಂಡ ಹಾಲಕ್ಕಿ, ಒಕ್ಕಲಿಗರು, ಗುಮಟೆಯ ನಾದಕ್ಕೆ ಹೆಜ್ಜೆಯಿಕ್ಕುವಾಗ 'ಖಡಖಡಾ ವೀರಭದ್ರ' ಎಂದು ಕೈಯಲ್ಲಿ ಖಡ್ಗ ಹಿಡಿದ ಲಿಂಗದ ವೀರರು ಚಮಾಳದ ಗತ್ತಿಗೆ ತೂಗುವಾಗ ಸ್ವಾಮಿ ಶರಣು ದೇವಕೋ ಸ್ವಾಮಿ ಶರಣು ದೇವಕೋ ಎಂಬ ಹಾಡಿಗೆ ಕುಣುಬಿಯರ ಇಡೀ ಹಾಡಿ ದನಿಗೂಡಿಸುವಾಗ ಜಾನಪದ ಅಕಾಡೆಮಿಯ ಉಸಿರು ಈ ಹಾಡು ಕುಣಿತಗಳ ಹಿಂದೆ ಕೇಳಿಬರುತ್ತದೆ.

"ಜಾನಪದ ಅಕಾಡೆಮಿಯ ಅಧ್ಯಕ್ಷಸ್ಥಾನ ನನಗೆ ಹೆಚ್ಚು ಕೆಲಸ ಮಾಡಲು ಅವಕಾಶ ನೀಡಿತು. ನನ್ನ ಮೊದಲ ಆಸಕ್ತಿ ಜಾನಪದ. ಈ ಅಧ್ಯಕ್ಷಸ್ಥಾನ ನನಗೆ ನನ್ನ ಹಳೆಯ ದಿನಗಳನ್ನು ನೆನಪಿಸಿತು. ಕರ್ನಾಟಕದ ವಿವಿಧ ಆಚರಣೆಗಳನ್ನು ವಿಡಿಯೋ ಸಂಗ್ರಹಿಸಿದ್ದೇವೆ. ಇದು ನನ್ನ ನಂತರದ ಪೀಳಿಗೆಗೆ ಮಹತ್ವದ ಕೊಡುಗೆಯಾಗುತ್ತದೆ" ಎನ್ನುವಾಗ ಕರೀಂಖಾನರ ಮುಖದಲ್ಲಿ ಸಂತೋಷ ಮನೆಮಾಡುತ್ತದೆ.

"ತಮ್ಮ ಸೇವೆಯ ಅವಧಿಯಲ್ಲಿ ಇಪ್ಪತ್ತು ವಿವಿಧ ಗ್ರಾಮೀಣ ಜಾನಪದ ತಂಡಗಳ ಕುರಿತು ಬಡಗುತ್ತಿಟ್ಟು, ತೆಂಕಣತಿಟ್ಟು, ಯಕ್ಷಗಾನ ಪ್ರದರ್ಶನ, ಮೂಡಲಪಾಯಿ, ಕರಿಭಂಟನ ಕಾಳಗ ಜಾನಪದ ಸಾಹಿತ್ಯಗಳನ್ನು ಕುರಿತು ತಯಾರಿಸಲಾದ ಸಾಕ್ಷ್ಯಚಿತ್ರಗಳು ಆಯಾ ಕ್ಷೇತ್ರದಲ್ಲಿನ ಹಿರಿಮೆಯನ್ನು ಸಾದರಪಡಿಸಿವೆ. ಇವು ಜಾನಪದ ಲೋಕದ ಸುಂದರ ಚಿತ್ರಣಗಳಾದವು ತಮ್ಮ ಅಕಾಡೆಮಿಯ ಅಧ್ಯಕ್ಷ ಪದವಿಯ ಅವಧಿಯನ್ನು ಸುವರ್ಣಾಕ್ಷರಗಳಿಂದ ಬರೆದಿಡಬೇಕಾದದ್ದು ಎಂಬುದು ಜಾನಪದ ಲೋಕದ ಕಲಾವಿದರುಗಳ ಅಭಿಪ್ರಾಯ ವಾಗಿದೆ." ಎಂದು ಹಂಸಜ್ಯೋತಿ ಸಂಘಟನೆಯು ವಿವರಿಸಿರುವುದು ಕರೀಂಖಾನರ ಘನತೆಯನ್ನು ಸಾರುವಂಥದ್ದು. ನಾಡಿನಾದ್ಯಂತ ಜಾನಪದ ಕಂಪನ್ನು ಪಸರಿಸಿದ ಇವರಿಗೆ ರಾಜ್ಯಾದ್ಯಂತ ಗೌರವಗಳು ಲಭ್ಯವಾಗಿರುವುದು ಅಭಿನಂದನೀಯ.

ಇವರ ಅವಧಿಯಲ್ಲಿ ಕಲಾವಿದರು ಮತ್ತು ಆಸಕ್ತ ಸಾರ್ವಜನಿಕರ ನೆರವು ಸಹಕಾರ ಅಪಾರವಾಗಿ ದೊರೆತಿದ್ದನ್ನು ಸ್ಮರಿಸಲೇಬೇಕು. ಅಕಾಡೆಮಿಯ ವಿವಿಧ ಕಾರ್ಯಕ್ರಮ ಅಥವಾ ಯೋಜನೆಗಳನ್ನು ರೂಪಿಸುವವರು ಅಧ್ಯಕ್ಷರ ಸೂಕ್ತ ಮಾರ್ಗದರ್ಶನದ ಮೂಲಕ ಅನೇಕ ಅನುಭವಿ ಸದಸ್ಯರ ಸಮ್ಮತಿಯೂ ಇತ್ತು. ಅಕಾಡೆಮಿಯ ಇದುವರೆಗಿನ ಪ್ರಮುಖ ಕಾರ್ಯ ಚಟುವಟಿಕೆಗಳಲ್ಲಿ ಮುಖ್ಯವಾದ ಕೆಲವು ಅಂಶಗಳನ್ನು ಈ ಮೂಲಕ ಗುರುತಿಸಬಹುದು. "ಕಲಾಮೇಳಗಳು, ವಿಚಾರ ಸಂಕಿರ್ಣಗಳು, ಜಾನಪದ ಸಮಾವೇಶಗಳು, ಕಮ್ಮಟಗಳು, ಕ್ಷೇತ್ರಕಾರ್ಯಕರ್ತರ ಶಿಬಿರಗಳು, ಯಕ್ಷಗಾನ ಹಸ್ತಪ್ರತಿಗಳ ಸಂಗ್ರಹ ಹಾಗೂ ಗೌರವ ಪ್ರಶಸ್ತಿಗಳು ನಡೆದವು. ಅಕಾಡೆಮಿಯ ಗೌರವವನ್ನು ಹೆಚ್ಚಿಸಿದವು. ಅನೇಕ ಪ್ರಶಸ್ತಿಗಳನ್ನು ಕೊಡುವಲ್ಲಿ ಕರೀಂಖಾನರ ಪ್ರಯತ್ನ ಮಹತ್ವದ್ದು. ಕರೀಂಖಾನ ಅಧ್ಯಕ್ಷರಾಗಿದ್ದ ವೇಳೆಯಲ್ಲಿ ಅನೇಕ ಪುಸ್ತಕಗಳು ಬೆಳಕಿಗೆ ಬಂದವು. ಪ್ರತಿತಿಂಗಳೂ ಹಣಕಾಸಿನ ವ್ಯವಹಾರ ಸರಿಯಿದೆಯೋ ಎಂಬುದನ್ನು ಸದಾ ಎಚ್ಚರಿಕೆಯಿಂದ ಪರಿಶೀಲಿಸುತ್ತಿದ್ದರು." ಲೆಕ್ಕ ಪರಿಶೀಲಿಸಲು ಒಬ್ಬ ಫೈನಾನ್ಸ್ ಆಫೀಸರ್ ಇದ್ದರೂ ಈ ಬಗ್ಗೆ ಹೆಚ್ಚಿನ ಗಮನ ಕೊಟ್ಟಿದ್ದರು. ಕೆಟ್ಟ ಹೆಸರು ಬರಬಾರದೆಂಬ ಕಾಳಜಿ ವಹಿಸುತ್ತಿದ್ದರು. ಒಂದು ಪೈಸೆಯೂ ಅಕಾಡೆಮಿಯಲ್ಲಿ ದುರುಪಯೋಗವಾಗಬಾರದೆಂಬ ರೀತಿಯಲ್ಲಿ ಕೆಲಸಗಳು ನಡೆದವು. ಕಲಾವಿದರ ಚಿತ್ರೀಕರಣ ಮಾಡುವುದು, ಪರಿಸರದ ಚಿತ್ರೀಕರಣ, ಬುಡಕಟ್ಟು ಜನರ

ಚಿತ್ರೀಕರಣ, ಹೀಗೆ ಹತ್ತು ಹಲವು ಕಾರ್ಯಕ್ರಮವಿದ್ದರೂ ರಾತ್ರಿ ಇಡೀ ಚಿತ್ರೀಕರಣ ಮಾಡಿಸುತ್ತಿದ್ದರು. ಕಲಾಮೇಳದವರು ಸಹ ಸಹಕರಿಸುತ್ತಿದ್ದರು. ಆಗ ಕರೀಂಖಾನರಿಗೆ ೮೭ ವರ್ಷ ದಾಟಿ ಹೋಗಿತ್ತು. ಹೆಚ್ಚು ಕಡಿಮೆ ಉತ್ತರ ಕರ್ನಾಟಕದಲ್ಲಿ ಹೆಚ್ಚಿನ ಚಿತ್ರೀಕರಣ ಮಾಡಿದೆವು ಎಂದು ಮೂರು ವರ್ಷಗಳು ಅವರ ಜೊತೆ ಚಿತ್ರೀಕರಿಸಿದ ಶ್ರೀ ವಿ. ಶ್ರೀನಿವಾಸಮೂರ್ತಿಯವರು ನೆನಪಿಸಿಕೊಳ್ಳುತ್ತಾರೆ.

ನಮ್ಮ ನಡುವಿನ ಸೂಕ್ಷ್ಮ ಸಂಸ್ಕೃತಿ ಚಿಂತಕ ಕರೀಂಖಾನರು ಕನ್ನಡ ನಾಡುನುಡಿ ಕಂಡ ಅಪರೂಪದ ವ್ಯಕ್ತಿ. ವೈಚಾರಿಕತೆಯನ್ನು ಅರಿತ ಇವರು ಎಲ್ಲಾ ಬಗೆಯ ಅಸಡ್ಡಾಳಿತನ, ಮೋಸ, ಮೌಢ್ಯ ಹಾಗೂ ಮತೀಯತೆಯನ್ನು ದಿಟ್ಟವಾಗಿ ಖಂಡಿಸಿದ ವ್ಯಕ್ತಿ. ಈ ಸಮುದಾಯದ ಹಿತಾಕಾಂಕ್ಷಿಯಾದ ಯೋಜನೆಗಳನ್ನೆಲ್ಲ ಮನಸ್ಸಿನಲ್ಲಿಟ್ಟು ಕೊಂಡು ಸಾರ್ಥಕ ಬದುಕನ್ನು ಬಾಳಿದ ಧೀಮಂತರು. ಈ ನಾಡಿನ ಅಪರೂಪದ ಹಾಗೂ ವಿರಳ ಪಂಕ್ತಿಯ ಸರಳ ವ್ಯಕ್ತಿ ಎಂದು ಇವರ ಕುರಿತ ವಿಚಾರವನ್ನು 'ಗೆಜ್ಜೆ ಮಾತಾಡುತ್ತಿವೆ' ಎಂಬ ಪುಸ್ತಕ ಹೊಗಳಿರುವುದು ಕರೀಂಖಾನರ ಸಮುದಾಯದ ಪ್ರೀತಿ ವ್ಯಕ್ತವಾಗಿದೆ. ಹಿ.ಚಿ. ಬೋರಲಿಂಗಯ್ಯನವರ "ಗಿರಿಜನ ನಾಡಿಗೆ ಪಯಣ" ಪುಸ್ತಕ ಆ ಕಾಲದ ಒಂದು ಪ್ರಮುಖ ದಾಖಲಾತಿ.

ಕರೀಂಖಾನ್‌ರವರ ಅವಧಿಯಲ್ಲಿ ವೈವಿಧ್ಯಮಯ ಕಾರ್ಯಕ್ರಮಗಳು ನಡೆದಿವೆ. ಅದನ್ನು ವ್ಯವಸ್ಥಿತವಾಗಿ ಪ್ರಚಾರ ಮಾಡುವುದರಲ್ಲೂ ಕರೀಂಖಾನರವರಿಗೆ ಮಾಧ್ಯಮಗಳು ಸಹಾಯಕವಾಗಿ ನಿಂತವು. ಇವರದು 'ಬರಹಕ್ಕೆ ಮೀರಿದ ಸರಳ ವ್ಯಕ್ತಿತ್ವ' ಎಂದು ಸುಧಾ ಪತ್ರಿಕೆ ಬಣ್ಣಿಸಿದೆ. ಬದುಕಿನ ಪ್ರತಿಭಾವಗಳಿಗೆ ತಮ್ಮ ಜಾನಪದ ಜೋಳಿಗೆಯಿಂದ ಹಾಡುಗಳನ್ನು ಹೆಕ್ಕಿಕೊಡುತ್ತಾರೆ ಎಂದು ಹೊಗಳಿಸಿಕೊಂಡಿರುವರು. ಇವರ ಕಾರ್ಯಕ್ರಮಗಳೆಲ್ಲವೂ ಜನಸಾಮಾನ್ಯರಿಗಾಗಿತ್ತು, ಇವರ ಕಾರ್ಯಕ್ರಮಗಳನ್ನು ಕೊಂಡಾಡದವರೇ ಇಲ್ಲ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಗೆ ಕೀರ್ತಿಯನ್ನು ತಂದರು.

ಕರೀಂಖಾನರು ತಮ್ಮ ಹೃದಯದಿಂದ ಉದಿಸಿದ ಮಾತನ್ನು ವಿವರಿಸುತ್ತಾ ಹೀಗೆಂದರು. "ಈ ಪುರಾತನ ಕಲೆಗಳು ಕೈಬಿಟ್ಟು ಹೋಗ್ತಾ ಇವೆ, ಜನ ಇದರಿಂದ ದೂರ ಆಗ್ತಾ ಇದ್ದಾರೆ. ತಾತ್ಸಾರ ಭಾವ ತಾಳಿದ್ದಾರೆ. ಈ ಕಾರಣದಿಂದ ಆ ಪುರಾತನ ಕಲೆಗಳನ್ನು ಭದ್ರವಾಗಿ ಇಡಬೇಕು ಅನ್ನೋ ದೃಷ್ಟಿಯಿಂದ ನಾನು ವಿಡಿಯೋ ಚಿತ್ರೀಕರಣ ಕೈಗೊಂಡು ಸುಮಾರು ೨೫೦ ಗಂಟೆಗಳ ಕಾಲ ಮಾಡಿಸ್ದೆ, ಆರ್ಥಿಕವಾಗಿ ನನಗೇನೂ ಸಹಾಯವಾಗಿಲ್ಲ. ಅದುವೇ 'ಋಣಾನುಬಂಧ ರೂಪೇಣ ಪಶುಪತ್ನಿ ಸುತಾಲಯ' ಅಂತ ಪೂರ್ವಿಕರು ಹೇಳಿದಂತೆ ಋಣಾನುಬಂಧಾನೂ ಇರಬೇಕು. ಅದಿಲ್ದೆ ಇದ್ರೆ ಸುಯೋಗ ಪ್ರಾಪ್ತವಾಗಲ್ಲ." ಎಂಬಲ್ಲಿ ಕರೀಂಖಾನರು ಮೊದಲಿನಿಂದಲೂ ಜಾನಪದಕ್ಕಾಗಿ ತಮ್ಮ ವಿಚಾರಗಳನ್ನೆಲ್ಲಾ ಧಾರೆಯೆರೆದರು. ಕಾಯಾ, ವಾಚಾ, ಮನಸಾ, ಪ್ರಾಮಾಣಿಕವಾದ ಸೇವೆಯನ್ನು ಮಾಡಬೇಕೆಂದು ವಿಚಾರಿಸಿದ ಇವರಿಗೆ ಯಾವುದೇ ಕಾರ್ಯವು ಕಠಿಣವೆನಿಸಲಿಲ್ಲ.

ಇವರ ಅಧ್ಯಕ್ಷತೆಯಲ್ಲಿ ಅಖಿಲ ಕರ್ನಾಟಕ ಜಾನಪದ ಸಮ್ಮೇಳನ ದಿನಾಂಕ ೬-೭-೧೯೮೮ ರಂದು ಹೊನ್ನಾವರದಲ್ಲಿ ನಡೆಯಿತು. ಅಂದಿನ ಸಭೆಯಲ್ಲಿ ಅಧ್ಯಕ್ಷರಾಗಿ ಕರೀಂಖಾನರು ಮಾಡಿದ ಭಾಷಣವು ಜಾನಪದ ಸಾರಸತ್ವವನ್ನು ಜನತೆಯ ಮನದಾಳಕ್ಕೆ ತೆರೆದಿಟ್ಟಂತಿತ್ತು. ಭಾಷೆಯ ಬಳಕೆ, ಅಗಾಧವಾದ ಜ್ಞಾನ, ಜ್ಞಾಪಕಶಕ್ತಿ, ಪೂರ್ವಸಂಸ್ಕೃತಿಯ ಅಪಾರ ಅನುಭವಗಳೆಲ್ಲವೂ ಮಡುಗಟ್ಟಿರುವಂತೆ ಇವರ ಬಾಯಲ್ಲಿ ಅಪಾರ ದೇಶಿ ಜಾನಪದ ಸೊಗಡು ಹೊರಬಂದಿದ್ದು ಅಚ್ಚರಿಪಡಿಸುವಂತಿತ್ತು. ಹೊನ್ನಾವರ ತಾಲೂಕಿನ ಗಿರಿಜನರ ಕುರಿತ ವಿಡಿಯೋ ಚಿತ್ರೀಕರಣ ಮಾಡಿದ್ದು, ಕರೀಂಖಾನರ ಒಂದು ಮಹತ್ವದ ಕಾರ್ಯ. ಮುಕ್ರಿ ಜನಾಂಗವನ್ನು ಕುರಿತ ವಿಡಿಯೋ ಚಿತ್ರೀಕರಣ ನಡೆಸಲು ಅವರು ಡಾ. ಶ್ರೀಪಾದ ಶೆಟ್ಟಿಯವರ ಮನೆಯಲ್ಲಿ ಮೂರು ದಿನಗಳ ಕಾಲ ತಂಗಿದ್ದು, ಮುಕ್ರಿಗರ ಹಾಡಿಗೆ ಹೋಗಿ ಅವರೊಡನೆ ಮಾತನಾಡಿ ಚಿತ್ರೀಕರಣವನ್ನು ನಡೆಸಿದರು. ಅದೇ ಸಂದರ್ಭದಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯ ಅವರಗೆ ಗೌರವ ಡಾಕ್ಟರೇಟ ನೀಡಿದ ಸಂದರ್ಭ ನೆನಪಿಸಿದ ಡಾ. ಶ್ರೀಪಾದ ಶೆಟ್ಟಿಯವರು ಡಾ. ಎಸ್.ಕೆ. ಕರೀಂಖಾನರನ್ನು ಡಾ. ಎನ್. ಆರ್. ನಾಯಕ ಅವರ ಹಿರಿತನದಲ್ಲಿ ಸನ್ಮಾನಿಸಿದರು. ಡಾ. ಹಿ. ಚಿ. ಬೋರಲಿಂಗಯ್ಯ ಹಾಗೂ ಶ್ರೀ ಶ್ರೀನಿವಾಸಮೂರ್ತಿಯವರು ಅಂದು ಡಾ. ಕರೀಂಖಾನರ ಕುರಿತು ಅಭಿನಂದನ ಭಾಷಣ ಮಾಡಿದರು. ಡಾ. ಕರೀಂಖಾನರನ್ನು ಸನ್ಮಾನಿಸಿ ಡಾ. ಶ್ರೀಪಾದ ಶೆಟ್ಟಿಯವರು ಧನ್ಯತೆಯನ್ನು ಅನುಭವಿಸಿದ್ದನ್ನು ಈಗಲೂ ಮೆಲುಕು ಹಾಕುತ್ತಾರೆ.

ಕರೀಂಖಾನರು ಕನಸುಗಾರರಾಗಿದ್ದರು. ಅಧ್ಯಕ್ಷತೆಯಿಂದ ನಿರ್ಗಮಿಸುವಾಗ ಅವರು ವ್ಯಕ್ತಪಡಿಸಿದ ಅಭಿಪ್ರಾಯಗಳು ಅವರ ವಿನಯಶೀಲತೆಗೆ ಸಾಕ್ಷಿಯಾಗಿವೆ. "ನಮ್ಮ ಸರಕಾರ ಜಾನಪದ ಅಕಾಡೆಮಿಗೆ ಇನ್ನು ಮುಂದಾದರೂ ಹೆಚ್ಚಿನ ಹಣ ನೀಡಲಿ ಎಂಬುದು ನನ್ನ ಆಶಯ. ಆದರೂ ಈ ಮಿತಿಯ ನಡುವೆ ಕರ್ನಾಟಕದ ಜಾನಪದದ ವೈವಿಧ್ಯಗಳ ಬಗ್ಗೆ ನೂರಾರು ಗಂಟೆಗಳ ವಿಡಿಯೋ ದಾಖಲಾತಿ ಮಾಡಿದ್ದೇವೆ. ವರ್ಣ ಪಾರದರ್ಶಿಕೆ ಹಾಗೂ ಛಾಯಾಚಿತ್ರಗಳ ಸಂಗ್ರಹ ಮಾಡಿದ್ದೇವೆ. ಅಲ್ಲದೆ ಗಿರಿಜನ ವಿಚಾರ ಸಂಕಿರಣ, ತೊಗಲುಗೊಂಬೆ ಕಮ್ಮಟ, ಗಡಿನಾಡಿನಲ್ಲಿ ಮೇಳ, ಕರ್ನಾಟಕದ ಜಾನಪದ ಗ್ರಂಥ ಹಲವಾರು ವಿಚಾರ ಸಂಕಿರಣಗಳು ಪ್ರಾತ್ಯಕ್ಷಿಕೆಗಳು ಮುಂತಾಗಿ ನೂರಾರು ಕಾರ್ಯಕ್ರಮ ಮಾಡಿದ್ದೇವೆ. ಇವೆಲ್ಲದರ ಜೊತೆಗೆ ಸಹ್ಯಾದ್ರಿ ಮತ್ತು ಕರಾವಳಿಯಲ್ಲಿ ವ್ಯಾಪಕ ಕ್ಷೇತ್ರಕಾರ್ಯ ಮಾಡಿ ಗಿರಿಜನರ ಬದುಕನ್ನು ದಾಖಲು ಮಾಡುವುದರ ಜೊತೆಗೆ ಅವರನ್ನು ಹೊರ ಜಗತ್ತಿಗೆ ಪರಿಚಯಿಸುವ, ಅವರ ಕಲೆಗಳ ಬಗ್ಗೆ ಆತ್ಮವಿಶ್ವಾಸ ಮೂಡಿಸುವ ಕೆಲಸ ಮಾಡಿದ್ದೇವೆ" ಹೀಗೆ ತಮ್ಮ ಕಾರ್ಯದ ಬಗ್ಗೆ ಸಂತೃಪ್ತಿ ವ್ಯಕ್ತಪಡಿಸುತ್ತಾರೆ.

ಜಾನಪದ ಕೆಲಸ ಅಗಾಧವಾದದ್ದು, ಆದರೆ ಅಧ್ಯಕ್ಷರ ಅವಧಿ ಮೂರು ವರ್ಷಗಳಿಗೆ

ಸೀಮಿತವಾದದ್ದು, ಎಸ್.ಕೆ. ಕರೀಂಖಾನರ ಕಾಲದಲ್ಲಿ ಪತ್ರಿಕೆಗಳಾದ ಪ್ರಜಾವಾಣಿ, ಕನ್ನಡಪ್ರಭ, ಸಂಯುಕ್ತ ಕರ್ನಾಟಕ, ಮುಂಗಾರು ಉದಯವಾಣಿ, ಜನತಾವಾಣಿ, ಮಾರ್ದನಿ, ಡೆಕ್ಕನ್ ಹೆರಾಲ್ಡ್, ದಿ ಟೈಮ್ಸ್ ಆಫ್ ಇಂಡಿಯಾ ಮುಂತಾದ ಪತ್ರಿಕೆಗಳು ಜಾನಪದ ಅಕಾಡೆಮಿ ಹಮ್ಮಿಕೊಳ್ಳುತ್ತಿದ್ದ ಕಾರ್ಯಕ್ರಮಗಳನ್ನು ಮಹತ್ವಕೊಟ್ಟು ಪ್ರಕಟಿಸುತ್ತಿದ್ದವು.

ಆ ಕಾಲದಲ್ಲಿ ಪತ್ರಿಕೆಗಳಲ್ಲಿ ಬಂದ ವಿಶೇಷ ಲೇಖನಗಳನ್ನು ಹಾಗೂ ಪತ್ರಿಕಾ ವರದಿಗಳನ್ನು ಆಧರಿಸಿಯೇ 'ಗೆಜ್ಜೆ ಮಾತಾಡುತ್ತಾವೆ' ಎಂಬ ಸ್ಮರಣ ಸಂಚಿಕೆಯನ್ನು ಸಿದ್ಧಪಡಿಸಲಾಗಿತ್ತು. ಈ ಸಂಚಿಕೆಯಲ್ಲಿ ಪ್ರಜಾವಾಣಿ ಸಾಪ್ತಾಹಿಕ, ಪುರವಣಿಯಲ್ಲಿ ಪ್ರಕಟವಾದ 'ಕುಡುಗುಂಜಿ', ಬಗೆಗಿನ ಲೇಖನ, ಸುಧಾದಲ್ಲಿ ಪ್ರಕಟವಾದ 'ಕುಣುಬಿಗೊಂಡರ ಜೊತೆ ಮೇಘಾನೆಯಲ್ಲಿ' ಲೇಖನ, ಪ್ರಜಾಮತದಲ್ಲಿ ಪ್ರಕಟವಾದ 'ದಶಕೋತ್ಸವ'ದ ಸಿದ್ಧತೆ, ಸಂಯುಕ್ತ ಕರ್ನಾಟಕದಲ್ಲಿ ಪ್ರಕಟವಾದ 'ಜಾನಪದಕ್ಕೊಂದು ಹೆಮ್ಮೆಯ ಕೊಡುಗೆ' ಲೇಖನ, ಮುಂಗಾರು ಪತ್ರಿಕೆಯಲ್ಲಿ ಪ್ರಕಟವಾದ 'ಮಣ್ಣಿನ ಮಕ್ಕಳ ಮನವರಳಿದಕ್ಷಣ', ಕನ್ನಡಪ್ರಭದಲ್ಲಿ ಪ್ರಕಟವಾದ 'ಉತ್ತರಕನ್ನಡ ಜಿಲ್ಲೆಯಲ್ಲೊಂದು ಜಾನಪದ ಮೇಳ' ಮತ್ತು ಯಕ್ಷಗಾನದಲ್ಲಿ ಬಣ್ಣಗಾರಿಕೆ; ಲಂಕೇಶ ಪತ್ರಿಕೆಯಲ್ಲಿ ಪ್ರಕಟವಾದ 'ಪ್ರಶಸ್ತಿ ಪಡೆದ ಜಾನಪದ ಕಲಾವಿದೆಯರು', ಡೆಕ್ಕನ್ ಹೆರಾಲ್ಡ್ ಪ್ರಕಟವಾದ 'ಟಚ್ ಆಫ್ ಕ್ಲಾಸ್ ಟು ಫೋಕ್ ಆರ್ಟ್ಸ್', ಟೈಮ್ಸ್ ಆಫ್ ಇಂಡಿಯಾದಲ್ಲಿ ಪ್ರಕಟವಾದ 'ಲಿಂಕಿಂಗ್ ಮಾಸಸ್ ಎಂಡ್ ಫೋಕ್ ಆರ್ಟ್ಸ್' ಮುಂತಾದ ಲೇಖನಗಳನ್ನೆಲ್ಲಾ ಸೇರಿಸಿ, ಜೊತೆಗೆ ಅಕಾಡೆಮಿಯ ಕಾರ್ಯಕ್ರಮಗಳಲ್ಲಿ ಅಧ್ಯಕ್ಷ ಕರೀಂಖಾನ್ ಅವರು ಮತ್ತು ಜಾನಪದ ವಿದ್ವಾಂಸರಾದವರು ವ್ಯಕ್ತಪಡಿಸಿದ ಅಭಿಪ್ರಾಯಗಳ ತುಣುಕುಗಳನ್ನು ಸೇರಿಸಿ 'ಗೆಜ್ಜೆ ಮಾತಾಡುತ್ತಾವೆ' ಸ್ಮರಣ ಸಂಚಿಕೆ ಸಿದ್ಧವಾಗಿದೆ. ಯಾರನ್ನೂ ನೋಯಿಸದ ಯಾವುದನ್ನು ಆಸೆಪಡದ ಅಪರಂಜಿಯಂತೆ ಬದುಕು ಸಾಗಿಸಿ ಹಿಡಿದ ಕೆಲಸವನ್ನು ದೇವರ ಕೆಲಸವೆಂದು ನಿರ್ವಹಿಸಿರುವುದು ಮೆಚ್ಚುವಂತದ್ದು. ಕರೀಂಖಾನರಿಗೆ ಜನ ಸಮುದಾಯದ ಬಗ್ಗೆ ವಿಶೇಷ ಆಸಕ್ತಿ, ನಮ್ಮೆಲ್ಲ ಚಟುವಟಿಕೆಗಳು ಸಾಮಾನ್ಯ ಜನರ ಬದುಕನ್ನು ಹಸನುಗೊಳಿಸಲು ಕಾರಣವಾಗಬೇಕೆಂಬುದು ಇವರ ಕಾಳಜಿ; ಹೀಗಾಗಿಯೇ ಕರೀಂಖಾನ್ ಜಾನಪದ ಕ್ಷೇತ್ರಕ್ಕೆ ಹೆಚ್ಚಾಗಿ ಒಲಿದರು ಎನ್ನುವುದು ವೇದ್ಯವಾಗುತ್ತದೆ.

ಕರೀಂಖಾನರ ಅವಧಿಯಲ್ಲಿ ಜಾನಪದ ವಿವಿಧ ಮಗ್ಗಲುಗಳ ವೈಜ್ಞಾನಿಕ ವಿಶ್ಲೇಷಣೆ ನಡೆಸುವಂತಹ ಪ್ರಬುದ್ಧ ಪತ್ರಿಕೆಯೊಂದರ ಅಗತ್ಯವಿದ್ದುದ್ದನ್ನು ಮನಗಂಡ ಅಕಾಡೆಮಿ 'ಜಾನಪದ ಗಂಗೋತ್ರಿ' ಎಂಬ ಪತ್ರಿಕೆಯನ್ನು ಹೊರತಂದಿತ್ತು. ಇದರ ಪ್ರಧಾನ ಸಂಪಾದಕರಾಗಿ ಎಸ್.ಕೆ. ಕರೀಂಖಾನ್, ಸಂಪಾದಕರಾಗಿ ಡಾ. ದೇವೇಂದ್ರ ಕುಮಾರ ಹಕಾರಿ ಹಾಗೂ ರಂಗಾರೆಡ್ಡಿ ಕೋಡಿರಾಂಪುರ, ವ್ಯವಸ್ಥಾಪಕ ಸಂಪಾದಕರಾಗಿ ಹಿ.ಚಿ. ಬೋರಲಿಂಗಯ್ಯನವರು ಉತ್ತಮ ಕೆಲಸ ನಿರ್ವಹಿಸಲು ಹಿಂದೆ ಬೀಳಲಿಲ್ಲ.

ಜಾನಪದ ವೈಜ್ಞಾನಿಕ ಅಧ್ಯಯನ, ಜಾನಪದ ಕಲೆಗಳ ಸಂರಕ್ಷಣೆ, ಸಾಹಿತ್ಯವನ್ನು ಸುಭದ್ರಗೊಳಿಸುವುದು ಹಾಗೂ ಕರ್ನಾಟಕದ ಗಿರಿಜನ ಸಾಂಸ್ಕೃತಿ ಜೀವನ ವಿಧಾನವನ್ನು ದಾಖಲಾತಿಗೊಳಿಸುವುದು ಮುಂತಾದ ವಿಶೇಷ ಯೋಜನೆಯನ್ನು ಹಮ್ಮಿಕೊಂಡು ಮುನ್ನಡೆಯುತ್ತಿರುವ ಅಕಾಡೆಮಿ ತನ್ನ ಪ್ರಭಾವವನ್ನು ಕರೀಂಖಾನರ ಅವಧಿಯಲ್ಲಿ ದಿಕ್ಕು ದಿಸೆಗೆ ಹರಡಿತು.

"ಜನಪದ ಕನ್ನಡ ಮಣ್ಣಿನ ಬೆವರನ್ನು, ಕರ್ನಾಟಕ ಜಾನಪದ ಸಂಸ್ಕೃತಿಯ ಗಂಧವನ್ನು ಉಸಿರಾಡಿಸುತ್ತಾ, ಕನ್ನಡ ಜಾನಪದ ಜೀವನಕ್ಕೆ ತಮ್ಮನ್ನು ತಾವು ಮುಕ್ತವಾಗಿ ತೆರೆದಿಟ್ಟುಕೊಂಡ ಜಾನಪದ ಹಾಡು ಲಾವಣಿಗಳನ್ನು ಸಂಗ್ರಹಿಸಿ ಅವರ ಸೊಬಗು ಸೌಂದರ್ಯಗಳನ್ನು ಕನ್ನಡಿಗರಿಗೆ ಎಷ್ಟೋ ದಶಕಗಳ ಪೂರ್ವದಲ್ಲಿಯೇ ತಿಳಿಸಿಕೊಟ್ಟಿರುವ ಇಂದಿನ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಅಧ್ಯಕ್ಷ ಶ್ರೀ ಎಸ್. ಕೆ. ಕರೀಂಖಾನ್‌ರವರು ಒಬ್ಬ ವಿರಳ ಅಪೂರ್ವ ವ್ಯಕ್ತಿ" ಎಂದು ಡಾ. ದೇವೇಂದ್ರ ಕುಮಾರ ಹಕಾರಿ ಅಭಿಪ್ರಾಯಪಟ್ಟಿರುವರು. "ಕರ್ನಾಟಕ ಜಾನಪದ" ಎಂಬ ಅಕಾಡೆಮಿಯ ಪುಸ್ತಕಕ್ಕೆ ಪ್ರಧಾನ ಸಂಪಾದಕರಾಗಿ ಕೆಲಸ ಮಾಡಿದ ಕೀರ್ತಿ ಕರೀಂಖಾನ್‌ರವರಿಗೆ ಸಲ್ಲುತ್ತದೆ.

ಡಾ. ಎಸ್.ಕೆ. ಕರೀಂಖಾನ್ ಪ್ರಧಾನ ಸಂಪಾದಕತ್ವದಲ್ಲಿ "ಜಾನಪದ ವೈಜ್ಞಾನಿಕ ಅಧ್ಯಯನದ ನೆಲೆಗಳು" ಎಂಬ ಹೊತ್ತಿಗೆಯು ಕರ್ನಾಟಕ ವಿಶ್ವವಿದ್ಯಾನಿಲಯ, ಮಂಗಳೂರು ವಿಶ್ವವಿದ್ಯಾನಿಲಯಗಳು ಕನ್ನಡ ವಿಭಾಗಗಳು ಹಾಗೂ ಅಕಾಡೆಮಿಯ ಸಂಯುಕ್ತ ಆಶ್ರಯದಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಮಂಡಿತವಾದ ಪ್ರಬಂಧಗಳನ್ನು ಕಲೆ ಹಾಕಿ ಮೂರು ಗ್ರಂಥಗಳನ್ನು ಹೊರತರಲಾಗಿದೆ.

ಜಾನಪದ ವಿಚಾರ ಸಂಕಿರಣ ಹಾಗೂ ಸಮಾವೇಶ, ಬುಡಕಟ್ಟು ಕಲಾವಿದರನ್ನು ಗುರುತಿಸುವ ಕೆಲಸ. ಪ್ರಶಸ್ತಿ ಹಂಚುವಿಕೆ, ಗಡಿಭಾಗಗಳಲ್ಲಿ ಜನಪದ ಕಲಾಮೇಳಗಳನ್ನು ಹಮ್ಮಿಕೊಂಡು ಯಶಸ್ವಿಯಾಗಿ ನಡೆಸಿದವರು. ಕರೀಂಖಾನರನ್ನು ಯಾರು ಮುದುಕ ಎಂದು ಹಂಗಿಸಿದ್ದರೋ ಅವರೇ ಬೆಕ್ಕಸಬೆರಗಾಗುವಂತೆ ಹತ್ತಾರು ಸಾವಿರ ಮೈಲುಗಳಷ್ಟು ಸುತ್ತಿ ಜಾನಪದ ಲೋಕಕ್ಕೆ ಹೊಸಜೀವ ತುಂಬಿದರು. ಇಂಥವುಗಳೆಲ್ಲವೂ ಇಂದಿಗೂ ಅಕಾಡೆಮಿ ಕಛೇರಿಯಲ್ಲಿ ಸಜೀವವಾಗಿ ಉಳಿದಿದೆ.

"ಸಮುದ್ರರಾಜನ ಗೆಳೆತನ ಆದರೆ ಉಪ್ಪಿಗೆ ಬರ" ಎನ್ನುವಂತೆ ಜಾನಪದ ಕಲೆಯು ಶ್ರೀಮಂತವಾಗಿದ್ದು, ಬಡತನದಲ್ಲಿ ಕಾಲ ತಳ್ಳುತ್ತಿದ್ದ, ಕಲಾವಿದರನ್ನು ಪ್ರೋತ್ಸಾಹಿಸಲು ಅಕಾಡೆಮಿ ಅದೆಷ್ಟೋ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಕರೀಂಖಾನರು ಯೋಚಿಸಿರುವುದು ಶ್ಲಾಘನೀಯವಾದದ್ದು. ಇವರ ಅವಧಿಯಲ್ಲಿ ಜಾನಪದ ಅಕಾಡೆಮಿ ರಾಜ್ಯದ ವಿವಿದೆಡೆ ಹರಡಿ ಹಂಚಿಹೋಗಿದ್ದ ಜಾನಪದ ಕಲಾವಿದರನ್ನು ಒಂದು ತೆಕ್ಕೆಗೆ ತರಲು ಪ್ರಯತ್ನಿಸಿತು. ಸಮೂಹ ಮಾಧ್ಯಮಗಳ ಅಬ್ಬರದಲ್ಲಿ ದಿನೇ ದಿನೇ ಕೈಬಿಟ್ಟು ಹೋಗುತ್ತಿದ್ದ ಜಾನಪದ ಕಲೆಗಳಿಗೆ ಬೆಂಗಾವಲಾಗಿದ್ದು

ಅಕಾಡೆಮಿಯ ಹೆಮ್ಮೆಯ ಕಾರ್ಯ. ಇವರ ಅವಧಿಯಲ್ಲಿ ಬಡತನದಲ್ಲಿ ಕಾಲ ತಳ್ಳುತ್ತಿದ ಕಲಾವಿದರನ್ನು ಪ್ರೋತ್ಸಾಹಿಸಲು ಅಕಾಡೆಮಿ ಇದುವರೆಗೂ ೮೨ ವಿಶಿಷ್ಟ ಕಲಾ ಮೇಳಗಳನ್ನು ನಡೆಸಿದೆ. ಜಾನಪದ ಕಲಾವಿದರನ್ನು ಗುರುತಿಸಿ ಪ್ರಶಸ್ತಿ ನೀಡಿ ಗೌರವಿಸಿದೆ. ಜಾನಪದ ಆಸಕ್ತರನ್ನು ಕಲೆ ಹಾಕಿ ಕಲೆ ಉಳಿಸುವ ಬಗ್ಗೆ ಆಸಕ್ತಿ ಕೆರಳಿಸುವಂತಹ ವಿಶೇಷ ಕಮ್ಮಟ, ವಿಚಾರ ಸಂಕಿರಣ, ಜಾನಪದ ಸಮಾವೇಶಗಳನ್ನು ನಡೆಸಿದೆ. ಸ್ವತಃ ಜಾನಪದ ಪುಸ್ತಕಗಳ ಪ್ರಕಟಣೆ ಇತರರು ಪ್ರಕಟಿಸಿದ ಗ್ರಂಥಗಳಿಗೆ ಧನಸಹಾಯ, ಬಹುಮಾನ, ಕಲಾವಿದರಿಗೆ ಮಾಸಾಶನ, ವೈದ್ಯಕೀಯ ನೆರವು ಇಂತಹ ಹತ್ತು ಹಲವಾರು ಕಾರ್ಯಕ್ರಮಗಳನ್ನು ಇವರ ಅವಧಿಯಲ್ಲಿ ಸಾರ್ಥಕವಾಗಿ ರೂಪುಗೊಳಿಸಿದ್ದು ವಿಶೇಷ.

ಹಾಸನ ತಾಲ್ಲೂಕು ಕರೀಂಖಾನರಿಗೆ ಜನ್ಮ ನೀಡಿದ ಭೂಮಿ ಮಾತ್ರ, ಇವರ ಕರ್ಮಭೂಮಿ ಹಾಸನದಿಂದ ಆರಂಭವಾಗಿ ಇಡೀ ಕರ್ನಾಟಕವನ್ನು ವ್ಯಾಪಿಸಿದೆ. "ಕರೀಂಖಾನರು ಜಾನಪದ ಸಾಹಿತ್ಯದಲ್ಲಿ ಮೇರು ಪರ್ವತವಾಗಿ ಬೆಳೆದಿರುವ ಮಹಾನ್ ವ್ಯಕ್ತಿ. ಇವರು ನಮ್ಮ ಜಿಲ್ಲೆಯಿಂದಲೇ ಬಂದವರು. ಇವರಲ್ಲಿಯ ಜಾನಪದ ಸಾಹಿತ್ಯದ ಕಲೆಯನ್ನು ಯಾರಿಂದಲೂ ಮೀರಿಸಲು ಸಾಧ್ಯವಿಲ್ಲ. ಎಲ್ಲಿ ಹೋದರೂ ಜನ ಇವರನ್ನು ಗುರುತಿಸಿ ಗೌರವಿಸುತ್ತಿದ್ದರು" ಎನ್ನುವ ಮಾತು ಮಾಜಿ ಪ್ರಧಾನಮಂತ್ರಿ ದೇವೇಗೌಡರ ಬಾಯಿಂದ ಹೊರಟಿರುವ ಈ ಸಂಗತಿ ನಿಜಕ್ಕೂ ಕರೀಂಖಾನ್‌ರ ಸೇವೆಯ ಸಾರ್ಥಕತೆಯನ್ನು ಸ್ಪಷ್ಟಪಡಿಸುತ್ತದೆ. ಇವರ ಕಾರ್ಯ ವಿಧಾನವನ್ನು ನಾಡಿನ ಎಲ್ಲ ಪತ್ರಿಕೆಗಳೂ ಹೊಗಳಿ ಸಾಕಷ್ಟು ಪ್ರಚಾರ ಪ್ರೋತ್ಸಾಹ ಕೊಟ್ಟಿವೆ. ಅಕಾಡೆಮಿ ಇವರ ಕಾಲದಲ್ಲಿ ದಶಕೋತ್ಸವವನ್ನು ಆಚರಿಸುವ ಸಡಗರ ಪಡೆಯಿತು. ಅದನ್ನು ಒಂದು ದಾಖಲೆಯನ್ನಾಗಿ ಮಾಡಿದ ಕೀರ್ತಿಯೂ ಕರೀಂಖಾನರಿಗೇ ಸಲ್ಲುತ್ತದೆ. ಒಟ್ಟಿನಲ್ಲಿ ಇವರ ಅವಧಿಯ ಸ್ಮರಣ ಸಂಚಿಕೆಯಂತಿರುವ 'ಗೆಜ್ಜೆ ಮಾತಾಡುತ್ತಾವೆ' ಒಂದು ಅಪರೂಪದ ಸಂಚಿಕೆ. ಇದು ಒಂದು ಕಡೆ ಅವಲೋಕನ ಗ್ರಂಥದಂತೆ ಇನ್ನೊಂದು ಕಡೆ ವರದಿಯ ದಾಖಲೆಯಂತೆ ಇದೆ. ಗ್ರಾಮೀಣ ಜನರು ತಮ್ಮ ರೋಚಕ ಬದುಕಿನ ನಡುವೆಯೂ ರೂಢಿಸಿಕೊಂಡ, ಬಳಸಿಕೊಂಡು ಬಂದಿರುವ ಜಾನಪದ ಕಲೆಯ ರಸದೌತಣವನ್ನು ಕರೀಂಖಾನರು ಕರ್ನಾಟಕದ ಜನತೆಗೆ ಕೊಟ್ಟಿರುವುದು ಅದ್ಭುತವಾದದ್ದು.

## ಪತ್ರಿಕಾರಂಗ

### ಪತ್ರಿಕೆಗಳಲ್ಲಿ ಕರೀಂಖಾನರ ಪಾತ್ರ :

ಸಾಹಿತ್ಯದಲ್ಲಿ ಮೊದಲಿನಿಂದಲೇ ಒಲವನ್ನು ಬೆಳೆಸಿಕೊಂಡಿದ್ದ ಕರೀಂಖಾನ್ ಸಾಕಷ್ಟು ಕೃಷಿ ಮಾಡಿದ್ದಾರೆ. ಜಾನಪದ ಸಂಗ್ರಹಕಾರರಾಗಿ ಸೃಜನಶೀಲ ಸಾಹಿತಿಯಾಗಿ, ಕಥೆಗಾರರಾಗಿ, ಕಾದಂಬರಿಕಾರರಾಗಿ ಸ್ವಾತಂತ್ರ್ಯ ಹೋರಾಟಗಾರರಾಗಿ, ಸಿನಿಮಾ

ಕ್ಷೇತ್ರದಲ್ಲಿ ಕಥೆ, ಸಂಭಾಷಣೆ, ಗೀತೆಗಳನ್ನು ರಚಿಸುವವರಾಗಿ ಭಾಷಾಂತರಕಾರರಾಗಿ, ನಾಟಕಕಾರರಾಗಿ, ಪತ್ರಿಕಾರಂಗವನ್ನು ಪ್ರವೇಶಿಸಿ ಅನೇಕಾನೇಕ ಸ್ವತಂತ್ರ ಲೇಖನಗಳನ್ನು, ಕಥೆಗಳನ್ನು ಪ್ರಕಟಿಸಿರುತ್ತಾರೆ.

ಕರೀಂಖಾನರ ಭಾಷಾಪ್ರಭುತ್ವವನ್ನು ಮೆಚ್ಚಿಕೊಂಡಿದ್ದ ಪತ್ರಿಕಾ ಮಾಲಕರು ಇವರನ್ನು ತಮ್ಮ ಪತ್ರಿಕೆಗಳಲ್ಲಿ ಸಂಪಾದಕರಾಗಲು ಆಹ್ವಾನಿಸಿದರು. ಉಡುಪಿಯಲ್ಲಿ ಪ್ರಕಟವಾಗುತ್ತಿದ್ದ ಪಣಿಯಾಡಿಯವರ 'ಅಂತರಂಗ' ಪತ್ರಿಕೆಯ ಮೂಲಕ ಪತ್ರಿಕಾ ಲೋಕ ಪ್ರವೇಶಿಸಿದ ಖಾನ್ ಧಾರವಾಡದ 'ಲೋಕಮಿತ್ರ' ಪತ್ರಿಕೆಯ ಸಂಪಾದಕರಾಗಿ ಕೆಲಕಾಲ ನಿರ್ವಹಣೆ ಮಾಡಿದರು." "ಅಂತರಂಗ ಪತ್ರಿಕೆಯಲ್ಲಿ 'ಕಲೆಯಲ್ಲಿ ಕನ್ನಡದ ಹೃದಯತೆ' ಎಂಬ ಒಂದು ಲೇಖನ ಬರೆದಿದ್ದೆ. ಆಗ ಈ ಲೇಖನ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದಿತ್ತು, ಆಮೇಲೆ 'ಪ್ರಜಾಮತ' ಪತ್ರಿಕೆಗೆ ಕಥೆಗಳನ್ನು ಕಳಿಸುತ್ತಿದ್ದೆ, ಅದರಂತೆ ಧಾರವಾಡದ 'ಜೈ ಕರ್ನಾಟಕ' ಪತ್ರಿಕೆಗೆ ಕೂಡಾ ಕಥೆಗಳನ್ನು ಕಳಿಸುತ್ತಿದ್ದೆ, 'ಪ್ರಬುದ್ಧ ಕರ್ನಾಟಕ' ಪತ್ರಿಕೆಗೆ ಲೇಖನಗಳನ್ನು ಕಳಿಸುತ್ತಿದ್ದೆ" ಎಂಬ ಕರೀಂಖಾನರ ಮಾತಿನಲ್ಲಿ ನಾಡು ನುಡಿಗಾಗಿ ಅವರು ಪತ್ರಿಕಾಕ್ಷೇತ್ರದಲ್ಲಿ ತೊಡಗಿಸಿಕೊಂಡ ವಿಚಾರಗಳು ಸ್ಪಷ್ಟವಾಗುತ್ತವೆ.

೧೯೪೧-೪೨ರ ಸುಮಾರಿಗೆ ಧಾರವಾಡದಲ್ಲಿ ಪ್ರಚಾರದಲ್ಲಿದ್ದ 'ಲೋಕಮಿತ್ರ' ಪತ್ರಿಕಾ ಕಾರ್ಯಾಲಯವು ಕರೀಂಖಾನರ ನೈಪುಣ್ಯತೆಯನ್ನು ಕಂಡು ಆಹ್ವಾನಿಸಿತು. ಕರೀಂಖಾನರು ಲೋಕಮಿತ್ರ ಪತ್ರಿಕೆಯ ಸಂಪಾದಕರಾಗಿ ಕೆಲಸ ಮಾಡುತ್ತಿರುವಾಗಿನ ಒಂದು ಸಂದರ್ಭವನ್ನು ನೆನಪಿಸಿಕೊಳ್ಳುತ್ತಾ, 'ಲೋಕಮಿತ್ರದಲ್ಲಿ 'ಹಿಟ್ಲರನ ವಸಂತದಾಳಿ' ಎಂಬ ಸಂಪಾದಕೀಯ ಬರೆದಿದ್ದೇನೆ, ಅಂಬಾನಿಲಾಯರ ಅವರೇ ಮುಖ್ಯ ಸಂಪಾದಕರು, ನನ್ನ ಸಂಪಾದಕೀಯ ಬಹಳ ಮೆಚ್ಚಿಕೊಂಡಿದ್ರು' ಈ ಮಾತಿನಿಂದ ಕರೀಂಖಾನರು ಉತ್ತಮ ಸಂಪಾದಕೀಯ ಬರೆಯುವಲ್ಲಿ ಜನಮೆಚ್ಚಿಗೆಗೆ ಪಾತ್ರರಾಗಿದ್ದರೆಂಬುದು ಸಾಬೀತಾಗುತ್ತದೆ. ಇವರ ಸಂಪಾದಕತ್ವವನ್ನು ಮೆಚ್ಚಿಕೊಂಡ ಬೆಂಗಳೂರಿನಲ್ಲಿ ಪ್ರಕಟವಾಗುತ್ತಿದ್ದ 'ತಾಯ್ನಾಡು' ಪತ್ರಿಕೆ ಇವರ ಫೋಟೋ ಹಾಕಿಸಿ ಪ್ರಚಾರ ಮಾಡಿತು ಎಂಬ ವಿಚಾರವನ್ನು ಅವರ ಸಹೋದರ ಗಫಾರಖಾನರು ತಿಳಿಸಿರುತ್ತಾರೆ.

ಉಜ್ವಲ ದೇಶಾಭಿಮಾನಿ, ಸಾಮಾಜಿಕ ಸುಧಾರಣಾ ಪ್ರವರ್ತನ ಶೀಲ , ನಾಡು-ನುಡಿಗಳ ಹಿತ ಚಿಂತಕ ಮತ್ತು ವಿಚಾರಶೀಲ ಪತ್ರಕರ್ತರೆಂದೇ ಹೆಸರಾದ ಕರೀಂಖಾನರು ಆಧುನಿಕ ಕರ್ನಾಟಕದ ನಿರ್ಮಾಪಕರಲ್ಲಿ ಒಬ್ಬರು. ಜನಮನವನ್ನು ಸೆಳೆಯುವಲ್ಲಿ ಮತ್ತು ಉದ್ದೀಪನಗೊಳಿಸುವಲ್ಲಿ ಪ್ರತಿಕೆಗಳ ಪಾತ್ರ ಮಹತ್ವಪೂರ್ಣವಾಗಿದೆ, ಎನ್ನುವುದನ್ನು ಅರಿತು ತಮ್ಮನ್ನು ಪತ್ರಿಕೋದ್ಯಮದಲ್ಲಿ ತೊಡಗಿಸಿಕೊಂಡರು. 'ಅಂತರಂಗ' ಮತ್ತು 'ಲೋಕಮಿತ್ರ' ಎಂಬ ಎರಡು ಪತ್ರಿಕೆಗಳಲ್ಲಿ ಸಂಪಾದಕ ಮತ್ತು ಉಪಸಂಪಾದಕರಾಗಿ ದುಡಿದರು. ಜನತೆಯಲ್ಲಿ ರಾಷ್ಟ್ರಾಭಿಮಾನ,

ಸ್ವಾತಂತ್ರ್ಯಾಭಿಮಾನ, ಭಾಷಾಭಿಮಾನಗಳನ್ನು ಪ್ರಚೋದಿಸಲು ಹಲವಾರು ಪ್ರಭಾವ ಪೂರಿತ ಲೇಖನಗಳನ್ನು ಬರೆದು, ಪ್ರಕಟಿಸಿದರು. ಕನ್ನಡದ ಉದ್ದಾಮ ಸಾಹಿತಿಯೆಂದು ಪ್ರಖ್ಯಾತರಾದ ಕರೀಂಖಾನರು ಅತ್ಯುತ್ತಮ ಬರಹಗಾರರಾಗಿದ್ದು, ಜನರು ಇವರ ಬರಹಗಳಿಗೆ ಹೆಚ್ಚಿನ ಮಾನ್ಯತೆ ನೀಡುತ್ತಿದ್ದರು. ಕರೀಂಖಾನರವರ ಬರವಣಿಗೆಯ ಶೈಲಿ ಎಂಥವರನ್ನು ಒಲಿಸುವಂಥಹುದಾಗಿದ್ದಿತು. ಇವರು ನೀಡುತ್ತಿದ್ದ ರಚನಾತ್ಮಕ ಸಲಹೆಗಳಿಗಾಗಿ ಸರ್ಕಾರವೂ ಕೂಡ ಹೆಚ್ಚು ಮಾನ್ಯತೆ ನೀಡುತ್ತಿತ್ತು.

* * *

# ಬರಹಗಾರ ಕರೀಂಖಾನ್

ಕನ್ನಡದ ನವೋದಯ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಇವರು ಹೊಸಗನ್ನಡದಲ್ಲಿ ಗದ್ಯ ಪದ್ಯ ಸಾಹಿತ್ಯಕ್ಕೆ ಗಮನಾರ್ಹ ಕೊಡುಗೆ ನೀಡಿದ್ದಾರೆ. ಕರೀಂಖಾನರು ಕನ್ನಡ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಕೆಲಸ ಮಾಡಿದರು. ಜಾನಪದದಲ್ಲಂತೂ ಅಚ್ಚಳಿಯದ ಸೇವೆ ಮಾಡಿದರು. ಮಾರ್ಗಕಾವ್ಯದ ತೆರವಾಗುತ್ತಿದ್ದ ಜಾಗಕ್ಕೆ ಪದ್ಯ–ಗದ್ಯ ಪ್ರಕಾರಗಳನ್ನು ಕನ್ನಡದಲ್ಲಿ ಯಶಸ್ವಿಯಾಗಿ ತರುವಲ್ಲಿ ಇವರ ಪಾತ್ರ ಹಿರಿದಾಗಿದೆ. ಪೌರಾಣಿಕವಾಗಲಿ, ಐತಿಹಾಸಿಕವಾಗಲಿ, ಸಾಮಾಜಿಕವಾಗಲಿ, ಕನ್ನಡ ಪದ್ಯ, ನಾಟಕ, ಕಾದಂಬರಿಗಳಿಗೆ ವಸ್ತು ನಮ್ಮಲ್ಲೇ ಇದೆ, ವಿಫುಲವಾಗಿದೆ, ಎಂಬುದನ್ನು ಕಂಡುಕೊಂಡವರು ಇವರು. ಕನ್ನಡ ಸಾಹಿತ್ಯ ಇತಿಹಾಸದಲ್ಲಿ ಇವರ ಸಾಹಿತ್ಯಸೇವೆ ಅಪಾರವಾದದ್ದು. ಕನ್ನಡ ಸಾಹಿತ್ಯದಲ್ಲಿ ಕರೀಂಖಾನರವರ ಬರವಣಿಗೆಗೆ ನಿಶ್ಚಿತವಾದ ಸ್ಥಾನಮಾನಗಳಿವೆ. ತಮ್ಮ ಬರವಣಿಗೆಯ ಮುಖಾಂತರ ಕನ್ನಡ ಜನಮನವನ್ನು ತಲುಪಿದ್ದಾರೆ. ನವೋದಯದ ಸಂದರ್ಭದಲ್ಲಿ ಬರವಣಿಗೆ ಕೃಷಿಯಲ್ಲಿ ತೊಡಗಿಕೊಂಡ ಇವರು ವಿಷಯಗಳಿಗನುಗುಣವಾಗಿ ನಿರೂಪಣೆಯ ವಿಧಾನ, ಗೇಯಗುಣ, ಆಯ್ದುಕೊಂಡ ವಸ್ತು ಹಾಗೂ ಸಾಮಾಜಿಕ ಕಳಕಳಿಯಿಂದ ಇಂದಿಗೂ ಸಮಕಾಲೀನರಾಗಿದ್ದಾರೆ.

ಕರೀಂಖಾನರು ಕಾದಂಬರಿಗಳನ್ನು ಬರೆದರು, ನಾಟಕಗಳನ್ನು ಬರೆದರು, ಹಲವಾರು ಕೃತಿಗಳನ್ನು ರಚಿಸುವುದರ ಜೊತೆಗೆ ಸಿನೇಮಾ ಕತೆಗಳನ್ನು ಜಾನಪದೀಯ ಸೊಗಡಿನಿಂದ ಬರೆದು ಕನ್ನಡ ಜ್ಞಾನ ಪ್ರಪಂಚವನ್ನು ವಿಸ್ತರಿಸಿದರು. ಕನ್ನಡದ ಆರಂಭದ ಶ್ರೇಷ್ಠ ಜಾನಪದ ಸಂಗ್ರಹಕಾರರಾಗಿ ಹೊರಬಂದರು. ಆರಂಭದ ಹಂತದ ಪ್ರಮುಖ ಸಾಹಿತಿಗಳಲೊಬ್ಬರಾದ ಎಸ್.ಕೆ. ಕರೀಂಖಾನರವರಿಗೆ ಆಗಿನ ಕಾಲದ ಸಾಹಿತಿ ದಿಗ್ಗಜರ ನಿಕಟವಾದ ಪರಿಚಯವಿದ್ದಿತು. ಹೇಮಾವತಿ ನದಿಯ ಮಡಿಲಲ್ಲಿ ಜುಳುಜುಳು ನಾದಕ್ಕೆ ತಮ್ಮ ಮೈಯನ್ನು ಒಡ್ಡಿ, ರೋಮಾಂಚನಗೊಂಡ ಇವರು 'ಭರತ, 'ಧ್ರುವ' ಮತ್ತು 'ಲವಕುಶ'ರವರ ಬಗ್ಗೆ ರೇಡಿಯೋ ನಾಟಕ ಬರೆದು ಕಳಿಸಿರುವ ವಿವರಗಳು ಅವರ ಮಾತುಗಳಿಂದ ಲಭ್ಯವಾಗುತ್ತವೆ. ಇವರು 'ಸಾಹಿತ್ಯವೇ ಜೀವನ' ಎಂದು ನಂಬಿದವರು. ಆಗಿನ ಕಾಲಕ್ಕೆ ಎಂಟನೆಯ ತರಗತಿಯವರೆಗೆ ಮಾತ್ರ ಶಿಕ್ಷಣ ಪಡೆದ ಕರೀಂಖಾನರು ಸಂಸ್ಕೃತ, ಕನ್ನಡ ಮತ್ತು ಉರ್ದುಭಾಷೆಯಲ್ಲಿ ಒಬ್ಬ ಪಂಡಿತರಾಗಿ ಬೆಳೆದದ್ದು ಅವರಲ್ಲಿದ್ದ ಛಲ ಮತ್ತು ಶಿಸ್ತಿನ ದ್ಯೋತಕ. ಕನ್ನಡದಲ್ಲಿ ಅನೇಕ ನಾಟಕಗಳನ್ನು, ಹಲವು ಕಾದಂಬರಿಗಳನ್ನು, ವೈಚಾರಿಕ ಬರಹಗಳನ್ನು ಬರೆದ ಕರೀಂಖಾನರು ಕೊನೆಗೆ ಪೂರ್ಣವಾಗಿ ಅರ್ಪಿಸಿಕೊಂಡದ್ದು ಜಾನಪದ ಸಾಹಿತ್ಯ ಸಂಗ್ರಹಕ್ಕೆ ಇಂಥ ಕೆಲಸಗಳಿಂದ ಕರೀಂಖಾನರವರು ಪ್ರಬುದ್ಧ ಸಾಹಿತಿಗಳಾಗಿದ್ದರು ಎಂಬುದು ಅರಿವಿಗೆ ಬರುತ್ತದೆ. ಬರವಣಿಗೆಯನ್ನೇ ನಂಬಿ

ಬದುಕುವುದು ಕನ್ನಡ ಲೇಖಕರಿಗೆ ಅದೆಷ್ಟು ಕಷ್ಟವಾಗಿದೆ, ಎನ್ನುವುದಕ್ಕೆ ಇವರ ಜೀವನ ಒಂದು ಉತ್ತಮ ಉದಾಹರಣೆಯಾಗಿದೆ.

ಜನಜೀವನದಲ್ಲಿ ಶಿಕ್ಷಣಕ್ರಮದಲ್ಲಿ ಕನ್ನಡದ ಕಂಪನ್ನು ಪಸರಿಸಲು ಇವರು ಶಿಷ್ಟ ಸಾಹಿತ್ಯ, ಜಾನಪದ ಸಾಹಿತ್ಯ, ಚಿತ್ರ ಸಾಹಿತ್ಯ, ನಾಟಕ, ಅನುವಾದ ಹೀಗೆ ಬಹುಮುಖಿ ಪ್ರಯತ್ನವನ್ನು ಮಾಡಿದರು. ಕರೀಂಖಾನರು ಮುಸ್ಲಿಂ ಜನಾಂಗಕ್ಕೆ ಸೇರಿದವರಾದರೂ ಉರ್ದು ಕವಿತೆ ಬರೆಯುತ್ತ ಕುಳಿತುಕೊಳ್ಳಲಿಲ್ಲ, ಕನ್ನಡ, ಸಂಸ್ಕೃತ ಹಳಗನ್ನಡಗಳನ್ನೊಳಗೊಂಡಂತೆ ಬರವಣಿಗೆ ಶೈಲಿ, ಕರೀಂಖಾನರ ಎಲ್ಲ ಪದ್ಯ ಗದ್ಯಗಳನ್ನು ಗಮನಿಸಿದರೆ ಗೊತ್ತಾಗುತ್ತದೆ. ಇವರ ಕೃತಿಗಳಲ್ಲಿ, ಸಂಸ್ಕೃತ ಮತ್ತು ಹಳೆಗನ್ನಡದ ಬಳಕೆಯಾಗಿದೆ. ಹೀಗೆ ಇವರ ಬರವಣಿಗೆಯಲ್ಲಿ ಪ್ರೌಢಸಾಹಿತ್ಯದ ಗುಣವನ್ನು ಕಾಣಬಹುದು. ಇವರ ಭಾಷಾಶೈಲಿ ಸ್ಪಟಿಕದಂತೆ ಸ್ಪಷ್ಟ ಹಾಗೂ ಮೋಹಕ ಅಷ್ಟೇ ಅಲ್ಲ ಕನ್ನಡಿಗರ ಮನಸ್ಸನ್ನು ಸೂರೆಗೊಂಡಿತು.

ಕರ್ನಾಟಕದ ಸ್ಥಿತಿಗತಿ, ಏಕೀಕೃತ ಕರ್ನಾಟಕವನ್ನು ಉಳಿಸಿಕೊಳ್ಳುವ ಹಾಗೂ ಕನ್ನಡ ಭಾಷೆಯನ್ನು ಅಭಿವೃದ್ಧಿ ಪಡಿಸುವಲ್ಲಿನ ಕನ್ನಡಿಗರ ಕರ್ತವ್ಯವನ್ನು ಕರೀಂಖಾನರು ತಮ್ಮ ಸಾಹಿತ್ಯದುದ್ದಕ್ಕೂ ವ್ಯಕ್ತಪಡಿಸಿರುವ ರೀತಿಯನ್ನು ಗಮನಿಸ ಬಹುದು. ತಮಿಳು, ಕನ್ನಡದ ಹಿರಿಮೆಯ ಪ್ರಶ್ನೆ ಬಂದಾಗ 'ಕನ್ನಡದ ಹಿರಿಮೆ' ಬಗ್ಗೆ ಕರೀಂಖಾನ್ ಒಂದು ಮುಕ್ಕಾಲು ಗಂಟೆಯವರೆಗೆ ಕೊಳ್ಳೆಗಾಲದ ಪ್ರೌಢಶಾಲೆ ಯಲ್ಲಿ ಮಾಡಿದ ಉಪನ್ಯಾಸ ಇವತ್ತಿಗೂ ದಾಖಲೆಯಾಗಿರುತ್ತದೆ. ಭಾಗವತ, ಶಿವಪುರಾಣ, ಪೂರ್ವದ ಹಳಗನ್ನಡದ ಬಗ್ಗೆ ಅಭಿರುಚಿ ಬೆಳೆಸಿಕೊಂಡಿರುವ ಇವರ ದಿವ್ಯಶಕ್ತಿ ಕನ್ನಡ ತಾಯಿ ಭುವನೇಶ್ವರಿಯತ್ತ ಹೊರಳಿಕೊಂಡಿತು. ಮಹಮ್ಮದೀಯ ಸಂತ ಕವಿ ಶಿಶುನಾಳ ಶರೀಫ ಸಾಹೇಬರಿಗೆ ಕಳಸದ ಗುರು ಗೋವಿಂದಭಟ್ಟನೆಂಬ ಬ್ರಾಹ್ಮಣ ಹೇಗೆ ಗುರುವಾದನೋ ಹಾಗೇ ಕರ್ನಾಟಕದ ಮಹಾನ್ ಸಂತಕವಿ, ಜಾತಿಮತಿಗಳ ಗಡಿಯನ್ನು ದಾಟಿ ನಿಂತ ಜಾನಪದ ಕವಿ, ದಾರ್ಶನಿಕ ಸಮನ್ವಯಕಾರ, ಹರಿ–ಹರ–ಹಜರತ ತತ್ವಗಳ ತ್ರಿವೇಣಿ ಸಂಗಮವಾದ ಜನಪ್ರಿಯಕವಿ, ಅನುಭಾವಿ, ಅವದೂತ ಸಕಲೇಶಪುರದ ಕರೀಂಖಾನರಿಗೆ ಆಚಂಗಿಯ ಗುರುನಾರಾಯಣ ಶಾಸ್ತ್ರಿಯವರು ಗುರುಗಳಾಗಿ ಕನ್ನಡದ ಬಗ್ಗೆ ಉತ್ತೇಜನ ಮೂಡಿ, ಅಭಿಮಾನ ಬೆಳೆದು ಸಾಹಿತ್ಯ ರಚನೆಯಲ್ಲಿ ಆಸಕ್ತಿ ಮೂಡಿರುವುದು ಒಂದು ಸುವರ್ಣ ಸಂದರ್ಭವೇ ಸರಿ. ಕರೀಂಖಾನರೇ ಒಂದು ಕಡೆ ಹೇಳುವಂತೆ "ಗುರು ಆಚಂಗಿ ನಾರಾಯಣ ಶಾಸ್ತ್ರಿಗಳಿಂದ ಸಂಸ್ಕೃತ ಮತ್ತು ಕನ್ನಡದ ಬಗ್ಗೆ ಒಲವು ಮೂಡಿರುವುದು ಸತ್ಯ, ಕನ್ನಡ ಸಾಹಿತ್ಯದ ಬಗ್ಗೆ ಆಸಕ್ತಿ ಮೂಡಲು ಕನ್ನಡ ಸಾಹಿತ್ಯದಲ್ಲಿ ನನಗೆ ಬಾಣಭಟ್ಟನ 'ಕಾದಂಬರಿ' ಅತ್ಯಂತ ಅಭಿಮಾನದ ಕಾದಂಬರಿ. ಜಗತ್ತು ಬಾಣನನ್ನು 'ಬಾಣೋಚ್ಛಿಷ್ಟಂಜಗತ್ ಸರ್ವಂ' ಎಂದು ಕೊಂಡಾಡಿತು" ಎಂದು ಹೇಳುವಾಗ ಬಾಣಕವಿಯ ಬರವಣಿಗೆಯ ಶೈಲಿ, ಕಥಾಸಂಯೋಜನೆ, ಭಾಷಾ ವರ್ಣನೆಯ ವೈಖರಿಗೆ ಮಾರುಹೋಗಿದ್ದರು ಎಂಬುದು ತಿಳಿಯುತ್ತದೆ. ಚಿಕ್ಕಂದಿನಿಂದಲೇ ರಾಮಾಯಣ, ಮಹಾಭಾರತ, ಕಥಾನಕಗಳನ್ನಾಧರಿಸಿದ, ಬಯಲಾಟ, ನಾಟಕಗಳಿಂದ ಆಕರ್ಷಿತರಾಗಿದ್ದ

ಕರೀಂಖಾನರು ಗುರು ಆಚಂಗಿ ನಾರಾಯಣ ಶಾಸ್ತ್ರಿಯವರ ಮಾರ್ಗದರ್ಶನದಲ್ಲಿ ವೇದಾಧ್ಯಯನ ಕೈಗೊಂಡಿದ್ದರು. ರಾಮಾಯಣ, ಮಹಾಭಾರತದ ಪಾತ್ರಗಳು ಇವರ ಕಾವ್ಯಕ್ಕೆ ವಸ್ತುವಾದವು, ಅದರಲ್ಲೂ ಮಹಾಭಾರತದ ಶ್ರೀಕೃಷ್ಣ ಇವರ ಸಾಹಿತ್ಯದ ಕೇಂದ್ರ ವ್ಯಕ್ತಿಯಾಗಿ ಚಿತ್ರಿತಗೊಂಡನು. ಕರೀಂಖಾನರು ತಾವು ಸಾಹಿತಿಯಾಗಲು ಕಾರಣವನ್ನು ಕೊಡುತ್ತ ಹೋದಂತೆ ಅನೇಕ ವಿಷಯಗಳು ಅವರ ಮನಸ್ಸಿನ ಕುಲುಮೆಯಿಂದ ಹೊರಬೀಳುತ್ತವೆ. "ಬರೆಯುವ, ಓದುವ ಹವ್ಯಾಸವೇ ನನ್ನನ್ನು ಸಾಹಿತಿಯನ್ನಾಗಿಸಿತು" ಎನ್ನುತ್ತಾರೆ.

ಕರೀಂಖಾನ ಸಾಹೇಬರಿಗೆ ಬರುವಂತ ಎಷ್ಟೋಷ್ಟೋ ಸಂಸ್ಕೃತ ಪದಗಳು, ಉಚ್ಚಬ್ರಾಹ್ಮಣನ ಬಾಯಲ್ಲಿ ಬರಲು ಅಸಾಧ್ಯ, ಅದು ಸಂಸ್ಕಾರ. ಕರೀಂಖಾನರು ಯಾವುದೇ ಕಾಸಿನಾಸೆಗೆ ಕಾವ್ಯವನ್ನು ಬೇಕಾಬಿಟ್ಟಿಯಾಗಿ ಬರೆಯಲಿಲ್ಲ. ನಾ ಕಂಡಂತೆ ಅ.ನ.ಕೃ., ಕುವೆಂಪು, ಡಿ.ವಿ.ಜಿ., ವಿ.ಸೀ. ಕಾರಂತರು, ಬೇಂದ್ರೆ, ಮಾಸ್ತಿ, ದೇವುಡು, ದೇ.ಜ. ಗೌಡರ ಸಾಲಿನಲ್ಲಿಯೇ ಬೆಳೆದ ಕರೀಂಖಾನರ ಪ್ರತಿಭೆಯ ವಿಶಿಷ್ಟತೆಯನ್ನು ಕಾಣಬಹುದು. ಕನ್ನಡದಿಂದ–ಉರ್ದು, ಉರ್ದುವಿನಿಂದ–ಕನ್ನಡ ಈ ಎರಡು ಭಾಷೆಗಳ ವರ್ಧನೆ, ವರ್ಚಸ್ಸುಗಳ ಹರಿಕಾರರಾಗಿದ್ದ ಕರೀಂಖಾನರು ಜನಮನವನ್ನು ಮುಟ್ಟಿರುವುದು ಸತ್ಯ. ತಂದೆ ಅಪ್ಘಾನ್ ಯೋಧ ಅಬ್ದುಲ್ ರೆಹಮಾನ್‌ಖಾನ್, ತಾಯಿ ಅರಬ್‌ದವಳು. ದೇಶ ಭಾಷೆಗಳೆರಡರಿಂದಲೂ ಅನ್ಯರೆನಿಸಿಕೊಂಡರೂ ಅವರ ಪುತ್ರರಾಗಿ ಕರೀಂಖಾನರು ಜನಿಸಿದ್ದು; ಅಚ್ಚಗನ್ನಡಿಗರ ನಾಡಿನಲ್ಲಿ; ಬೆಳೆದದ್ದು ಕನ್ನಡಮ್ಮನ ಮಡಿಲಲ್ಲಿ. ಉಂಡಿದ್ದು, ಉಸಿರಾಡಿದ್ದು, ಕನ್ನಡ ಗಂಧ ಗಾಳಿಯನ್ನು ಕರೀಂಖಾನ ೧೬ ವರ್ಷದವರಿರುವಾಗಲೇ ಕನ್ನಡದಲ್ಲಿ ಲೇಖನಗಳನ್ನು ಬರೆಯತೊಡಗಿದ ಯುವಕ. ಮಹಾಭಾರತ, ಗೀತಾ, ರಾಮಯಣ ಮತ್ತು ಇನ್ನುಳಿದ ಮಹತ್ವದ ಪುಸ್ತಕಗಳನ್ನು ಇವರು ಐದನೇ ವರ್ಗಕ್ಕೆ ಸೇರುವುದಕ್ಕಿಂತ ಪೂರ್ವದಲ್ಲಿಯೇ ಓದಿ ಕನ್ನಡ ಭಾಷೆಯಲ್ಲಿ ಪ್ರಭುತ್ವ ಸಾಧಿಸಿದ ಮಹಾಪುರುಷ ಸಾಂಸ್ಕೃತಿಕ ವರ್ಚಸ್ಸಿನಿಂದ ಪ್ರಭಾವಿತರಾದ ಕರೀಂಖಾನರ ಜ್ಞಾನ ಚಕ್ಷುವಿಗೆ ನಿಲುಕದ ಕ್ಷೇತ್ರವೇ ಇರಲಿಲ್ಲವೆಂಬುದು ಸ್ಪಷ್ಟ. ಕರೀಂಖಾನರೊಡನೆ ಒಡನಾಟವಿರುವ ಆದರ್ಶ ಸುಗಮ ಸಂಗೀತ ಅಕಾಡೆಮಿಯ ಅಧ್ಯಕ್ಷ ಶ್ರೀ ಕೃಷ್ಣ ಮೂರ್ತಿ ಕಿಕ್ಕೇರಿಯವರು ತಾವು ಕಂಡ ಕರೀಂಖಾನರನ್ನು ನೆನಪಿಸಿಕೊಳ್ಳುತ್ತ "ಕರೀಂಖಾನರಲ್ಲಿ ಅದ್ಭುತ ಸಾಹಿತ್ಯವಿತ್ತು. ಅವರ ಜೊತೆಯಲ್ಲಿ ಇದ್ದಷ್ಟು ದಿನ ನಾನು ಬಹಳಷ್ಟು ಕಲಿತುಕೊಂಡೆ, ಒಳ್ಳೊಳ್ಳೆ ಸಾಹಿತಿಗಳು, ಒಳ್ಳೊಳ್ಳೆ ಲೇಖಕರು, ಕವಿಗಳು, ಕಲಾವಿದರು, ಒಳ್ಳೊಳ್ಳೆ ವಿದ್ವಾಂಸರನ್ನು ನಾನು ಗುರುತಿಸುವಂತಾಯಿತು. ಇವರ ಜೊತೆಗಿನ ಎಲ್ಲ ಅನುಭವಗಳೂ ಒಂದು ಪಾಠವೇ, ಅವರೊಂದು ಗುರುಕುಲವಿದ್ದಂತೆ ಇವರ ಉತ್ಕೃಷ್ಟವಾದ ಕೃತಿ 'ಶ್ರೀ ಕೃಷ್ಣ ಲೀಲಾ', 'ಬಲಿದಾನಿ ಹುಸೇನ' ಮತ್ತು ಚಿತ್ರದ ಹಾಡು "ನಟವರ ಗಂಗಾಧರ......." ಇವೆಲ್ಲ ಗಮನಿಸಿದರೆ ಇವರೊಬ್ಬ ಅದ್ಭುತ ಸಾಹಿತಿ ಎಂಬುದು ಅರಿವಾಗದಿರದು".

"ಸಾಹಿತ್ಯವು ಬರಹಗಾರನ ಕಲ್ಪನೆಯಲ್ಲಿಯೇ ಉತ್ಪತ್ತಿಯನ್ನು ಹೊಂದುತ್ತದೆ. ಆದರೆ ಜಾನಪದ ಬರವಣಿಗೆ ಮತ್ತು ಕಲೆ ಇವು ವೈಯಕ್ತಿಕ ಅನುಭವದ ಮೇಲೆ

ಬರುವಂಥವು. ಜಾನಪದ ಸಾಹಿತ್ಯದಿಂದ ನಾನು ಹೆಚ್ಚು ಅರ್ಥವನ್ನು ಕಂಡುಕೊಂಡಿದ್ದೇನೆ" ಎನ್ನುವರು. "ಭಾಷಾ ಪ್ರೌಢಿಮೆಯನ್ನು ನನ್ನ ಸಾಹಿತ್ಯದಲ್ಲಿ ಬಳಸಲು ಪ್ರಯತ್ನಿಸಿದ್ದೇನೆ. ಬಾಣಭಟ್ಟ ನನ್ನ ಆದರ್ಶವ್ಯಕ್ತಿ ಅವನ ಶೈಲಿಯ ಅನುಕರಣೆ ನಾನು ಮಾಡಿದ್ದೇನೆ. ಬಾಣನ ಶೈಲಿ ಹೀಗಿದೆ; "ಜಗನ್ನಿಚ್ಚಿತ ಭೈರವ ದುಸ್ತಮವಿದಾರಮ ದಿವ್ಯ ಸುಭ್ರಾಜಿಷ್ಟ ಕನಕರಥಾ ನಿಯಂತ, ಪ್ರಪುಲ್ಲಿತ ನೀರಜವದನ ವರಣ್ಯಾ ದೀಪ್ತಿ ಮಾಪಾಪನ್ನ ದಿನಕರನು ತನ್ನ ಭಾಸುರ ನಿಷಂಗದಿಂದ ಸ್ವರ್ಣರಾಗವರ್ದಿಷ್ಣು ಕಿರಣಸಾಯುಕ್ತ ಸಂಕುಲವನ್ನು ವಿಸರ್ಜಿಸುತ್ತ ಪ್ರಭಾವಿಸುತ್ತಿದ್ದನು...... ಹೊಕ್ಕನು." ಬಾಣಕವಿಯ 'ಕಾದಂಬರಿ' ಕೃತಿಯ ಅನೇಕ ಸಾಲುಗಳು ಕರೀಂಖಾನರವರ ಕಂಠಶ್ರೀಯಿಂದ ಕೇಳುವುದೇ ಕರ್ಣಮನೋಹರವಾದದ್ದು, ಒಂದೇ ಉಸಿರಿನಲ್ಲಿ ಅದೆಷ್ಟೋ ಸಾಲುಗಳು ಬಿತ್ತರಗೊಳ್ಳುವುದನ್ನು ಅವಲೋಕಿಸಿದರೆ, ಕೃತಿಯ ಪೂರ್ತಿ ಸಾಲುಗಳು ಇವರಿಗೆ ಕರತಲಾಮಲಕವಾಗಿವೆ ಎಂದು ಭಾಸವಾಗುತ್ತದೆ. ಈ ಇಳಿವಯಸ್ಸಿನಲ್ಲೂ ಇಂಥ ಅದ್ಭುತ ಸಾಲುಗಳನ್ನು ಕೇಳುವುದೆಂದರೆ ವಿಸ್ಮಯದ ಸಂಗತಿಯೇ ಸರಿ. ನಿರಂತರವಾದ ಅಧ್ಯಯನ, ಪರಿಶ್ರಮ, ಶ್ರದ್ಧೆ, ತಾಳ್ಮೆ ಇವುಗಳಿಂದ ಅಂದಿನಿಂದ ಇಂದಿನವರೆಗೂ ಅವರು ತಮ್ಮ ಮೇಧಾಶಕ್ತಿಯನ್ನು ಉಳಿಸಿಕೊಂಡಿರುವರು. ಇಂಥ ಅಪ್ಪಟ ಮೇಧಾವಿ, ವಾಕ್‌ಚತುರ, ಸಾಹಿತ್ಯಾಭಿಮಾನಿ, ನಾಡು–ನುಡಿ ಅಭಿಮಾನಿ ನಿರ್ಲಕ್ಷ್ಯಕ್ಕೆ ಒಳಗಾಗಿರುವುದೇ ದುರಾದೃಷ್ಟ ಸಂಗತಿಯಾಗಿದೆ.

ಮಾಸ್ತರ ಹಿರಣ್ಣಯ್ಯ ಹೀಗೆ ಹೇಳುವರು "ಚಿ. ಉದಯಶಂಕರವರ ತಂದೆ ಸದಾಶಿವಯ್ಯ ಅವರ ಬಾಯಿಂದ ಕರೀಂಖಾನರ ಬಗ್ಗೆ ಕೇಳಿದ್ದೆವು. ಅವರ ಬಗ್ಗೆ ನಮ್ಮ ಪ್ರೊಡಕ್ಷನ್‌ನಲ್ಲೂ ಮಾತಾಡೋರು, ಆವಾಗ ಬರೆಯುವವರು ತುಂಬ ಕಡಿಮೆ. ಸೀತಾರಾಮ ಶಾಸ್ತ್ರೀ, ವಿಜಯ ನರಸಿಂಹ, ಯೋಗಾನರಸಿಂಹ, ಇವರೆಲ್ಲ ಆಗ ಯುವಕರು, ಇವರನ್ನೆಲ್ಲ ತಮ್ಮಷ್ಟೇ ವಿದ್ವಾಂಸರನ್ನಾಗಿ ಮಾಡುವಲ್ಲಿ ಕರೀಂಖಾನ ರಂಥವರ ಕೊಡುಗೆ ಅಪಾರವಾದುದು, 'ಬಿಗ್ ಥಿಂಗ್ ವಿಲ್ ಕಮ್ ಫ್ರಾಮ್ ಬಿಗ್ ಪ್ಲೇಸ್'ಎಂಬಂತೆ ಅಂದಿನ ಕಾಲದಲ್ಲಿ ಕೀಳುಭಾವನೆ, ಕೀಳರಿಮೆ ಇರಲಿಲ್ಲ. ಇವರ ಪ್ರೋತ್ಸಾಹದಿಂದ ಅನೇಕ ಲೇಖಕರು ಹೊರಬಂದರು. ಅವರು ಅದನ್ನು ಮುಂದುವರಿಸಿದರು. ಇಂದಿನ ಸಾಹಿತ್ಯದಲ್ಲಿ ಅಲಂಕಾರ, ಪ್ರಾಸ, ಆಕಾರಗಳಿಲ್ಲ, ಶೃಂಗಾರವಿಲ್ಲ ಏನೂ ಇಲ್ಲ. ಸಾಕಷ್ಟು ಪರಿಜ್ಞಾನ ಇಲ್ಲದವರೂ ಕೂಡ ಸಾಹಿತ್ಯ ರಚನೆಯಲ್ಲಿ ತೊಡಗಿದ್ದಾರೆ. ಸಾಹಿತ್ಯ ರಚನೆಯಲ್ಲಿ ಅವಿರತ ಅಭ್ಯಾಸಬೇಕು. ಸಾಹಿತ್ಯ ಸೃಷ್ಟಿಯಲ್ಲಿ ಜಾತಿಯನ್ನಾಗಲೀ ಮತ್ತೊಂದನ್ನಾಗಲಿ ಎಸ್.ಕೆ. ಕರೀಂಖಾನರವರು ಮುಖ್ಯವಾಗಿ ಇಟ್ಟುಕೊಂಡಿರಲಿಲ್ಲ." ಇಂಥ ಮಾತುಗಳು ಕರೀಂಖಾನರವರ ಸಾಹಿತ್ಯ ಸೇವೆಯ ಅರಿವನ್ನು ಮೂಡಿಸುತ್ತವೆ. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಪರ್ವತೋಪಾದಿಯಲ್ಲಿ ಕೆಲಸವನ್ನು ನಿರ್ವಹಿಸಿರುವ ಇವರ ಘನತೆಯನ್ನು ಅವಲೋಕಿಸುವ ಕೆಲಸ ನಡೆಯಲೇ ಇಲ್ಲವೆಂಬುದು ಸತ್ಯ. ಅಷ್ಟೇ ಅಲ್ಲ ಇವರಿಗಿರುವ ಆರ್ಥಿಕ ತೊಂದರೆಯಿಂದಲೂ ಕೂಡಾ ರಚಿಸಲ್ಪಟ್ಟ ಕೃತಿಗಳು ಪ್ರಕಟವಾಗಲಿಲ್ಲ. ಪ್ರಕಟಣೆಗೆ ಧನ ಸಹಾಯ ಬೇಕು. ಅದಕ್ಕಾಗಿ ಬೇರೆ ಬೇರೆ ರೀತಿಯ ಪೋಷಕರು ಬೇಕಾಗುತ್ತಾರೆ. ಕರೀಂಖಾನರು ಈ

ರೀತಿಯ ಸಹಾಯ ಪೋಷಣೆಯನ್ನು ನಿರೀಕ್ಷೆ ಮಾಡಿರಲಿಲ್ಲ. ಬಾಯಿ ಬಿಟ್ಟು ಹೇಳದೆ ಇರತಕ್ಕಂಥ ದೌರ್ಬಲ್ಯ ಇವರದ್ದು, ಬಹುಶಃ ಇವರು ವ್ಯಕ್ತಪಡಿಸಿದರೆ, ಇವತ್ತು ಕರ್ನಾಟಕ ಸರಕಾರ ಅಲ್ಲ, ಖಾಸಗಿ ಸಂಸ್ಥೆ ಅಲ್ಲಿಂದ ಹಿಡಿದು ಕೇಂದ್ರ ಸರಕಾರ ಅಷ್ಟೇ ಅಲ್ಲ, ಭಾರತದ ಮಟ್ಟದಲ್ಲಿ ಬೇರೆ ಬೇರೆ ಸಾಹಿತ್ಯ ಸಂಸ್ಥೆಗಳು ಅವರಿಗೆ ಸಹಾಯ ಮಡುತ್ತಿದ್ದವು. ಅದನ್ನು ಅವರು ಪ್ರಕಟಿಸಿಲ್ಲ. ಈ ಕಾರಣದಿಂದ ಅವರು ಗದ್ಯ ಬರೆಯೋದನ್ನು ಸ್ವಲ್ಪ ಎಲ್ಲೋ ಕೈಬಿಟ್ಟರು. ಕರೀಂಖಾನರು ತಮ್ಮ ಬೇಡಿಕೆಗಳನ್ನು ಹೊರಹಾಕದಿರುವು ದರಿಂದಲೇ ಕನ್ನಡ ಸಾಹಿತ್ಯ ಕ್ಷೇತ್ರ ಬಡವಾಗುವಂತಾಯಿತು. ಹೇರಳವಾದ ಅವರ ಬರವಣಿಗೆಯಿಂದ ಕನ್ನಡ ತಾಯಿ ಅದೆಷ್ಟು ಸಂಭ್ರಮಿಸುತ್ತಿದ್ದಳು ಎಂಬುದನ್ನು ಲೆಕ್ಕವಿಡಲು ಅಸಾಧ್ಯ. ಇಂಥ ಮನೋಭಾವನೆ ಕೂಡಾ ಸಾಹಿತ್ಯ ಲೋಕಕ್ಕೆ ಬಹುದೊಡ್ಡ ನಷ್ಟ. ವಿಶೇಷವಾಗಿ 'ಶ್ರೀ ಕೃಷ್ಣ ಲೀಲಾ' ಎಂಬ ನಾಟಕ ಕೃತಿ ಬಹಳ ವರ್ಷಗಳ ನಂತರ ಪ್ರಕಟಗೊಂಡಿತು.

**ಕನ್ನಡದ ಹಿರಿಮೆ :**

ಪ್ರೊಫೆಸರ್ ದೊಡ್ಡರಂಗೇಗೌಡರು ಚಂದನ ಟಿ.ವಿ. ಸಂದರ್ಶನವೊಂದರಲ್ಲಿ ಕರೀಂಖಾನರವರಿಗೆ ಕನ್ನಡನಾಡಿನ ಪ್ರಗತಿಯ ಬಗ್ಗೆ ನಿಮಗೆ ಏನೆನ್ನಿಸುತ್ತದೆ ಎಂದಾಗ– "ಬೇರೆಯವರ ಆಕ್ಷೇಪಗಳಿಗೂ ನನ್ನ ಭಾವನೆಗಳಿಗೂ ವ್ಯತ್ಯಾಸವಿದೆ. ನನ್ನ ದೃಷ್ಟಿಯಲ್ಲಿ ನನ್ನ ಭಾವನೆಯಲ್ಲಿ ಕನ್ನಡ ಪೂರ್ಣ ಅಭಿವೃದ್ಧಿ ಸ್ಥಿತಿಯಲ್ಲಿದೆ. ಅಭಿವೃದ್ಧಿಯಲ್ಲಿ ನಾಗಾಲೋಟದಿಂದ ಇದು ಸಾಗುತ್ತಿದೆ. ಹೇಗೆಂದರೆ ಮೊದಲು ಕನ್ನಡದ ಒಂದೇ ಒಂದು ಪತ್ರಿಕೆ ಕರ್ನಾಟಕದಲ್ಲಿ ಬರ್‍ತಾ ಇತ್ತು. 'ವೃತ್ತಾಂತ ಪತ್ರಿಕೆ' ಇದನ್ನು ಚರ್ಚಿನವರು ಮುದ್ರಣ ಮಾಡ್ತಾ ಇದ್ರು, ಈಗ ಎರಡುವರೆ ಸಾವಿರಕ್ಕೆ ಮೀರಿ ಮೂರು ಸಾವಿರದವರೆಗೆ ಕನ್ನಡ ಪತ್ರಿಕೆಗಳು ಮುದ್ರಣವಾಗುತ್ತವೆ. ಕನ್ನಡದಲ್ಲಿ ಇದ್ದದ್ದು ಒಂದೇ ಒಂದು ನಾಟಕ 'ಮಿತ್ರವಿಂದಾ ಗೋವಿಂದ' ಈಗ ಮೂರುಸಾವಿರ ನಾಟಕವನ್ನು ಕನ್ನಡದಲ್ಲಿ ಕಾಣಬಹುದು. ಹಾಗೇ ಎಷ್ಟೋ ಕವಿಗಳು, ಲೇಖಕರು ನಮ್ಮದು ನೂರನೇ ಕಾವ್ಯ, ನೂರನೇ ಗ್ರಂಥ, ನನ್ನದು ಐವತ್ತನೆ ಗ್ರಂಥ ಮುದ್ರಣವಾಗುತ್ತದೆ. ಹೀಗೆ ಮೇಲಾಗಿ ಆಧಾರಬದ್ಧವಾಗಿ ಮೈಸೂರು ವಿಶ್ವವಿದ್ಯಾಲಯ ದವರು ಅಲ್ಲಿಯ ಉಪನ್ಯಾಸಕರಿಂದ ವಿದ್ವಾಂಸರಿಂದ ಗ್ರಂಥಗಳನ್ನು ಬರೆಯಿಸಿ ಪ್ರಚಾರ ಮಾಡ್ತಾರೆ. ಹಾಗೆ ಬೆಂಗಳೂರು ವಿಶ್ವವಿದ್ಯಾಲಯದಿಂದ, ಕುವೆಂಪು ವಿಶ್ವ ವಿದ್ಯಾಲಯದಿಂದ ಗುಲಬರ್ಗಾ ವಿಶ್ವ ವಿದ್ಯಾಲಯದಿಂದ, ಮಂಗಳೂರು ವಿಶ್ವ ವಿದ್ಯಾಲಯದಿಂದ, ಕರ್ನಾಟಕ ವಿಶ್ವವಿದ್ಯಾಲಯ ಈ ಎಲ್ಲ ವಿಶ್ವ ವಿದ್ಯಾಲಯಗಳಿಂದಲೂ ಆಧಾರ ಬದ್ಧವಾದ ಗ್ರಂಥಗಳು ರಚನೆ ಆಗ್ತಾ ಇವೆ. ಅದೂ ಅಲ್ಲದೆ ಕನ್ನಡ ಸಾಹಿತ್ಯ ಪರಿಷತ್ತು ನಮಗೆ ಪುಸ್ತಕಗಳನ್ನು ಮುದ್ರಣಗೊಳಿಸುತ್ತಿದೆ. ಹಾಗೆ ಸಾಹಿತ್ಯ ಅಕಾಡೆಮಿ ಕೂಡಾ ಗ್ರಂಥಗಳನ್ನು ಮುದ್ರಣಗೊಳಿಸುತ್ತಿದೆ. ಇತರ ಅಕಾಡೆಮಿಗಳೂ ಕೂಡ ಗ್ರಂಥಗಳನ್ನು ಮುದ್ರಣ ಮಾಡುತ್ತಿವೆ. ಹೀಗೆ ಕನ್ನಡ ತನ್ನ ಸರ್ವಾಂಗೀಣ ಸಂಸ್ಕೃತಿಯನ್ನು ಬೆಳೆಸಿಕೊಂಡು ಬೆಳೀತಾ ಇದೆ. ಆದ್ದರಿಂದ ನನ್ನ ಭಾವನೆಯಲ್ಲಿ ಕೆಲವರು ಕನ್ನಡಕ್ಕೆ ಅಧೋಗತಿ, ಕನ್ನಡದ ಸ್ಥಾನ ಮುಗಿಯಿತು ಎನ್ನುತ್ತಿದ್ದರು. ಹಾಗಾಗುತ್ತಿಲ್ಲ, ಈಗ ಬೀಳೋ ಪ್ರಶ್ನೆಯೇ

ಇಲ್ಲ, ಕನ್ನಡ ಅಭಿವೃದ್ಧಿಯಾಗುತ್ತಿದೆ. ನೈಜವಾಗಿ ಅಭಿವೃದ್ಧಿ ಆಗ್ತಾ ಇದೆ. ಕೆಲವು ಸಮಸ್ಯೆಗಳು ಪರಿಹಾರವಾಗದೇ ಕ್ಷಿಪ್ರವಾಗಿ ಅವು ಪರಿಹಾರವಾಗುತ್ತವೆ, ಆದ್ದರಿಂದ ಕನ್ನಡದ ಬಗ್ಗೆ ಯಾವ ರೀತಿಯ ಚಿಂತನೆಯನ್ನೂ ಮಾಡಬೇಕಿಲ್ಲ, ಅಭಿವೃದ್ಧಿ ಆಗ್ತಾ ಹೋಗ್ತಾ ಇದೆ." ಹೀಗೆ ಕನ್ನಡವು ಬೆಳೆಯುತ್ತಿದೆ. ವೃದ್ಧಿ ಹೊಂದುತ್ತಲೇ ಇದೆ ಎಂಬ ಅಭಿಪ್ರಾಯವನ್ನು ಕರೀಂಖಾನರು ವ್ಯಕ್ತಪಡಿಸುವ ರೀತಿಯೇ ಗಮನಾರ್ಹ.

ಕರೀಂಖಾನರು ರಾಮಾಯಣ, ಶಿವಪುರಾಣ, ರಾಜಶೇಖರ ವಿಳಾಸ, ಜೈಮಿನಿ ಭಾರತ ಮುಂತಾದವುಗಳನ್ನು ವಿಪುಲವಾಗಿ ಓದಿಕೊಂಡರು, ಭಗವದ್ಗೀತೆ, ಭಾಗವತಗಳನ್ನು ಕುರಿತ ಇವರ ಓದು ಕೂಡಾ ವಿಸ್ಮಯ ಹುಟ್ಟಿಸುತ್ತವೆ. ನಾಟಕ ಬರೆಯುವುದಕ್ಕಾಗಿ ಇವರು ತೆಲುಗಿನಲ್ಲಿರುವ "ಪೋತನನ" ಭಾಗವತವನ್ನು ಓದಿಕೊಂಡರಂತೆ. ಕರೀಂಖಾನ ರವರ ಸಾಹಿತಿಕ ಸಂಬಂಧ ವಿಚಾರಗಳನ್ನು ಡಾ. ಕೆ. ಆರ್. ಸಂಧ್ಯಾರೆಡ್ಡಿಯವರು ಹೀಗೆ ಹೇಳುತ್ತಾರೆ. "ಪುರಾಣಗಳು ಶಿವನ ಇಲ್ಲವೇ ವಿಷ್ಣುವಿನ ಪಾರಮ್ಯ ಸಾಧಿಸುವುದಕ್ಕಾಗಿ ಯಾವಯಾವ ರೀತಿಯಲ್ಲಿ ಕಥೆಗಳನ್ನು ತಿರುಚುತ್ತವೆ, ಎಂಬುದನ್ನು ಸಹ ಸ್ವಾರಸ್ಯಕರವಾಗಿ ನಿರೂಪಿಸುತ್ತಾರೆ. ಉರ್ದು ಸಾಹಿತ್ಯ ಪರಿಚಯವೂ ಇರುವುದು ಕರೀಂಖಾನರ ವಿಶೇಷ, ಘಾಲಿಬ್, ಇಕ್ಬಾಲ್‌ರಂತಹ ದೊಡ್ಡ ಕವಿಗಳ ಓದಿನ ಪ್ರಭಾವವನ್ನು ಅವರು ರಚಿಸಿದ ಹಾಡುಗಳಲ್ಲಿ ಕಾಣಬಹುದು." ಕರೀಂಖಾನ್‌ರವರ ಸಾಹಿತ್ಯ ವ್ಯಾಪ್ತಿ ಬಹಳ ವಿಶಾಲವಾದುದ್ದು ಎಂಬುದು ಮನದಟ್ಟಾಗುತ್ತದೆ. ಉರ್ದು ಶಾಹಿರಿಗಳನ್ನು ಬಳಸುವುದರಲ್ಲಿ ಕರೀಂಖಾನರು ಚತುರರಾಗಿದ್ದರು ಎಂಬುದು ಅವರ ನಿಕಟವರ್ತಿಗಳಿಂದ ತಿಳಿದುಬರುತ್ತದೆ.

ಹೊಸಗನ್ನಡದ ಆರಂಭದ ಹಂತದ ಪ್ರಮುಖ ಕವಿಗಳಾದ ಇವರು ಹಲವಾರು ಜಾನಪದ ಗೀತೆಗಳನ್ನು ಸಂಗ್ರಹಿಸಿದ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಇವರ ಜಾನಪದ ಗೀತೆಗಳನ್ನು ಸಿನೆಮಾ ಗೀತೆಗಳಿಗೂ ಬಳಸಿಕೊಳ್ಳಲಾಗಿದೆ. ಕರೀಂಖಾನರು ಖಾಸಗಿ ಧ್ವನಿಸುರುಳಿಗಳಿಗೆ ಹಲವಾರು ಗೀತೆಗಳನ್ನು ಬರೆದಿದ್ದಾರೆ. ಇವರು ಭಗವಾನ್ ಗೊಮ್ಮಟೇಶ್ವರನ ಕುರಿತಾಗಿ, ಧರ್ಮಸ್ಥಳ ಮಂಜುನಾಥ ಸ್ವಾಮಿಯ ಕುರಿತಾಗಿ, ರಾಘವೇಂದ್ರಸ್ವಾಮಿಯ ಕುರಿತು, ತಿರುಪತಿ ವೆಂಕಟೇಶ್ವರನ ಕುರಿತಾಗಿ ಭಕ್ತಿಗೀತೆಗಳನ್ನು ರಚಿಸಿದ್ದಾರೆ. ಅಷ್ಟೇ ಅಲ್ಲದೇ "ಕೂಡ್ಲಿ ಶೃಂಗೇರಿ ಸ್ವಾಮಿಗಳು, ಬಾಳೆ ಹೊನ್ನೂರು ಸ್ವಾಮಿಗಳು, ಉಡುಪಿ ಪೇಜಾವರ ಮಠದ ಸ್ವಾಮಿಗಳು ಹಾಗೂ ದಿವಾನ ಮಾಧವರಾಯರು ಸಕಲೇಶಪುರಕ್ಕೆ ಬಂದಾಗ ಅವರ ಕಾರ್ಯಕ್ರಮಗಳಿಗೆ ಸ್ವಾಗತಗೀತೆಗಳನ್ನು ಬರೆದೆನು. ನನ್ನ ಸಾಹಿತ್ಯಾಭಿ ವ್ಯಕ್ತಿಯನ್ನು ಗಮನಿಸಿದ ಬಾಳೆ ಹೊನ್ನೂರಿನ ಜಗದ್ಗುರುಗಳು ತಮಗೆ ಹಾಕಲ್ಪಟ್ಟ ಮಾಲೆಯನ್ನು ನನ್ನ ಮೇಲೆ ಮೆಚ್ಚಿಗೆ ಮಾತನಾಡುತ್ತಾ ನನಗೆ ಮಾಲೆಯನ್ನು ಹಾಕಿ ಗೌರವಿಸಿದರು" ಎಂಬ ಮಾತಿನಲ್ಲಿ ಕರೀಂಖಾನರು ವೈವಿಧ್ಯಮಯವಾದ ಹಾಡುಗಳನ್ನು ಬರೆಯುವಲ್ಲಿ ಸಿದ್ಧಹಸ್ತರಾಗಿದ್ದರು ಎನ್ನುವುದು ಅರಿವಿಗೆ ಬರುತ್ತದೆ.

ಭಕ್ತಿ ಗೀತೆಗಳು :

ಕರೀಂಖಾನರು ಭಕ್ತಿ ಭಾವಪರವಶತೆಯನ್ನು ಪರಾಕಾಷ್ಠೆಗೆ ತಲುಪಿಸುವಂತಹ ಭಕ್ತಿಗೀತೆಗಳನ್ನು ರಚಿಸುವ ಮೂಲಕ ಕನ್ನಡದ ಭಕ್ತಕೋಟಿಯ ಹೃದಯದಲ್ಲಿ ಚಿರಸ್ಥಾಯಿಯಾಗಿದ್ದಾರೆ. ಇವರು ಭಕ್ತಿಗೀತೆಗಳ ಬಗ್ಗೆ ತನ್ನೊಲವು ಯಾಕಾಗಿ ಬಂತು ಎಂಬ ವಿಷಯವನ್ನು ಪ್ರಸ್ತಾಪಿಸುತ್ತಾ "ಭಕ್ತಿಗೀತೆ ಮನುಷ್ಯನಲ್ಲಿ ಅಹಂ ಇಡುವುದಿಲ್ಲ. ದೀನಭಾವವನ್ನು ತರುತ್ತದೆ. ಅದರಲ್ಲಿ ಬರುವಂಥ ಪ್ರಯೋಗಗಳು ಮಾನವ ಜನ್ಮ ಶಾಶ್ವತವಾದುದಲ್ಲ ಎನ್ನುವುದನ್ನು ಸಾರುತ್ತದೆ. ಮತ್ತು ಭಕ್ತಿಗೀತೆಗಳಲ್ಲಿ ಕೆಲವು ವರ್ಗದವರಿಗೆ ಪ್ರಿಯವಾದ ದೇವರಿರುತ್ತಾರೆ. ಅ ದೇವರ ಮೇಲೆ ನಾನು ರಚನೆ ಮಾಡುವಾಗ ನನ್ನ ಮನಸ್ಸು ಶುದ್ಧವಾಗಿರುತ್ತದೆ, ಶರಣು ಭಾವನೆ ಉಂಟಾಗುತ್ತದೆ. ಜನಾಂಗ ಜನಾಂಗಗಳಲ್ಲಿ ನೇರ ಸಮ್ಮಿಲನ ಉಂಟಾಗುತ್ತದೆ. ಮತ್ತೊಬ್ಬರ ಹಬ್ಬ ಹರಿದಿನಗಳಲ್ಲಿ ಭಾಗವಹಿಸುವುದು, ಕೊಂಡಾಡುವುದು, ಇದರ ಪರಿಣಾಮ ಅವರು ನನ್ನವರಾಗಿ ಪರಿಣಮಿಸುತ್ತಾರೆ. ಆಗ ರಾಗ ದ್ವೇಷಗಳಿಗೆ ಅವಕಾಶವಿರುವುದಿಲ್ಲ" ಎಂದು ಆಧ್ಯಾತ್ಮಿಕತೆಯ ಕುರಿತು ತಮ್ಮ ಅಭಿಪ್ರಾಯ ವ್ಯಕ್ತ ಪಡಿಸುವರು. ಇವರು ಆಧ್ಯಾತ್ಮಿಕ ಗೀತೆಗಳನ್ನು ಬರೆಯುತ್ತ ಭಗವಂತನ ಸ್ಮರಣೆಗಳು ನಮ್ಮನ್ನು ಕೆಟ್ಟಕೆಲಸಕ್ಕೆ ದೂಡಲಾರವು. ಸಂಸ್ಕೃತಿ, ಸಮಾಜ, ಲೋಕ ಕಲ್ಯಾಣ ಮುಂತಾದ ವಿಷಯಗಳೇ ಇವರ ಭಾವನೆಗಳಲ್ಲಿದ್ದದ್ದು ವ್ಯಕ್ತವಾಗುತ್ತದೆ.

ಮುಸ್ಲಿಂ ಸಂಪ್ರದಾಯಸ್ಥರಾಗಿಯೂ ಹಿಂದೂ ಗೀತೆಗಳನ್ನು ಬರೆಯಲು ಕಾರಣವೆಂದರೆ ಅವರ ವಿಚಾರದಲ್ಲಿ ಐಕ್ಯಮತವನ್ನು ಸಾಧಿಸುವುದೇ ಆಗಿತ್ತು. ದೇಶದ ಸೌಹಾರ್ದಕ್ಕಾಗಿ ಜನರನ್ನು ಒಲಿಸಿಕೊಳ್ಳುವುದಕ್ಕಾಗಿ 'ಶರಣು-ಶರಣು-ಗಣನಾಯಕ' ಹಾಡನ್ನು ಹಾಡಿದರು, ಬಹು ಸಂಖ್ಯಾತರ ಜೊತೆಯಲ್ಲಿ ಅಲ್ಪಸಂಖ್ಯಾತರು ಬೆಳೆಯಬೇಕೆಂದು ಕರೀಂಖಾನರ ಆಶಯವಾಗಿತ್ತು. "ಒಮ್ಮೆ ಶಿವಮೊಗ್ಗಾ ಸುಬ್ಬಣ್ಣನವರು ವೀರೇಂದ್ರ ಹೆಗಡೆಯವರಿಗೆ ಹೇಳಿದರಂತೆ – 'ಧರ್ಮಸ್ಥಳದ ಮಂಜುನಾಥನ ಬಗ್ಗೆ ಹಾಡನ್ನು ಬರೆಯಿಸಿರಿ ನಾನು ಹಾಡುತ್ತೇನೆ' ಎಂದಾಗ ಆ ಕ್ಷಣದಲ್ಲಿ ವೀರೇಂದ್ರ ಹೆಗಡೆಯವರು ಕರೀಂಖಾನರೊಡನೆ ಬರೆಯಿಸುವುದೆಂದು ತೀರ್ಮಾನಿಸಿದರಂತೆ. ಆ ಕಾರಣಕ್ಕಾಗಿ ಧರ್ಮಸ್ಥಳದ ಮಂಜುನಾಥನ ಹಾಡಿನಲ್ಲಿ ನನ್ನ ಸಾಹಿತ್ಯವಿದೆ" ಎಂದು ತಾವು ಧರ್ಮಸ್ಥಳದ ಮಂಜುನಾಥನ ಬಗ್ಗೆ ಭಕ್ತಿಗೀತೆಗಳನ್ನು ಬರೆದ ಸಂದರ್ಭವನ್ನು ನೆನಪಿಸಿಕೊಳ್ಳುತ್ತಾರೆ.

ಆದರ್ಶ ಲೈವ ಕ್ಯಾಸೆಟ್ ಅರ್ಪಿಸುವ "ಮಂದಾರ ಧರ್ಮಸ್ಥಳ ಭಕ್ತಿಗೀತೆಗಳು', ಎಂಬ ಧ್ವನಿ ಸುರುಳಿಗೆ ಸಾಹಿತ್ಯ ಹಾಗೂ ನಿರೂಪಣೆ ಡಾ. ಎಸ್.ಕೆ. ಕರೀಂಖಾನ್ ಎಂಬ ಸಂಯೋಜನೆಯಲ್ಲಿ, ಶ್ರೀ ಕ್ಷೇತ್ರ ಧರ್ಮಸ್ಥಳದ ಬಗ್ಗೆ ಪೂರ್ವಪರಿಚಯ, ಪೂರ್ಣಪ್ರಮಾಣದ ಅರಿವಿರುವ ಇವರು ತಮ್ಮ ಸಂಶೋಧನಾತ್ಮಕ ವಿಚಾರದ ಕುಲುಮೆಯಲ್ಲಿ ಆ ಭಗವಂತನನ್ನು ವರ್ಣಿಸಿರುವ ವಿಚಾರ ಅದ್ಭುತವಾಗಿ ಪರಿಣಮಿಸಿದೆ. ಗಾಯಕಿ ಮಂಜುಳಾ ಗುರುರಾಜ್ ಹಾಡಿರುವ ಈ ಹಾಡು ಮಂಜುನಾಥನ ದಿವ್ಯ ಮಹಿಮೆಯನ್ನು ಸಾರುತ್ತದೆ.

'ಶ್ರೀ ಮದ್ಧರ್ಮಸ್ಥಳ ನಿವಾಸಂ
ಸುಹಾಸಂ ಸುಭಾಸಂ...............
ಸತ್ಯಂ ಶಿವಂ ಸುಂದರಂ ದಿವ್ಯತೇಜಂ
ಓಂಕಾರ ನಾದ ಸ್ವರೂಪಂ
ಓಂಕಾರ ನಾದ ಸ್ವರೂಪಂ

ಎಂಬಲ್ಲಿ ಕರೀಂಖಾನರ ಸಾಹಿತ್ಯದ ಓಘ ಅರ್ಥವಾಗುತ್ತದೆ. "ಸ್ವತಃ ಹಾಡುಗಾರರೂ, ಪ್ರತಿಭಾನ್ವಿತರೂ ಆದ ಇವರಿಗೆ ಹಾಡನ್ನು ಕಟ್ಟಬಲ್ಲಂಥ ಜಾಣ್ಮೆ ಇತ್ತು. ಕನ್ನಡಕ್ಕೆ ಅವರ ಸೇವೆ ಅದ್ಭುತವಾದದ್ದು" ಎನ್ನುವಲ್ಲಿ ಕರೀಂಖಾನರ ಪ್ರತಿಭೆ ವ್ಯಕ್ತವಾಗುತ್ತದೆ ಶಿವನ ಮಹಿಮೆಯನ್ನು ಅರಿಯುವುದು ಕಷ್ಟದ ಕೆಲಸವಲ್ಲ, ಮಾನವರು ಪೂಜೆ, ಪ್ರಾರ್ಥನೆ, ಧ್ಯಾನ ಮುಂತಾದವುಗಳಿಂದ ಒಲಿಸಿಕೊಳ್ಳಲು ಪ್ರಯತ್ನಿಸಿದರೆ ಆತ ಒಲಿಯುವುದು ನಿಶ್ಚಿತ, ಎಂಬ ಧೋರಣೆ ಕರೀಂಖಾನರದು.

ಮಂದಾರ ಧರ್ಮಸ್ಥಳ ಧ್ವನಿ ಸುರುಳಿಯಲ್ಲಿ ಪ್ರಕಟಗೊಂಡ 'ಶಿವನಾಥ ನಿನ್ನ ಮಹಿಮಾ........', 'ವಿಧಿಯ ಕೈಚಾಟಿಯಲ್ಲಿ ಜಗದಾಟ ನಡೆಯುತ್ತಿದೆ........', 'ಯಾವ ರಾಗದಿ ಹಾಡಲಿ ನಿನ್ನ ನಾಮದ ಸುಧಾಗಾನ........', 'ಭಜಮನ ಮಾರಹರನ ಚಿನ್ಮಯನ........' ಹಾಗೂ 'ಕಮನೀಯ ಕಲಿ ನೀನು ಕರುನಾಡ ಸಿರಿ ನೀನು.......' ಇಂಥ ಮಹತ್ವಪೂರ್ಣವಾದ ಹಾಡುಗಳು ಜನಮನದಲ್ಲಿ ಭಕ್ತಿರಸ ಭಾವ ಹುಟ್ಟಿಸುವಲ್ಲಿ ಸಹಾಯಕವಾಗಿವೆ. ಕರೀಂಖಾನರ ಭಕ್ತಿ ಭಗವಂತನ ಮೇಲಿನ ನಿಷ್ಠೆ ಅಚಲವಾದವುಗಳು ಎಂಬುದಕ್ಕೆ 'ಮಂದಾರ ಧರ್ಮಸ್ಥಳ' ಎಂಬ ಧ್ವನಿಸುರುಳಿಯಲ್ಲಿ ಪ್ರಕಟಗೊಂಡ ಭಕ್ತಿಗೀತೆಗಳ ಭಾಗವೇ ಸಾಕ್ಷಿಯಾಗಿ ನಿಲ್ಲುತ್ತದೆ. ಸರ್ವಧರ್ಮ ಸಮ್ಮೇಳನದಲ್ಲಿ ಸರ್ವಧರ್ಮದ ಕುರಿತು ಮಾತನಾಡಿ ಮಂಜಪ್ಪ ಹೆಗಡೆಯವರಿಂದ ಭೇಷ್ ಎನಿಸಿಕೊಂಡಿರುವುದು ಕರೀಂಖಾನರ ಹೆಗ್ಗಳಿಕೆಯಾಗಿದೆ.

ಒಮ್ಮೆ ಧರ್ಮಸ್ಥಳದ ಧರ್ಮಾದಿಕಾರಿ ವೀರೇಂದ್ರ ಹೆಗಡೆಯವರು ಕರೀಂಖಾನರ ಸಾಹಿತ್ಯ ಸೃಷ್ಟಿಯ ಕುರಿತು ಹೇಳುತ್ತಾ "ಒಂದು ಬಾರಿ ನಾನು ಧರ್ಮಸ್ಥಳದ ಬಗ್ಗೆ ಭಕ್ತಿ ಗೀತೆ ಬರೆದು ಕಳುಹಿಸಿ ಎಂದರೆ ತಕ್ಷಣ ಹತ್ತು ಪದ್ಯಗಳನ್ನು ಬರೆದು ಕಳುಹಿಸಿದರು. ಹತ್ತೂ ಪದ್ಯಗಳು ಬಹು ಉತ್ಕೃಷ್ಟವಾಗಿದ್ದವು. ಅಂತಹ ಸಾಹಿತ್ಯ ಅಪರೂಪವಾಗಿ ಹೊರಡುತ್ತದೆ. ಶುದ್ಧ ಮನಸ್ಸಿನ ಸಾಹಿತಿಯಾಗಿ ಒಂದು ಸಾಹಿತ್ಯವನ್ನು ಗುರುತಿಸಿ, ಒಂದು ಕ್ಷೇತ್ರವನ್ನು ಗುರುತಿಸಿ, ಅದರ ಚಟುವಟಿಕೆಯನ್ನು ಗುರುತಿಸಿ ತಕ್ಷಣ ಅದನ್ನು ಬರವಣಿಗೆಯ ರೂಪದಲ್ಲಿ ತರಬೇಕಾದರೆ ಎಂತಹ ಹೃದಯವಂತಿಕೆ ಇರಬೇಕು, ಎಂಬುದನ್ನು ನಾನು ಕರೀಂಖಾನರಲ್ಲಿ ಕಂಡಿದ್ದೇನೆ" ಎಂಬಲ್ಲಿ ಕಾವ್ಯರಚಿಸುವಲ್ಲಿ ಕರೀಂಖಾನರರು ಪಳಗಿದವರು ಎಂಬುದು ವೇದ್ಯವಾಗುತ್ತದೆ.

ಜಾನಪದ ದಿಗ್ಗಜರಾದ ಬೆಳೆಗೆರೆ ನರಸಿಂಹ ಶಾಸ್ತ್ರಿಗಳು ಕರೀಂಖಾನರನ್ನು ಸಂದರ್ಶಿಸಿದಾಗ 'ನಿಮ್ಮ ಹಾಡುಗಳ ಪೈಕಿ ಅತ್ಯಂತ ಜನಪ್ರಿಯತೆ ಗಳಿಸಿರುವುದು 'ನಟವರ ಗಂಗಾಧರ.........' ಇದನ್ನು ಕರೀಂಖಾನ ರಚಿಸಿದ್ದು ಅಂತ ಹೇಳ್ದಾಗ ಜನ ಆಶ್ಚರ್ಯಪಡ್ತಾರೆ, ಏನು ಅಂದ್ರೆ ನೀವು ಹಿಂದು ಅಲ್ಲ ಅನ್ನೋ ಒಂದು ಕಾರಣದಿಂದ' ಎಂದಾಗ ಕರೀಂಖಾನರು ಅದಕ್ಕೆ ಉತ್ತರಿಸುತ್ತ "ನಾನು ಜಾತೀಯತೆ

ಅನುಸರಿಸಿದರೆ 'ನುಡಿಮನ ಶಿವಗುಣ ಸಂಕೀರ್ತನ.........' ಹೇಗೆ ಬರ್ತಿತ್ತು 'ಜಯಗೌರಿ ಜಗದೀಶ್ವರಿ........' ಇವೆಲ್ಲ ಹೇಗೆ ಬರೀಬೇಕಿತ್ತು? ನಾನು ಶುದ್ಧ ಭಾರತೀಯ, ಭಾರತದ ಪ್ರತಿಯೊಬ್ಬನೂ ನನ್ನ ಸಹೋದರ ಅವನು ಯಾವ ಜನಾಂಗದವನೇ ಇರಲಿ, ಅವನು ನನ್ನ ಸಹೋದರ ನೊಂದ, ಬೆಂದವರ್ಯ್ಯಾರಾದ್ರೂ ಕಂಡಾಗ ಕಣ್ಣೀರು ತುಂಬಿಬರುತ್ತೆ, ಆದ್ದರಿಂದ ಜಾತೀಯತೆಯನ್ನು ನಾನು ವಿರೋಧಿಸ್ತೀನಿ ನನ್ನ ಗುರುಗಳು ನಾರಾಯಣ ಶಾಸ್ತ್ರೀಗಳು ಅಪಾರ ಮಮತೆ ಇಟ್ಟಿದ್ರು ನನ್ನ ಮೇಲೆ, ಅ ಗುರುವಿನಿಂದ ನಾನು ವಿದ್ಯೆ ಪಡೆದಿರುವಾಗ ಆ ವಿದ್ಯೆಯಿಂದ ಈ ಜಾತಿಯತೆ ಪ್ರೇರೇಪಿಸುವುದು ಮಹಾಪಾಪದ ಕಾರ್ಯ ಆಗುತ್ತೆ' ಎನ್ನುವಲ್ಲಿ ಈ ದೇಶದ ಬಗ್ಗೆ ಹಾಗೂ ಕನ್ನಡದ ನೆಲದ ಬಗ್ಗೆ ಕರೀಂಖಾನರಿಗೆ ಇರುವ ಅಭಿಮಾನ ಎಂಥವರನ್ನೂ ಬೆರಗುಗೊಳಿಸುತ್ತದೆ. ಈ ಮಣ್ಣಿನ ಮಗನಾಗಿ ದೈವೀಗುಣ ಹೊಂದಿದದನಾಗಿ, ಕನ್ನಡ ತಾಯಿಯ ಅಕ್ಕರೆಯ ಕಂದನಾಗಿ ಹಿಂದು-ಮುಸ್ಲಿಂ ಸಾಮರಸ್ಯದ ಸೇತುವೆಯಾಗಿ ಮಾಡಿದ ಕೆಲಸಕ್ಕೆ ಕೊನೆಯೆನ್ನುವುದಿಲ್ಲ. ಇದರಿಂದ ಸ್ವಜಾತಿಯವರಿಂದಲೇ ನಿರ್ಲಕ್ಷ್ಯಕ್ಕೊಳಪಟ್ಟು ಗಂಡಾಂತರವನ್ನು ಎದುರಿಸಬೇಕಾಯಿತು.

ಕರೀಂಖಾನರು ಬಾಣನ ಶೈಲಿಯನ್ನು ಅನುಕರಣೆ ಮಾಡಿ ನಟರಾಜನ ಕುರಿತು ರಚಿಸಿದ ಒಂದು ಪದ್ಯದ ಭಾಗ ಹೀಗಿದೆ-

'ಶ್ರೀಮದ್ ಕೈಲಾಸಗಿರೀಂದ್ರಂ ಮಹೇಂದ್ರಂ
ಭವಂ ಭೂತಿ ಸಾಂದ್ರಂ ಓಂಕಾರ ಭವನ ತರಂಗ
ಕುರಂಗ ವಾಹನಂ ಮೋಹನಂ
ಮೋದನಂ ಆನಂದ ತಾಂಡವ

'ಒಬ್ಬ ಸಾಹಿತಿಯಾಗಿ ಏನೇನು ರಚನೆ ಮಾಡಿದ್ದೀರಾ?' ಎಂದು ಪ್ರಶ್ನಿಸಿದಾಗ ಕರೀಂಖಾನರು – 'ನಾನು ಕವನಗಳನ್ನು ರಚನೆ ಮಾಡೋದಕ್ಕಿಂತಾನೂ ಹಾಡುಗಳ ಕಡೆ ಹೆಚ್ಚು ಗಮನ ಕೊಟ್ಟೆ, ನನ್ನ ಹಾಡುಗಳು ಸಾಧ್ಯವಾದ ಮಟ್ಟಿಗೆ ಸಂಗೀತಮ ಯವಾದ ಶಬ್ದಗಳಿಂದ ಕೂಡಿರಬೇಕು, ಕರ್ಣಾನಂದಕರ ವಾಗಿರಬೇಕು, ಇಂಪಾಗಿರಬೇಕು, ಅನ್ನೋ ದೃಷ್ಟಿಯಿಂದ ರಚನೆ ಮಾಡ್ದೆ, ರಾಘವೇಂದ್ರ ಸ್ವಾಮಿಗಳ ಮೇಲೆ ಬರೆದಿರೋ ಹಾಡಿನಲ್ಲಿ.

'ಭುವನ ಫಲಕದ ಮೇಲೆ ಮೂಡಿದ
ಶರಧ ಚಂದ್ರ ತುಷಾರ ಬೃಂದಾವನ
ದುಃಖ ಸಂಕಟ ಹರಣ ಗುರುವಿನ
ವರದಾನು ಸದನ ಬೃಂದಾವನ........."

ಬೃಂದಾವನದಲ್ಲಿ ಪ್ರತಿಷ್ಠಾಪನೆಗೊಂಡ ಗುರುವರ್ಯ ರಾಘವೇಂದ್ರರು ಸರ್ವಪ್ರಾಣಿಗಳ ಉಸಿರಾಗಿದ್ದಾರೆ. ಈ ಭೂಮಿಯ ಮೇಲೆ ಇವರ ಅವತಾರವು ಪುಣ್ಯವನ್ನು ತಂದಿದೆ. ಪೂರ್ಣಚಂದ್ರನಂತಿರುವ ಇವರ ದರ್ಶನ ಭಾಗ್ಯದಿಂದಲೇ ಸಂಕಟಗಳು ದೂರವಾಗುತ್ತವೆ. ಬಡವನಿರಲಿ, ಬಲ್ಲಿದನಿರಲಿ, ಮಾನವರೆಲ್ಲರೂ ಈ ದಯಾಧರ್ಮದ ದಾತಾರನ ಕರುಣಾದ್ವಾರದಲ್ಲಿ ಸೆರಗೊಡ್ಡಿ ನಿಂತಿರುವ ಭಕ್ತರು, ಈ ಗುರುವಿನ

ವಚನದಿಂದಲೇ ಈ ಪ್ರಕೃತಿ ಇಷ್ಟೊಂದು ವೈಶಿಷ್ಟ್ಯ ಪೂರ್ಣವಾಗಿದೆ ಎಂಬ ಮಾತು ಅರ್ಥಪೂರ್ಣವಾಗಿದೆ. ರಾಘವೇಂದ್ರನ ಕುರಿತು ಬರೆಯುತ್ತಾ ಅವರೇ ಹೇಳುವಂತೆ– 'ನಿಂದಾಸ್ತುತಿ ಅಂತಾ ಇರುತ್ತೆ ನೋಡಿ, ನಮ್ಗೆ ಬೇಕಾದವರಿಗೆ ನಾವು ಬೈದು ಅವರನ್ನು ಸ್ತೋತ್ರ ಮಾಡೋದು, ಹಾಗೇ ರಾಘವೇಂದ್ರ ಸ್ವಾಮಿಯವರ ಮೇಲೇನೇ ಬರೆದೆ–

'ಕಷ್ಟಗಳನ್ನು ಕದಿಯುವ ಕಳ್ಳ ಬರ್ತಾನಂತೆ
ಜೊತೆಯಲಿ ಸುಖದ ಸುಗ್ಗಿಯನುತರ್ತಾನಂತೆ
ನಮ್ಮ ಕಷ್ಟ ನಮ್ಗೇ ಇರ್ಲಿ ಇವ್ನಿಗೆ ಏನಂತೆ
ಕಷ್ಟವ ಕಂಡರೆ ಹಸಿವು ಎಂದು ನುಂಗ್ತಾನಂತೆ'

ಅನ್ನುವ ರೀತಿಯಲ್ಲಿ ನಿಂದಾಸ್ತುತಿ ಬರೆದರು. ವೆಂಕಟೇಶ್ವರನ ಕುರಿತು ಬರೆಯುತ್ತಾ

'ಮಾನವೇನಪಮಾನವೇನು
ಶ್ರೀನಿವಾಸ ನಿನ್ನ ಚರಣ
ನಂಬಿ ಮೊರೆಯುವ ದುಂಬಿ ನಾನು' ‼ಪಾ‼

ಈ ಗೀತೆಯಲ್ಲಿ ಮಾನವ ಜೀವನಕ್ಕೆ ಸೂತ್ರಧಾರನು ಶ್ರೀನಿವಾಸ, ಎಂಬ ಅಂಶ ವ್ಯಕ್ತ. ಮುಸ್ಲಿಂ ಬಾಂಧವರಿಗೆ ಅಲ್ಲಾನೊಬ್ಬನೇ ದೇವರು. ಆದರೆ ಮುಸ್ಲಿಂ ಧರ್ಮದಲ್ಲಿ ಹುಟ್ಟಿದ ಕರೀಂಖಾನರು ಹಿಂದೂ ದೇವರುಗಳ ಬಗೆಬಗೆಯ ವರ್ಣನೆಗಳು ವೈಶಿಷ್ಟ್ಯಪೂರ್ಣವಾಗಿವೆ. ದೇವನೊಬ್ಬನೆ, ನಾಮಹಲವು ಎಂಬ ವಿಷಯವನ್ನು ಸ್ಪಷ್ಟಪಡಿಸುವ ರೀತಿಯು ಬಹಳ ವಿಶಿಷ್ಟವಾದದ್ದು.

**ಕೊಲ್ಲೂರು ಮೂಕಾಂಬಿಕೆ :** ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಕೊಲ್ಲೂರಿನಲ್ಲಿರುವ ಒಂದು ದೇವತೆ. 'ಈಕೆ ಮೂಕಾಸುರನನ್ನು ಸಂಹಾರ ಮಾಡಿದಳು. ಮೂಕಾಸುರನನ್ನು ಸಂಹಾರ ಮಾಡಿದ ಆದಿಶಕ್ತಿಯೇ ಮೂಕಾಂಬಿಕಾ ಎಂಬ ಹೆಸರನ್ನು ಪಡೆವಳು ಮತ್ತು ಕೊಲ್ಲೂರಿನ ಬಳಿಯ ಜ್ಯೋತಿರ್ಲಿಂಗದಲ್ಲಿ ಐಕ್ಯಳಾದಳು." ಇವರು ಕೊಲ್ಲೂರು ಮೂಕಾಂಬಿಕೆಯ ಮೇಲೆ ಬರೆದಿರುವ ಹಾಡು ಹೀಗಿದೆ.

ಪಾಹಿ ಶ್ರೀ ಸೌಪರ್ಣಿಕಾ ನದಿ ಹಂಸಿಕಾ
ಕೊಲ್ಲೂರು ಮೂಕಾಂಬಿಕಾ
ನಿನ್ನ ಚರಣದಿ ಮೊಳಗಲಿ
ಗಾನಮಧುರ ಸಚಂದ್ರಿಕಾ

ಎಂಬಲ್ಲಿ ಕವಿ ಕೇವಲ ಪುರುಷದೇವರ ಗೀತೆ ಬರೆದು ತೃಪ್ತನಾಗದೆ, ಸ್ತ್ರೀದೇವರ ಒಲುಮೆಗೆ ಪಾತ್ರರಾಗುವ ಗೀತೆಗಳನ್ನೂ ರಚಿಸಿದ್ದಾರೆ. ಕವಿತೆ ಎಲ್ಲರ ಮನೆಯಲ್ಲಿ ಬೆಳೆಯುವ ಹೀರೆ ಹೂವಲ್ಲ, ಕೆಲವು ಜನರ ಮನಸ್ಸಿನ ಉದ್ಯಾನದಲ್ಲಿ ಅರಳುವ ಮಂದಾರ ಕುಸುಮ. ವಾಚಕರಿಂದ ಕವಿಯ ಕೀರ್ತಿ ಹೆಚ್ಚುತ್ತದೆ. ಕೆರಳಿದ ಕವಿ ಕಾಳಿಂಗ ಸರ್ಪ, ಭಾಷೆ ಮಾನವನ ಕೂಸು. ಯಾರ ಸಂಪರ್ಕ ಮತ್ತು ಸಹವಾಸದಲ್ಲಿ ಅದು ಬೆಳೆಯುವುದೋ ಅವರ ಮಾತನ್ನು ಸುಲಭವಾಗಿ ಸ್ವೀಕರಿಸುತ್ತದೆ. ಭಾಷೆ ಮಾನವನ ಮಂತ್ರ, ತಂತ್ರ, ಹೃದಯಕ್ಕೆ

ಹೃದಯಗಳನ್ನು ಕೂಡಿಸಿ ಕೊಡುವುದೆ (ಸಾಮರಸ್ಯ) ಅದರ ಸಾಕ್ಷ್ಯ. ಮಾತಿನ ವೀಣೆಯನ್ನು ಮೀಟುವುದು ಭಾವದ ಬೆರಳು ಆಗ ಹುಟ್ಟುವುದು ಧ್ವನಿ. ಅದೇ 'ದೈವಿ ಪ್ರಾಕೃತ' ಎನ್ನುವಂತೆ ಕವಿಯ ಭಾವಪ್ರಪಂಚಕ್ಕೆ ನಿಲುಕದ ವಿಷಯವೇ ಇಲ್ಲ. ಈ ಪ್ರಪಂಚದ ಮಧ್ಯೆ ಕವಿಯ ಭಾವಸಮಾಧಿಯ ಗುಹೆ ಇದೆ.

ಹೀಗೆ ದೇವರ ದಯದಿಂದ ಈ ಜಗತ್ತಿನಲ್ಲಿ ಸುಖಶಾಂತಿ ನೆಲೆಸುವಂತಾಗಿದೆ. ಈ ಜಗದಲ್ಲಿ ಮನುಷ್ಯ ದೇವರೆದುರಿಗೆ ವರವನ್ನು ಬೇಡುವ ಭಕ್ತನಾಗಿದ್ದಾನೆ. ಆತನ ನಾಮಸ್ಮರಣೆ ಮಾಡದೇ ಇಹವು ವ್ಯರ್ಥವೆಂಬ ಅಭಿಪ್ರಾಯಕ್ಕೆ ಬರುವ ಇವರು ಶಿವನ ಕುರಿತಲ್ಲದೇ ನಾರಾಯಣನ ಮೇಲೂ ಬರೆದಿರುವ ಗೀತೆ. ಭಗವಾನ ಗೊಮ್ಮಟೇಶ್ವರ, ನಾರಾಯಣ, ಕೊಲ್ಲೂರು ಮುಕಾಂಬಿಕೆ, ಗವಿರಂಗಾಪುರದ ರಂಗನಾಥ, ಧರ್ಮಸ್ಥಳ ಮಂಜುನಾಥ ಮತ್ತು ಶ್ರೀ ರಾಘವೇಂದ್ರಸ್ವಾಮಿ ದೇವರ ಮೇಲೆಯೇ ಹತ್ತು ಹತ್ತು ಭಕ್ತಿಗೀತೆಗಳನ್ನು ರಚಿಸಿರುವುದಾಗಿ ಕರೀಂಖಾನರೇ ಹೇಳಿಕೊಂಡಿರುತ್ತಾರೆ. ಇವರು ಸೊಗಸಾಗಿ ಪದ್ಯಗಳನ್ನು ರಚಿಸಿ ಕನ್ನಡ ಸಾಹಿತ್ಯ ಭಂಡಾರ ಶ್ರೀಮಂತಗೊಳಿಸಿದ್ದಾರೆ. ಮನೆ-ಮಠ ತ್ಯಜಿಸಿ ಊರೂರು ಅಲೆಯುತ್ತಾ, ನೀತಿಯುತ ಪದ್ಯಗಳನ್ನು ಹೆಣೆದಿದ್ದಾರೆ. ಇವರ ಅನೇಕ ಕವಿತೆಗಳಿಗೆ ಬಾಳಿನ ಘಟನೆಗಳೇ ವಸ್ತು, ಅವುಗಳಲ್ಲಿ ಪಾರಮಾರ್ಥಿಕ ಅರ್ಥದೊಂದಿಗೆ ಸೃಷ್ಟಿ ಜೀವಾತ್ಮ ಪರಮಾತ್ಮರ ಸಂಬಂಧದ ಚಿಂತನೆ ಮಡುಗಟ್ಟಿದೆ. ಕರೀಂಖಾನರ ಜೀವನದೃಷ್ಟಿಕರ್ನಾಟಕದ ಶರಣ ಮತ್ತು ದಾಸದೃಷ್ಟಿಯ ಸ್ಥಾಯಿಭಾವವಾಗಿದೆ.

ಕರೀಂಖಾನರ ಕಾವ್ಯಗಳು ಶ್ರೇಷ್ಠವೂ, ಮೌಲಿಕವೂ ಆದವುಗಳೆಂಬುದಕ್ಕೆ ಇವರ ಭಕ್ತಿಗೀತೆಗಳೇ ಸಾಕ್ಷಿಯಾಗಿವೆ. ಭಕ್ತಿರಸದ ವಿಭಿನ್ನ ಮಜಲುಗಳನ್ನು ಅದ್ಭುತ ಲೀಲಾ ವಿಲಾಸವನ್ನು ಇಲ್ಲಿ ಕಾಣುತ್ತೇವೆ.

**ಪ್ರೇಮ ಗೀತೆಗಳು :**

ಕನ್ನಡ ಚಲನಚಿತ್ರದಲ್ಲಿ ಮತ್ತೆ ಮತ್ತೆ ಕೇಳಿಬರುವ ಹೆಸರು ಕರೀಂಖಾನ ಅವರದು. ಪದ ಪ್ರಯೋಗ, ಜೋಡಣೆ ಇವರ ಭಾಷಾಪ್ರಭುತ್ವವನ್ನು ತೋರಿಸುತ್ತದೆ. ಭಕ್ತಿಗೀತೆ ಬರೆಯುವಾಗ, ಚಿತ್ರಗೀತೆಗಳನ್ನು ಬರೆಯುವಾಗ ಹಿಂದಿ ಹಾಡುಗಳನ್ನು ಇವರು ತುಂಬಾ ಕೇಳಿದಂತೆ ಗೋಚರಿಸುತ್ತದೆ. ಅದಕ್ಕಾಗಿ ಇವರು ಕೋಮಲವಾದಂಥ ಪ್ರೇಮ, ಪ್ರೀತಿ, ಪ್ರಣಯ ಇತರ ವಿಷಯಗಳಿಗೆ ಸಂಬಂಧಿಸಿದ ಗೀತೆಗಳನ್ನು ತುಂಬಾ ಕೋಮಲವಾಗಿ, ತುಂಬಾ ಮೃದುವಾಗಿ, ಚೆನ್ನಾಗಿ ರಚಿಸಿದ್ದಾರೆ.

''ವರ್ಣನಾ ವೈಖರಿಯಿಂದಾನೂ ಕೂಡಾ ಪ್ರೇಮಗೀತೆಗಳನ್ನು ಬರೆದಿದ್ದೇನೆ'' ಎಂಬಲ್ಲಿ ಕರೀಂಖಾನರು ತಮ್ಮ ಬರವಣಿಗೆಯಲ್ಲಿ ವರ್ಣನೆಗೆ ಒತ್ತು ಕೊಟ್ಟಿರುವುದು ತಿಳಿದುಬರುತ್ತದೆ. ನಕ್ಷತ್ರಲೋಕ ಪತ್ರಿಕೆ, ಕರೀಂಖಾನರನ್ನು ಸಂದರ್ಶಿಸಿದಾಗ ಹೇಳಿದ ಮಾತು ಹೀಗಿದೆ- 'ವೆಂಕಟ್ರಾಜು ಅವರೂ ಸಹ ಪ್ರಸಿದ್ಧ ಸಂಗೀತ ನಿರ್ದೇಶಕರು, ಉತ್ತರಾದಿ, ದಕ್ಷಿಣಾದಿಗಳೆರಡರಲ್ಲೂ ಪರಿಣಿತರು. ಅವರು ನನ್ನ ಹಾಡುಗಳನ್ನು ಕುರಿತು 'ಗಾನ ಗಂಗ, ಸ್ವರಸಾರಂಗ, ನೀನೆ ತಾನೆ ತರಂಗ' ಎಂದು ಕೊಂಡಾಡುತ್ತಿದ್ದರು' ಈ ಮಾತಿಗೆ ಸಾಕ್ಷಿಯೆನ್ನುವಂತೆ ಕರೀಂಖಾನರು 'ಸ್ವರ್ಣಗೌರಿ' ಚಿತ್ರಕ್ಕಾಗಿ ರಚಿಸಿದ 'ಬಾರೇ ನೀ ಚೆಲುವೆ, ನಿನ್ನೊಲವು ಒಲವು ಮಕರಂದಾ...','ಹಾಡಲೇನು ಮನದಾಸೆ ನಾನು....','ಬಾರಾ ಚಂದ್ರಮ ಎನ್ನ ಚೆಲುವ ಬಾರಾ...','ಬಂತು ನವಯೌವ್ವನ.....'ಹಾಡುಗಳು ಉತ್ಕೃಷ್ಟವಾಗಿ ಮೂಡಿಬಂದಿವೆ. ಕವಿ ಚಿತ್ತದೊಳಗಿನ ಚಿತ್ರಗಾರನ ಚಿತ್ರಕ್ಕೆ ತುಂಬಿದ ಜೀವಕಳೆ

ಅಮೂಲ್ಯವಾದದ್ದು. ಕವಿ ತನ್ನ ಅಂತರಂಗದ ಗೌಪ್ಯಕ್ಕೆ ಬುದ್ಧಿಯ ಜಾಣತನದಿಂದ ಕೊಟ್ಟ ಬಾಹ್ಯ ರೂಪದ ಸೊಗಸು ಮೆಚ್ಚುವಂಥದ್ದು.

ಪ್ರೀತಿ ಪ್ರಣಯಗಳಿಲ್ಲದೆ ಈ ಜೀವನ ವ್ಯರ್ಥ, ವಿಶಿಷ್ಟ ಶಕ್ತಿಯಿರುವ ಈ ಮಾನವ ಪ್ರೀತಿ, ಪ್ರೇಮದಿಂದ ಆದೇನೆಲ್ಲಾ ಮಾಡಬಲ್ಲ, ಅದು ಅನುರಾಗವಿರುವವರಲ್ಲಿ ನಿತ್ಯನೂತನವಾಗಿರುತ್ತದೆ. ಮೂಕವಾಗಿರುವ ಆ ಪ್ರೀತಿ ವ್ಯಕ್ತಪಡಿಸಲು ಅಶಕ್ಯವಾಗುತ್ತದೆ. ಶಬ್ದಗಳಲ್ಲಿ ಹಿಡಿದಿಡಲು ಎಂಥ ಕವಿಗೂ ಅಸಾಧ್ಯವಾದುದು ಎಂಬುದು ಸತ್ಯ. 'ಹೇಳಿದರೆ ಹಾಳಾಗುವುದು ಅನುಭವದ ಸವಿಯು ಹೇಳದಿದ್ದರೆ ತಾಳಲಾರನು ಕವಿಯು' ಎನ್ನುವಂತೆ ತನಗಾದ ಅನುಭವವನ್ನು ಶಬ್ದಗಳಲ್ಲಿ ಹಿಡಿದಿಡುವ ಪ್ರಯತ್ನವನ್ನಷ್ಟೇ ಮಾಡಬಹುದೇ ಹೊರತು, ಅದನ್ನು ಇದ್ದಕ್ಕಿದ್ದ ಹಾಗೆ ಹಿಡಿದಿಡಲು ಅಸಾಧ್ಯವೆಂಬುದು ಕವಿಗೂ ಗೊತ್ತು.

ಸಲ್ಲಾದ ಸರಸ ತರವಲ್ಲ।  
ಆತುರಗೆಡುವುದು ಬಾಳು ತರವಲ್ಲ।  
ವಯಸ್ಸಾದನ್ನು ತಿಳಿದಿಲ್ಲ।

ಕರೀಂಖಾನರು ಸರಸ ಗೀತೆಗಳನ್ನು ಬರೆಯುವಲ್ಲಿ ಸಿದ್ಧ ಹಸ್ತರು ಎಂಬ ಮಾತು ಒಪ್ಪತಕ್ಕಂಥದ್ದೇ, ಹಿಂದೂ ಸಂಸ್ಕೃತಿ ಎತ್ತಿ ಹಿಡಿಯುವ ಈ ಗೀತೆ ಪ್ರೇಮಿಸಿದವರೆಲ್ಲರೂ ತಮ್ಮ ನೀತಿನಿಯಮಗಳನ್ನು ಪಾಲಿಸಬೇಕಾಗುತ್ತದೆ. ಅದು ಸರ್ವಸಮ್ಮತವೂ ಹೌದು. ಆತುರಪಟ್ಟರೆ ಬಾಳೆಲ್ಲ ಹೋಳಾಗಿ ಹೋಗುತ್ತದೆ ಎನ್ನುವುದನ್ನು ಸಾರುತ್ತದೆ. ಶೃಂಗಾರ ಪ್ರಿಯರೂ ಆದಂತಹ ಕರೀಂಖಾನರು ಸರಸ, ಪ್ರಣಯಗಳಿಗೆ ಸಂಬಂಧಿಸಿದಂಥ

ಚಳಿಜ್ವರ ಬಿಟ್ಟಾರು ಒಳಜ್ವರ ಬಿಡಲಿಲ್ಲಾ  
ಮಂಟಪದ ಜಾಜಿ ಮನೆಯವನೆ  
ಅತ್ತೆಯ ಮಗನೆ ಮಂತ್ರಿಸಿಹೋಗೋ ತಲೆನೋವಾ

ಎನ್ನುವ ಗೀತೆಗಳ ಮೂಲಕ ಗಂಡುಹೆಣ್ಣಿನ ಮನಸ್ಸಿನಲ್ಲಿ ಉಂಟಾಗುವ ವಿವಿಧ ರೀತಿಯ ತುಡಿತಗಳನ್ನು ಕಾಣಬಹುದು. ಈಕೆಗೆ ಗೆಣೆಗಾರನನ್ನು ಅಗಲಿರುವುದು ಅಸಾಧ್ಯವಾಗುತ್ತದೆ. ಎನ್ನುವುದನ್ನು ಕವಿ ಸೂಚ್ಯವಾಗಿ ತಿಳಿಸಿದ್ದಾನೆ. ಕವಿಯ ಭಾವ ಪರಿಪಕ್ವವಾದಾಗ ಗೀತೆ ಜನಿಸುತ್ತದೆ. 'ಹದಾ ಇಲ್ಲದೆ ಪದಾ ಹೊರಗೆ ಬರಲಾರದು' ಎನ್ನುವುದಾಗಿ ಅಂಬಿಕಾತನಯದತ್ತರು ತಮ್ಮ ಕವನ ಮಾರ್ಗದಲ್ಲಿಯ ಗೀತೆ ಸಾಮರಸ್ಯವನ್ನು ಕುರಿತು ಸೂಚಿಸಿದ್ದಾರೆ. ಹಾಗೇ ಕವಿ ಕರೀಂಖಾನರ ಗೀತೆಗಳು ಸಾಮರಸ್ಯವನ್ನು ಸಾಧಿಸುವಂಥವುಗಳಾಗಿವೆ.

'ಸುಪರನೋವ' ಚಿತ್ರಕ್ಕೆ ಸಾಹಿತ್ಯ ನೀಡಿದ ಒಂದು ಗೀತೆಯಲ್ಲಿ ಹರೆಯುವು ಬದುಕಿನ ಮೂಲಸೆಲೆ ಹುಟ್ಟಿದ ಪ್ರತಿಯೊಂದು ಜೀವಿಗೂ ಇದು ಬಾರದಿರದು. ಹರೆಯ ಬಂದಾಗ ಬಯಕೆಯ ಹರವು ವಿಸ್ತಾರವಾಗುವುದರಲ್ಲಿ ತಪ್ಪಿಲ್ಲ, ಅದಕ್ಕಾಗಿ

ತಪ್ಪಲ್ಲ, ತಪ್ಪಲ್ಲ ಬಯಕೆಯ ಪ್ರಾಯ  
ಬಯಸಿದರೇನು ತಪ್ಪಲ್ಲ, ತಪ್ಪಲ್ಲ  
ಚಂದಿರನ ಕಂಡು ನೈದಿಲೆ ನಕ್ಕರೆ ತಪ್ಪಲ್ಲ......

'ಜೀವನ ತರಂಗ' ಚಿತ್ರದ 'ಆನಂದ ತುಂಬಿ ತಂದೆ ಬಾ ಜಾಣೆ' ಎಂಬ ಹಾಡನ್ನು ಪಿ. ಬಿ.

ಶ್ರೀನಿವಾಸ ಹಾಗೂ ಎಸ್ ಜಾನಕಿಯವರು ತಮ್ಮ ಶುಶ್ರಾವ್ಯ ಕಂಠದಿಂದ ಹಾಡಿದ್ದಾರೆ. ಹಾಗೇ 'ಬಂತು ನವ ಜೀವನ......' ಎನ್ನುವ ಇನ್ನೊಂದು ಹಾಡು ಕೂಡ ಜನಮನವನ್ನು ಸೂರೆಗೊಂಡಿದೆ. 'ಬೇವು ಬೆಲ್ಲ' ಚಿತ್ರದ 'ಮನವೇನಾ ಹಾಡಿತು....', 'ನಗುತಿದೆ ಅನುರಾಗ......' ಈ ಮುಂತಾದ ಗೀತೆಗಳಿಗೆ ಪಿ. ಎಸ್. ದಿವಾಕರ ಸಂಗೀತ ನಿರ್ದೇಶನ ನೀಡಿದ್ದಾರೆ. ಇವೆಲ್ಲ ಕರೀಂಖಾನ ರಚಿಸಿದ ಉತ್ತಮ ಪ್ರೇಮಗೀತೆಗಳಾಗಿದ್ದು ಕರ್ನಾಟಕ ಸಂಗೀತರಸಿಕರ ಹೃದಯವನ್ನು ಸೂರೆಗೊಂಡಿವೆ. ಇಂಥ ಹಲವಾರು ಪ್ರೇಮಗೀತೆಗಳನ್ನು ರಚಿಸಿದ ಇವರು ಪ್ರಸಿದ್ಧರಾಗಿದ್ದಾರೆ.

ನಾಟಕಕಾರ ಕರೀಂಖಾನ್ :

ಪಾರ್ಸಿ ಕಂಪನಿಯ ಪ್ರಭಾವದಿಂದ ಹುಟ್ಟಿಕೊಂಡ ನಮ್ಮ ರಂಗಭೂಮಿ ಸಂಸ್ಕೃತ ನಾಟಕಗಳ ಸತ್ವವನ್ನು ಹೀರಿಕೊಂಡು, ಕನ್ನಡ ನೆಲದಲ್ಲಿ ಬೇರುಬಿಟ್ಟಿತು. ಅನಂತರ ಇಂಗ್ಲಿಷ್, ಮುಖ್ಯವಾಗಿ ಷೇಕ್ಸಪಿಯರನ ನಾಟಕಗಳನ್ನು ಕನ್ನಡದ ವಾತಾವರಣಕ್ಕೆ ಹೊಂದಿಕೊಳ್ಳುವಂತೆ ರೂಪಾಂತರಿಸಿ, ವರದಾಚಾರ್ಯರಂತಹ ಹಿರಿಯರು ಪ್ರಯೋಗಿಸಿದರು. ಗುಬ್ಬಿ ವೀರಣ್ಣನವರು, ಸುಬ್ಬಯ್ಯ ನಾಯ್ಡುರಂಥವರು ಕರೀಂಖಾನರಂಥ ನಾಟಕಕಾರರನ್ನು ಹುಡುಕಿ ಸ್ವತಂತ್ರ ನಾಟಕಗಳನ್ನು ಬರೆಯಿಸಿ, ಪ್ರಯೋಗಿಸಿದರು. ಆದರೆ ಮುಂದಿನ ತಲೆಮಾರಿನವರೆಗೆ ಹಿಂದಿನವರ ಹೆಜ್ಜೆ ಗುರುತುಗಳನ್ನು ಇಡದಿದ್ದರೆ ಇದರಿಂದ ನಷ್ಟವಾಗುವುದು ಮುಂದಿನ ತಲೆಮಾರಿನವರಿಗೆ; ಇದನ್ನು ತಪ್ಪಿಸುವುದಕ್ಕಾಗಿ ದಾಖಲೆಗಳನ್ನಿಡಬೇಕಾಗುತ್ತದೆ. ಆದರೆ ಅದರ ಬಗೆಗೆ ನಾವು ಗಮನಕೊಡದಿರುವುದು ವಿಷಾದಕರ.

ವೃತ್ತಿರಂಗಭೂಮಿಯವರು ಮತ್ತು ಹವ್ಯಾಸಿ ತಂಡಗಳವರು ಎಂದು ನಮ್ಮಲ್ಲಿ ನಾಟಕ ವಾಡುವವರನ್ನು ಎರಡು ಗುಂಪುಗಳಾಗಿ ವಿಂಗಡಿಸುವ ವಾಡಿಕೆ ಇದೆ. ನಾಟಕವನ್ನೇ ವೃತ್ತಿಯನ್ನಾಗಿ ಉಳ್ಳವರು ವೃತ್ತಿ ರಂಗಭೂಮಿಯವರು, ಎಂದರೆ ಅವರ ಬದುಕಿಗೂ ನಾಟಕವೇ ಆಧಾರ. ಖುಷಿಗಾಗಿ ನಾಟಕವಾಡುವವರು ಹವ್ಯಾಸಿ ರಂಗಭೂಮಿಯವರು, ಇವರೆಲ್ಲ ಬೇರೆ ಬೇರೆ ಕೆಲಸದವರಿರಬಹುದು. ಕರೀಂಖಾನರು ಹವ್ಯಾಸಿ ಮತ್ತು ವೃತ್ತಿ ರಂಗಭೂಮಿಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಕೆಲಸ ಮಾಡಿದರು. ಇವರು ವರ್ಷಕ್ಕೆ ಒಂದೋ ಎರಡೋ ನಾಟಕಗಳನ್ನು ಆಡಿ, ತೃಪ್ತರಾಗುತ್ತಿದ್ದ ಕಾಲವೂ ಇತ್ತು. ಅಷ್ಟೇ ಅಲ್ಲ ಒಳ್ಳೆಯ ನಾಟಕವನ್ನು ರಚಿಸುವ ನಾಟಕಕಾರರೂ ಆಗಿದ್ದರು.

''ನಾಟಕ ಒಂದು ಸಾಹಿತ್ಯ ಕೃತಿಯಾಗಿ ಪ್ರತಿಷ್ಠಿತವಾಗಿರುವುದು ಕನ್ನಡದಲ್ಲಿಯೇ ಎಂದು ಕಾಣುತ್ತದೆ. ನಮ್ಮಲ್ಲಿ ವ್ಯವಸಾಯ ರಂಗಭೂಮಿಗೆ ಬರೆದ ನಾಟಕಗಳು ಮತ್ತು ಸಾಹಿತ್ಯಿಕ ನಾಟಕಗಳು ತೀರಾ ಭಿನ್ನ ಸ್ವರೂಪದಲ್ಲಿ ಬೆಳೆದುಬಂದಿವೆ. ನಮ್ಮ ಸಾಹಿತ್ಯಿಕ ನಾಟಕಗಳು ಓದಿ ಸಂತೋಷಪಡಲು ಅತ್ಯಂತ ಯೋಗ್ಯವಾದ ಕೃತಿಯಾಗಿವೆ. ಅವುಗಳಲ್ಲಿ ಕೆಲವಾದರೂ ಶ್ರೇಷ್ಠಕೃತಿಗಳಾಗಿವೆ. ನಮ್ಮ ಹವ್ಯಾಸಿ ರಂಗಭೂಮಿಯ ಗುಂಪುಗಳು ಈ ನಾಟಕವನ್ನು ಕೆಲ ಸಾರೆ ಆಡಿಯೂ ತೋರಿಸಿವೆ. ನಮ್ಮ ವ್ಯಸಾಯ ರಂಗಭೂಮಿ ಪೌರಾಣಿಕ ನಾಟಕಗಳನ್ನು ಪ್ರದರ್ಶಿಸುವುದರಲ್ಲಿಯೇ ನಿಂತು ಬಿಟ್ಟಿತು.'' ಉಷಾ ಸ್ವಯಂವರ', 'ಶಾಕುಂತಲಾ', 'ಎಚ್ಚಮ್ಮ ನಾಯಕ' 'ಪಾದುಕಾಪಟ್ಟಾಭಿಷೇಕ', 'ಕುರುಕ್ಷೇತ್ರ' ಮೊದಲಾದ ನಾಟಕಗಳು ಜಯಭೇರಿಯನ್ನು ಹೊಡೆದವು. ಆದರೆ ಇವುಗಳಲ್ಲಿ ಒಂದೂ ಸಾಹಿತ್ಯ ಕೃತಿಯಾಗಿ ಉಳಿಯಲಿಲ್ಲ, ಜಾನಪದ ರಂಗಭೂಮಿ, ವ್ಯವಸಾಯ ರಂಗಭೂಮಿ ಮತ್ತು ಹವ್ಯಾಸಿ ರಂಗಭೂಮಿ ಹೀಗೆ ಕನ್ನಡ ರಂಗಭೂಮಿ ಮೂರಾಬಟ್ಟೆಯಾಗಿ ಹೋದುದಕ್ಕೆ ಕಾರಣ ಸಿಗುವುದು

ಕಷ್ಟಕರವಾದದ್ದು. ಕರೀಂಖಾನರಂಥ ನಾಟಕಕಾರರು ಒಳ್ಳೆಯ ನಾಟಕಗಳನ್ನು ರಚಿಸಿದರೂ ಅದನ್ನು ರಕ್ಷಿಸುವಂಥ ಗೊಡವೆಗೆ ಹೋಗದಿರುವುದು ವಿಷಾದದ ಸಂಗತಿ.

ಕರೀಂಖಾನರಿಗೆ ರಂಗಭೂಮಿಯಲ್ಲಿ ತೊಡಗಬೇಕು ಹೊಸ ಹೊಸ ಸಾಹಸ, ಹೊಸ ಹೊಸ ಪ್ರಯೋಗಗಳನ್ನು ಮಾಡಬೇಕೆಂಬ ತುಡಿತ ಬಾಲ್ಯದಿಂದಲೇ ಬಂದ ಬಳುವಳಿ. ಪ್ರಾಥಮಿಕ ಶಾಲೆಯಲ್ಲಿ ಓದುತ್ತಿರುವಾಗಲೇ ನಾಟಕ ಬರವಣಿಗೆ, ಅಭಿನಯವೆಂದರೆ ಮೊದಲ ಒಲವು. ಶಾಲಾ ದಿನಗಳಲ್ಲಿ ನಾಟಕದಲ್ಲಿ ಅಭಿನಯಿಸಿರುವ ವಿಷಯವನ್ನು ಹೇಳುತ್ತ ''ಶಾಲಾ ನಾಟಕದಲ್ಲಿ ಭಾಗವಹಿಸುತ್ತಿದ್ದೆ. ನನಗೆ ನೆನಪಿರುವ ನಾಟಕವೆಂದರೆ 'ಕೃಷ್ಣಲೀಲಾ' ಎಂಬುದು. ಅದರಲ್ಲಿ ಅಕ್ರೂರನ ಪಾತ್ರ ಅಭಿಯನಿಸಿದ್ದೆ. ಮಹಾಭಾರತದಲ್ಲಿ ಅಕ್ರೂರನ ಪಾತ್ರಕ್ಕೆ ವಿಶಿಷ್ಟ ಸ್ಥಾನವಿತ್ತು'' ಎನ್ನುವಲ್ಲಿ 'ಕೃಷ್ಣಲೀಲಾ' ಎಂಬ ನಾಟಕವೇ ಮುಂದೊಂದು ದಿನ ಇವರ ಉತ್ಕೃಷ್ಟ ರಚನೆಗೆ ಕಾರಣವಾಗಿ 'ಶ್ರೀಕೃಷ್ಣ ಲೀಲಾ' ಎಂಬ ಶೀರ್ಷಿಕೆಯಿಂದ ನಾಟಕ- ಚಲನಚಿತ್ರ ಕಥಾನಕ ಕೃತಿಯಾಗಿ ೩೦ ವರುಷಗಳ ಹಿಂದೆ ಬರೆದಿರುವ ನಾಟಕ ೧೯೯೭ರಲ್ಲಿ ಪ್ರಕಟಗೊಂಡಿರುವುದು ಸುದೈವವೇ ಸರಿ.

ಇವರು ಪ್ರಭುದ್ಧರಾದಂತೆ ''೧೯೪೯ರಲ್ಲಿ ಜಾನಪದ ಸಂಶೋಧಕರಾಗಿ ಕವಿ, ನಾಟಕಕಾರರಾಗಿದ್ದ ಇವರು ಪಟ್ಟಣದಲ್ಲಿ 'ಸಹೋದರ ಕಲಾ ಸಂಘ' ಮಂಡಳಿಯನ್ನು ಸ್ಥಾಪಿಸಿ, 'ಧರ್ಮರತ್ನಾಕರ', 'ದೇವದಾಸಿ', 'ಪುನರ್ಜನ್ಮ','ಹಿತೈಷಿ','ಬಹದ್ದೂರ ಗಂಡ' ಮುಂತಾದ ನಾಟಕಗಳನ್ನು ಪ್ರದರ್ಶಿಸುವದರ ಮೂಲಕ ಮೊದಲ ಹವ್ಯಾಸಿ ಕಲಾಸಂಘದ ಸ್ಥಾಪಕರೆನಿಸಿದರು ಎಂಬಲ್ಲಿ ಕರೀಂಖಾನರು ಆಂದಿನಿಂದಲೇ ರಂಗಕಲೆಯಲ್ಲಿ ಪರಿಣತಿ ಪಡೆದಿದ್ದರು ಎಂಬುದು ಸ್ಪಷ್ಟ. ''ನಾನು ಕಂಡಂತೆ ತಾಲೂಕಿನಲ್ಲಿ ಅರ್ಧಶತಮಾನದ ಹಿಂದಿನಿಂದಲೇ ರಂಗಭೂಮಿಯ ಇತಿಹಾಸವನ್ನು ತಿಳಿಯಬಹುದು. ಹವ್ಯಾಸಿಕಲಾ ಬಳಗಗಳು ಬಹುತೇಕ ಸಕಲೇಶಪುರ ನಗರದಲ್ಲಿಯೇ ರಂಗಚಟುವಟಿಕೆ, ಪ್ರದರ್ಶನಗಳಲ್ಲಿ ತೊಡಗಿದ್ದನ್ನು ಕಾಣುತ್ತೇವೆ.'' ರಂಗಚಟುವಟಿಕೆಗೆ ಸಾಂಸ್ಕೃತಿಕ ಕೇಂದ್ರವಾದ ಹಾಸನ ಜಿಲ್ಲೆಯ ಸಕಲೇಶಪುರ ತಾಲೂಕು ಕೊಟ್ಟ ಕಾಣಿಕೆ ಅಪಾರವಾದದ್ದು. ಇಲ್ಲಿಯೇ ಜನ್ಮವೆತ್ತಿದ ಕರೀಂಖಾನರು ರಂಗಚಟುವಟಿಕೆಯನ್ನು ಪ್ರಥಮದಲ್ಲಿ ಆರಂಭಿಸಿದ್ದು ಇಲ್ಲಿಯೇ ಎಂದರೆ ಸೋಜಿಗವಲ್ಲ."

''ಡಾ. ಕಾಳೇಗೌಡ ನಾಗವಾರ ಹೇಳುವಂತೆ ಕರೀಂಖಾನರು ಮೊದಲು ನಮ್ಮ ಹಳೆಯ ರಂಗಭೂಮಿ ಸಂಬಂಧ ಹೇರಳ ಅನುಭವ ಹೊಂದಿದ್ದು, ಇವರು ಹಲವಾರು ನಾಟಕಗಳನ್ನು ರಚಿಸಿ ನಿರ್ದೇಶಿಸಿದರು.'' ಇವರು ನಾಟಕ ರಚನೆ ಕೈ ಬಿಟ್ಟವರಲ್ಲ, ಪಾತ್ರ ಹಂಚಿಕೆಯಲ್ಲಿ, ನಾಟಕಕ್ಕೆ ಬೇಕಾಗುವ ಪೂರ್ವತಯಾರಿ ಮುಂತಾದವುಗಳನ್ನು ಪ್ರಜ್ಞಾಪೂರ್ವಕವಾಗಿ ಗಮನಿಸಿ ರಂಗದ ಮೇಲೆ ಪ್ರದರ್ಶನಗೊಳ್ಳುವುದರ ಜೊತೆಗೆ ಯಶಸ್ಸುಗೊಳಿಸುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದರು.

**ಕರೀಂಖಾನರ ಒಟ್ಟು ನಾಟಕಗಳು :**

ಹವ್ಯಾಸಿ ರಂಗಭೂಮಿಯಲ್ಲಷ್ಟೇ ಅಲ್ಲ, ವೃತ್ತಿರಂಗಭೂಮಿಯನ್ನೂ ಶ್ರೀಮಂತಗೊಳಿಸುವಲ್ಲಿ ನಾಟಕಕಾರ ಕರೀಂಖಾನರ ಪಾತ್ರ ಮಹತ್ವದ್ದು. ಹೊಸ ಜಾಡಿನಲ್ಲಿ ಶ್ರೇಷ್ಠ ನಾಟಕಗಳನ್ನು ಸೃಷ್ಟಿಸಿ ಕನ್ನಡ ವೃತ್ತಿರಂಗಭೂಮಿಗೆ ಹೊಸ ಆಯಾಮ ತಂದುಕೊಟ್ಟರು. ಇವರ ನಾಟಕಗಳೆಲ್ಲವನ್ನು ಕಲಾಭಿಮಾನಿಗಳು, ಕಲಾವಿಮರ್ಶಕರು ಮುಕ್ತಕಂಠದಿಂದ ಪ್ರಶಂಸಿಸಿದ್ದಾರೆ. ರಂಜನೆ ಮತ್ತು ಸಂದೇಶ ಇವರ ಬರವಣಿಗೆಯ ಉದ್ದೇಶವಾದ್ದರಿಂದ ಎಲ್ಲ ನಾಟಕಗಳೂ ಜನಸಾಮಾನ್ಯರನ್ನು ಸುಲಭವಾಗಿ

ತಲುಪಿವೆ. ಬಹುಮುಖ ಪ್ರತಿಭೆಯ ಕನ್ನಡ ಲೇಖಕನ ಮಾತೃಭಾಷೆ ಉರ್ದು, ಆದರೂ ಕನ್ನಡದ ಬಗ್ಗೆ ಅಪಾರ ಗೌರವ ತಾಳಿದುದರಿಂದ ರಾಮಾಯಣ, ಮಹಾಭಾರತ, ಪುರಾಣಗಳನ್ನು ಓದಿ ತಿಳಿದವರು. ಇವರು 'ಮಾಗಡಿ ಕೆಂಪೇಗೌಡ', 'ನಿರ್ದೋಷಿ', 'ಶ್ರೀಕೃಷ್ಣಲೀಲಾ', 'ಹುಮಾಯೂನ್', 'ಅಮರನಾಥ', ಮಧುಮೋಹನ' ಮತ್ತು 'ಬೆಂಗಳೂರು ಕೆಂಪೇಗೌಡ' ಮುಂತಾದ ನಾಟಕಗಳನ್ನು ರಚಿಸಿದರು. ಇವೆಲ್ಲ ಚಾರಿತ್ರಿಕ, ಸಾಮಾಜಿಕ, ಐತಿಹಾಸಿಕ ಮತ್ತು ಭಕ್ತಿಪ್ರಧಾನ ನಾಟಕಗಳನ್ನು ರಚಿಸಿರುವ ಇವರು ಬರೆದಿರುವ ಉಳಿದ ನಾಟಕಗಳು ಏನಾದವೆಂಬುದು ಅರಿವಿಗೆ ಬರುವುದಿಲ್ಲ.

''ಸುಬ್ಬಯ್ಯ ನಾಯ್ಡು ಅವರ 'ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಳಿ'ಗೆ ನಿರ್ದೋಷಿ ನಾಟಕ ಬರೆಯುವುದರೊಂದಿಗೆ ಹಲವಾರು ನಾಟಕಗಳ ಸಂಭಾಷಣೆ ರಚನೆ'' ಮಾಡಿ ಕೊಟ್ಟಿರುವ ಸಂಗತಿಯನ್ನು ಸುಧಾ ಪತ್ರಿಕೆ ಪ್ರಕಟಿಸಿತು. 'ನಿರ್ದೋಷಿ' ನಾಟಕ ಸುಮಾರು ನೂರು ಪ್ರದರ್ಶನ ಕಂಡಿರುವುದನ್ನು ಕರೀಂಖಾನರು ನೆನೆಯುತ್ತಾರೆ. ಈ ನಾಟಕ ಹಾಸ್ಯಪ್ರಧಾನವಾಗಿ ಮೇಲ್ನೋಟಕ್ಕೆ ಕಂಡರೂ ಇದರ ಒಳಾರ್ಥದಲ್ಲಿ ವಾಸ್ತವಿಕ ಸಂಗತಿಯ ಮರ್ಮವಿದೆ. ನಿರ್ದೋಷಿಯನ್ನು ಜೈಲಿಗೆ ತಳ್ಳಿದರೆ ಆತನ ಜೈಲುಶಿಕ್ಷೆಯ ಅವಧಿಯ ನಂತರ ತನ್ನ ಮನೆಗೆ ಹೋದರೆ ಎಲ್ಲರೂ ಅವನನ್ನು ಅಪರಾಧಿಯಂತೆ ಕಾಣುತ್ತಾರೆ. ಇಂಥ ಸ್ಥಿತಿಯಲ್ಲಿ ಆತನಿಗೆ ಸಮಾಜದಲ್ಲಿ ಗೌರವ ಕೂಡಾ ಕಡಿಮೆಯಾಗುತ್ತದೆ. ಬದುಕೇ ಕಷ್ಟವಾಗುತ್ತದೆ. ಎಷ್ಟೋ ವರ್ಷಗಳ ಕಾಲ ಅಪರಾಧಿ ಎಂಬ ಪಟ್ಟದಿಂದ ನೊಂದ ಮನಕ್ಕೆ ಮತ್ತೆ ಹೊಸ ಬದುಕು ಸಾಗಿಸುವ ಸಂಕಷ್ಟ ಪ್ರಾಪ್ತವಾದಾಗ ಕಂಗೆಡುವುದು ಸಹಜ. ನಿಷ್ಠುರವಾದ ನಮ್ಮ ವ್ಯವಸ್ಥೆಯಲ್ಲಿ ಅಪರಾಧಿ ಶಿಕ್ಷೆ ಅನುಭವಿಸದೇ ಕೆಲವೊಮ್ಮೆ ನಿರಪರಾಧಿ ಶಿಕ್ಷೆ ಅನುಭವಿಸಬೇಕಾಗುತ್ತದೆ ಎಂಬ ತಮ್ಮ ಮನದಾಳದ ಸಂಕಟವನ್ನು ತಮ್ಮ ಪ್ರಬುದ್ಧವಾದ ಭಾಷಾ ಶೈಲಿಯಿಂದ ಪ್ರಕಟಿಸಿರುವುದು ಮೆಚ್ಚುವಂಥದ್ದು.

ನಾಟಕದ ಗೀಳಿರುವ ಕರೀಂಖಾನರಿಗೆ 'ಆನೆ ನಡೆದದ್ದೇ ದಾರಿ' ಎನ್ನುವಂತೆ ತಾನೆಷ್ಟು ನಾಟಕಗಳನ್ನು ಬರೆದೆ, ಎಷ್ಟು ಉಳಿದವು, ಎಷ್ಟು ಪ್ರದರ್ಶನಗೊಂಡವು ಎಂಬುದು ಅರಿವಿಗೆ ಬರುವುದಿಲ್ಲ. ಅವರ ಸಂದರ್ಶನದ ವೇಳೆಯಲ್ಲಿ ''ನಾನು ಸುಮಾರು ಎಂಬತ್ತಕ್ಕೂ ಹೆಚ್ಚು ಕಂಪನಿ ನಾಟಕಗಳನ್ನು ಬರೆದಿದ್ದೇನೆ. ಆದರೆ ಅದರಿಂದ ಕೆಲವು ನಾಟಕಗಳನ್ನು ಹೊರತುಪಡಿಸಿದರೆ ಪುಡಿಗಾಸೂ ಬಂದಿಲ್ಲ'' ಎಂಬಲ್ಲಿ ಕರೀಂಖಾನರನ್ನು ಎಲ್ಲ ರಂಗದಲ್ಲೂ ಯೋಗ್ಯ ಸಂಭಾವನೆ ನೀಡದೆ, ಬಳಸಿಕೊಂಡಿದ್ದೇ ಹೆಚ್ಚು ಎಂಬುದು ವ್ಯಕ್ತವಾಗುತ್ತದೆ.

ಕರೀಂಖಾನರು ಗುಬ್ಬಿ ವೀರಣ್ಣನವರಿಗೆ 'ಹುಮಾಯೂನ್' ಎಂಬ ಐತಿಹಾಸಿಕ ನಾಟಕವನ್ನೂ ಹಾಗೂ ಇನ್ನೊಂದು ಸಾಮಾಜಿಕ ನಾಟಕವನ್ನು ಬರೆದುಕೊಟ್ಟಿರುವುದನ್ನು ನೆನೆಯುತ್ತಾರೆ. ನಾಟಕ ಬರೆಯಿಸಿಕೊಂಡು ಕಾಸುಕೊಡದೇ ಇರುವವರ ಸಂಖ್ಯೆಯೇ ಬಹಳವಿರುವಾಗ ಸಹಜವಾಗಿಯೇ ಕರೀಂಖಾನರಂಥ ಮುಗ್ಧರು ಶೋಷಣೆಗೊಳಗಾದರು. ಇವರ ಅಂತರ್‌ಶಕ್ತಿಯ ಕುಲುಮೆಯಲ್ಲಿ ಅರಳುಗಟ್ಟಿದ್ದ ಸತ್ವಯುತ ಬರಹಗಳು ಬರವಣಿಗೆಯ ರೂಪದಲ್ಲಿ ಬರಲೇ ಇಲ್ಲ. ರಚಿಸಿದಂತಹ ಅದೆಷ್ಟೋ ನಾಟಕಗಳು ಬೆಳಕಿಗೆ ಬರಲೇ ಇಲ್ಲ. ಉತ್ಕೃಷ್ಟ ನಾಟಕಗಳನ್ನು ರಚಿಸಿದರೂ ಅವೆಲ್ಲ ಹಸ್ತಪ್ರತಿಯಲ್ಲಿ ಉಳಿದು ಹೋಗಿರುವುದು ಸತ್ಯ. ಅಲ್ಲದೆ ನಾಟಕ ನಡೆಯುವ ದಿನಗಳಲ್ಲಿ ಹಸ್ತಪ್ರತಿಗಳು ನಟರ ಮಾಲಕರ ಕೈಯಲ್ಲಿ ಸಿಕ್ಕು ಜೀರ್ಣವಾಗಿ ಹೋಗಿರಬೇಕು. ಇವರು ಬರೆದಿರುವ ಬಹುತೇಕ ನಾಟಕಗಳನ್ನು ವ್ಯವಸ್ಥಿತವಾಗಿ ಇಡುವ ಗೋಜಿಗೆ ಹೋಗಲೇ ಇಲ್ಲ. ಇವರು ನಿಂತಲ್ಲಿ ನಿಲ್ಲದಿರುವ ಸ್ವಭಾವವು ಇದಕ್ಕೆ ಕಾರಣವಾಗಿವೆ. ನಾಟಕಕಾರನ ಪ್ರತಿಷ್ಠೆ ಕುರಿತು ಹೇಳಬೇಕಾದರೆ ಆತನು ಕೆಲಸ

ಮಾಡಿದ ಕ್ಷೇತ್ರದಲ್ಲಿ ಆಧಾರಗಳಿರಬೇಕಾಗುತ್ತದೆ. ಕರೀಂಖಾನರ ಉಪಲಬ್ಧವಿರುವ ಸಾಹಿತ್ಯ ಕೃತಿಗಳನ್ನು ಅವಲೋಕಿಸಿದರೆ ಇವರು ಕೂಡಾ ಮೊದಲ ದರ್ಜೆಯ ಲೇಖಕರ ಪಂಕ್ತಿಯಲ್ಲಿ ಬರುವುದರಲ್ಲಿ ಯಾವುದೇ ಸಂದೇಹವಿಲ್ಲ. ಆದರೆ ಇವರ ಉದಾಸೀನದ ವರ್ತನೆಯಿಂದಲೂ ಕನ್ನಡ ನಾಡು ನಾಟಕ ಕ್ಷೇತ್ರದಲ್ಲಿ ಹಾಗೂ ರಂಗಭೂಮಿಯಲ್ಲಿ ತುಂಬಲಾರದ ನಷ್ಟವನ್ನು ಅನುಭವಿಸುವಂತಾಯಿತು. ಅಷ್ಟೇ ಅಲ್ಲ ಜಾತಿ. ಧರ್ಮದ ಕಾರಣಕ್ಕಾಗಿಯೂ ಈ ಲೇಖಕನ ಶ್ರೇಷ್ಠ ಕೃತಿಗಳು ಮಣ್ಣುಪಾಲಾಗಿರುವ ಸಾಧ್ಯತೆಗಳನ್ನು ದೂರತಳ್ಳುವಂತಿಲ್ಲ.

ಕರೀಂಖಾನರ ಜೀವನ ಮತ್ತು ಸಾಹಿತ್ಯ ಕುರಿತು ಅಭ್ಯಾಸಕ್ಕೆ ತೊಡಗಿದ್ದ ಸಮಯಕ್ಕಾಗಲೇ ಕರೀಂಖಾನರು ನೂರರ ಗಡಿಯ ಸಮೀಪ ಬಂದಿದ್ದರು. ಇವರ ಬರವಣಿಗೆಯ ಕುರಿತಾಗಿ ವಿಚಾರಿಸಲಾಗಿ ಅವರ ನೆನಪಿನಂಗಳದಿಂದ ಹೊರಬಂದಿರುವ ಹಾಗೂ ಕೆಲವು ಆಧಾರಗಳಿಂದ ಕೆಲವು ನಾಟಕಗಳ ವಿಚಾರಗಳು ಲಭ್ಯವಾಗುತ್ತವೆ. ಬೆಂಗಳೂರು ಕೆಂಪೇಗೌಡ (ನಾ), ಮಹಾಪ್ರಭುಮಾಗಡಿ ಕೆಂಪೇಗೌಡ (ನಾ), ನಿರ್ದೋಷಿ (ನಾ), ಶ್ರೀ ಕೃಷ್ಣಲೀಲಾ (ನಾ), ಮಾಲತಿ ಮಾಧವ (ನಾ), ಹುಮಾಯೂನ (ಐತಿಹಾಸಿಕ), ಅಂಬರನಾಥ (ಐತಿಹಾಸಿಕ) ಲೈಲಾಮಜ್ನು (ನಾ) ಮತ್ತು ಇವರು ಬರೆದ ಕೋಮುಸೌಹಾರ್ದಕ್ಕೆ ಸಂಬಂಧಪಟ್ಟ ನಾಟಕ, ಹೀಗೆ ಹತ್ತು ಹಲವು ನಾಟಕ ರಚನೆಗೊಂಡರೂ ಅವೆಲ್ಲವೂ ಪ್ರಕಟಗೊಂಡಿಲ್ಲವೆಂಬುದು ವಿಷಾದದ ಸಂಗತಿ. ಈಗ ಉಪಲಬ್ಧವಿರುವ ನಾಟಕವೆಂದರೆ 'ಶ್ರೀಕೃಷ್ಣ ಲೀಲಾ' ಮತ್ತು 'ಮಾಗಡಿ ಕೆಂಪೇಗೌಡ ಸೌರಭ' ಈ ಮಾಗಡಿ ಕೆಂಪೇಗೌಡರ ಸೌರಭ ಎಂಬ ಹೊತ್ತಿಗೆಯು ಕೆಂಪೇಗೌಡ ವಂಶಸ್ಥರ ಲಾವಣಿ, 'ಬೆಂಗಳೂರು ನಿರ್ಮಾಪಕ 'ಮಾಗಡಿ ಕೆಂಪೇಗೌಡ' ನಾಟಕದ ಹಾಡುಗಳು, 'ಮಹಾಪ್ರಭು ಮಾಗಡಿ ಕೆಂಪೇಗೌಡ' ನಾಟಕದ ಹಾಡುಗಳು ಮಾತ್ರ ಲಭ್ಯವಾಗುತ್ತವೆ. ಕೆಂಪೇಗೌಡರ ವಂಶಾವಳಿಯ ಕುರಿತ ಗದ್ಯರೂಪದ ನಾಟಕವು ನಮಗೆ ಉಪಲಬ್ಧವಾಗುವುದಿಲ್ಲ. ಅಂದು ಕರೀಂಖಾನರು ಬರೆದ ಹಸ್ತಪ್ರತಿಗಳನ್ನು ಜೋಪಾನ ಮಾಡುವ ಅಚ್ಚುಗೊಳಿಸುವ ಕಾರ್ಯಗಳು ನಡೆದಿದ್ದರೆ ಕನ್ನಡದಲ್ಲಿ ಕರೀಂಖಾನರಷ್ಟು ನಾಟಕವನ್ನು ಬರೆದವರು ಸಿಗುತ್ತಿದ್ದರೋ ಇಲ್ಲವೋ ಎಂಬ ಸಂಶಯ ಬಾರದಿರದು.

**ಮಾಗಡಿ ಕೆಂಪೇಗೌಡ ಸೌರಭ :**

ಈ ಹೊತ್ತಿಗೆಯ ಒಳಪುಟದಲ್ಲಿ

I. ಕೆಂಪೇಗೌಡ ವಂಶಸ್ಥರ ಲಾವಣಿ

II. ಬೆಂಗಳೂರು ನಿರ್ಮಾಪಕ ಕೆಂಪೇಗೌಡರ ನಾಟಕ ಗೀತೆ ಮಾಲಿಕೆ.

III. ಮಹಾಪ್ರಭು ಕೆಂಪೇಗೌಡರ ನಾಟಕ ಗೀತ ಮಾಲಿಕೆ ವಿವರಗಳು ದೊರೆಯುತ್ತವೆ. ಈ ನಾಟಕ ಬರೆಯುವುದಕ್ಕೆ ಕಾರಣವನ್ನು ಕರೀಂಖಾನರು ನೀಡುವ ವಿವರವು ಬೇರೆಯದೇ ಆಗಿರುತ್ತದೆ. ಬಿ.ವಿ.ಲಕ್ಷ್ಮಣ, ಬದ್ರಾವತಿ ಕಲಾವಿದ ಮಾಗಡಿ ಜಾತ್ರೆಗೆ ಬಂದು ಮಾಗಡಿ ವಿಚಾರವಾಗಿ ಲಾವಣಿಗಳ ಮೂಲಕ ವಿಚಾರಗಳನ್ನು ಸಂಗ್ರಹಿಸುತ್ತಾರೆ. ಒಂದುವರೆ ಘಂಟೆ ಅವಧಿಗೆ ಕೆಂಪೇಗೌಡ ನಾಟಕವನ್ನು ರಚಿಸಿ ಪ್ರದರ್ಶನ ನಡೆಸುತ್ತಾನೆ. ಆ ನಾಟಕ ಇವರಿಗೆ ತೃಪ್ತಿಯಾಗದ ಕಾರಣ ಲೇಖಕರನ್ನು ಹುಡುಕಿಕೊಂಡು ಹೊರಟಾಗ ಖ್ಯಾತ ನಾಟಕಕಾರ ಎಸ್.ಕೆ. ಕರೀಂಖಾನ್‌ರ ಪರಿಚಯವಾಯಿತು. ''ಅವರು ನನ್ನ ನಾಟಕವನ್ನು ಪರಿಷ್ಕರಿಸಿ, 'ಮಹಾಪ್ರಭು ಮಾಗಡಿ ಕೆಂಪೇಗೌಡ' ಎಂಬ ನಾಟಕವನ್ನು ರಚಿಸಿ ರಂಗದ ಮೇಲೆ ತರಲು ಮಾರ್ಗದರ್ಶನವನ್ನು ನೀಡಿದರು. ಈ ನಾಟಕವನ್ನು ಮಂಡ್ಯದಲ್ಲಿ

೨೫ ಪ್ರದರ್ಶನಗಳನ್ನು ನಡೆಸಿ ಬೆಳ್ಳಿ ಮಹೋತ್ಸವವನ್ನು ಆಚರಿಸಿದೆವು. ಬೆಂಗಳೂರು 'ವರದಾಚಾರ್ಯ ಮೆಮೋರಿಯಲ ಹಾಲ್'ನಲ್ಲಿ ೧೦೦ನೇ ಪ್ರದರ್ಶನ ನಡೆಸಿದವು'' ಎಂದು ಬಿ.ವಿ.ಲಕ್ಷ್ಮಣ ಹೇಳಿರುವ ಮಾತಿನಿಂದ ಕರೀಂಖಾನರು ಮಹಾಪ್ರಭು ಮಾಗಡಿ ಕೆಂಪೇಗೌಡ ನಾಟಕವನ್ನು ತಮ್ಮ ನಾಟಕರಚನಾ ಕೌಶಲ್ಯದಿಂದ ಮೂರು ಘಂಟೆಗೆ ಹಿಗ್ಗಿಸಿ ಕೊಟ್ಟ ನಾಟಕದ ಶ್ರೇಯಸ್ಸಿಗೆ ಕಾರಣವಾಗಿರುವ ವಿಚಾರ ತಿಳಿಯುತ್ತದೆ.

ಬಿ.ವಿ.ಲಕ್ಷ್ಮಣ ಅವರಿಗೆ ನಾಟಕ ಬರೆದುಕೊಟ್ಟ ವಿಚಾರ ತಿಳಿದಿದ್ದ ಖಾನರು ''ಅವರಿಗೆ ನಾಟಕ ಸಮಾಧಾನ ತರಲಿಲ್ಲ ನನ್ನನ್ನು ಹುಡುಕಿಕೊಂಡು ಬಂದರು, ನಾನು ಮೂರುವರೆ ಘಂಟೆಗೆ ವಿಸ್ತರಿಸಿಕೊಟ್ಟೆ ಪ್ರದರ್ಶನ ಯಶಸ್ವಿಯಾಯಿತು'' ಎನ್ನುವ ಕರೀಂಖಾನರ ನುಡಿಯಲ್ಲಿ ಅಂದಿನ ದಿನಗಳಲ್ಲಿ ಶ್ರೇಷ್ಠ ನಾಟಕಕಾರರ ಗುಂಪಿನಿಂದಲೇ ಬಂದವರೆಂಬುದು ಸಾಬೀತಾಗುತ್ತದೆ. ''ನನ್ನಿಂದಲೇ 'ಬೆಂಗಳೂರು ಕೆಂಪೆಗೌಡ' ನಾಟಕವನ್ನು ಬರೆಸಿ ಯಶಸ್ವಿ ಪ್ರದರ್ಶನಗಳನ್ನು ನಡೆಸಿದರು. ಇಂಜಿನಿಯರ್ ಗಂಗಸ್ವಾಮಿಯವರ ನೆರವಿನಿಂದ ನನ್ನಿಂದಲೇ ಕೆಂಪೇಗೌಡರ ವಂಶಾವಳಿಯ ಲಾವಣಿಯನ್ನು ಬರೆಸಿ ಕ್ಯಾಸೆಟ್ ತಯಾರಿಸಿದರು.'' ಕರೀಂಖಾನರ ಸಾಹಿತ್ಯ ಪರಿಣಿತಿಯ ಸ್ವರೂಪವನ್ನು ಇಲ್ಲಿ ಗಮನಿಸಬಹುದು, ಉತ್ಕೃಷ್ಟ ಲಾವಣಿ ಬರೆಯುವಲ್ಲೂ ಇವರ ಪಾಂಡಿತ್ಯ ಮೆಚ್ಚುವಂಥದ್ದು, ಅದರಂತೆ, ಮಹಾಮಾನವತಾವಾದಿ ನಾಟಕಕಾರ ಕರೀಂಖಾನರವರ ನೆರವಿನಿಂದ ಬಿ.ವಿ.ಲಕ್ಷ್ಮಣ್ ''ಮಹಾಪ್ರಭು ಮಾಗಡಿ ಕೆಂಪೇಗೌಡ'' ನಾಟಕವನ್ನು ಬರೆಯಿಸಿರುವುದು ಕೂಡಾ ಭಾವೈಕ್ಯತೆಯ ಶುಭ್ರ ಸಂಕೇತವಾಗಿದೆ. ಹೀಗೆ ಕರೀಂಖಾನರ ನಾಟ್ಯ ಸೃಷ್ಟಿಯ ಬೀಜಗಳನ್ನು ಅವರ ವಿದ್ಯಾರ್ಥಿ ದೆಸೆಯಿಂದಲೇ ಗುರುತಿಸುತ್ತೇವೆ. ಅವರ ನಾಟಕದ ಆವರಣಗಳೆಲ್ಲ ಸಾಮಾಜಿಕ ಸ್ವರೂಪ ತಾಳಿ ತಂತ್ರಕಲಾ ಕೌಶಲ್ಯದಿಂದ ನಾಟಕವಾಗಿ ಅರಳಿವೆ.

'ಕೆಂಪೇಗೌಡ ವಂಶಸ್ಥರ ಲಾವಣಿ' ಎಂಬ ಪರಿವಿಡಿಯ ಶೀರ್ಷಿಕೆ ಕರೀಂಖಾನರು ಮೊದಲಿನಿಂದಲೂ ಲಾವಣಿ ರಚಿಸುವುದರಲ್ಲಿ ಪ್ರಾವೀಣ್ಯ ಪಡೆದಿರುವದನ್ನು ಎನ್ನುವುದನ್ನು ವ್ಯಕ್ತಪಡಿಸುತ್ತದೆ. ''ದೇಶದ್ ಮೇಲೊಂದ್ ಐತೆ ದೇಶ ನಮ್ಮ ಭಾರತ ದೇಶ......'' ಹೀಗೆ ಆರಂಭವಾಗುವ ಗೀತೆ ಬೆಂಗಳೂರನ್ನು ನಿರ್ಮಾಣ ಮಾಡಿದ ಕೆಂಪೇಗೌಡರ ವಂಶದ ಲಾವಣಿಯನ್ನು ಸೃಷ್ಟಿಸಿ ಹೇಳುವ ಕರೀಂಖಾನರ ಕೌಶಲ್ಯವನ್ನು ಇಲ್ಲಿ ಗಮನಿಸಬಹುದು. ಭಾರತದ ಅಷ್ಟೇ ಅಲ್ಲ, ಪ್ರಪಂಚದ ಅರಿವಿನ ಜ್ಞಾನವಿರುವ ಕರೀಂಖಾನರಿಗೆ ಪೌರಾಣಿಕ ಐತಿಹಾಸಿಕ, ಸಾಮಾಜಿಕ ವಿಚಾರದಲ್ಲೂ ಅನನ್ಯ ಅನುಭವ, ಕೆಲವು ಸಮಯ ಅವರೊಡನೆ ಮಾತಿಗೆ ಕುಳಿತುಕೊಂಡರೆ, ಕೆಲವೇ ಕ್ಷಣದಲ್ಲಿ ಇಡೀ ಪ್ರಪಂಚವನ್ನು ಸುತ್ತಿಸಿ ಬಿಡುತ್ತಾರೆ. ಅವರು ತಮ್ಮ ನೂರನೇ ವಯಸ್ಸಿನಲ್ಲೂ ಕೆಲವೇ ಕ್ಷಣದಲ್ಲಿ ಹೇಳುವ ಲೋಕಾನುಭವವನ್ನು ಒಟ್ಟುಗೂಡಿಸಿದರೆ, ದಿನಕ್ಕೊಂದು ಗ್ರಂಥ ರಚಿಸುವಷ್ಟು ವಿಸ್ತಾರವಾದ ಜ್ಞಾನ ಸಂಪತ್ತು ಅವರ ಸುಪ್ತ ಮನದಲ್ಲಿ ಶೇಖರಿಸಲ್ಪಟ್ಟಿದೆ. ಅಂತರ್ಗತವಾದ ಆ ಜ್ಞಾನದ ವಿಷಯವು ಹೊರಬರಲಾರದಷ್ಟು ಅವರಿಗೆ ವಯಸ್ಸಾಗಿದೆ. ಇವರ ಈ ಲಾವಣಿಯಲ್ಲಿ ಭಾರತಮಾತೆಯ ಕುವರಿಯಾದ ಕರ್ನಾಟಕದ ಸಿರಿಯನ್ನು ಬಣ್ಣಿಸುವಲ್ಲಿ ಲಾವಣಿಕಾರ ಹಿಂದೆ ಬೀಳುವುದಿಲ್ಲ. ಈ ನಾಡಿನಲ್ಲಿ ಬಾಳಿದ ಕೆಂಪೇಗೌಡರು ಸುಭಟರು ಹಾಗೂ ಅತುಲಪರಾಕ್ರಮಿಗಳಾಗಿದ್ದರು ಎನ್ನುವುದನ್ನು ವಿವರಿಸುತ್ತ, ಈ ನಾಡಿನ ಮಣ್ಣಿನ ಮಕ್ಕಳು ವೀರರೂ, ಶೂರರು ಎನ್ನುವುದನ್ನು ಅರಿವಿಗೆ ತರುತ್ತಾರೆ.

ಬೆಂಗಳೂರು ನಿರ್ಮಾಪಕ ಮಾಗಡಿ ಕೆಂಪೇಗೌಡ ನಾಟಕದ ಹಾಡುಗಳು

ಪ್ರಾರ್ಥನೆಯೊಂದಿಗೆ ಆರಂಭವಾಗುತ್ತವೆ ಹೊಸಗನ್ನಡದಲ್ಲಿ ಗೀತೆ ಬರೆಯುವ ಕೌಶಲ್ಯ ಹೊಂದಿರುವ ಕರೀಂಖಾನರಿಗೆ ಅಸಾಧ್ಯವಾದುದೇನಿಲ್ಲ.

ಜಯ ಕನ್ನಡ ನಾಟಕ ಲಕ್ಷ್ಮೀ/ಸಿರಗನ್ನಡ ನಾಟಕ ಲಕ್ಷ್ಮೀ ॥
ಬೆಳಗಲಿ ನಿನ್ನ ಪ್ರಭಾಮಯ ರಶ್ಮಿ। ಕನ್ನಡ ನಾಟಕ ಲಕ್ಷ್ಮೀ ॥
ವಿದ್ಯಾನಂದಿನಿ। ಕಾವ್ಯ ತರಂಗಿಣಿ

ನವರಸಗಳಿಂದಾದಿಯಾಗಿ ಸಕಲ ವಿಷಯಗಳೂ ಕೇಂದ್ರೀಕರಿಸಿರುವ ಈ ನಾಟಕದಲ್ಲಿ ಸರಸ ಸಾಹಿತ್ಯವೆಲ್ಲ ಮಡುಗಟ್ಟಿನಿಂತಿದೆ. ಈ ಕೃತಿಯಲ್ಲಿ ನಾಟಕದ ಹಾಡುಗಳನ್ನು ಮಾತ್ರ ಪ್ರಕಟಿಸಲಾಗಿದೆ. ದೃಶ್ಯ-೧೩. ರಲ್ಲಿ ಬರುವ ಹರಿಯನ್ನು ನೆನೆಯುವ ಒಂದು ಹಾಡು ಹೀಗಿದೆ.

ಶ್ರೀ ಹರಿ ಗೋವಿಂದಾ। ಮುಕುಂದ ಮಾಧವಾ
ಗೋವಿಂದ ಕೇಶವಾ ಶ್ರೀ ॥
ಶಂಕದಲಿ ಬಂದು ನೀನು ॥ ಕಾಯ್ದೆ ಪ್ರಹ್ಲಾದನಾ

ಸಂಕಟದಲ್ಲಿ ಸಿಕ್ಕಿರುವ ಭಕ್ತರ ಕೂಗುಕೇಳಿ ಅವರನ್ನು ದುಃಖದಿಂದ ಪಾರುಮಾಡುವ ಮುಕುಂದನು ದಯಾಸಾಗರನು, ಭಕ್ತ ಪ್ರಹ್ಲಾದನಿಗೆ ದರ್ಶನ ನೀಡಿ ದಾನವನನ್ನು ಕೊಂದು ಭಕ್ತಿಯ ಪ್ರಭಾವ ತಿಳಿಸಿರುವ ಶ್ರೀ ಹರಿಯ ಗೀತೆ ಬರೆಯುವ ಶೈಲಿಯು ಅತ್ಯುತ್ಕೃಷ್ಟವಾದುದು. 'ಹರ'ನಿರಲಿ ಅಥವಾ 'ಹರಿ'ಯಿರಲಿ, ಇಲ್ಲವೇ 'ಅಲ್ಲಾ' ನಿರಲಿ ದೈವವನ್ನು ಬಣ್ಣಿಸುವಲ್ಲಿ ಕರೀಂಖಾನರನ್ನು ಮೀರಿಸಿದವರಿಲ್ಲವೆಂದೇ ಹೇಳಬಹುದು. ಹೀಗೆ ಕರೀಂಖಾನರು ಬೆಂಗಳೂರು ಕೆಂಪೇಗೌಡರ ವಂಶಾವಳಿಯನ್ನು ಲಾವಣಿಯಲ್ಲಿ ಹೇಳುವಾಗ ಜನಮನದ ಹೃದಯ ಗೆದ್ದರು. 'ಮಹಾಪ್ರಭು ಮಾಗಡಿ ಕೆಂಪೇಗೌಡ' ನಾಟಕದ ವಸ್ತು ಐತಿಹಾಸಿಕವಾದರೂ ಅದನ್ನು ಸಾಮಾಜಿಕ ಕಥೆಯಾಗಿ ಕಾಣುವಂತೆ ಪರಿವರ್ತಿಸಿದ್ದಾರೆ, ಸಮಾಜದ ಬಡವರ, ದಲಿತರ ಶೋಷಣೆ, ಅವರ ಮೇಲಿನ ದಬ್ಬಾಳಿಕೆ ಅನ್ಯಾಯಗಳನ್ನರಿತು ತಮ್ಮ ಚಿಂತನೆಯನ್ನು ಇಲ್ಲಿನ ಪಾತ್ರ ಸನ್ನಿವೇಶಗಳ ಮೂಲಕ ಕರೀಂಖಾನರು ಅಭಿವ್ಯಕ್ತಿಸಿದ್ದಾರೆ. ಸಾಮಾಜಿಕ ವಿವರಗಳಿಂದ ಹಾಗೂ ತಮ್ಮ ಪ್ರಭಾವಶಾಲಿಯಾದ ಅನುಭವದ ಮೂಲಕ ಸಮಾಜಕ್ಕೆ ಸಂದೇಶ ಕೊಡುವ ಇವರ ಅಭಿವ್ಯಕ್ತಿಯ ಶೈಲಿ ಶ್ರೇಷ್ಠಮಟ್ಟದ್ದು.

**ಶ್ರೀ ಕೃಷ್ಣಲೀಲಾ :**

'ಶ್ರೀ ಕೃಷ್ಣಲೀಲಾ' ಕರೀಂಖಾನರು ಬಹು ಪ್ರೀತಿಯಿಂದ ಬರೆದ ನಾಟಕ. ಈ ಮುಪ್ಪಿನಲ್ಲಿ ಕನ್ನಡದಲ್ಲಿ ಬರೆಯಬೇಕೆನ್ನುವ ಅವರ ಆಸೆ ನಮಗೆಲ್ಲ ಸಂತೋಷವನ್ನುಂಟು ಮಾಡುವಂಥ ಸಂಗತಿ. ಈ ಕೃತಿಯನ್ನು 'ನಾಟಕ'ವೆಂದು ಏಕಮುಖವಾಗಿ ವಿಚಾರಿಸುವದಕ್ಕಿಂತ ನೂರು ದೃಶ್ಯಗಳ ನಾಟಕ ಚಲನಚಿತ್ರ ಕಥಾನಕವೆಂದು ಕರೆಯುವುದು ಸೂಕ್ತ. ಸಿನಿಮಾ ಸಂಭಾಷಣೆಯನ್ನು ಸಂಯೋಜಿಸುವಲ್ಲಿ ಪ್ರಾವೀಣ್ಯತೆ ಪಡೆದಿರುವ ಕರೀಂಖಾನರ ಈ ನಾಟಕವು ಸಿನಿಮೀಯ ರೀತಿಯಲ್ಲೇ ಪ್ರಕಟಗೊಂಡಿದೆ. ಮದ್ರಾಸನಲ್ಲಿದ್ದಾಗಲೇ ನಿರ್ದೇಶಕ ಕಾಮೇಶ್ವರರಾವ್ ಅವರಿಗಾಗಿ ಬಹಳ ವರ್ಷಗಳ ಹಿಂದೆಯೇ ಕರೀಂಖಾನರು 'ಶ್ರೀ ಕೃಷ್ಣಾ ಲೀಲಾ' ಚಿತ್ರ ಕಥೆ-ಸಂಭಾಷಣೆ, ಹಾಡುಗಳನ್ನು ಹಸ್ತ ಪ್ರತಿರೂಪದಲ್ಲಿ ಬರೆದಿಟ್ಟಿದ್ದರು, ಆದರೆ ಕಾರಣಾಂತರಗಳಿಂದ ಚಿತ್ರ ತಯಾರಾಗಲಿಲ್ಲ, ನಂತರ 'ನಾಟಕ'ವಾಗಿ ಪ್ರಕಟಿಸಿದರು.

ಕನ್ನಡದ ಹೆಸರಾಂತ ಲೇಖಕರಾದ ಪ್ರೊ. ಎಲ್. ಎಸ್. ಶೇಷಗಿರಿರಾವ್ ಮುನ್ನುಡಿ ಬರೆದಿರುವ ಶ್ರೀ ಕರೀಂಖಾನ ವಿರಚಿತ 'ಶ್ರೀ ಕೃಷ್ಣ ಲೀಲಾ' (ನಾಟಕ-ಚಲನಚಿತ್ರ ಕಥಾನಕ) ಎಂಬ ನಾಮಾಂಕಿತ ದಿಂದಲೇ ಪ್ರಕಟಗೊಂಡಿದೆ. ಪ್ರೊ. ಎಲ್. ಎಸ್. ಶೇಷಗಿರಿರಾವ್ ಮುನ್ನುಡಿಯಲ್ಲಿ ಹೇಳುವಂತೆ ''ಈ ಕೃತಿಗೆ ಮುನ್ನುಡಿ ಬರೆಯಲು ಹೇಳಿದ್ದು ನನಗೆ ಗೌರವ ತಂದಿದೆ. ಆದರೆ ಈ ನಾಡಿನಲ್ಲಿ ಇವರ ಪುಸ್ತಕಕ್ಕೆ ಯಾರ ಮುನ್ನುಡಿಯೂ ಅಗತ್ಯವಿಲ್ಲ'' ಎಂದಿರುವ ಮಾತಿನಿಂದ ಕರೀಂಖಾನರು ಅಪಾರವಾದ ವಿದ್ವತ್ತನ್ನು ಪಡೆದಿರುವ ಸಂಗತಿ ಪ್ರಕಟವಾಗುತ್ತದೆ. ಶ್ರೀ ಕೃಷ್ಣ ಭಾರತದ ಅತ್ಯಂತ ಪ್ರಸಿದ್ಧ ಪೌರಾಣಿಕ ವ್ಯಕ್ತಿಗಳಲ್ಲಿ ಒಬ್ಬ. ವಿದೇಶಗಳವರ ಕಲ್ಪನೆಯ ಮೆಚ್ಚುಗೆಯನ್ನು ಕುತೂಹಲವನ್ನು ಗೆದ್ದುಕೊಂಡ ಪೌರಾಣಿಕ ವ್ಯಕ್ತಿ, ಆತನನ್ನು ಹಲವು ದೃಷ್ಟಿಗಳಿಂದ ನೋಡಬಹುದು. ಒಬ್ಬ ಅಸಾಧಾರಣ ಪುರುಷನಾಗಿ ರಾಜನೀತಿ ವಿಶಾರದನಾಗಿ, ದೇವರ ಅವತಾರವಾಗಿ ಭಾಗವತದ ಕೃಷ್ಣ ಮಹಾಭಾರತದ ಕೃಷ್ಣನಿಂದ ಸಾಕಷ್ಟು ಭಿನ್ನನಾದವನು. ಮಹಾಭಾರತದಲ್ಲಿ ಆತನು ಮುಖ್ಯವಾಗಿ ಅಸದೃಶ ರಾಜನೀತಿ ವಿಶಾರದ ಜೊತೆಗೆ ಅವತಾರ ಪುರುಷ, ಭಗವದ್ಗೀತೆಯ ಕೃಷ್ಣಯೋಗೀಶ್ವರ, ಭಾಗವತದ ಕೃಷ್ಣಲೀಲಾ ಮನೋಹರನಾದ ಅವತಾರ ಪುರುಷ. ಶ್ರೀ ಕರೀಂಖಾನರು ಇಲ್ಲಿ ಕೃಷ್ಣನನ್ನು ಶ್ರೀಮನ್ನಾರಾಯಣನ ಅವತಾರ ಎಂದೇ ಕಂಡಿದ್ದಾರೆ. ನಾಟಕದ ಶೀರ್ಷಿಕೆಯೂ ಈ ಅವತಾರ ಪುರುಷನ 'ಲೀಲೆ'ಗೆ ಒತ್ತು ಕೊಡುತ್ತದೆ. ಭಕ್ತಿಯೇ ಇಲ್ಲಿ ಕೇಂದ್ರಭಾವ, ಇಡೀ ನಾಟಕವನ್ನು ಓದಿದ ಅಥವಾ ನೋಡಿದ ನಂತರ ಉಳಿಯುವ ಪಾತ್ರ ಶ್ರೀಕೃಷ್ಣನೊಬ್ಬನೇ.

ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟರು ಹೇಳುವಂತೆ ''ಶ್ರೀ ಕೃಷ್ಣ ಲೀಲಾ'' ನಾಟಕವು ನಮ್ಮ ಪ್ರಾಚೀನ ಮಹಾಕಾವ್ಯ ಪುರಾಣಗಳ ಬಗ್ಗೆ ಅವರಿಗಿರುವ ಗಾಢವಾದ, ತಳಸ್ಪರ್ಶಿಯಾದ, ಖಚಿತವಾದ ಜ್ಞಾನವನ್ನು ಸೂಚಿಸುತ್ತದೆ. ಭಾಗವತ ಪುರಾಣಕಾವ್ಯದ ದಶಮಸ್ಕಂದದಲ್ಲಿ ಪರಿಣಾಮಕಾರಿಯಾಗಿ, ನಾಟಕೀಯವಾಗಿ, ಘಟನಾತ್ಮಕವಾಗಿ ಸೆರೆಹಿಡಿದಿದ್ದಾರೆ. ಪುರಾಣ ವೃತ್ತಾಂತಗಳನ್ನು ನೇರವಾದ ನಾಟಕರೂಪದಲ್ಲಿ ಮಂಡಿಸುವುದು ಒಂದು ಬಗೆ. ಇದು ನಮ್ಮ ಹಿಂದಿನ ನಾಟಕ ಕಂಪನಿಗಳು ಬಳಸುತ್ತಿದ್ದ ನಾಟಕಗಳ ರೀತಿ, ಆ ವೃತ್ತಾಂತಗಳನ್ನು ಇಂದಿನ ಬದುಕಿಗೆ ತಳುಕು ಬೀಳುವಂತೆ ಬದಲಿಸಿಕೊಂಡು ಪ್ರತೀಕಾತ್ಮಕವಾಗಿ ಬಳಸಿ ನಾಟಕ ರಚಿಸುವುದು ಇನ್ನೊಂದು ಬಗೆ. ಕರೀಂಖಾನರು ಸನಾತನ ಧರ್ಮದ ಮೂಲ ಆಕಾರಗಳೆನ್ನಬಹುದಾದ ವೈದಿಕ ಕೃತಿಗಳನ್ನು ಎಷ್ಟು ಶ್ರದ್ಧೆ, ಪ್ರೀತಿ, ಗೌರವಗಳಿಂದ ಆಳವಾಗಿ ಅಧ್ಯಯನ ಮಾಡಿದ್ದಾರೆ ಎನ್ನುವುದಕ್ಕೆ ಈ ಕೃತಿ ಒಂದು ಸಾಕ್ಷಿ'' ಎನ್ನುವ ಮಾತು ಕಥೆ ಪ್ರಾಚೀನ ಮಹಾಕಾವ್ಯ ಪುರಾಣಗಳದ್ದಾದರೂ ಮೂಲಕಥೆಗೆ ಎಳ್ಳಷ್ಟು ಭಂಗಬಾರದಂತೆ, ಇದೇನು ಕರೀಂಖಾನರ ಸ್ವತಂತ್ರ ಕೃತಿಯೋ ಎನ್ನುವಷ್ಟರ ಮಟ್ಟಿಗೆ ಕೃತಿಯ ಒಳನೋಟವನ್ನೆಲ್ಲ ಗ್ರಹಿಸಿ, ಓದುಗನ ಮನಸೂರೆಗೊಳ್ಳುವಂತ ಕೃತಿ ರಚಿಸಿರುವ ಸಂಗತಿ ವಿಶೇಷವಾದದ್ದು. ಕೊನೆಗೂ ದುಷ್ಟಶಕ್ತಿಯು ನಶಿಸಿ ಶಿಷ್ಟಶಕ್ತಿಯು ಸದಾ ಕಾಲ ಉಳಿಯುತ್ತದೆ ಎಂಬ ನೀತಿ ಇಲ್ಲಿ ಪ್ರಕಟಗೊಂಡಿದೆ.

ಕರೀಂಖಾನರ ಈ ಪೌರಾಣಿಕ ನಾಟಕವು ವೈವಿಧ್ಯಮಯ ಸಂಗತಿಯಿಂದ ಕೂಡಿರುವ ನಾಟಕ-ಚಲನಚಿತ್ರ ಕಥಾನಕವಾಗಿದೆ. ''ಹೇ! ಪರಮ ಪಾವನನಾದ ಸನಾತನ! ಸೃಷ್ಟಿ ಸ್ಥಿತಿ, ಲಯತ್ರಯಗಳಿಂದ ಜಗನ್ನಾಟಕದ ಸೂತ್ರಧಾರಿತ್ವವನ್ನು ನಿರ್ವಹಿಸಿ ಮೆರೆಯುತ್ತಿರುವ ಪುರಾತನ! ನೀನು ಅನಂತ ರೂಪಧಾರನು। ನಿರ್ಲಿಪ್ತನು। ನಿರಜ್ಞನು.। ನಿರಾಕುಲನು। ನಿರಾವಿಲನು। ನಿನ್ನ

ಪುಣ್ಯೋದಯದಿಂದ ಲೋಕದಲ್ಲಿ ಧರ್ಮೋದಯವಾಗಲಿ। ಲೋಕಕಂಟಕರಾದ ರಾಕ್ಷಸರು ನಿರ್ನಾಮಗೊಂಡು ಜಗತ್ತಿನಲ್ಲಿ ಶಾಂತಿ, ಸುಖ, ಸಂಮೋದಗಳು ಮೂಡಲಿ।'' ಎನ್ನುವ ಮಾತಲ್ಲಿ ಭಗವಂತನ ಕೃಪಾಕಟಾಕ್ಷದಿಂದ ಈ ಜಗದ ನಿಯಮಗಳೆಲ್ಲ ನಡೆಯುತ್ತವೆ. ದುಷ್ಟ ಶಕ್ತಿಯ ಮರ್ದನಕ್ಕಾಗಿ ಭಗವಂತ ಅವತರಿಸಿಬರುತ್ತಾನೆಂಬ ಓದುಗರ ಮನಸೆಳೆಯುವ ಭಾಷಾ ಪ್ರೌಢಿಮೆಯಿಂದ ನಾಟಕವನ್ನು ರಚಿಸಿರುವುದು ತಿಳಿಯುತ್ತದೆ.

ಬಾಲಕೃಷ್ಣನು ಕೊಳಲೂದುವ ಮುಖಪುಟ ಹೊಂದಿರುವ ಈ ಪುಸ್ತಕವು ೯೬ ಪುಟಗಳನ್ನು ಹೊಂದಿದ್ದು ಈ ಕೃತಿಯನ್ನು ಪ್ರಕಟಿಸುವುದು ಡಾ. ಎಸ್. ಕೆ. ಕರೀಂಖಾನ್‌ರವರ ಬಹುದಿನಗಳ ಆಸೆಯಾಗಿತ್ತು. ಇದನ್ನು ಆದರ್ಶ ಸುಗಮ ಸಂಗೀತ ಅಕಾಡೆಮಿ, ಬೆಂಗಳೂರು ಅಧ್ಯಕ್ಷರು ಕೃಷ್ಣಮೂರ್ತಿ ಕಿಕ್ಕೇರಿಯವರು ಮನಸ್ಸು ಮಾಡಿ ಪ್ರಕಟಿಸಲು ಶ್ರಮಿಸಿರುವುದನ್ನು ಇಲ್ಲಿ ನೆನೆಯಬೇಕು.

**ಅನುವಾದ ಕಥೆಗಳು :**

ಕನ್ನಡ ಸಾರಸ್ವತ ಲೋಕದಲ್ಲಿ ಕರೀಂಖಾನರ ಸೇವೆ ಅಮೂಲ್ಯವಾದದ್ದು, ಆಧುನಿಕ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಇವರು ಬಹುಮುಖ ಪ್ರತಿಭೆಯುಳ್ಳವರು. ಪ್ರತಿಭಾವಂತ ಲೇಖಕರಾದ ಇವರು ಅನುವಾದಕಾರರಾಗಿ ತಮ್ಮನ್ನು ತೊಡಗಿಸಿಕೊಂಡರು. ವ್ಯಕ್ತಿ ತನ್ನ ಜೀವಿತದ ಅವಧಿಯಲ್ಲಿ ಇಷ್ಟೆಲ್ಲವನ್ನು ಸಾಧಿಸಲು ಸಾಧ್ಯವೇ ? ಎಂದು ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವಂತೆ ಮಾಡಿರುವ ಇವರ ಸಾಧನೆ ಇವರ ವ್ಯಕ್ತಿತ್ವದಷ್ಟೇ ಮಹತ್ವವಾದದ್ದು.

ಕರೀಂಖಾನರು ಹೆಚ್ಚು ಕಥೆಗಳನ್ನು ಬರೆದಿಲ್ಲ, ಆದರೆ ಉರ್ದು ಭಾಷೆಯ ಉತ್ತಮ ಕಥೆಗಳನ್ನು ಕನ್ನಡ ಭಾಷೆಗೆ ಅನುವಾದಿಸಿದ್ದಾರೆ. ಅವರು ಅನುವಾದಿಸಿದ ಕಥಾಸಂಕಲನ 'ನೀವಾರ' ಹಾಗೂ 'ನೀಹಾರ' ನೀವಾರ ಕಥಾ ಸಂಕಲನದಲ್ಲಿ ವಿಶ್ವವಿಖ್ಯಾತ ಸಾಹಿತಿಗಳ ಉರ್ದುಕಥೆಗಾರರ ಆರು ಕಥೆಗಳನ್ನು ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಿದರು. ಇದು ಉತ್ತಮ ಅನುವಾದ ಕಥಾ ಸಂಕಲನವೆಂದು ಪ್ರಸಿದ್ಧಿ ಪಡೆಯಿತು.

**ನೀವಾರ :**

ನೀವಾರ ಇದು ಕರೀಂಖಾನರು ಉರ್ದು ಸಾಹಿತ್ಯದಿಂದ ಕನ್ನಡಕ್ಕೆ ಅನುವಾದಿಸಿದ ಕಥಾ ಸಂಕಲನ. ಈ ಕಥಾ ಸಂಕಲವನ್ನು ತಮ್ಮನ್ನು ವಿದ್ಯಾಭ್ಯಾಸಕ್ಕೆ ಪ್ರೇರೇಪಿಸಿದ ಗುರು ಆಚಂಗಿ ನಾರಾಯಣ ಶಾಸ್ತ್ರಿಗಳಿಗೆ ಅರ್ಪಣೆ ಮಾಡಿದ್ದಾರೆ. 'ನೀವಾರ' ಕಥಾ ಸಂಗ್ರಹದ, 'ನನ್ನನುಡಿ' ಯಲ್ಲಿ ಕರೀಂಖಾನರು ಹೇಳಿರುವ ಮಾತುಗಳು ಹೀಗಿವೆ; 'ಉರ್ದು ನೀಳ್ಗತೆಗಳಿಗೆ ಕನ್ನಡದ ಹೊದಿಕೆಯನ್ನು ಹೊದಿಸಿದ್ದೇನೆ, ಈ ಚಿಕ್ಕ ಹೊತ್ತಿಗೆಯಲ್ಲಿ ಜೋಡಿಸಿದ್ದೇನೆ. ಕನ್ನಡ ಸಾಹಿತ್ಯ ಜಗತ್ತಿನಲಿ ಇಂತಹ ಕತೆಗಳಿಗೆ ಅಭಾವವಿಲ್ಲ, ಕನ್ನಡ ಸಾಹಿತ್ಯಕ್ಕೆ ಉಪಕಾರವೆಸಗಬೇಕೆಂಬ ಉತ್ಕಟೇಚ್ಛೆಯಿಂದ ನಾನು ಈ ಕತೆಗಳನ್ನು ಹೆಣೆಯಲಿಲ್ಲ, ಅನೇಕ ವರ್ಷಗಳ ಹಿಂದೆ ಮನವು ಗಾಳಿಯ ಪೊರೆಯಂತೆ ಹಗುರವಾಗಿದ್ದಾಗ, ಗರುಡನ ಮರಿಯಂತೆ ಭಾವನಾ ಪ್ರಪಂಚದಲ್ಲಿ ವಿಹರಿಸಲು ಹವಣಿಸುತ್ತಿದ್ದಾಗ, ದುರ್ದೈವದ ವಿಹತಿಗೆ ಸಿಕ್ಕ ದೇಹವು ಇನ್ನೂ ಬಸವಳಿಯದೆ ಮೀನಿನ ಮರಿಯಂತೆ ಚುರುಕಾಗಿದ್ದಾಗ ನಿರುದ್ಯೋಗದ ಅನಿಷ್ಟ ವೈಧವ್ಯದುಸ್ತಮದಿಂದ ಪಾರಾಗಲು ಸಾಹಿತ್ಯ ದೀಕ್ಷೆಗೆ ಶರಣು ಹೋದೆನು. ಅಪರಿಪೂರ್ಣ ಭಾಷಾಜ್ಞಾನ ಹಾಗೂ ಪರಿಮಿತ ಬುದ್ಧಿ ಶಕ್ತಿಯಿಂದಲೇ ಸುಪ್ರಸಿದ್ಧ ಉರ್ದು ಸಾಹಿತಿಗಳಾದ ಸೈಯದ್ ನಸೀರ್, ಇಮಾಂ ನಸೀರ್ ಜೈದಿಯವರ 'ಸ್ವಾಭಿಮಾನ', ಅಸ್ಗರ್ ಸಾಹೇಬ್', ಪ್ರೇಮಿಯವರ

'ಸವತಿ', ಅನಾಮಕರವರ 'ಪೀರು', ಸುದರ್ಶನ್‌ರವರ 'ಅಂಧಕಾರ', ಸಾದಿಯಿಲ್ ಖೈರಿಯವರ 'ನಾಸ್ತಿಕ' 'ಅಜೀಜ್ ಮಸ್‌ವೂದಿಯವರ 'ಸರ್ಜು'ವನ್ನು ಅನುವಾದಿಸಿದೆನು'' ಎನ್ನುವಲ್ಲಿ ಕರೀಂಖಾನರು ಉರ್ದು ಕವಿಗಳಿಗೆ ತಮ್ಮ ಆದರದ ಗೌರವ ನೀಡಿ, ಕನ್ನಡ ಓದುವ ಬಳಗಕ್ಕೆ ತಮ್ಮ ಕೊಡುಗೆಯನ್ನು ನೀಡಿದರು. ನೀಹಾರ ಎಂಬ ಕರೀಂಖಾನರ ಕಥಾ ಸಂಕಲನ ಉಪಲಬ್ಧವಿಲ್ಲ

## ಕಾದಂಬರಿ

ಸಾಹಿತ್ಯವು ಸಮಾಜದ ಪ್ರತಿಬಿಂಬ, ಸಾಮಾಜಿಕ ಆಗುಹೋಗುಗಳನ್ನು ಹಲವಾರು ಸಾಹಿತ್ಯ ಪ್ರಕಾರಗಳಾದ ಕಥೆ ಕಾದಂಬರಿ, ನಾಟಕ, ಗೀತೆ, ಪ್ರವಾಸ ಪ್ರಬಂಧ, ವಿಡಂಬನೆ, ಹಾಸ್ಯ ಮುಂತಾದ ಪ್ರಕಾರಗಳಿಂದ ಸಾಹಿತಿಯಾದವನು ಪ್ರತಿಬಿಂಬಿಸುತ್ತಾನೆ. ಸಾಹಿತ್ಯ ಪ್ರಕಾರಗಳಲ್ಲಿ ಜನರ ಮನಸ್ಸಿನ ಮೇಲೆ ಗಾಢವಾದ ಪ್ರಭಾವವನ್ನು ಬೀರುವ ಸಾಹಿತ್ಯವೆಂದರೆ ಕಾದಂಬರಿ. ಕಾದಂಬರಿ ಜನತೆಯ ನಡೆ-ನುಡಿಗಳನ್ನು, ಸಮಾಜದ ಪರಿಳಿತಗಳನ್ನು ವ್ಯಕ್ತಿಗಳ ಮನೋಭಾವನೆಗಳನ್ನು ಪರಿಣಾಮಕಾರಿಯಾಗಿ ಬಿಂಬಿಸುವ ಒಂದು ಮಾಧ್ಯಮ.

ಹೊಸಗನ್ನಡದಲ್ಲಿ ಪದ್ಯ, ಗದ್ಯ, ಕೃಷಿಯನ್ನು ಮಾಡಿದ ಮಹನೀಯರಲ್ಲಿ ಎಸ್. ಕೆ. ಕರೀಂಖಾನರವರು ಅಗ್ರಗಣ್ಯರು. ಇವರು ಪದ್ಯ ಗದ್ಯದ ಹಲವು ಪ್ರಕಾರಗಳಲ್ಲಿ ಕೃಷಿ ಮಾಡಿದರು. ಪದ್ಯ, ಗದ್ಯದ ಸಾಧ್ಯತೆಗಳನ್ನು ಇವರು ಬಹುಬೇಗ ಅರಿತುಕೊಂಡರು. ಪೌರಾಣಿಕವಾಗಲಿ, ಐತಿಹಾಸಿಕವಾಗಲಿ ಮತ್ತು ಸಾಮಾಜಿಕವಾಗಲಿ, ಕನ್ನಡ ಕಾದಂಬರಿಗಳನ್ನು ಬರೆಯುವಲ್ಲಿ ಇವರು ಸಿದ್ಧಹಸ್ತರು. ಕನ್ನಡ ಕಾದಂಬರಿಗಳ ಇತಿಹಾಸದಲ್ಲಿ ಕರೀಂಖಾನರ ಕಾದಂಬರಿಗಳಿಗೆ ಮಹತ್ವದ ಸ್ಥಾನವಿದೆ. ಆಗ ಕಾದಂಬರಿಯ ಪ್ರಕಾರ ಕನ್ನಡಕ್ಕೆ ಹೊಸದಾಗಿದ್ದ ಕಾಲ. ಅಲ್ಲದೇ ಆ ಪ್ರಕಾರ ಕನ್ನಡ ಜಾಯಮಾನಕ್ಕೆ ಒಗ್ಗೀತೇ ? ಎಂಬ ಸಂಶಯವು ಪೂರ್ಣ ಬಗೆಹರಿದಿರಲಿಲ್ಲ, ಅಂತಹ ಹೊತ್ತಿನಲ್ಲಿ ಇವರು ತಮ್ಮ ಕಾದಂಬರಿಗಳ ಮೂಲಕ ಕನ್ನಡ ಕಾದಂಬರಿಗೆ ಸುಭದ್ರವಾದ ಅಡಿಪಾಯವನ್ನು ಹಾಕಿದರು. ಗದ್ಯಪ್ರಕಾರದಲ್ಲಿ ಇವರು ಹಲವು ರಚನೆಗಳನ್ನು ಆ ವೇಳೆಗೆ ಪೂರೈಸಿದ್ದು, ತಮ್ಮ ಆಯಸ್ಸಿನನಲ್ವತ್ತೈದು ವರ್ಷಗಳ ನಂತರ ಕಾದಂಬರಿಗಳ ರಚನೆಗೆ ಕೈ ಹಾಕಿದರು. ಪ್ರಯೋಗವನ್ನು ತೃಪ್ತಿಕರವಾಗಿ ನೆರವೇರಿಸಿದರು.

ಕರೀಂಖಾನರು ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ನವೀನ ಪ್ರಯೋಗಗಳನ್ನು ನಡೆಸಿದರು. ಆದರೆ ಯಾವುದರಲ್ಲೂ ಸ್ಥಿರವಾಗಿ ನಿಲ್ಲಲಿಲ್ಲ. ವಸ್ತು ವೈವಿಧ್ಯದಿಂದ ಮಾಂತ್ರಿಕ ಶೈಲಿಯ ಮೋಡಿಯಿಂದ ಒಂದು ಪೀಳಿಗೆಯ ಬರಹಗಾರರ ಮೇಲೆ ಅಚ್ಚಳಿಯದ ಪ್ರಭಾವವನ್ನು ಬೀರಿದರು. ನಾಲ್ಕು ಮತ್ತು ಐದನೆಯ ದಶಕದಲ್ಲಿ ಕಾದಂಬರಿಯನ್ನು ಪ್ರಮುಖ ಅಭಿವ್ಯಕ್ತಿ ಪ್ರಕಾರವಾಗಿ ರೂಪಿಸಿದರು. ಇವರ ಕಾದಂಬರಿಗಳಲ್ಲಿ ಮುಖ್ಯವಾಗಿ ಮಾನವೀಯ ಧೋರಣೆಯನ್ನು ಸಾಮಾನ್ಯನಿಗೆ ಬದುಕಿನಲ್ಲಿ ಘನತೆಯನ್ನು ತಂದುಕೊಡುವ ಪ್ರಯತ್ನ ಮಾಡಿದರು.

ಇವರ ಮಹತ್ವದ ಕಾದಂಬರಿಗಳೆಂದರೆ –
ಬಲಿದಾನೀ ಹುಸೇನ್ (ಚಾರಿತ್ರಿಕ ಕಾದಂಬರಿ)
ಮುಷಿರಾ (ಸಾಮಾಜಿಕ ಕಾದಂಬರಿ, ಅನುಪಲಬ್ಧ)
ಮಾತೃ ಶಾಪ (ಪೌರಾಣಿಕ ಕಾದಂಬರಿ, ಅನುಪಲಬ್ಧ)

'ಮಾತೃಶಾಪ' ಎಂಬ ಪೌರಾಣಿಕ ಕಾದಂಬರಿಯನ್ನು ರಚಿಸಿದ್ದಾಗಿ ಸ್ವತಃ ಕರೀಂಖಾನರೇ ಹೇಳಿರುವರು. ಅದು ಜನಮೇಜಯರಾಯನ ಸರ್ಪಯಾಗವನ್ನು ಕುರಿತ ಕಾದಂಬರಿಯಾಗಿತ್ತಂತೆ, ಆದರೆ ಅದು ಉಪಲಬ್ಧವಿಲ್ಲ.

## ಬಲಿದಾನೀ ಹುಸೇನ್

ಕರೀಂಖಾನರ ಲೇಖನಿಯಿಂದ ಮೂಡಿಬಂದಿರುವ 'ಬಲಿದಾನೀ ಹುಸೇನ್' ಒಂದು ಮಹತ್ವಪೂರ್ಣ ಚಾರಿತ್ರಿಕ ಕಾದಂಬರಿ. ಈ ಕಾದಂಬರಿಯಲ್ಲಿ ಪೈಗಂಬರ್ ವಂಶಸ್ಥರು ಅಳಿದ ಬಗೆಯನ್ನು ನಿರೂಪಿಸಲಾಗಿದೆ. ಭ್ರಾತೃಭಾವದಿಂದಿರಬೇಕೆಂಬ ಮೊಹಮ್ಮದ್ ಪೈಗಂಬರ್‌ರವರ ಹಿತವಚನವು ಸ್ಮೃತಿಪಥದಿಂದ ಅಳಿಸಿಹೋಗಿ, ಷಿಯಾಸುನ್ನಿ ಒಳಭೇದವು ಆವಿರ್ಭವಿಸಿ, ಇಸ್ಲಾಮಿನ ಏಕತ್ರಿಕ ಶಕ್ತಿಯನ್ನು ವಿದೀರ್ಣಗೊಳಿಸಿತು. ಮೊಹಮ್ಮದ್ ಪೈಗಂಬರ್ ರವರ ಕಾಲಾನಂತರವೂ ಬನೀ ಹಾಷಿಮ್, ಬನೀ ಉಮ್ಮಿಯ ಭಿನ್ನ ಭಾವವು ನಶಿಸದೆ, ಇಸ್ಲಾಮಿನ ಧವಳ ಕೀರ್ತಿಯ ಮೇಲೆ ಪ್ರಹಾರವನ್ನಿಕ್ಕಿ ಧಾರ್ಮಿಕ ರಕ್ಷಣೆಗೆ ಅಡಚಣೆಯನ್ನುಂಟು ಮಾಡಿತು ಎನ್ನುವದನ್ನು ಈ ಕಥೆಯಲ್ಲಿ ಕಾಣಬಹುದು.

ಧರ್ಮಸಂಸ್ಥಾಪನಾರ್ಥವಾಗಿ ದೇವಪ್ರತಿನಿಧಿಗಳು ಈ ಜಗತ್ತಿನಲ್ಲಿ ಅವತರಿಸುವರು. ಅವರು ಗುಂಪಿನಲ್ಲಿ ಮಾನವರೊಡನೆಯೇ ಹುಟ್ಟಿಬೆಳೆದವರು. ದೇಶವು ಬಲಿಷ್ಟವಾಗಬೇಕೆಂದರೆ ಶಾಂತಿಯು ನೆಲೆಗೊಳ್ಳಬೇಕಾದರೆ ಪ್ರಜೆಗಳ ಅಭ್ಯುದಯ ಸಾಧಿಸಲ್ಪಡಬೇಕಾದರೆ, ಪ್ರಜಾಪ್ರಭುತ್ವವು ಸ್ಥಾಪಿಸಲ್ಪಡಬೇಕು ಎನ್ನುವ ಉದ್ದೇಶದಿಂದ ಮೊಹಮ್ಮದ ಪೈಗಂಬರ್ ಅವರು ಪ್ರಜಾಪ್ರಭುತ್ವವನ್ನು ಸ್ಥಾಪಿಸಿದರು. ಜಗತ್ಕಲ್ಯಾಣದ ಕಾರ್ಯದಲ್ಲಿ ತೊಡಗಿದವರಿಗೆ ಕಷ್ಟವು ಪ್ರಾಪ್ತವಾಯಿತೆನ್ನುವುದನ್ನು ಕಾದಂಬರಿಯಲ್ಲಿ ಪ್ರಸ್ಥಾಪಿಸಲಾಗಿದೆ. ಸತ್ಯ, ಧರ್ಮ. ನ್ಯಾಯ, ನೀತಿಗಳು ಚಿರಕಾಲವಿರಬೇಕಾದರೆ, ಸತ್ಯವಂತರು, ನೀತಿವಂತರು, ಬಲಿದಾನ, ತ್ಯಾಗಗಳಿಗೆ ಸಿದ್ಧರಾಗಿರಬೇಕಾದುದನ್ನು ಈ ಕಾದಂಬರಿಯಲ್ಲಿ ವಿವರಿಸಲಾಗಿದೆ.

ಬಲಿದಾನೀ ಹುಸೇನ್ ಕಾದಂಬರಿ ೧೬೪ ಪುಟಗಳನ್ನೊಳಗೊಂಡಿದ್ದು, ೧೯೫೫ರಲ್ಲಿ ಪ್ರಕಟಗೊಂಡಿದೆ. ವೈಷಮ್ಯಾಂಕುರ, ಧರ್ಮಸಾಮ್ರಾಜ್ಯ, ಇಸ್ಲಾಮಿನ ಅದೃಷ್ಟ ಪತನ, ಇಸ್ಲಾಮಿನ ತೀವ್ರ ಪ್ರಭೇಧ, ದೇಶಭಕ್ತ ಹುಸೇನ್, ಬಲಿದಾನೀ ಮುಸ್ಲಿಂ, ಹೃದಯದಾರ ಪ್ರಸಕ್ತಿ, ಇಮಾಂ ಹುಸೇನರ ಪ್ರಯಾಣ, ಹೃದಯ ಕಂಪಿತ ಕರ್ಬಲ, ರಣರಂಗ, ಸ್ವಾತಂತ್ರ್ಯ ಸಮರ, ನಯನಭೀಕರ ಕರ್ಬಲ, ಬಲಿದಾನೀ ಹುಸೇನ್ ಹೀಗೆ ಈ ಕಾದಂಬರಿಯು ೧೩ ಅಧ್ಯಾಯಗಳನ್ನೊಳಗೊಂಡಿದೆ.

ಕಾದಂಬರಿಯು ಕರೀಂಖಾನರ ಇತಿಹಾಸ ಘಟನೆಗಳ ಬಗ್ಗೆ ಹೊಂದಿರುವ ದೃಷ್ಟಿಕೋನ, ಅವರ ರಾಜಕೀಯ ಪ್ರಜ್ಞೆ, ಸ್ವಾಭಿಮಾನ ಮತ್ತು ದೇಶಾಭಿಮಾನದ ನಿಲುವು ಹಾಗೂ ಅವರ ಅಪೂರ್ವ ಭಾಷಾ ಪಾಂಡಿತ್ಯಕ್ಕೆ ನಿದರ್ಶನವೆನ್ನಬಹುದಾದ ಕೃತಿಯಾಗಿದೆ. ಈ ಕೃತಿಯ ಉದ್ದೇಶವನ್ನು ಕುರಿತು ತಮ್ಮ ಆತ್ಮನಿವೇದನೆಯಲ್ಲಿ ಕರೀಂಖಾನರು ಹೇಳುವ ಮಾತುಗಳಿವು-"ಮಾನವನ ನೈತಿಕ ಅವನತಿಯ ಚಿತ್ರವೊಂದನ್ನು ಇಸ್ಲಾಮಿನ ಇತಿಹಾಸದಿಂದ ಆಯ್ದು ಈ ಚಿಕ್ಕ ಹೊತ್ತಿಗೆಯಲ್ಲಿ ಅಂಕಿಸಿರುತ್ತೇನೆ, ಇದು ರಾಜಕೀಯ ಚಿತ್ರಣವೇ ಹೊರತು ಮತೀಯ ಪ್ರತಿಪಾದನೆಯಲ್ಲ" ಎನ್ನುವ ಮಾತು ಇವರಿಗಿರುವ ಐತಿಹಾಸಿಕ ಪ್ರಜ್ಞೆಯನ್ನು ಸ್ಪಷ್ಟಪಡಿಸುತ್ತದೆ. ಈ ಕಥಾನಕವು ಅರಬ್ಬೀ ದೇಶದ ಘಟನೆಯೊಂದನ್ನು ಚಿತ್ರಿಸುತ್ತಿದೆಯಾದರೂ ಸ್ವಾತಂತ್ರ್ಯಾನಂತರದ ಭಾರತಕ್ಕೂ ಪರಾಮರ್ಶೆ ರೂಪಿನಲ್ಲಿದೆ. ಅಧಿಕಾರ ಲಾಲಸೆಯುಳ್ಳವನು ಹೇಗೆ ಸತ್ಯ, ಧರ್ಮ, ನೀತಿ, ನ್ಯಾಯದ ಸುಂದರೋದ್ಯಾನದಲ್ಲಿ ಕಾಡ್ಗಿಚ್ಚಿನಂತೆ

ಉದ್ಭವಿಸುತ್ತಾನೆ! ಸಮಾಜದ ಮನೋಜ್ಞ ಮಂದಿರದಲ್ಲಿ ಮಧುರಲಾಸ್ಯವೆಸಗುತ್ತಿರುವ ಶಾಂತಿಯನ್ನು ಹೇಗೆ ಕಬಳಿಸುತ್ತಾನೆ ! ಹೇಗೆ ರಾಷ್ಟ್ರದ ಸರ್ವನಾಶಕ್ಕೆ ಕಾರಣನಾಗುತ್ತಾನೆ ! ಎನ್ನುವುದನ್ನು ಸವಿಸ್ತಾರವಾಗಿ ಈ ಕೃತಿಯಲ್ಲಿ ಸೂಚಿಸಲಾಗಿದೆ.

ಇಲ್ಲಿನ ಕಥೆ ಮಹಮ್ಮದ್ ಪೈಗಂಬರ್ ಅವರ ಪಿತರಾದ ಅಬ್ದುಲ್ಲಾರವರ ಪ್ರಪಿತಾಮಹ : ಅಬ್ದುಲ್ ಮುನಿಫರ್ ತಲೆಮಾರಿನಿಂದಾರಂಭಿಸಿ ಕರ್ಬಲದಲ್ಲಿ ಮೊಹಮ್ಮದ್ ಪೈಗಂಬರರ (ದೌಹಿತ್ರರಾದ) ವಂಶಸ್ಥರಾದ ಇಮಾಮ ಹುಸೇನರ ದುರಂತ ಬಲಿದಾನವು ಕರ್ಬಲದಲ್ಲಿ ಆದ ಘಟನೆಯವರೆಗೆ ವ್ಯಾಪಿಸಿರುತ್ತದೆ. ಕರೀಂಖಾನರ ಬಹುನೆಚ್ಚಿನ ಮೌಲ್ಯಗಳಾದ ರಾಷ್ಟ್ರಪ್ರೇಮ, ದೇಶಾಭಿಮಾನ, ಸ್ವಾಭಿಮಾನ, ಆತ್ಮಗೌರವ, ಅನ್ಯಾಯಕ್ಕೆ ತಲೆಬಾಗದ ಛಲ, ಸ್ವಯಂ ಪ್ರತಿಷ್ಠೆ ಇಂಥವುಗಳನ್ನು ಪ್ರತಿನಿಧಿಸುವ ಮೊಹಮ್ಮದ್ ಹುಸೇನ್ ಮತ್ತು ಅವರ ವಂಶಸ್ಥರ ಅನೇಕ ಪಾತ್ರಗಳು ಈ ಕಥಾನಕದಲ್ಲಿ ಬರುತ್ತವೆ. ಇದಕ್ಕೆ ಪ್ರತಿಯಾಗಿ ಅಧಿಕಾರ ಮೋಹ, ಸ್ವಾರ್ಥ ಲಾಲಸೆ, ವಿಶ್ವಾಸ ದ್ರೋಹ, ದಾಯಾದಿ ಮತ್ಸರಗಳನ್ನು ಈ ಕಾದಂಬರಿಯಲ್ಲಿ ಕಾಣಬಹುದು. ಈ ಅಂಶಗಳನ್ನು ಭಾರತದ ಪರಿಸ್ಥಿತಿಯಲ್ಲಿ ಕರೀಂಖಾನರು ಕಂಡಂಥವರು. ಹೀಗಾಗಿಯೇ ಇಂಥ ಪ್ರಸಕ್ತಿ ಬಂದಕೂಡಲೇ ಅವರು ಭಾವಾವೇಷದಿಂದ ಇವುಗಳ ವ್ಯಾಖ್ಯಾನಕ್ಕೆ ತೊಡಗುತ್ತಾರೆ. ರಾಜಕೀಯ, ಸಾಮಾಜಿಕ ಹಾಗೂ ಧಾರ್ಮಿಕ ವಿಚಾರಗಳ ವಿಶ್ಲೇಷಣೆಯಲ್ಲಿ ಕರೀಂಖಾನರ ಪ್ರಭುದ್ಧತೆಗೆ ಇವು ಒಳ್ಳೆಯ ನಿದರ್ಶನವಾಗುತ್ತವೆ.

ಪ್ರಸ್ತತ ಕಾದಂಬರಿಯಲ್ಲಿ ಕರೀಂಖಾನರು ಕಥಾ ವಸ್ತು ಹಾಗೂ ಪಾತ್ರಗಳನ್ನು ಧರ್ಮದ ಚೌಕಟ್ಟಿನಲ್ಲಿ ಇಡಲು ಪ್ರಯತ್ನಿಸಿದ್ದಾರೆ. ಇಮಾಮ ಹುಸೇನರ ಪಾತ್ರವನ್ನು ಸಂಕಲ್ಪಿತ ಧರ್ಮ ರಕ್ಷಣೆಗಾಗಿ ಇಟ್ಟಿದ್ದಾದರೆ, ದುರಾತ್ಮ ಹಾಗೂ ಅಧರ್ಮದ ಸಂಕೇತದ ಸೂಚಕವಾಗಿ ಇಬ್ನೆಜಿಯಾನ ಪಾತ್ರವನ್ನು ಪ್ರಶ್ನಿಸಿದ್ದಾರೆ. ಬಲಿದಾನಿ ಹುಸೇನ ಕಾದಂಬರಿಯ ಪಾತ್ರದಲ್ಲಿ ಹುಸೇನ ತನ್ನ ಅಂತ್ಯವನ್ನು ಅನ್ವೈಜವೆಂದು ಭಾವಿಸುವ ಕನಸಿನ ಮೂಲಕ ಕಂಡುಕೊಂಡಾಗ್ಯೂ ವಾಸ್ತವಿಕವಾಗಿ ಸಮಾಜ ಹಾಗೂ ಧರ್ಮದ ರಕ್ಷಣೆ ಹಾಗೂ ಶ್ರೇಯೋಭಿವೃದ್ಧಿಗಾಗಿ ತ್ಯಾಗ ಬಲಿದಾನ ನೈಜವೆಂಬುದನ್ನು ಪ್ರತಿಬಿಂಬಿಸಿದ್ದಾರೆ. ಧರ್ಮ ಸಂಸ್ಥಾಪನೆಗಾಗಿ ಬಲಿದಾನಗಳು ನಡೆಯಲೇ ಬೇಕಾಗುತ್ತವೆ. ಹಿಂದಿನ ಎಲ್ಲ ಧರ್ಮಸಂಸ್ಥಾಪಕರು ಕಷ್ಟಸಹಿಷ್ಣುಗಳೇ ಆಗಿ ಧರ್ಮರಕ್ಷಣೆಗೆ ಜನರ ಸುಖ-ದುಃಖಗಳಿಗೆ ಸ್ಪಂದಿಸಿದವರೇ ಆಗಿದ್ದಾರೆ. ಕಾದಂಬರಿಗೆ 'ಬಲಿದಾನೀ ಹುಸೇನ್' ಎಂಬ ಶೀರ್ಷಿಕೆಯನ್ನು ನೀಡಿರುವುದು ಕರೀಂಖಾನರ ವಿದ್ವತ್ತಿಗೆ ಸಾಕ್ಷಿಯಾಗಿದೆ.

## ನಯನ ಭೀಕರ ಕರ್ಬಲ

'ಬಲಿದಾನೀ ಹುಸೇನ' ಕಾದಂಬರಿಯ ಒಂದು ಅಧ್ಯಾಯ 'ನಯನ ಭೀಕರ ಕರ್ಬಲ'. ೧೯೪೨ರ ಸುಮಾರಿಗೆ ನಯನ ಭೀಕರ ಕರ್ಬಲ ಎಂಬ ಲೇಖನವನ್ನು ಕರೀಂಖಾನರು ಪ್ರಕಟನೆಗಾಗಿ ಪ್ರಭುದ್ಧ ಕರ್ನಾಟಕ ಪತ್ರಿಕೆಗೆ ಕಳುಹಿಸಿ ಕೊಡುತ್ತಿದ್ದರು. 'ಕರ್ಬಲ'. ಇದು ಅರಬ ದೇಶದಲ್ಲಿಯ ಒಂದು ಭಯಾನಕ ಸ್ಥಳ. ಇಲ್ಲಿ ಪೈಗಂಬರ್ ವಂಶಸ್ಥರು ಅನುವಂಶಿಕವಾಗಿ ಬಂದ ಅಧಿಕಾರವನ್ನು ಪಡೆಯಲು ಹಾಗೂ ಧರ್ಮವನ್ನು ರಕ್ಷಣೆ ಮಾಡಲು, ನ್ಯಾಯಮಾರ್ಗವನ್ನು ಅನುಸರಿಸಿದಾಗ ಅಲ್ಲಿ ವಿಘ್ನಗಳು ಉಂಟಾಗುತ್ತವೆ. ವಿರೋಧಿಗಳು ಪೈಗಂಬರ ವಂಶಸ್ಥರ ಸಣ್ಣ ಸಣ್ಣ ಮಕ್ಕಳನ್ನೆಲ್ಲ ಹತ್ಯೆ ಮಾಡುತ್ತಾರೆ. ಧೃತಿಗೆಡದ ಇಮಾಮ್ ಹುಸೇನ ಧರ್ಮ ಸಾಮ್ರಾಜ್ಯ ನಿರ್ಮಾಣ ಮಾಡುವದಕ್ಕೋಸ್ಕರ ಪ್ರಯತ್ನಿಸುತ್ತಾರೆ. ತಮ್ಮ ೭೨ ಅನುಯಾಯಿಗಳ ಸಹಿತ ಕರ್ಬಲವನ್ನು

ಪ್ರವೇಶಿಸುತ್ತಾರೆ. ಶತ್ರು ಸೈನದ ೫೦೦ ಜನರು ಇಮಾಮ ಹುಸೇನರ ಅನುಯಾಯಿಗಳನ್ನು ಕೊಲೆಗೈದರು. ಈ ಒಂದು ದೃಶ್ಯ ಬಹಳ ಭೀಕರವಾಗಿತ್ತು, ನೋಡಲು ಕಣ್ಣಿಗೆ ಭಯಂಕರವಾಗಿ ಕಾಣುವ ಈ ದೃಶ್ಯದಿಂದಾಗಿ ಈ ಸ್ಥಳಕ್ಕೆ 'ನಯನ ಭೀಕರ ಕರ್ಬಲ' ಎನ್ನುವ ಹೆಸರನ್ನು ನೀಡಿರುವುದು ಸೂಕ್ತವಾಗಿದೆ. 'ನಯನ ಭೀಕರ ಕರ್ಬಲ' ಎನ್ನುವ ಲೇಖನ ಪ್ರಕಟವಾಗಿರುವ ಕುರಿತು ಸದರ್ನ್ ಸ್ಟೀಕರ್ ಪತ್ರಿಕೆ ವಿವರ ನೀಡುತ್ತದೆ. ''ಕರೀಂಖಾನರು ವಿವಿಧ ಪತ್ರಿಕೆಗಳಿಗೆ ಬರಹಗಳನ್ನು ಕಳುಹಿಸಿ ಪ್ರಕಟಿಸಿದ್ದಾರೆ. ಅವರ ಒಂದು ಲೇಖನ ಮೈಸೂರು ವಿಶ್ವವಿದ್ಯಾಲಯದ 'ಪ್ರಬುದ್ಧ ಕರ್ನಾಟಕ' ಎಂಬ ಪತ್ರಿಕೆಯಲ್ಲಿ ೧೯೪೭ ರಲ್ಲಿ ಪ್ರಕಟವಾಗಿದೆ. ಅದರಂತೆ 'ನಯನ ಭೀಕರ ಕರ್ಬಲ' ಎನ್ನುವ ಪುಸ್ತಕ ಬಿ. ಎ. ದ್ವಿತೀಯ ವರ್ಗಕ್ಕೆ ಪಠ್ಯವಾಗಿ ನಮೂದಿಸಲ್ಪಟ್ಟಿತು'' ಎನ್ನುವಲ್ಲಿ ಇವರ ಅನೇಕ ಲೇಖನಗಳು ಪತ್ರಿಕೆಗಳಲ್ಲಿ ಪ್ರಕಟವಾದುದಲ್ಲದೆ ವಿಶ್ವವಿದ್ಯಾಲಯದ ಮಟ್ಟದ ತರಗತಿಗಳಿಗೆ ಪಠ್ಯಪುಸ್ತಕವಾಗಿ ಪ್ರಕಟವಾಗಿರುವುದು ಗಮನಾರ್ಹವಾದ ಸಂಗತಿಯಾಗಿದೆ.

ಇವರ 'ನಯನ ಭೀಕರ ಕರ್ಬಲ' ಕಥೆಯನ್ನು ಓದಿದ ಅ.ನ.ಕೃ ರವರು ಇವರನ್ನು ಬಹಳ ಮೆಚ್ಚಿಕೊಂಡು ''ಮುಸಲ್ಮಾನರಲ್ಲಿ ಕನ್ನಡವನ್ನು ಗಂಭೀರವಾಗಿ, ಸುಂದರವಾಗಿ ಮಾತನಾಡುವ ವಾಗ್ಮಿಗಳಿದ್ದಾರೆ, ಸೊಗಸಾಗಿ ಕನ್ನಡದಲ್ಲಿ ಬರೆಯಬಲ್ಲ ಲೇಖಕರಿದ್ದಾರೆ, ಕಳೆದ ವರ್ಷದ 'ಪ್ರಬುದ್ಧ ಕರ್ನಾಟಕ'ದ ಒಂದು ಸಂಚಿಕೆಯಲ್ಲಿ ಶ್ರೀ ಎಸ್.ಕೆ. ಕರೀಂಖಾನರು ಬರೆದಿರುವ 'ನಯನ ಭೀಕರ ಕರ್ಬಲ' ಕಥೆಯನ್ನು ಓದಿ ನೋಡಿ, ಕನ್ನಡ ಪಂಡಿತರನ್ನು ತಲೆದೂಗಿಸುವ ಶೈಲಿಯನ್ನು ಕರೀಂಖಾನರು ಸಾಧಿಸಿದ್ದಾರೆ'' ಎಂದು ನುಡಿದರು. ಕನ್ನಡ ಸಾರಸ್ವತ ಲೋಕದಲ್ಲಿ ಪ್ರಸಿದ್ಧಿ ಪಡೆದಿರುವ ಅ.ನ.ಕೃ. ಕರೀಂಖಾನರ ಸಾಹಿತ್ಯ ಪ್ರೌಢಿಮೆಯನ್ನು ಕೊಂಡಾಡಿರುವುದು ಕರೀಂಖಾನರ ಭಾಷಾ ಪ್ರೌಢಿಮೆಗೆ ಸಾಕ್ಷಿಯಾಗಿದೆ.

### ಕರೀಂಖಾನರನ್ನು ಅರಸಿ ಬಂದ ಪ್ರಶಸ್ತಿಗಳು

ಕರೀಂಖಾನರವರ ನಿರ್ವಂಚಿತ ವ್ಯಕ್ತಿತ್ವ, ಸಾಧನೆ, ಪ್ರತಿಭೆ, ಜಾನಪದ ಸಾಹಿತ್ಯದ ಸೇವೆ, ಸ್ವಾತಂತ್ರ್ಯ ಹೋರಾಟಗಾರನಾಗಿ ಕೆಲಸ, ನಾಡು ನುಡಿಯ ಏಳ್ಗೆಗಾಗಿ ಹೋರಾಟ, ಪತ್ರಿಕಾರಂಗದಲ್ಲಿ ಸೇವೆ, ಸಾಹಿತ್ಯ ಸೃಷ್ಟಿಯನ್ನು ಅನುಲಕ್ಷಿಸಿ, ಇವರ ಸಾಧನೆ, ಸಿದ್ಧಿಗಳನ್ನು ಗಮನಿಸಿ ಗುಲಬರ್ಗ ಹಾಗೂ ಹಂಪಿ ವಿಶ್ವವಿದ್ಯಾಲಯಗಳು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕರ್ನಾಟಕ ಸರಕಾರ ಹಾಗೂ ಅನೇಕ ಸಂಘ-ಸಂಸ್ಥೆಗಳು, ಇವರಿಗೆ ಪ್ರಶಸ್ತಿಯನ್ನು ನೀಡಿ ಗೌರವಿಸಿದವು. ಕರೀಂಖಾನರು ಎಂದೂ ಪ್ರಶಸ್ತಿಯ ಹಿಂದೆ ಬಿದ್ದವರಲ್ಲ, ಪ್ರಶಸ್ತಿಯ ಮಟ್ಟವನ್ನು ಮೀರಿ ನಿಂತವರು: ಪ್ರಶಸ್ತಿಗಳೇ ಕರೀಂಖಾನರವರನ್ನು ಹುಡುಕಿಕೊಂಡು ಬಂದವು. ಪ್ರಚಾರ ಪ್ರಿಯರಲ್ಲದ ಇವರು ಕಾಯಕವೇ ಕೈಲಾಸವೆಂದು ನಂಬಿ ನಡೆದವರು. ಪರೋಪಕಾರಕ್ಕಾಗಿ ತಮ್ಮ ಇಡೀ ಜೀವಿತಾವಧಿಯನ್ನು ಮುಡಿಪಾಗಿಟ್ಟವರು.

ಗುಲಬರ್ಗಾ ವಿಶ್ವವಿದ್ಯಾಲಯದ ಗೌರವ 'ಡಾಕ್ಟರ್ ಆಫ್ ಲೆಟರ್ಸ್' ಪದವಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಪ್ರಥಮವಾಗಿ ಹುಟ್ಟು ಹಾಕಿದ 'ಜಾನಪದಶ್ರೀ' ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, 'ಸ್ಪಂದನ ಪ್ರಶಸ್ತಿ', ಕಲಾಜ್ಯೋತಿ ಸ್ನೇಹಿತರ ಸಂಘ ಸರ್ವಜ್ಞ ಕಲಾನಿಕೇತನ (ಫಿಲಂ ಇನ್‌ಸ್ಟಿಟ್ಯೂಟ್) 'ಸಾಹಿತ್ಯ ಯೋಗಿ' ಎಂಬ ಬಿರುದು, ಜೀಶಂಪ ಪ್ರಶಸ್ತಿ , 'ಜಾನಪದ ಬ್ರಹ್ಮ' , 'ಜಾನಪದ ಜಂಗಮ', ಅಖಿಲ ಭಾರತ ಸ್ವಾತಂತ್ರ್ಯ ಹೋರಾಟಗಾರರ ಸಮಿತಿ (ರಿ) ಹೊಸದೆಹಲಿ ಇದರ ರಾಷ್ಟ್ರೀಯ ಕಾರ್ಯಕಾರಿ ಸಭೆಯು ಓರಿಸ್ಸಾ ರಾಜ್ಯ ಭುವನೇಶ್ವರದಲ್ಲಿ ನಡೆದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಕರ್ನಾಟಕ ರಾಜ್ಯ ಶಾಖೆಯು ಕರೀಂಖಾನರಿಗೆ ಸ್ವಾತಂತ್ರ್ಯೋತ್ಸವದ

ಸಂದರ್ಭದಲ್ಲಿ ಪ್ರಶಸ್ತಿ ಪ್ರಧಾನ, ಕನ್ನಡ ವಿಶ್ವವಿದ್ಯಾಲಯ, ಹಂಪಿ 'ನಾಡೋಜ' ಎಂಬ ಶ್ರೇಷ್ಠ ಪ್ರಶಸ್ತಿ ನೀಡಿ ಗೌರವಿಸಿತು. 'ಹಂಸರತ್ನ', ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರೀಯವಾಗಿ ಭಾಗವಹಿಸಿದ, ರಾಷ್ಟ್ರಕ್ಕೆ ಸಲ್ಲಿಸಿರುವ ಅಮೂಲ್ಯ ಸೇವೆಯನ್ನು ನೆನೆದು ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘ (ರಿ) ಭಾರತ ಸ್ವಾತಂತ್ರ್ಯ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ 'ಕರ್ನಾಟಕ ಕೇಸರಿ' ಎಂಬ ಪ್ರಶಸ್ತಿಯನ್ನು ಕರೀಂಖಾನರಿಗೆ ನೀಡಿ ಸನ್ಮಾನಿಸಲಾಯಿತು. ಇದು ರಾಷ್ಟ್ರಸೇವೆಗಾಗಿ ಕರೀಂಖಾನರವರಿಗೆ ಸಂದ ಮರ್ಯಾದೆಯಾಗಿದೆ. 'ಜಿ. ಉದಯಶಂಕರ್ ಸ್ಮಾರಕ ಚಿತ್ರ ಸಾಹಿತ್ಯ ಪ್ರಶಸ್ತಿ', ಡಾ. ಎಲ್. ಬಸವರಾಜು ಪ್ರಶಸ್ತಿ, 'ಕನ್ನಡ ಸಿರಿ', 'ಗೌರವ ಸದಸ್ಯತ್ವ ಪ್ರಧಾನ' ''ಚುಂಚಶ್ರೀ ಪ್ರಶಸ್ತಿ', 'ಜಾನಪದ ರತ್ನ' ಜಾನಪದ ಕಥೆಯನ್ನು ಸಿನೇಮಾ ಕಥೆಯನ್ನಾಗಿ ರೂಪಿಸಿ, 'ಸ್ವರ್ಣಗೌರಿ' ಎಂಬ ಶೀರ್ಷಿಕೆಯನ್ನು ಇಟ್ಟು ಚಿತ್ರವನ್ನಾಗಿಸಿ ಸಾಹಿತ್ಯ, ಸಂಭಾಷಣೆಯನ್ನು ನೀಡಿರುವ ಪ್ರಯುಕ್ತ ಮೊದಲ ಚಿತ್ರಕ್ಕೆ ರಾಷ್ಟ್ರಪ್ರಶಸ್ತಿ ಪುರಸ್ಕಾರ. 'ಮಲೆನಾಡ ಗಾಂಧಿ', ಹಾಸನ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಅರಸಿಕೇರೆ ಮಾಲೆಕಲ್ಲು ತಿರುಪತಿಯಲ್ಲಿ ನಡೆಸಿದ ತೃತೀಯ ಜಿಲ್ಲಾ ಸಮ್ಮೇಳನಕ್ಕೆ ಡಾ. ಎಸ್.ಕೆ. ಕರೀಂಖಾನರವರನ್ನು ಸಮ್ಮೇಳನ ಅಧ್ಯಕ್ಷರನ್ನಾಗಿ ಮಾಡಿ ಗೌರವಿಸಿರುವುದನ್ನು ಸ್ಮರಿಸಬಹುದು. ಜಾನಪದ ಜಂಗಮ ಹಾಗೂ ಚಿತ್ರ ಸಾಹಿತಿಗೆ ಕೋ.ಚೆ. ಸಾಹಿತ್ಯ ಹಾಗೂ ಶೈಕ್ಷಣಿಕ ಟ್ರಸ್ಟ್ 'ಕನ್ನಡ ಜಾನಪದ ಕಸ್ತೂರಿ' ಪ್ರಶಸ್ತಿ ನೀಡಿ ಗೌರವಿಸಿತು. ಸ್ವಾತಂತ್ರ್ಯ ಹೋರಾಟದ ಹಾಗೂ ಜಾನಪದ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆ ನೆನೆದು ಮೇಯರ್ ಮಮತಾಜ ಬೇಗಂರವರು 'ಬೆಂಗಳೂರು ಕೆಂಪೇಗೌಡ' ಪ್ರಶಸ್ತಿ ನೀಡಿ ಗೌರವಿಸಿರುವುದು ಕನ್ನಡಿಗರಿಗೆ ಸಂದ ಗೌರವವಾಗಿದೆ.

''ಕರೀಂಖಾನರ ಜನಪ್ರಿಯತೆಯ ಪ್ರಚಾರಕ್ಕೋಸ್ಕರ ಆದರ್ಶ ಸುಗಮ ಸಂಗೀತ ಅಕಾಡೆಮಿ ಕರೀಂಖಾನರ ಹೆಸರಿನಲ್ಲಿ ಡಾ. ಎಸ್. ಕೆ. ಕರೀಂಖಾನ ಪ್ರಶಸ್ತಿ''ಯನ್ನು ಘೋಷಿಸಿ, ಸಮಾಜದಲ್ಲಿ ಗಣ್ಯರೆಂದು ಪರಿಗಣಿಸಲ್ಪಟ್ಟ ಹೆಸರಾಂತ ಸಾಹಿತಿ ಡಾ. ಲಕ್ಷ್ಮೀನಾರಾಯಣ ಭಟ್ಟರಿಗೆ ನೀಡಿ ಗೌರವಿಸಿದೆ. ಒಬ್ಬ ವ್ಯಕ್ತಿಯ ಹೆಸರಿನಲ್ಲಿ ಪ್ರಶಸ್ತಿಗಳು ಕೊಡಲ್ಪಡುವುದು ತುಂಬಾ ವಿರಳ. ಕಾಯಾ, ವಾಚಾ, ಮನಸಾ, ನಿಸ್ವಾರ್ಥ ಸೇವೆ ಮಾಡಿದವರ ಹೆಸರಲ್ಲಿ ಮಾತ್ರ ಇಂಥ ಪ್ರಶಸ್ತಿಗಳು ಪ್ರಕಟಗೊಳ್ಳಲು ಸಾಧ್ಯ. ಅಲ್ಲದೆ ಕರೀಂಖಾನರವರು ಬದುಕಿರುವಾಗಲೇ ಇವರ ಹೆಸರಿನಲ್ಲಿ ಇಂಥ ಪ್ರಶಸ್ತಿ ಪ್ರಕಟಿಸಿ ಗಣ್ಯವ್ಯಕ್ತಿಗಳಿಗೆ ಕೊಟ್ಟಿರುವುದು ಕರೀಂಖಾನರವರ ಘನತೆಗೆ ಕೊಟ್ಟ ಕಾಣಿಕೆಯಾಗಿದೆ.

ಇವರ ಅನೇಕ ಪ್ರಶಸ್ತಿಗಳು ಹಾಗೂ ಸನ್ಮಾನ ಪತ್ರಗಳು ಲಭ್ಯವಾಗಲಿಲ್ಲ, ಕರೀಂಖಾನ್ ಎಂಬುವರು ಸಂಶೋಧನೆಗೆ ಇನ್ನೊಂದು ಹೆಸರು. ಇವರಂಥ ಸಂಶೋಧಕ ವಿದ್ವಾಂಸರು ಯಾವ ಭಾಷೆಗಾದರೂ ದೊಡ್ಡ ಸಂಪತ್ತು ; ಆಸ್ತಿ. ಆದರೆ ಇಂಥವರು ಶತಮಾನಕ್ಕೊಮ್ಮೆ ಬಂದರೂ ಸಂತೋಷವೇ, ಮಹಾಕವಿ ಯುಗಕ್ಕೊಮ್ಮೆ ಬರುತ್ತಾನಂತೆ, ಮಹಾನ ವ್ಯಕ್ತಿಗಳೂ ಅಷ್ಟೆ. ಡಾ. ಎಸ್.ಕೆ. ಕರೀಂಖಾನರ ಬದುಕು ಕಾರ್ಯಗಳ ಶ್ರೇಷ್ಠತೆಯ ಬಗ್ಗೆ ಇದಕ್ಕಿಂತ ಉತ್ತಮ ಶ್ಲಾಘನೆ ಬಹುಶಃ ಅಸಾಧ್ಯ.

☼ ☼ ☼

## ಡಾ. ಎಸ್.ಕೆ. ಕರೀಂಖಾನರ ಬದುಕಿನ ಮಹತ್ವದ ಘಟನೆಗಳು

೧೯೦೫ : ಹಾಸನ ಜಿಲ್ಲೆಯ ಸಕಲೇಶಪುರದಲ್ಲಿ ಜನನ. ಪ್ರಾಥಮಿಕ ಶಿಕ್ಷಣ ಸಕಲೇಶಪುರ, ಮಾಧ್ಯಮಿಕ ಶಿಕ್ಷಣ ಹಾಸನ ಜಿಲ್ಲೆ.

೧೯೨೦ : ಜಾನಪದ ಸಾಹಿತ್ಯ ಸಂಗ್ರಹ ಕಾರ್ಯದಲ್ಲಿ ತೊಡಗಿಕೊಳ್ಳುವಿಕೆ.

೧೯೩೦ : ಗಾಂಧಿ ಪ್ರಭಾವಕ್ಕೊಳಗಾಗಿ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗಿ.

೧೯೩೭-೪೭ : ಅನೇಕ ಬಾರಿ ಜೈಲು ವಾಸ.

೧೯೪೨ : ಭಾರತ ಬಿಟ್ಟು ತೊಲಗಿ ಚಳುವಳಿಯಲ್ಲಿ ಭಾಗವಹಿಸುವಿಕೆ.

೧೯೪೨ : 'ನಯನ ಭೀಕರ ಕರ್ಬಲ್' ಕಥೆ ಪ್ರಕಟಣೆ.

೧೯೪೭ : 'ಜನಪದ ಗೀತೆಗಳ ಸಂಗ್ರಹ' ಪ್ರಕಟಣೆ.

೧೯೪೯ : 'ನೀವಾರ' ಅನುವಾದ ಕಥಾಸಂಕಲನ ಪ್ರಕಟಣೆ.

೧೯೪೯ : 'ಹವ್ಯಾಸಿ ಸಹೋದರರ ಕಲಾಸಂಘ' ನಾಟಕ ಸಂಘ ಸ್ಥಾಪನೆ.

೧೯೫೨ : ಕಾಂಗ್ರೆಸವರ ಚುನಾವಣಾ ಪ್ರಚಾರಕಾಗಿ.

೧೯೫೪ : ವಿಶೇಷ ಅತಿಥಿಯಾಗಿ ಉಳಿಯಲು ರಾಷ್ಟ್ರಾಧ್ಯಕ್ಷದಿಂದ ವಿಶೇಷ ಆಹ್ವಾನ.

೧೯೫೫ : 'ಬಲಿದಾನಿ ಹುಸೇನ್' ಕಾದಂಬರಿ ಪ್ರಕಟಣೆ.

೧೯೫೬ : ಕಥೆ, ಸಂಭಾಷಣೆ, ಗೀತ ರಚನೆಕಾರರಾಗಿ ಸಿನೇಮಾ ಕ್ಷೇತ್ರ ಪ್ರವೇಶ.

೧೯೫೯ : ಬೆಂಗಳೂರಿನ ಮಧುಗಿರಿ ಪ್ರೌಢಶಾಲೆಯಲ್ಲಿ ಜಾನಪದ ಸಾಹಿತ್ಯ ಮತ್ತು ಕನ್ನಡದ ಕುರಿತು ಭಾಷಣ.

೧೯೬೪ : 'ಸ್ವರ್ಣಗೌರಿ' ಚಲನಚಿತ್ರಕ್ಕೆ ಕಥೆ, ಸಂಭಾಷಣೆ, ಗೀತರಚನೆಗಾಗಿ, ಉತ್ತಮ ಲೇಖಕ ಎಂದು ರಾಜ್ಯ ಪ್ರಶಸ್ತಿ.

೧೯೭೪ : 'ಜನಪದ ಗೀತೆಗಳು' ಎಂಟು ಭಾಗಗಳ ಸಂಗ್ರಹ ಪ್ರಕಟಣೆ.

೧೯೮೦ : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಸದಸ್ಯರಾಗಿ ಸೇವೆ.

೧೯೮೨ : 'ಕನ್ನಡ ರತ್ನ', 'ಕವಿಚಕ್ರವರ್ತಿ' ಬಿರುದು.

೧೯೮೪ : ಅರಸಿಕೆರೆ ಮಾಲೇಕಲ್‌ನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿ.

೧೯೮೫ : ಜಾನಪದ ಸೇವೆಗಾಗಿ ಸರ್ಕಾರದಿಂದ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ.

೧೯೮೬ : ಭಾರತ ಸೇವಾದಳದ ಸನ್ಮಾನ.

೧೯೮೭ : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾಗಿ ಸೇವೆ.

೧೯೮೮ : ಕರ್ನಾಟಕ ವಿಶ್ವವಿದ್ಯಾಲಯದ ಅಖಿಲ ಕರ್ನಾಟಕ ಜಾನಪದ ಸಮ್ಮೇಳನದ ಅಧ್ಯಕ್ಷ.

೧೯೮೯ : 'ಮಾಗಡಿ ಕೆಂಪೇಗೌಡ ಸೌರಭ' ಪುಸ್ತಕ ಪ್ರಕಟಣೆ.

೧೯೮೯ : ಧರ್ಮಸ್ಥಳದಲ್ಲಿ ಸರ್ವಧರ್ಮ ಸಮ್ಮೇಳನದ ಉಪನ್ಯಾಸ.

೧೯೮೯ : ಗುಲಬರ್ಗಾ ವಿಶ್ವವಿದ್ಯಾಲಯ ಗೌರವ 'ಡಾಕ್ಟರ್ ಆಫ್ ಲೆಟರ್ಸ್' ಪದವಿ.

೧೯೮೯ : 'ಜಾನಪದ ಜಂಗಮ', 'ಮಲೆನಾಡ ಗಾಂಧಿ' ಹಾಗೂ ಚಿತ್ರಸಾಹಿತ್ಯ ಪ್ರಶಸ್ತಿ.

೧೯೯೨ : ಸ್ಪಂದನ ಯುವಜನ ಕೇಂದ್ರದಿಂದ 'ಸ್ಪಂದನ' ಪ್ರಶಸ್ತಿ.

೧೯೯೨ : ಕರ್ನಾಟಕ ಭೂಸೇನಾ ನಿಗಮದ ಕನ್ನಡ ರಾಜ್ಯೋತ್ಸವ ಸುವರ್ಣ ಮಹೋತ್ಸವ ಪ್ರಶಸ್ತಿ.

೧೯೯೨ : ಕರ್ನಾಟಕ ಸಾಂಸ್ಕೃತಿಕ ಸಂಘದಿಂದ 'ಜನಪದ ಸಾಹಿತ್ಯ ರತ್ನ' ಬಿರುದು.

೧೯೯೩ : ಕನ್ನಡ ರಾಜ್ಯೋತ್ಸವ ಸಮಿತಿ, ಕಿಕ್ಕೇರಿಯವರ ಸನ್ಮಾನ.

೧೯೯೪ : ತಿರುಪತಿಯಲ್ಲಿ ನಡೆದ ಹಾಸನ ಜಿಲ್ಲಾ ಮೂರನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿ.

೧೯೯೪ : 'ಸಾಹಿತ್ಯ ಯೋಗಿ' ಪ್ರಶಸ್ತಿ.

೧೯೯೪ : ಕನ್ನಡ ಜನಪದ ಗೀತೆಗಳು-ಮರುಮುದ್ರಣ.

೧೯೯೫ : ಕೆನರಾ ಫೈನ್ ಆರ್ಟ್ಸ್ ಬೆಂಗಳೂರವರಿಂದ ಸನ್ಮಾನ.

೧೯೯೫ : ತಿಲಕ್ ಕನ್ನಡ ವಿದ್ಯಾರ್ಥಿ ಸಮಿತಿ, ಮೈಸೂರು ಬೆಳ್ಳಿಹಬ್ಬದ ವರ್ಷದ ಸನ್ಮಾನ.

೧೯೯೫ : ಕರ್ನಾಟಕ ಸರ್ಕಾರದಿಂದ 'ಜಾನಪದಶ್ರೀ' ಪ್ರಶಸ್ತಿ.

೧೯೯೫ : ಅಖಿಲ ಭಾರತ ಸ್ವಾತಂತ್ರ್ಯ ಹೋರಾಟಗಾರರ ಸಮಿತಿ, ನವದೆಹಲಿ, ಕರ್ನಾಟಕ ರಾಜ್ಯಶಾಖೆ ಬೆಂಗಳೂರು, ಇವರಿಂದ ಸನ್ಮಾನ.

೧೯೯೫ : 'ಜಾನಪದ ಸಾಹಿತಿ' ಬಿರುದು.

೧೯೯೫ : 'ಜಾನಪದ ಬ್ರಹ್ಮ' ಬಿರುದು.

೧೯೯೫ : ಕನ್ನಡ ಮಿತ್ರರು ಬಿ. ಎಂ. ಶ್ರೀ ಭವನ ಬೆಮಗಲ್ ನಗರ, ಕೋಲಾರ ಚಿನ್ನದ ಗಣಿ ಪ್ರದೇಶ ಸಂಸ್ಥೆಯ ಬೆಳ್ಳಿಹಬ್ಬದ ಸಂಭ್ರಮದಲ್ಲಿ ಸನ್ಮಾನ.

೧೯೯೫ : ರಂಗಶ್ರೀ ಕಲಾವಿದರು, ಬೆಂಗಳೂರು ಇವರಿಂದ ಸನ್ಮಾನ.

೧೯೯೫ : ನವ್ಯಜ್ಯೋತಿ ಸ್ನೇಹಿತರ ಯುವಬಳಗ, ಬೆಂಗಳೂರು ಇವರಿಂದ ಸನ್ಮಾನ.

೧೯೯೫ : 'ಜೀ. ಶಂಪ' ಪ್ರಶಸ್ತಿ.

೧೯೯೬ : ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತು ಸಕಲೇಶಪುರ, ಹಾಸನ ಇವರಿಂದ ಸನ್ಮಾನ.

೧೯೯೬ : ಶ್ರೀ ಶಾರದಾ ಮಂದಿರ ವಿದ್ಯಾಸಂಸ್ಥೆ, ಚಳ್ಳಕೆರೆಯವರಿಂದ ಸನ್ಮಾನ.

೧೯೯೬ : ಜೇನುಪೋಷಕರ ಸಹಕಾರ ಸಹಕಾರಿ ಸಂಘ ನಿಯಮಿತ, ಸಕಲೇಶಪುರ, ಹಾಸನ ಜಿಲ್ಲೆ ಮತ್ತು ಚಿಕ್ಕಮಂಗಳೂರು ಜಿಲ್ಲೆ ಸುವರ್ಣಮಹೋತ್ಸವ ಸವಿನೆನಪಿನ ವಿಶೇಷ ಪ್ರಶಸ್ತಿ.

೧೯೯೬ : 'ಸಂದೇಶ ಪ್ರತಿಷ್ಠಾನ' ಪ್ರಶಸ್ತಿ.

೧೯೯೭ : ಹಂಪಿ ವಿಶ್ವವಿದ್ಯಾಲಯದ 'ನಾಡೋಜ' ಪ್ರಶಸ್ತಿ.

೧೯೯೭ : 'ಶ್ರೀ ಕೃಷ್ಣ ಲೀಲೆ' (ಚಲನಚಿತ್ರ ಕಥಾನಕ) ಪ್ರಕಟಣೆ.

೧೯೯೭ : ಕನ್ನಡ ಸಂಘ ಬಿ.ಇ.ಎಮ್.ಎಲ್. ಬೆಂಗಳೂರು, ಸಂಕಿರಣ, ೪೧ನೇಯ ರಾಜ್ಯೋತ್ಸವದ ಕಂಚಿನ ಪದಕ.

೧೯೯೮ : ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಸನ್ಮಾನ.

೧೯೯೮ : 'ಹಂಸರತ್ನ' ಪ್ರಶಸ್ತಿ.

೧೯೯೮ : ಕರ್ನಾಟಕ ರಾಜ್ಯ ನಿವೃತ್ತ ನೌಕರರ ಸಂಘದವರಿಂದ 'ಕರ್ನಾಟಕ ಕೇಸರಿ' ಬಿರುದು.

೧೯೯೮ : ಶಿವಮೂರ್ತಿ ಮುರುಗರಾಜೇಂದ್ರ ಮಹಾಸ್ವಾಮಿಗಳ ಶ್ರೀ ಬೃಹನ್ಮಠ ಚಿತ್ರದುರ್ಗದವರಿಂದ 'ಜಾನಪದ ಜಂಗಮ' ಪ್ರಶಸ್ತಿ.

೧೯೯೯ : ಕರೀಂಖಾನ್ ಪ್ರಶಸ್ತಿ ಸ್ಥಾಪಿಸಲ್ಪಟ್ಟಿತು.

೧೯೯೯ : ಕಲಾಜ್ಯೋತಿ ಸ್ನೇಹಿತರ ಸಂಘದವರಿಂದ ಸಾಹಿತ್ಯಯೋಗಿ ಬಿರುದು.

೧೯೯೯ : ಅಖಿಲ ಭಾರತ ಸ್ವಾತಂತ್ರ್ಯ ಹೋರಾಟಗಾರರ ಸಮಿತಿಯವರಿಂದ ಪ್ರಶಸ್ತಿ.

೧೯೯೯ : ಭಾರತ ಸೇವಾದಳದಲ್ಲಿ ಸಲ್ಲಿಸಿದ ಸೇವೆಗಾಗಿ ಪುರಸ್ಕಾರ.

೧೯೯೯ : ಆಲ್ ಆಮೀನ್ ಶಿಕ್ಷಣ ಸಂಸ್ಥೆ, ಬೆಂಗಳೂರು, ಏರ್ಪಡಿಸಿದ ಮುಸ್ಲಿಂ ಕನ್ನಡ ಸಮ್ಮೇಳನದ ಅಧ್ಯಕ್ಷ.

೨೦೦೧ : ಟಿ. ಉದಯಶಂಕರ ಸ್ಮಾರಕ ಚಿತ್ರ ಸಾಹಿತ್ಯ ಪ್ರಶಸ್ತಿ.

೨೦೦೧ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಇವರಿಂದ ಸನ್ಮಾನ.

೨೦೦೨ : 'ಶತಾಯುಷಿ' ಎಂದು ಮಿಥಿಕ್ ಸೊಸೈಟಿಯ ಕವ್ವಾಗರೀಬ್ ಉನ್ ನವಾಜ್ ಕ್ಷೇಮಾಭಿವೃದ್ಧಿ ಕೇಂದ್ರದವರಿಂದ ಪ್ರಶಸ್ತಿ.

೨೦೦೨ : ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ 'ಮನೆಯಂಗಳದಲ್ಲಿ ಮಾತುಕತೆ' ಕಾರ್ಯಕ್ರಮದಲ್ಲಿ ತಿಂಗಳ ಅತಿಥಿಯಾಗಿ ಗೌರವ.

೨೦೦೩ : ಡಾ.ಎಲ್. ಬಸವರಾಜ ಪ್ರಶಸ್ತಿ.

೨೦೦೪ : 'ಕನ್ನಡ ಕೇಸರಿ' ಶ್ರೀನಿವಾಸ್ ರಾವ್ ಮಂಗಳವೇಡೆ ಸ್ಮಾರಕ ಪ್ರತಿಷ್ಠಾನ ಗೌರವ ಪ್ರಶಸ್ತಿ.

೨೦೦೪ : ಕನ್ನಡ ಸಾಹಿತ್ಯ ಪರಿಷತ್ತಿನ ಅತ್ಯುನ್ನತ ಗೌರವ ಸದಸ್ಯತ್ವ.

೨೦೦೪ : ಚಿತ್ರೋತ್ಸವ ಪ್ರಧಾನ ಸಮಾರಂಭದಲ್ಲಿ ಜೀವನ ಸಾಧನೆಗಾಗಿ ಪ್ರಶಸ್ತಿ.

೨೦೦೬ : 'ಕನ್ನಡ ಜಾನಪದ ಕಸ್ತೂರಿ' ಪ್ರಶಸ್ತಿ.

೨೦೦೬ : 'ಬೆಂಗಳೂರು ಕೆಂಪೇಗೌಡ' ಪ್ರಶಸ್ತಿ.

೨೦೦೬ : ಜುಲೈ ೨೯ ರಂದು ಈ ಧರೆಯನ್ನು ಬಿಟ್ಟು ಹೋದದ್ದು.

# ಕರೀಂಖಾನರ ಸಾಹಿತ್ಯ ಸೂಚಿ

**ಅ. ಜಾನಪದ ಸಂಗ್ರಹಗಳು :**

೧. ಜನಪದ ಗೀತ-ಮುದ್ರಕರು, ಶ್ರೀ ಸತ್ಯನಾರಾಯಣ ಪ್ರೆಸ್, ಅರಳೆಪೇಟೆ, ಬೆಂಗಳೂರು, ೧೯೭೪.

೨. ಕನ್ನಡ ಜನಪದ ಗೀತೆಗಳು – ಕೆ. ಎಸ್. ಗೋಪಾಲ ಪುಸ್ತಕಾಲಯ ಬೆಂಗಳೂರು, ಮುದ್ರಣ-೧೯೮೭, ಮರುಮುದ್ರಣ, ೧೯೯೪.

**ಆ. ಸ್ವರಚಿತ ಗ್ರಂಥಗಳು :**

**I) ಕಾದಂಬರಿ :**

೧. ಬಲಿದಾನಿ ಹುಸೇನ್ (ಚಾರಿತ್ರಿಕ ಕಾದಂಬರಿ) ಚೇತನಾ ಪ್ರಿಂಟರ್ಸ್ ಸಕಲೇಶಪುರ, ೧೯೫೫.

೨. ಮಾತೃ ಶಾಪ (ಪೌರಾಣಿಕ ಕಾದಂಬರಿ) ಅನುಪಲಬ್ಧ

೩. ಸಮೀರ (ಸಾಮಾಜಿಕ ಕಾದಂಬರಿ) ಅನುಪಲಬ್ಧ

೪. ಮುಷೀರ (ಸಾಮಾಜಿಕ ಕಾದಂಬರಿ) ಅನುಪಲಬ್ಧ

**II) ನಾಟಕ :**

೧. ಬೆಂಗಳೂರು ನಿರ್ಮಾಪಕ ಮಾಗಡಿ ಕೆಂಪೇಗೌಡ-ನೀಲಕಂಠೇಶ್ವರ ಮುದ್ರಣಾಲಯಾ, ೧೯೮೪.

೨. ಮಾಗಡಿ ಕೆಂಪೇಗೌಡ ಸೌರಭ-ಪ್ರಕಾಶಕರು-ಗೋವಿಂದ ರಾಜನಗರ ಬೆಂಗಳೂರು-೪೦, ೧೯೮೯.

೩. ಶ್ರೀ ಕೃಷ್ಣಲೀಲಾ-ಆದರ್ಶ ಸುಗಮ ಸಂಗೀತ ಅಕಾಡೆಮಿ, ಟ್ರಸ್ಟ್ ಬೆಂಗಳೂರು (ರಿ) ೧೯೯೭.

೪. ಮಷೀರಾ (ಅನುಪಲಬ್ಧ)

೫. ಪ್ರಮದ್ವತಿ (ಅನುಪಲಬ್ಧ)

೬. ಮಾಲತಿ ಮಾಧವ (ಅನುಪಲಬ್ಧ)

೭. ನಿರ್ದೋಷಿ (ಅನುಪಲಬ್ಧ)

೮. ಶ್ರೀ ಕೃಷ್ಣ ಗಾರುಡಿ (ಅನುಪಲಬ್ಧ)

೯. ಅಂಬರನಾಥ್ (ಚಾರಿತ್ರಿಕ ನಾಟಕ, ಅನುಪಲಬ್ಧ)

೧೦. ಭವ ಭೂತಿ (ಅನುಪಲಬ್ಧ)

೧೧. ಧನಬಲವೋ, ಗುಣಬಲವೋ (ಅನುಪಲಬ್ಧ)

೧೨. ಲೈಲಾಮಜ್ನು (ಅನುಪಲಬ್ಧ)

೧೩. ಹುಮಾಯೂನ್ (ಚಾರಿತ್ರಿಕ ನಾಟಕ) (ಅನುಪಲಬ್ಧ)

೧೪. ಮಧುಮೋಹನ (ಅನುಪಲಬ್ಧ)

೧೫. ಒಂದೇ ಸುಳ್ಳು (ಅನುಪಲಬ್ಧ)

**III) ಕಥೆಗಳು :**

೧. ನಯನ ಭೀಕರ ಕರ್ಬಲಾ (ಚಾರಿತ್ರಿಕ ಕಥೆ) (ಅನುಪಲಬ್ಧ, ೧೯೪೨)

**IV) ಅನುವಾದಿತ ಕಥೆಗಳು :**

೧. ನೀವಾರ – ರಾಮರಾಜ್ಯ ಗ್ರಂಥಮಾಲಾ – ೧ –ಸಕಲೇಶಪುರ, ೧೯೪೯.


೨. ನೀಹಾರ – (ಚಾರಿತ್ರಿಕ ಕಥಾಸಂಕಲನ) (ಅನುಪಲಬ್ಧ)



ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರ್ ಲೆಟರ್ಸ್
ಪದವಿ ಪಡೆದ ಸಂಭ್ರಮದಲ್ಲಿ



ತಮ್ಮ ಮನೆಯ ಕುಟುಂಬದವರೊಡನೆ ಕರೀಂಖಾನರು






ಕರೀಂಖಾನ್‌ರಿಗೆ ಬಂದ ಹಲವು ಪ್ರಶಸ್ತಿಗಳು




ನಟನಟಿಯರೊಂದಿಗೆ ಸಮಾಲೋಚನೆಯಲ್ಲಿ ಕರೀಂಖಾನರು



ಆದರ್ಶ ಸುಗಮಸಂಗೀತ ಅಕಾಡೆಮಿಯ ಕಾರ್ಯಕ್ರಮದಲ್ಲಿ ಕರೀಂಖಾನರು



ಅಖಿಲ ಭಾರತ ಕರ್ನಾಟಕ ಜಾನಪದ ಸಮ್ಮೇಳನದ ಅಧ್ಯಕ್ಷರಾಗಿ ಕರೀಂಖಾನ್



ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಲ್ಲಿ ಕಾರ್ಯನಿರತ ಕರೀಂಖಾನರು



ಕರೀಂಖಾನರಿಗೆ ಸಚಿವ ಎಂ.ಪಿ. ಪ್ರಕಾಶ್‌ರವರಿಂದ ಕಂಕಣ ತೊಡಿಸುವಿಕೆ



ಜಾನಪದ ಅಕಾಡೆಮಿಯ ಕಾರ್ಯಾಲಯದಲ್ಲಿ ಕರೀಂಖಾನರು




ಗಂಭೀರ ಚಿಂತನೆಯಲ್ಲಿ ಕರೀಂಖಾನರು




ಅಭಿನಂದನಾ ಸಮಾರಂಭದಲ್ಲಿ ಕರೀಂಖಾನರು



ಸಹೋದರ ಗಫಾರ್‌ಖಾನ್ ಕುಟುಂಬದೊಂದಿಗೆ ಕರೀಂಖಾನ್ ಹಾಗೂ
ಸಂಶೋಧಕ ಪಿ.ಬಿ. ನಾಯಕ್




ಕೂಡಲ ಸಂಗಮದಲ್ಲಿ ಜೊತೆಗಾರರೊಂದಿಗೆ ಕರೀಂಖಾನರು




ಸಮಾಲೋಚನೆಯಲ್ಲಿ
ಕರೀಂಖಾನರು



ಮುಖ್ಯಮಂತ್ರಿ ಹೆಚ್.ಡಿ.
ದೇವೇಗೌಡರಿಂದ
ಕರೀಂಖಾನರಿಗೆ ಸನ್ಮಾನ



ಜಾನಪದ
ಅಕಾಡೆಮಿಯ
ಸಮಾರಂಭದಲ್ಲಿ
ಕರೀಂಖಾನರು




ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಕರೀಂಖಾನರು



ಕನ್ನಡ ಮತ್ತು ಸಂಸ್ಕೃತಿ ಕಾರ್ಯಕ್ರಮ ತಿಂಗಳ
ಅತಿಥಿಯಾಗಿ ಕರೀಂಖಾನರು



ಬೆಳೆಗೆರೆ ಶಾಸ್ತ್ರಿಯವರೊಂದಿಗೆ ಕರೀಂಖಾನರು



ಕರೀಂಖಾನರ ಹಸ್ತಾಕ್ಷರ

# ಗುಲಬರ್ಗಾ ವಿಶ್ವವಿದ್ಯಾಲಯ

ಗುಲಬರ್ಗಾ

# Gulbarga University

GULBARGA

ಫೆಬ್ರವರಿ 26, 1989 ರಂದು ನಡೆದ
ವಾರ್ಷಿಕ ಘಟಿಕೋತ್ಸವದಲ್ಲಿ
ಶ್ರೀ ಎಸ್. ಕೆ. ಕರೀಂಖಾನ
ಅವರಿಗೆ
ಡಾಕ್ಟರ್ ಆಫ್ ಲೆಟರ್ಸ್
(ಗೌರವ)
ಪದವಿಯನ್ನು ನೀಡಲಾಗಿದೆಯೆಂದು
ಪ್ರಮಾಣೀಕರಿಸಲಾಗಿದೆ.

This is to certify that the Degree of
DOCTOR OF LETTERS
*(Honoris Causa)*
has been conferred
on
Sri. S. K. KARIMKHAN
at the Annual Convocation held on
the 26th February, 1989

ಕುಲಪತಿ
Vice-Chancellor

ಕುಲಾಧಿಪತಿ
Chancellor

ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಮಾಣಪತ್ರ.

BHARATH SEVADAL

KUMARAKRUPA ROAD, BANGALORE - 560 001 KARNATAKA STATE

ಭಾರತ ಸೇವಾದಲ

ಕುಮಾರಕೃಪ ರಸ್ತೆ, ಬೆಂಗಳೂರು - 560 001

(REGD.)

ಭಾಸೇದ:ಕೇಕ:ಪ:2001–2002/727 Date: [illegible]

ಗೆ,

ಮಾನ್ಯ ಶ್ರೀ ಎಸ್.ಕೆ.ಕರೀಂ ಖಾನ ರವರು,
ಸ್ವಾತಂತ್ರ್ಯ ಹೋರಾಟಗಾರರು,
ಬೆಂಗಳೂರು.

ಮಾನ್ಯರೇ,

ಸೇವಾದಲದ ಸ್ಥಾಪನೆಯ ಅಂಗವಾಗಿ ದಿನಾಂಕ:28–12–2001 ರಿಂದ 3–1–2002 ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು ದಿನಾಂಕ:3–1–2002ರಂದು ಭಾರತ ಸೇವಾದಲದ ಕೇಂದ್ರ ಕಛೇರಿಯಲ್ಲಿ ಸ್ಥಾಪನೆಯ ಸಮಾರೋಪ ಸಮಾರಂಭವನ್ನು ಮಧ್ಯಾಹ್ನ 3 ಘಂಟೆಗೆ ವ್ಯವಸ್ಥೆ ಮಾಡಿದ್ದು ಆ ಸಂದರ್ಭದಲ್ಲಿ ಸೇವಾದಲದಲ್ಲಿ ಅವಿರತವಾಗಿ ಸೇವೆ ಸಲ್ಲಿಸಿದ ಹಿರಿಯ ಕಾರ್ಯಕರ್ತರಿಗೆ ಸನ್ಮಾನ ಇಟ್ಟುಕೊಳ್ಳಲಾಗಿದೆ.

ತಾವು ಸೇವಾದಲ ಪ್ರಾರಂಭಿಕ ಹಂತದ ಸಂಸ್ಥೆಯ ಬೆಳವಣಿಗೆಯಲ್ಲಿ ತಮ್ಮದೇ ಕೊಡುಗೆ ನೀಡಿದ ಹಿರಿಯ ಚೇತನವಾಗಿದ್ದು ತಮ್ಮ ಸೇವೆಯನ್ನು ಸ್ಮರಿಸುತ್ತಾ ತಮ್ಮನ್ನು ಸನ್ಮಾನಿಸಲು ನಿರ್ಧರಿಸಿದ್ದು ತಾವು ದಯವಿಟ್ಟು ನಮ್ಮ ಸನ್ಮಾನವನ್ನು ಸ್ವೀಕರಿಸಿ ಸಂಸ್ಥೆಯ ಬೆಳವಣಿಗೆಗೆ ಪೂರಕ ಮಾರ್ಗದರ್ಶನ ನೀಡಿ ಸಹಕರಿಸಲು ಕೋರಿದೆ.

ತಮ್ಮ ವಿಶ್ವಾಸಿ,

ಪ್ರಧಾನ ಕಾರ್ಯದರ್ಶಿ,
ಭಾರತ ಸೇವಾದಲ.

ಭಾರತ ಸೇವಾದಲದಿಂದ ಕರೀಂಖಾನರಿಗೆ ಸಂದ ಗೌರವ

مخلوق اللہ کا کنبہ ہے تم میں اللہ کے نزدیک سب سے زیادہ پسندیدہ و محبوب وہ
شخص ہے جو اس کے کنبے کے لئے سب سے زیادہ مہربان ہے

عید الفطر مبارک

ईद मुबारक ID MUBARK


ರಾಮಕೃಷ್ಣ ಹೆಗಡೆ Ramakrishna Hegde
رام کرشن ہیگڑے रामकृष्ण हेगडे

Feb 21, 1996

Shri Khareem Khan,
Janapada Sahiti,
Hotel Dwaraka,
D.V.G. Road,
Bangalore-560004.

Ramakrishna Hegde
229, Kritika,
Rajmahal Vilas Extension,
Bangalore - 560 080

ಮಾಜಿ ಮುಖ್ಯಮಂತ್ರಿ ಶ್ರೀ ರಾಮಕೃಷ್ಣ ಹೆಗಡೆಯವರು ಕರೀಂಖಾನರಿಗೆ ಬರೆದ ಶುಭಾಶಯ ಪತ್ರ



ಕರೀಮ್‌ಖಾನರ ಘನತೆಯ ಕುರಿತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಜಾನಪದ ವಿದ್ವಾಂಸ
ಶ್ರೀ ಎಲ್.ಆರ್. ಹೆಗಡೆಯವರು ಬರೆದ ಪತ್ರ